ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳಲ್ಲಿ ಆಧ್ಯಾತ್ಮಿಕ ಚಿಂತನೆ

(ಹದಿಮೂರು ಆಯ್ದ ಕೀರ್ತನೆಗಳ ಒಳನೋಟ)

ಸಂಪುಟ – ೫



ಸಂಪಾದನೆ

ವಿದ್ವಾನ್ ಶ್ರೀನಿವಾಸ ಸು. ಮಠದ

ಶ್ರೀ ಪ್ರಸನ್ನ ವೆಂಕಟದಾಸರ ಕೀರ್ತನೆಗಳಲ್ಲಿ ಆಧ್ಯಾತ್ಮಿಕ ಚಿಂತನೆ ಸಂಪುಟ – ೫

ವಿದ್ವಾನ್ ಶ್ರೀನಿವಾಸ ಸು. ಮಠದ

ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳಲ್ಲಿ ಅಧ್ಯಾತ್ಮ ಚಿಂತನೆ

(ಹದಿಮೂರು ಆಯ್ದ ಕೀರ್ತನೆಗಳ ಒಳನೋಟ)

ಆಧ್ಯಾತ್ಮಿಕ ಒಳನೋಟ ಸಂಪುಟ – ೫

ಸಂಪಾದಕರು

ಶ್ರೀನಿವಾಸ. ಸು. ಮತದ

ಶ್ರೀ ಪ್ರಸನ್ನ ವೆಂಕಟ ಪ್ರಕಾಶನ

ನಂ. 15, 'ಮಂತ್ರಾಲಯ' ಪ್ರಶಾಂತಿನಗರ

9ನೇ ಬಿ ಮುಖ್ಯ ರಸ್ತೆ, 17ನೇ ಕ್ರಾಸ್,

ಇಸ್ರೋ ಬಡಾವಣೆ, ಬೆಂಗಳೂರು – 560078.

ದೂರವಾಣಿ : 080 – 26665398; ಮೊಬೈಲ್ : 09448011954

email: trust@prasannavenkatadasaru.org

subhasbk@gmail.com / rsk9651@yahoo.com

Website: www.prasannavenkatadasaru.org

Sri Prasannavenkata Dasar Kirtanegalalli
(Hadimooru Ayada Kirtanegala vola nota)
Adhyatmika Vola nota Samputa-5

By : **Srinivas S. Mathad** B.Sc, M.A.

Recipient of "Parimala Prashasti",
Jnana Jyoti Award and
Haridas Sahitha Seva Praveena.
Ajarekar Chal, Meenaxi Chowk
Bijapur - 586101. Phone : 08352-258362

Copies	:	1000
ISBN No.	:	978-81-929818-8-8
First Edition	:	2014
Copy right	:	Author
Pages	:	144
Price	:	Rs.75/- US $5/-

Copies Available at :

1. **Smt. Rekha Kakhandaki**
   No. 15, 'Mantralaya' (Prashantinagar)
   9th 'B' Main Road, 17th Cross,
   ISRO Layout, Bangalore - 560 078.
   email: trust@prasannavenkatadasaru.org
   Phone: 080 26665398 / 09448011954
2. **Sri Dhruvacharya Kakhandaki**
   No. 35, 'C' Block, Sector - 3, Navanagar, Bagalkot.
   Phone: 08354 - 235955
3. **Col. Anant. Kakhandaki (Rtd.)**
   No. 365, 'Giri Nivas", Near Bhaskar Diary,
   Sadasivanagar, Belgum. **Mob: 09880287183**
4. **Sri V.M. Kulkarni**
   Kolhapur. **Mob: 9421100174**

Printars : VAGARTHA, Bangalore - 19. vagartha@yahoo.com

ಸಮರ್ಪಣೆ

ಪ್ರಸನ್ನ ಚಾರಿತ್ರ ಪ್ರಸನ್ನ ಶೋಭನ ವಕ್ತ್ರ ಪ್ರಸನ್ನಾ ಪಾಂಗನೇತ್ರ ಪ್ರಸನ್ನಗಾತ್ರ ॥
ಪ್ರಸನ್ನ ವೆಂಕಟಕೃಷ್ಣ ಪ್ರಸನ್ನನಾದರೆ ನಿತ್ಯ ಪ್ರಸನ್ನತರೋಕ್ತಿ ಬಾಹೊವು ಭಕ್ತಜನಕೆ ॥

॥ ಪ್ರಸನ್ನ ವರದಂ ಧ್ಯಾಯೇತ್ । ಪ್ರಸನ್ನ ಗುಣಪೂರಣಂ ।
ಪ್ರಸನ್ನ ವೆಂಕಟಂ ವಂದೇ । ಗುರುಭಾವಂ ಪದಾಶ್ರೆಯಿ ॥
॥ ಶ್ರೀತಾತ್ಪ್ರಪ್ತಸುವಿಜ್ಞಾನಂ ಶ್ರೀಶೈಕನಿರತಂ ಸದಾ
ಪ್ರಸನ್ನವೆಂಕಟಾರ್ಯೋ ಮೇ ಭೂಯಾತ್ ಸರ್ವಾರ್ಥಸಿದ್ಧಯೇ ॥

ಶ್ರೀ ಪ್ರಸನ್ನ ವೆಂಕಟದಾಸರು (೧೬೮೦-೧೭೫೨)

ಶ್ರೀ ಪ್ರಸನ್ನ ವೆಂಕಟದಾಸರ ಅಂತರ್ಯಾಮಿಯಾದ ಶ್ರೀ ವೆಂಕಟೇಶ ದೇವರ
ದಿವ್ಯಚರಣಾರವಿಂದಗಳಲ್ಲಿ ಈ ಕೃತಿಯನ್ನು ಭಕ್ತಿಪೂರ್ವಕವಾಗಿ ಸಮರ್ಪಿಸುತ್ತಿದ್ದೇವೆ.

ಶ್ರೀಃ
ಶ್ರೀ ದಿಗ್ವಿಜಯರಾಮೋ ವಿಜಯತೇ
ಶ್ರೀಮತ್ಪರಮಹಂಸ ಪರಿವ್ರಾಜಕೇತ್ಯಾದಿ ಬಿರುದಾಲಂಕೃತ
ಪದವಾಕ್ಯಪ್ರಮಾಣ ಪಾರಾವಾರಪಾರೀಣ ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀಮದುತ್ತರಾದಿಮಠಾಧೀಶರಾದ
ಶ್ರೀ ಶ್ರೀ ೧೦೦೮ ಶ್ರೀ ಸತ್ಯಪ್ರಮೋದತೀರ್ಥ
ಕರಕಮಲಸಂಜಾತರಾದ
ಶ್ರೀ ಶ್ರೀ ೧೦೦೮ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ

ಅನುಗ್ರಹ ಸಂದೇಶ

ನಮ್ಮ ಪರಮಪ್ರಿಯ ಶಿಷ್ಯರಾದ ಪಂ. ಶ್ರೀನಿವಾಸಾಚಾರ್ಯ ಸು. ಮಠದ ಇವರು ''**ಶ್ರೀ ಪ್ರಸನ್ನವೆಂಕಟದಾಸರ ಕೀರ್ತನೆಗಳಲ್ಲಿ ಅಧ್ಯಾತ್ಮ ಚಿಂತನೆ**'' ಎಂಬ ವಿಷಯದಲ್ಲಿ ೧೦೭ನೆಯ ಪುಸ್ತಕವನ್ನು ಬರೆದು ದೇವರ ಪ್ರೀತಿಗಾಗಿ ಜಿಜ್ಞಾಸುಗಳಿಗೆ ನೀಡುತ್ತಿರುವುದು ಬಹಳ ಸಂತೋಷದ ಸಂಗತಿ.

ಇತಿಹಾಸ ಪುರಾಣಗಳ ಹಾಗೂ ಸರ್ವಮೂಲಾದಿ ಗ್ರಂಥಗಳ ಆಧಾರದೊಂದಿಗೆ ವಿವರವಾಗಿ ೧೩ ಪದ್ಯಗಳ ಭಾವವನ್ನು ಇಲ್ಲಿ ನೀಡಿದ್ದಾರೆ. ಸಾಧಕರು ಲಾಭವನ್ನು ಪಡೆಯಲಿ.

ನಮ್ಮ ಉಪಾಸ್ಯ ಮೂರ್ತಿಗಳಾದ ಶ್ರೀ ಮೂಲಸೀತಾಸಮೇತ ಶ್ರೀಮೂಲರಾಮ ದಿಗ್ವಿಜಯರಾಮ ವೇದವ್ಯಾಸ ವಂಶರಾಮ ಪ್ರಸನ್ನ ವಿಠ್ಠಲದೇವರು ಪಂ. ಶ್ರೀನಿವಾಸಾಚಾರ್ಯರಿಗೆ ಆಯುರಾರೋಗ್ಯಾದಿಗಳನ್ನು ವಿಶೇಷವಾಗಿ ಜ್ಞಾನಭಕ್ತಿ ವೈರಾಗ್ಯಾದಿಗಳನ್ನು ನೀಡಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.



ಕ್ಯಾಂಪ್ : ಉಡುಪಿ
ತಾರೀಖು : ೧೨.೦೮.೧೪

ಶ್ರೀಮತ್ಸತ್ಯಾತ್ಮತೀರ್ಥಾಃ
ಉತ್ತರಾದಿಮಠ

ಪ್ರಕಾಶಕರ ಮಾತು

ದಾಸ ಪರಂಪರೆಯಲ್ಲಿ ವಿಶಿಷ್ಟಸ್ಥಾನ ಪಡೆದವರು, ಶ್ರೀ ಪ್ರಸನ್ನ ವೆಂಕಟದಾಸರು, ತಮ್ಮ ಭಕ್ತಿಯ ಪರಾಕಾಷ್ಠತೆಯಿಂದ ಶ್ರೀನಿವಾಸ ದೇವರನ್ನು ಸಾಕ್ಷಾತ್ಕಾರ ಮಾಡಿಕೊಂಡು, ನೇರವಾಗಿ ಅಂಕಿತ ಪಡೆದ ಅಪರೋಕ್ಷ ಜ್ಞಾನಿಗಳು. ಆತ್ಮಸಾಧನೆ, ಭಕ್ತಿಯ ಸಿಂಚನ, ಸಾಮಾಜಿಕ ವಿಡಂಬನೆ, ಲೋಕನೀತಿ, ಆತ್ಮ ನಿವೇದನೆಗಳೊಂದಿಗೆ ದ್ವೈತ ಸಿದ್ಧಾಂತದ ಪ್ರತಿಪಾದನೆಗಳಿಂದ ತರ್ಕ, ತತ್ವಗಳನ್ನು ತಮ್ಮ ಕೀರ್ತನೆಗಳ ಮೂಲಕ ಜನ-ಮನಕ್ಕೆ ತಲುಪಿಸಿದವರು. ಇವರ ಸಾಹಿತ್ಯದಲ್ಲಿ ಉತ್ತರ ಕರ್ನಾಟಕದ ಗಟ್ಟಿಯಾದ, ಕ್ಲಿಷ್ಟವಾದ ಭಾಷೆ ಹಾಗು ಗಂಭೀರವಾದ ಆಧ್ಯಾತ್ಮಿಕ ಚಿಂತನೆಯನ್ನು ಕಾಣಬಹುದು. ಇವರ ಸಾಹಿತ್ಯವನ್ನು ಅಪರೋಕ್ಷ ಜ್ಞಾನಿಗಳಾದ ಶ್ರೀ ವಿಜಯದಾಸರು ''ಕಾಕಂಬಿ ಸಾಹಿತ್ಯ''ವೆಂದು ಹೊಗಳಿದರೆ ಇನ್ನೊಂದು ಕೀರ್ತನೆಯಲ್ಲಿ ''ಅಚ್ಯುತನ ಮೆಚ್ಚಿಸಿ ಪ್ರಚ್ಛನ್ನವರಪಡೆದ ಆಚಾರ್ಯ ಪ್ರಸನ್ನ ವೆಂಕಟರ ಕಂಡೆ'' ಎಂದು ವರ್ಣಿಸಿದ್ದಾರೆ. ಶ್ರೀ ಗೋಪಾಲದಾಸರು ಅವರ ಜ್ಞಾನ ಸಂಪತ್ತು ಹಾಗು ಆಧ್ಯಾತ್ಮಿಕ ತೇಜಸ್ಸನ್ನು ಕಂಡು ಧನ್ಯನಾದೆನೆಂದು ತಮ್ಮ ಕೀರ್ತನೆಯಲ್ಲಿ ಸ್ತುತಿಸಿದ್ದಾರೆ. ಇಂತಹ ಅಪರೋಕ್ಷ ಜ್ಞಾನಿಗಳಾದ ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳಲ್ಲಿ ಅಡಗಿದ ಆಧ್ಯಾತ್ಮಿಕ ಚಿಂತನೆಯನ್ನು ಸುಮಾರು ೫೦ ಸಂಪುಟಗಳಲ್ಲಿ ಹಂತಹಂತವಾಗಿ ಭಕ್ತಿಜನಕ್ಕೆ ತಲುಪಿಸಬೇಕೆಂದು ದಾಸರ ಪ್ರೇರಣೆಯಂತೆ ಈ ಕಾರ್ಯದಲ್ಲಿ ತೊಡಗಿವೆ, ನಮ್ಮ - ನಿಮ್ಮೆಲ್ಲರ ಸಂಸ್ಥೆಗಳಾದ ಶ್ರೀ ಪ್ರಸನ್ನ ವೆಂಕಟ ಕಲ್ಚರಲ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ) ಮತ್ತು ಇದರ ಅಂಗ ಸಂಸ್ಥೆಯಾದ ಶ್ರೀ ಪ್ರಸನ್ನವೆಂಕಟ ಪ್ರಕಾಶನ ಬೆಂಗಳೂರು. ನಮ್ಮ ಯೋಜನೆಯ ಪ್ರಕಾರ ಆಗ ಆಧ್ಯಾತ್ಮಿಕ ಒಳನೋಟದ ಕುಸುಮ ಮಾಲೆಯಲ್ಲಿ ಐದನೆಯ ಸಂಪುಟವಾಗಿ ''ಪ್ರಸನ್ನ ವೆಂಕಟದಾಸರ ಕೃತಿಗಳಲ್ಲಿ ಆಧ್ಯಾತ್ಮಿಕ ಚಿಂತನೆ'' ಎನ್ನುವ ಗ್ರಂಥ ಪ್ರಕಟವಾಗುತ್ತಿದೆ.

ವಿದ್ವಾನ್ ಶ್ರೀನಿವಾಸ ಸು. ಮಠದ ಅವರು ಹದಿಮೂರು ಆಯ್ದ ಕೀರ್ತನೆಗಳ ಆಧ್ಯಾತ್ಮಿಕ ಚಿಂತನೆಗಳನ್ನು ವಿಸ್ತರಿಸಿ, ತುಂಬ ಅದ್ಭುತವಾಗಿ, ಈ ಕೃತಿಗಳ ಒಳಗಿನ ತಿರುಳನ್ನು ತೆಗೆದಿಟ್ಟಿದ್ದಾರೆ. ತಮ್ಮದೇ ಆದ ವಿದ್ವತ್ತಿನ ಮಾತುಗಳಿಂದ ವ್ಯಾಖ್ಯಾನಕ್ಕೆ ಸಾಕಷ್ಟು ಗ್ರಂಥಗಳ ಆಧಾರಕೊಟ್ಟು ಪುಷ್ಟೀಕರಿಸಿದ್ದಾರೆ. ಮಾನ್ಯ ಶ್ರೀನಿವಾಸ ಸು. ಮಠದ ಅವರು ವ್ಯಾಸ-ದಾಸ ಸಾಹಿತ್ಯದ ಪಂಡಿತರು, ನೂರಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ. ಅವರನ್ನು ಪ್ರಸನ್ನವೆಂಕಟದಾಸರ ಕೃತಿಗಳಲ್ಲಿಯ ಆಧ್ಯಾತ್ಮಿಕ ಒಳನೋಟವನ್ನು ಸಾಮಾನ್ಯ ಜನರಿಗೆ ತಿಳಿಯುವಂತೆ ಗ್ರಂಥ ರಚಿಸಿಕೊಡಿ ಎಂದು ಕೇಳಿದಾಗ ''ದಾಸರ ವಿಶೇಷ ಕೃತಿಗಳಾದ ''ನಾರಾಯಣ ಪಂಜರ''ದ ಒಳನೋಟವನ್ನು ೨೦೧೨ರಲ್ಲಿ ರಚಿಸಿ ಕೊಟ್ಟಿದ್ದರು. ಅದನ್ನು ಒಳನೋಟ - ಸಂಪುಟ ೩ ಆಗಿಆಗಲೇ ಪ್ರಕಟವಾಗಿದೆ. ಅದರಂತೆ ಈ ವರ್ಷ ೧೩ ಆಯ್ದ ಕೀರ್ತನೆಗಳ ಒಳನೋಟವನ್ನು ಸಂಪುಟ - ೫ ಆಗಿ ನೀಡುತ್ತಿದ್ದಾರೆ. ಅವರು ಈ ಕೃತಿಯ ಹಸ್ತ ಪ್ರತಿಯನ್ನು ಹೇಳಿದ ಕಾಲಕ್ಕೆ ಸರಿಯಾಗಿ ತಲುಪಿಸಿದ್ದಲ್ಲದೆ, ಡಿ.ಟಿ.ಪಿ. ಮಾಡಿದ ಕರುಡು ಪ್ರತಿಯನ್ನು ಸಹ ತಿದ್ದುಪಡಿ ಮಾಡಿದ್ದಾರೆ. ಅವರಿಗೆ ನಮ್ಮ ಅನಂತ ಕೃತಜ್ಞತೆಗಳು.

ಇನ್ನು, ವಿದ್ವತ್‌ಪೂರ್ಣವಾದ ಬೆನ್ನುಡಿಯನ್ನು ಬರೆದುಕೊಟ್ಟ ವಿದ್ವಾವಾಚಸ್ಪತಿ ಡಾ|| ಅರಳುಮಲ್ಲಿಗೆ ಪಾರ್ಥಸಾರಥಿಯವರಿಗೆ ನಮ್ಮ ಅನಂತ ಕೃತಜ್ಞತೆಗಳು. ಈ ಗ್ರಂಥ ಪ್ರಕಟಣೆಗೆ ಯಥಾಶಕ್ತಿ ಧನಸಹಾಯ ಮಾಡಿ ಈ ಜ್ಞಾನ ಪ್ರಸಾರ ಕಾರ್ಯದಲ್ಲಿ ಭಾಗಿಯಾದ ಶ್ರೀ ಎನ್.ಜಿ. ವಿಷ್ಣುಪ್ರಸಾದ ಅವರಿಗೂ ನಮ್ಮ ಕೃತಜ್ಞತೆಗಳು. ಇವರಿಗೆ ಶ್ರೀ ಪ್ರಸನ್ನ ವೆಂಕಟದಾಸರ ಅಂತರಾತ್ಮರಾದ ಶ್ರೀನಿವಾಸ ದೇವರ ವಿಶೇಷ ಅನುಗ್ರಹವಿರಲಿ ಎಂದು ಹಾರೈಸುತ್ತೇವೆ. ಸುಂದರವಾಗಿ ಮುದ್ರಿಸಿದ ವಾಗರ್ಥ ಹಾಗು ಮುಖಪುಟ ವಿನ್ಯಾಸಗೊಳಿಸಿದ..... ಅವರಿಗೂ ನಮ್ಮ ಕೃತಜ್ಞತೆಗಳು.

ಬೆಂಗಳೂರು

ಶ್ರೀ ಪ್ರಸನ್ನ ವೆಂಕಟ ಪ್ರಕಾಶನ ಮತ್ತು ಶ್ರೀ ಪ್ರಸನ್ನವೆಂಕಟ ಕಲ್ಚರಲ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ.) ಪರವಾಗಿ
ಡಾ|| ಸುಧಾಸ ಕಾಖಂಡಕಿ, ಶ್ರೀಮತಿ ರೇಖಾ ಕಾಖಂಡಕಿ

ಲೇಖಕರ ನುಡಿ

ಶ್ರೀ ಪಸನ್ನವೆಂಕಟದಾಸರ ವಂಶಜರಾದ ಡಾ|| ಸುಭಾಸ ಕಾಖಂಡಕಿ ಅವರು ಶ್ರೀದಾಸರ ಕೆಲವು ಪದ್ಯಗಳ ವಿವರಣೆ ಬರೆದುಕೊಡಲು ಕೇಳಿಕೊಂಡರು. ಶ್ರೀಹರಿಯ ಪ್ರೇರಣೆಯಿಂದ ಒಪ್ಪಿಕೊಂಡೆ. ಅದರ ಫಲವೇ ಈ ಚಿಕ್ಕ ಕೃತಿ. ಇದರಲ್ಲಿ ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ಅಧ್ಯಾತ್ಮ ಚಿಂತನೆ ಹೇಗೆ ಮೂಡಿಬಂದಿದೆ ಎಂಬುದನ್ನು ವಿವರಿಸಲು ಪ್ರಯತ್ನಿಸಿದ್ದೇನೆ.

ಈ ಕೃತಿಯನ್ನು ನಮ್ಮ ಕುಲಸ್ವಾಮಿಯಾದ ಶ್ರೀ ಶ್ರೀನಿವಾಸದೇವರ ಅಡಿದಾವರೆಗಳಲ್ಲಿ ಸಮರ್ಪಿಸಿದ್ದೇನೆ.

ಕೃತಿ ಸಂಪಾದನ ಕಾರ್ಯದಲ್ಲಿ ಮಾರ್ಗದರ್ಶನ ಮಾಡಿದ ಹಾಗೂ ಸಲಹೆ ಸೂಚನೆಗಳನ್ನಿತ್ತ ಪಂ|| ಶ್ರೀ ಮೊಖಾಶಿ ಮಧ್ವಾಚಾರ್ಯ ಅವರಿಗೆ ನನ್ನ ಶಿ|| ಸಾ|| ನಮಸ್ಕಾರಗಳು.

ಕೃತಿ ಹೊರತರುವಲ್ಲಿ ಸಹಾಯ ಮಾಡಿದ ಶ್ರೀ ಪಂ|| ಪ್ರದ್ಯುಮ್ನಾಚಾರ್ ಪೂಜಾರ ಅವರಿಗೆ ನನ್ನ ನಮಸ್ಕಾರಗಳು. ಹಾಗೂ ನನ್ನ ತಮ್ಮ ಚಿ|| ವಾದಿರಾಜ, ನನ್ನ ಸುಪುತ್ರ ಚಿ|| ಆನಂದತೀರ್ಥ, ಅಳಿಯಂದಿರಾದ ಶ್ರೀ ರಾಘವೇಂದ್ರ ಅಡಬಡ್ಡಿ ಅವರಿಗೆ ನನ್ನ ಆಶೀರ್ವಾದಗಳು.

ಸಕಾಲದಲ್ಲಿ ಇದನ್ನು ಮುದ್ರಣ ಮಾಡಿಕೊಟ್ಟ ವಾಗರ್ಥ ಪ್ರಿಂಟರ್ಸ್ ಅವರಿಗೆ ಧನ್ಯವಾದಗಳು.

ಶ್ರೀ ಡಾ|| ಸುಭಾಸ ಕಾಖಂಡಕಿ ಅವರು ತಮ್ಮ ಶ್ರೀ ಪ್ರಸನ್ನವೆಂಕಟ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಈ ಕೃತಿಯನ್ನು ಪ್ರಕಟಿಸಿದ್ದಕ್ಕಾಗಿ ಅವರಿಗೆ ನನ್ನ ತುಂಬು ಹೃದಯದ ಧನ್ಯವಾದಗಳು.

ಇತಿ ಸಜ್ಜನ ಸೇವಕ
ಶ್ರೀನಿವಾಸ ಸು. ಮಠದ

ವಿಷಯಾನುಕ್ರಮಣಿಕಾ

	ಶ್ರೀ ಪ್ರಸನ್ನವೆಂಕಟದಾಸರ ಸಂಕ್ಷಿಪ್ತ ಜೀವನ ಚರಿತ್ರೆ	9
೧.	ಶ್ರೀನಿವಾಸನ ಚರಣಕಮಲವ ನೆನೆವೆ.	11
೨.	ಪ್ರಹ್ಲಾದವರದ ಭಯಗಜಕೆ ಸಿಂಹ	20
೩.	ಎಂದು ಕಾಂಬೆನು ತಂದೆ ಉಡುಪಿಯ ಜಾಣನ	27
೪.	ನೆನೆ ಮನವೆ ದಾನವಾರಿಯ	34
೫.	ಬಿಡೆ ನಿನ್ನ ಚರಣವ ಉಡುಪಿ ಕೃಷ್ಣನೆ	43
೬.	ಹರಿಯೇ ಗತಿಯೆನ್ನಿರೈ	51
೭.	ಸಂಗವಾಗಲಿ ಸಾಧು ಸಂಗವಾಗಲಿ	60
೮.	ನಂಬೋ ನಂಬೋ ಹರಿಪದವ ನಂಬೋ	77
೯.	ಭಕ್ತ ಜನರ ಸಂಜೀವಾ	83
೧೦.	ವೇದಾಗಮಗಳಲ್ಲಿ ಭೇದ ಹುಡುಕಿ	92
೧೧.	ಚಂಚಲಿಸದಿರು ಚತುರನಾಗು ಮನವೆ	100
೧೨.	ಎಲೆ ಮಾನವ ಹರಿಯ ಸ್ಮರಿಸು	113
೧೩.	ಹರಿಯೆನ್ನಬಾರದೆ ಜಿಹ್ವೆ ವಾರಂ ವಾರಂ	126

ನಮ್ಮ ಮುಂದಿನ ಪ್ರಕಟಣೆ – ನಿರೀಕ್ಷಿಸಿ

ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ – 3

(ದಾಸರು ರಚಿಸಿದ ದಶಮಸ್ಕಂದ ಭಾಗವತ ಪೂರ್ವಾರ್ಧ, ನಾರಾಯಣ ಪಂಜರ, ಸೃಷ್ಟಿಪ್ರಕರಣ, ಸತ್ಯಭಾಮವಿಲಾಸ, ಭೇದಮುಕ್ತಾವಲಿ ಮುಂತಾದ 15 ವಿಶೇಷ ಕೃತಿಗಳು, ಸುಳಾದಿ, ಉಗಾಭೋಗ ಹಾಗೂ ಮುಂಡಿಗೆಗಳು)

ನಮ್ಮ ಪ್ರಕಾಶನದ ಇತರ ಪ್ರಕಟಣೆಗಳು

೧. ''**ಶ್ರೀ ಪ್ರಸನ್ನವೆಂಕಟ ವಿಜಯ**'' – ಲೇ॥ ಶ್ರೀಮತಿ ರೇಖಾ ಕಾಖಂಡಕಿ
(ಶ್ರೀ ಪ್ರಸನ್ನವೆಂಕಟದಾಸರ ಜೀವನ ಆಧಾರಿತ ಕಾದಂಬರಿ) ಪ್ರಕಟಣೆ ೨೦೧೦, ಬೆಲೆ: ರೂ. ೧೨೦

೨. **ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೃತಿಗಳಲ್ಲಿಯ ಆಧ್ಯಾತ್ಮಿಕ ಒಳನೋಟ,** ಸಂಪುಟ – ೧
ಶ್ರೀ ಪ್ರಸನ್ನವೆಂಕಟದಾಸಾರ್ಯ ವಿರಚಿತ
''**ಸಮಸ್ತನಾಮ ಮಣಿಗಣ ಷಟ್‌ಚರಣ ಪದ್ಯಮಾಲಾ**'', (ನಾಮಗಳ ಸಂದರ್ಭ ಸಹಿತ – ಅರ್ಥವಿವರಣೆ ಈ ಕೃತಿ ''ಶ್ರೀಪ್ರಸನ್ನವೆಂಕಟದಾಸಾರ್ಯ ವಿರಚಿತ ಕನ್ನಡದ ಪ್ರಪ್ರಥಮ ಶ್ರೀವಿಷ್ಣು ಸಹಸ್ರನಾಮ'')
ಲೇಖಕರು – ಡಾ. ವ್ಹಿ.ಬಿ. ಕುಲಕರ್ಣಿ, ಪ್ರಕಟಣೆ ೨೦೧೧, ಬೆಲೆ: ರೂ. ೧೩೦/–

೩. **ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೃತಿಗಳಲ್ಲಿಯ ಆಧ್ಯಾತ್ಮಿಕ ಒಳನೋಟ** ಸಂಪುಟ – ೨.
ಶ್ರೀ ಪ್ರಸನ್ನವೆಂಕಟದಾಸಾರ್ಯ ವಿರಚಿತ ''**ಬಿಡೆನೋ ನಿನ್ನಂಘ್ರಿ ಶ್ರೀನಿವಾಸ**'' ಕೃತಿಯ – ಒಳನೋಟ ಲೇ॥ ಕೆ. ಅಪ್ಪಣ್ಣಾಚಾರ್ಯ, ಪ್ರಕಟಣೆ ವರ್ಷ: ೨೦೧೧, ಬೆಲೆ: ರೂ. ೩೫/–

೪. **ಶ್ರೀ ಪ್ರಸನ್ನ ವೆಂಕಟದಾಸಾರ್ಯ ವಿರಚಿತ ''ನಾರಾಯಣ ಪಂಜರ – ಸಂದರ್ಭಿಕ ಸಹಿತ ಅರ್ಥ ವಿವರಣೆ''** – ಲೇ॥ ವಿದ್ವಾನ್ ಶ್ರೀನಿವಾಸ ಸು. ಮಠದ ಪು. ವರ್ಷ – ೨೦೧೩., ಬೆಲೆ: ರೂ. ೫೦/–

೫. **ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೃತಿಗಳಲ್ಲಿಯ ಆಧ್ಯಾತ್ಮಿಕ ಒಳನೋಟ** ಸಂಪುಟ – ೪,
ಶ್ರೀ ಪ್ರಸನ್ನವೆಂಕಟದಾಸರ ಕೃತಿಗಳಲ್ಲಿ ಸಿದ್ಧಾಂತದ ಸೊಬಗು ಭಾಗ – ೧
'**ಭೇದಮುಕ್ತಾವಲಿ**' ಲೇಖಕರು: ವಿದ್ವಾನ್ ಡಾ॥ ಆರ್.ಜಿ. ಗುಡಿ. ಪ್ರಕಟಣೆ ವರ್ಷ: ೨೦೧೨, ಬೆಲೆ: ರೂ. ೬೫/–

೬. **ಶ್ರೀ ಪ್ರಸನ್ನವೆಂಕಟದಾಸರ ಅಪ್ರಕಟಿತ ಕೃತಿಗಳು**
(ದಾಸರು ತಾಳೆಗರಿಯಲ್ಲಿ ಬರೆದ ಕೃತಿಗಳ ಹಸ್ತಪ್ರತಿ ಸಹಿತ) – ಸಂಶೋಧನಾ ಗ್ರಂಥ
ಸಂಶೋಧನೆ – ಸಂಗ್ರಹ – ಶುದ್ಧಪಾಠ : ಶ್ರೀ ಲಕ್ಷ್ಮೀಕಾಂತ ಪಾಟೀಲ (ಬಿಜಾಪುರ)
ಪ್ರಕಟಣೆ ವರ್ಷ – ೨೦೧೨

೭. **ಶ್ರೀ ಪ್ರಸನ್ನವೆಂಕಟದಾಸಾಂಚೆ ನಿವ್ಡಕ್ ಕೀರ್ತನೆ** (ಮರಾಠಿ ಭಾಷೆಯಲ್ಲಿ)
ಮೂಲ ಕನ್ನಡ ಕೀರ್ತಾನಾಂಚ ಭಾರತೀಯ ಭಾಷೆತಿಲ್, ಭಾವಾನುವಾದ ಪುಷ್ಪ ಗುಚ್ಛ – ೧ (ಮರಾಠಿ); ಭಾವಾನುವಾದಕರು : ಶ್ರೀ ಗುಂಡೋಪಂತ್ ಕೃಷ್ಣಾಜಿ ಸಂಗೂರಾಮ್, ಮುದ್ರಣದ ವರ್ಷ: ೨೦೧೨, ಬೆಲೆ: ೩೦/–

೮. **ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳು, ಸಂಪುಟ – ೧** (ತಾರತಮ್ಯೋಕ್ತ ಶ್ರೀ ಪ್ರಸನ್ನ ವೆಂಕಟದಾಸರ ೨೩೦ ಕೀರ್ತನೆಗಳು) ಸಂಪಾದನೆ: ಡಾ॥ ಸುಭಾಸ ಕಾಖಂಡಕಿ, ಶ್ರೀಮತಿ ರೇಖಾ ಕಾಖಂಡಕಿ, ಮುದ್ರಣ ವರ್ಷ: ೨೦೧೩., ಪು: ೨೬೪, ಬೆಲೆ: ೧೨೦/–

೯. ''**ಶ್ರೀ ಪ್ರಸನ್ನ ವೆಂಕಟದಾಸರ ಸಮಗ್ರ ಕೀರ್ತನೆಗಳು ಸಂಪುಟ – ೨**''
(ಶ್ರೀಪ್ರಸನ್ನವೆಂಕಟದಾಸರ ೨೯೪ ಕೀರ್ತನೆಗಳು ಹಾಗೂ ಹೊಸದಾಗಿ ದೊರೆತ ಅಪ್ರಕಟಿತ ಕೃತಿಗಳು – ತಾಳೆಗರಿ ಹಸ್ತಪ್ರತಿ ಸಹಿತ) ಸಂಪಾದನೆ : ಡಾ. ಸುಭಾಸ ಕಾಖಂಡಕಿ, ಶ್ರೀಮತಿ ರೇಖಾ ಕಾಖಂಡಕಿ. ಪ್ರ.ವ. ೨೦೧೪, ಪು. ೩೪೦ ಬೆಲೆ. : ರೂ. ೧೬೦/–

ವಿ.ಸೂ.: ಶ್ರೀ ಹರಿದಾಸರ ಭಕ್ತರಿಗೆ/ಹರಿದಾಸ ಸಾಹಿತ್ಯ ಆಸಕ್ತರಿಗೆ ಈ ಕೃತಿಗಳು ವಿಶೇಷ ರಿಯಾಯತಿಯಲ್ಲಿ ಲಭ್ಯ, ಪ್ರಕಾಶಕರನ್ನು ಸಂಪರ್ಕಿಸಿ: ಮೊ. ೦೯೪೪೮೦೧೯೫೪.

ಶ್ರೀ ಪ್ರಸನ್ನ ವೆಂಕಟದಾಸರ ಸಂಕ್ಷಿಪ್ತ ಜೀವನ ಚರಿತ್ರೆ

ಸುಮಾರು ಕ್ರಿ.ಶ. ೧೬೯೦, ಶಾಲಿವಾಹನಶಕೆ ೧೬೦೨ರಲ್ಲಿ ಬಾಗಲಕೋಟೆಯಲ್ಲಿ ಕಾಶ್ಯಪ ಗೋತ್ರಜರಾದ ಶ್ರೀ ನರಸಪ್ಪಯ್ಯ ಮತ್ತು ಲಕ್ಷ್ಮೀಬಾಯಿ ಎಂಬ ಸಾತ್ವಿಕ ದಂಪತಿಗಳಿಗೆ ಜನಿಸಿದ, ಇವರ ಮೊದಲಿನ ಹೆಸರು ವೆಂಕಣ್ಣ (ವೆಂಕಟೇಶ). ಶ್ರೀ ವಿಜಯದಾಸರು, ಗೋಪಾಲದಾಸರು ಹಾಗೂ ಹೆಳವನಕಟ್ಟೆ ಗಿರಿಯಮ್ಮ ಅವರು ಇವರ ಸಮಕಾಲೀನರೆಂದು, ತಿಳಿದು ಬರುತ್ತದೆ. ತಂದೆ–ತಾಯಿಯ ಇಳಿವಯಸ್ಸಿನಲ್ಲಿ ಹುಟ್ಟಿದ ಅವರು, ಬಾಲಕನಿದ್ದಾಗಲೇ ಅನಾಥರಾದರು. ತಂದೆ–ತಾಯಿಯ ಮರಣದಿಂದ, ಬಾಲಕ ವೆಂಕಣ್ಣನಿಗೆ ವಿದ್ಯೆಯ ಸಂಪತ್ತು ಸಿಗಲಿಲ್ಲ. ವೆಂಕಣ್ಣಗೆ ಬರುವ ಪಾಠವೆಂದರೆ, ಅವರ ತಾಯಿ ಇದ್ದಾಗ, ಅವಳು ಹೇಳುವ ದಾಸರ ಕೀರ್ತನೆಗಳು, ವೆಂಕಟೇಶ ಪಾರಿಜಾತದ ಹಾಡುಗಳು, ವೆಂಕಟೇಶ ಸ್ತೋತ್ರ ''ಯಾರಿಲ್ಲದವರಿಗೆ ಭಗವಂತನಿದ್ದಾನೆ'', ಎನ್ನುವ ಸುಸಂಸ್ಕೃತವಾದ ಮಾತುಗಳು. ತಂದೆ ತಾಯಿ ಹೋದ ಮೇಲೆ ಅಣ್ಣನ ಲಗ್ನವಾಗಿ ಅತ್ತಿಗೆ ಮನೆಗೆ ಬಂದ ಮೇಲೆ, ವೆಂಕಣ್ಣನ ಜೀವನ ಯಾತನಾಮಯವಾಗಿತ್ತು. ಕೂತರೆ–ನಿಂತರೆ, ಅತ್ತಿಗೆಯಿಂದ ಹೀನಾಯವಾದ ಮಾತುಗಳು ''ಕೂಳಿಗೆ ದಂಡ – ನಿನ್ನ ಹುಟ್ಟೆ ದಂಡ'' ಎನ್ನುವ ಮಾತುಗಳು, ಗರಗಸದಂತೆ, ಅವನ ಮಾನಸ್ಸನ್ನು ಘಾಸಿಗೊಳಿಸುತ್ತಿತ್ತು. ಅತ್ತಿಗೆ ಇವನನ್ನು ವಿದ್ಯೆ ಕಲಿಸಲು ಗುರುಕುಲಕ್ಕೆ ಕಳಿಸದೆ, ದನಕಾಯಲು ಕಳಿಸುತ್ತಿದ್ದದ್ದು, ಅವನಿಗೆ ಹೀನಾಯವೆನಿಸುತ್ತಿತ್ತು. ಬೇಸಿಗೆಯ ಕಾಲದಲ್ಲಿ ಒಂದು ದಿನ ಬಾಯಾರಿ, ಕುಡಿಯಲು ಮಜ್ಜಿಗೆಯನ್ನು ಕೇಳಿದಾಗ, ಅತ್ತಿಗೆ ಆಡಿದ ಕರ್ಣ ಕಠೋರ ನುಡಿಗಳು ವೆಂಕಟೇಶನ ಮನಸ್ಸಿನ ಮೇಲೆ, ಅಪಾರವಾದ ಆಘಾತವನ್ನುಂಟು ಮಾಡಿದವು. ಇನ್ನು ಮುಂದೆ, ಅವರ ಆಶ್ರಯದಲ್ಲಿ ಇರುವದು ಬೇಡವೆನಿಸಿ ಮನೆಬಿಟ್ಟು , ತಿರುಪತಿ ಕಡೆಗೆ ಹೊರಟ ಭಕ್ತರ ಗುಂಪೊಂದರ ಜೊತೆಗೆ, ಇನ್ನು ಶ್ರೀನಿವಾಸನ ಪಾದವೇ ಗತಿ ಎಂದು ನಂಬಿ, ಹೊರಟ ಸಜ್ಜನ – ಭಕ್ತರ ಸತ್ – ಸಂಗದಿಂದ, ಅವನ ಮನಸ್ಸು ಇನ್ನಿಷ್ಟು ಪಕ್ವವಾಗಿ, ಭಕ್ತಿಯ ಪರಾಕಾಷ್ಠೆಯನ್ನು ತಲುಪಿತ್ತು. ಪಯಣದ ಮೇಲೆ – ಪಯಣ ಮಾಡುತ್ತ, ಬೆಟ್ಟವನ್ನೇರಿ, ಸ್ವಾಮಿ ಪುಷ್ಕರಣಿಯಲ್ಲಿ ಮಿಂದು, ಗುಡಿಗೋಪುರ ಕಾಣುತ್ತಿದ್ದಂತೆ, ವೆಂಕಣ್ಣನಲ್ಲಿ ಆದ್ಯಾವದೋ ಭಕ್ತಿಯ ಪ್ರಭೆ ಹೃದಯದಲ್ಲಿ ಜಾಜ್ವಲವಾಗಿ ಬೆಳಗುತ್ತಿದ್ದಂತೆ, ಭಗವಂತನ ಆ ದಿವ್ಯ ಪಾದದ ದರ್ಶನ ಮಾಡಬೇಕೆಂಬ ಅನಂತ ಆಶೆಯಲ್ಲಿ, ಗರ್ಭಗುಡಿ ಒಳಬಂದು, ಆ ದಿವ್ಯ ಪಾದಗಳನ್ನೇ ನೋಡುತ್ತಾ, ಅವನ ಅನಂತ ಆನಂದಮಯ ಮೂರ್ತಿಯನ್ನೇ ನೋಡುತ್ತ, ಪ್ರಪಂಚವನ್ನೆ ಮರೆತು ''ಶ್ರೀಹರಿ ಅನಾಥ ರಕ್ಷಕ ನಿನ್ನ ಪಾದದ ಮೇಲೆ ಬಿದ್ದಿದ್ದೀನೆ'' ಎಂದು ಸರ್ವಸಮರ್ಪಣ ಭಾವದಿಂದ ಹರಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದು ವಿಸ್ಮರಣೆಯಲ್ಲಿ ಮಲಗಿದ್ದ ವೆಂಕಣ್ಣನ ಅನನ್ಯ ಭಕ್ತಿಗೆ ಮೆಚ್ಚಿ ಶ್ರೀನಿವಾಸನು ಅವರ ನಾಲಿಗೆಯ ಮೇಲೆ ''ಪ್ರಸನ್ನವೆಂಕಟ''ನೆಂಬ ಬಿಜಾಕ್ಷರ ಬರೆದು ಅಂಕಿತ ಕೊಟ್ಟ ಮೇಲೆ ಜ್ಞಾನಿಯಾದ ಅವರು ಭಗವಂತನ ಅಪ್ಪಣೆಯಂತೆ ತಿರುಗಿ ಬಾಗಲಕೋಟೆಗೆ ಬಂದು, ಗಲಗಲಿಯ ಮುದ್ಗಲಾಚಾರ್ಯರಿಂದ ವೇದ–ಶಾಸ್ತ್ರಗಳನ್ನು ಅಧ್ಯಯನ ಮಾಡಿ, ಬದುಕಿನುದ್ದಕ್ಕೂ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡು, ಸಾವಿರಾರು

ಕೀರ್ತನೆಗಳು, ಉಗಾಭೋಗ, ಸುಳಾದಿ, ಮುಂಡಿಗೆ ಹಾಗೂ ವಿಶೇಷ ಕೃತಿಗಳನ್ನು ರಚಿಸಿ, ಊರಿಂದ – ಊರಿಗೆ ಸಂಚಾರ ಮಾಡಿ, ಧರ್ಮ ಜಾಗೃತಿ ಮಾಡಿದರು. ಅಪರೋಕ್ಷ ಜ್ಞಾನಿಗಳು, ರುದ್ರಾಂಶ ಸಂಭೂತರು ಆದ ಇವರಿಂದ ಭಗವಂತನು, ಅನೇಕ ಪವಾಡ ಸದೃಶ ಲೀಲೆಗಳನ್ನು ಮಾಡಿಸಿದನು. ಉದಾಹರಣೆಗೆ – ಒಂದೇ ದಿನ, ಒಂದೇ ಸಮಯದಲ್ಲಿ ಭಕ್ತರಿಬ್ಬರು ಬಂದು ತಮ್ಮ ಮನೆಯಲ್ಲಿ ದೇವತಾಕಾರ್ಯವಿದೆಯೆಂದು, ಅದಕ್ಕಾಗಿ ತೀರ್ಥ ಪ್ರಸಾದಕ್ಕಾಗಿ ಬರಬೇಕೆಂದು ಹೇಳಿದರು. ಇಬ್ಬರೂ ಬೇರೆ, ಬೇರೆಯಾಗಿ ಬೇರೆ ಸಮಯದಲ್ಲಿ ಬಂದು ಕರೆದಿದ್ದರು. ಭಗವಂತನ ಧ್ಯಾನದಲ್ಲಿದ್ದ ದಾಸರು ತಮ್ಮದೇ ಆದ ಭಗವದ್ ಚಿಂತನೆಯಲ್ಲಿ ಇಬ್ಬರ ಔತಣಕ್ಕೂ ಒಪ್ಪಿದ್ದರು. ಆದರೆ ಮರುದಿನ ಇಬ್ಬರ ಮನೆಯಲ್ಲೂ ಒಂದೇ ಸಮಯದಲ್ಲಿ ತೀರ್ಥಪ್ರಸಾದ ಸ್ವೀಕರಿಸಿದ್ದೂ – ಊರಿನ ಜನಗಳಲ್ಲಿ ಅಚ್ಚರಿ ಉಂಟು ಮಾಡಿದ್ದು – ಇದೊಂದು ಭಗವಂತನ ಲೀಲೆಯೆ, ಭಗವಂತ ತನ್ನಿಂದ ಇಂಥಹ ಪವಾಡ ಮಾಡಿಸಿದ್ದಾನೆ ಎಂಬುದು ದಾಸರ ಸಮರ್ಪಣ ಭಾವದ ಪ್ರತೀಕವೇ ಸರಿ. ಅದರಂತೆ ಅಡವಿಯಲ್ಲಿ ಶಿಷ್ಯರೊಡನೆ ಸಂಚಾರ ಮಾಡುವಾಗ ಎದುರಿಗೆ ಬಂದ ಕ್ರೂರ ಹುಲಿಯನ್ನು ಕಂಡು ಶಿಷ್ಯರು ಭಯದಿಂದ ನಡುಗಿದ್ದು ಆಗ ದಾಸರು ಕ್ರೂರ ಹುಲಿಗೆ, ಶ್ರೀ ತುಳಸಿಗಿರಿ ಆಂಜನೇಯನ ಅಂಗಾರ ಹಚ್ಚಿ ಸಾಧು ಪ್ರಾಣಿ ಮಾಡಿ ಅದರ ಬೆನ್ನ ಮೇಲೆ ದೇವರ ಪೆಟ್ಟಿಗೆ ಇಟ್ಟಾಗ ಅದು ಸಾಧುಪ್ರಾಣಿಯಂತೆ ಅವರೊಡನೆ ನಡೆದದ್ದು ದಾಸರ ಮಹಿಮಾನ್ವಿತೆಗೆ ಸಾಕ್ಷಿಯಾಗಿದೆ. ಅದರಂತೆ ಇವರ ನುಡಿಯುವ ಮಾತುಗಳು ಸತ್ಯವಾಗಿ, ಖರೇ ಬಾಯಿದಾಸರೆಂದು ಪ್ರಸಿದ್ಧವಾದದ್ದು . ಅಂತ್ಯ ಕಾಲಕ್ಕೆ ಬಾಲರೂಪಿಯಾದ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು, ಬಾದಾಮಿಯ ಅಗಸ್ತ್ಯ ತೀರ್ಥದ ದಡದಲ್ಲಿ ಕ್ರಿ.ಶ. ೧೭೫೨, ಶಾ. ವಾಹನ ಶಕೆ ೧೬೭೪, ಭಾದ್ರಪದ ಶುಕ್ಲಪಕ್ಷ ಏಕಾದಶಿಯಂದು ಮುಕ್ತಿಯ ಮಾರ್ಗ ಹಿಡಿದರು.

ಶ್ರೀ ಪ್ರಸನ್ನವೆಂಕಟದಾಸರ ಸಾಹಿತ್ಯ ಸೃಷ್ಟಿ ವಿಪುಲವಾಗಿದೆ. ಇದುವರೆಗೆ, ಇವರ ಪ್ರಸನ್ನವೆಂಕಟ, ಪ್ರಸನ್ನ ವೆಂಕಟ ಕೃಷ್ಣ ಅಂಕಿತದಲ್ಲಿ ೬೨೪ ಕೃತಿಗಳು ದೊರಕಿವೆ. ''ಶ್ರೀ ಪ್ರಸನ್ನವೆಂಕಟರ ಭಾಗವತ''ವೆಂದೇ ಪ್ರಸಿದ್ಧವಾದ ದಶಮಸ್ಕಂಧ ಭಾಗವತ – ಪೂರ್ವಾರ್ಧ, ಸೃಷ್ಠಿ ಪ್ರಕರಣ; ಸತ್ಯಭಾಮಾ ವಿಲಾಸ, ''ಕನ್ನಡದ ವಿಷ್ಣು ಸಹಸ್ರನಾಮ''ವೆಂದು ಪ್ರಸಿದ್ಧವಾದ ಸಮಸ್ತ ಮಣಿಗಣ ಷಟ್‌ಚರಣ ಪದ್ಯಮಾಲಾ, ನಾರಾಯಣ ಪಂಜರ, ಭೇದಮುಕ್ತಾವಲಿ ಮುಂತಾದ ೧೫ ದೀರ್ಘಕೃತಿಗಳು, ೨೨ ಸುಳಾದಿಗಳು, ೧೫ ಉಗಾಭೋಗಗಳು, ೨ ಮುಂಡಿಗೆಗಳು ಹಾಗೂ ೫೭೦ ಕೀರ್ತನೆಗಳು. ಇವರ ಕೃತಿಗಳನ್ನು, ೧. ದೇವತಾಸ್ತುತಿ, ೨. ಗುರುಸ್ತುತಿ, ೩. ಆತ್ಮ ನಿವೇದನೆ, ೪. ಲೋಕನೀತಿ, ೫. ತತ್ವ ವಿವೇಚನೆ, ೬. ಸಂಪ್ರದಾಯಕ ಕೀರ್ತನೆಗಳು, ೭. ಇತರ ಕೀರ್ತನೆಗಳು ಎಂಬ ವಿಭಾಗದಲ್ಲಿ ವಿಂಗಡಿಸಬಹುದು. ಹರಿದಾಸ ಸಾಹಿತ್ಯದ ದ್ವಿತೀಯ ಘಟ್ಟದ ದಾಸರಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಪ್ರಮುಖರು, ತಮ್ಮ ಅಸಾಧಾರಣ ವ್ಯಕ್ತಿತ್ವ ಮತ್ತು ಕೃತಿಗಳಿಂದ ಇವರು ಅವಿಸ್ಮರಣೀಯರಾಗಿದ್ದಾರೆ.

೧. ಶ್ರೀನಿವಾಸನ ಚರಣಕಮಲವ ನೆನೆವೆ

ಶ್ರೀನಿವಾಸನ ಚರಣಕಮಲವ ನೆನೆವೆ ನಾ ನಿತ್ಯ ದಣಿಯನಾ ।
ಮೌನಿಧ್ಯೇಯ ಗಂಧರ್ವಗೇಯ ವೇದವೇದ್ಯನ ಅನವದ್ಯನ ಶ್ರೀ ಶ್ರೀಃ ॥ ಪ ॥

ಧರಿಯ ವೈಕುಂತಾಧಿವಾಸನ ಶ್ರೀಶನ ಅಕ್ಷಯ ಕೋಶನಾ ।
ಪರಮಪಾವನ ನಾಮಧೇಯ ಪರಪುರುಷನಾ ಚಿದ್ದೂರುಷನಾ ಶ್ರೀ ಶ್ರೀಃ ॥ ೧ ॥

ಸ್ವಾಮಿ ಪುಷ್ಕರ ವರಹ ವೇಂಕಟನಾಥನಾ ಪುಣ್ಯನಾಥನಾ ।
ಕಾಮಿತಾರ್ಥದ ಕರುಣನಿಧಿಪೂರ್ಣ ಕಾಮನಾಂತ ನಾಮನಾ ಶ್ರೀ ಶ್ರೀಃ ॥ ೨ ॥

ಭಕ್ತಾಭೀಷ್ಟದ ವಿಬುಧಧೇನು ಮಣಿಭೂಜನಾರ್ಕನಂತ ತೇಜನಾ ।
ಮುಕ್ತಿದಾಯಕ ಮೃತ್ಯುಮಾರಕ ಪ್ರಸನ್ನವೆಂಕಟಾದ್ರೀಶನಾ ಶ್ರೀ ಶ್ರೀಃ ॥ ೩ ॥

ಪ್ರಸ್ತುತ ಪದ್ಯದಲ್ಲಿ ನಾನು ಶ್ರೀನಿವಾಸನ ಚರಣಕಮಲವನ್ನು ನೆನೆಯುವೆ. ಆ ಶ್ರೀನಿವಾಸನು ಮುನಿಗಳಿಂದ ಧ್ಯೇಯನು, ಗಂಧರ್ವರಿಂದ ಗೇಯನು, ವೇದವೇದ್ಯನು, ದೋಷ ದೂರನು, ಭೂವೈಕುಂಠದಲ್ಲಿ ವಾಸಮಾಡುವವನು, ಕಾಮಿತಾರ್ಥವನ್ನು ಕೊಡುವ ಕರುಣಾಪೂರ್ಣನು, ಭಕ್ತರ ಅಭೀಷ್ಟಗಳನ್ನು ಪೂರೈಸುವ ದೇವದೇವನು, ಅನಂತಸೂರ್ಯರ ಕಾಂತಿಯುಕ್ತನು, ಮುಕ್ತಿದಾಯಕನು, ಮೃತ್ಯುವಿಗೂ ಮಾರಕನು, ಪ್ರಸನ್ನವೆಂಕಟೇಶನು ಅನಂತ ಶ್ರೀಯುತನು ಆಗಿದ್ದಾನೆ.

ಶ್ರೀನಿವಾಸನ ಚರಣಕಮಲವ ನೆನೆವೆ ನಾ ನಿತ್ಯದಣಿಯನಾ ।
ಮೌನಿಧ್ಯೇಯ ಗಂಧರ್ವಗೇಯ ವೇದವೇದ್ಯನ ಅನವದ್ಯನ ಶ್ರೀ ಶ್ರೀಃ ॥ ಪ ॥

ಶ್ರೀ ಶ್ರೀನಿವಾಸನ ಚರಣಕಮಲವನ್ನು ನಾನು ನಿತ್ಯದಲ್ಲಿ ನೆನೆಯುತ್ತೇನೆ. ಅವನು ಸ್ವಾಮಿಯಾಗಿದ್ದಾನೆ. ಮುನಿಗಳಿಂದ ಧ್ಯೇಯನು, ಗಂಧರ್ವರಿಂದ ಗೇಯನು, ವೇದಗಳಿಂದ ವೇದ್ಯನು ಮತ್ತು ದೋಷದೂರನು ಶ್ರೀಸಹಿತನು ಆಗಿದ್ದಾನೆ.

ಶ್ರೀನಿವಾಸನ ಚರಣಕಮಲವ ನೆನೆವೆ ನಾ ನಿತ್ಯ ದಣಿಯನಾ ॥

ಆ ಸ್ವಾಮಿಯಾದ ಶ್ರೀನಿವಾಸನ ಚರಣಕಮಲವನ್ನು ನಿತ್ಯದಲ್ಲಿ ನೆನೆಯುತ್ತೇನೆ, ಸ್ಮರಿಸುತ್ತೇನೆ.

ಸ್ವಾಮಿಯಾದ ಶ್ರೀನಿವಾಸನ ಚರಣಕಮಲವನ್ನು ನಿತ್ಯದಲ್ಲಿ ಸ್ಮರಿಸಬೇಕು ಎಂಬುದಾಗಿ ಕಪಿಲಗೀತೆಯಲ್ಲಿ ತಿಳಿಸಲಾಗಿದೆ.

ಸಂಚಿಂತಯೇದ್ಭಗವತಶ್ಚರಣಾರವಿಂದಂ
ವಜ್ರಾಂಕುಶಧ್ವಜ ಸರೋರುಹಲಾಂಛನಾಢ್ಯಮ್ ।
ಉತ್ತುಂಗರಕ್ತವಿಲಸನ್ನಖಚಕ್ರವಾಲ
ಜ್ಯೋತ್ಸ್ನಾಭಿರಾಹತ ಮಹದ್ಧೃದಯಾಂಧಕಾರಮ್ ॥[೧]

ಯಚ್ಛೌಚನಿಃಸೃತ ಸರಿತ್ಪ್ರವರೋದಕೇನ
ತೀರ್ಥೇನ ಮೂರ್ಧ್ನ್ಯಧಿಧೃತೇನ ಶಿವಃ ಶಿವೋಽಭೂತ್ ।
ಧ್ಯಾತುರ್ಮನಃ ಶಮಲಶೈಲನಿಸೃಷ್ಟವಜ್ರಂ
ಧ್ಯಾಯೇಚ್ಚಿರಂ ಭಗವತಶ್ಚರಣಾರವಿಂದಮ್ ॥[೨]

ವಜ್ರ, ಅಂಕುಶ, ಧ್ವಜ ಇತ್ಯಾದಿ ಪರಮ ಮಂಗಲಕರವಾದ ಚಿಹ್ನೆಗಳಿಂದ ಅಲಂಕೃತವಾದ, ಉನ್ನತವಾದ, ರಕ್ತವರ್ಣೋಪೇತವಾದ, ನಖಮಂಡಲದಿಂದ ಸೂಸುವ ಪ್ರಕಾಶ ವಿಶೇಷದಿಂದ ಭಕ್ತರ ಹೃದಯದಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವ ಭಗವಂತನ ಪಾದಕಮಲಗಳನ್ನು ಮುಮುಕ್ಷುಗಳು ಧ್ಯಾನ ಮಾಡಬೇಕು.

ತ್ರಿವಿಕ್ರಮರೂಪೀ ಭಗವಂತನ ಪಾದಕಮಲಗಳನ್ನು ತೊಳೆಯುವದರಿಂದ ಹೊರಟ ಗಂಗೋದಕವನ್ನು ಭಕ್ತಿಪುರಸ್ಸರವಾಗಿ ಶಿರಸ್ಸಿನಲ್ಲಿ ಧರಿಸುವದರಿಂದ ರುದ್ರದೇವರು ಪರಮಮಂಗಲಕರವಾದ ''ಶಿವ'' ಎಂಬ ನಾಮದಿಂದ ಪ್ರಸಿದ್ಧರಾದರು. ಅಧಿಕಾರಿಯು ಮನೋದೋಷವೆಂಬ ಪರ್ವತಕ್ಕೆ ವಜ್ರಾಯುಧದಂತಿರುವ ಭಗವಂತನ ಪಾದಕಮಲಗಳನ್ನು ಧ್ಯಾನ ಮಾಡಬೇಕು.

ಇಂಥ ಭಗವಂತನ ಪಾದಕಮಲಗಳನ್ನು ನೆನೆಸುವುದೇಕೆ? ಎಂದರೆ ಹೇಳುತ್ತಾರೆ –

ತ್ವಯ್ಯಂಬುಜಾಕ್ಷ ಅಖಿಲಸತ್ತ್ವಧಾಮ್ನಿ ಸಮಾಧಿನಾಽಽವೇಶಿತ ಚೇತಸೈಕೇ ।
ತ್ವತ್ಪಾದಪೋತೇನ ಮಹತ್ಕೃತೇನ ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥[೩]

ಹೇ ಅಂಬುಜಾಕ್ಷ! ಎಲ್ಲ ಸದ್ಗುಣಗಳ ಹಾಗೂ ಎಲ್ಲ ಪ್ರಾಣಿಗಳ ನೆಲೆಯಾದ ನಿನ್ನಲ್ಲಿ ಧ್ಯಾನದಿಂದ ಮನಸ್ಸಿಟ್ಟವರು ಮಹಾತ್ಮರಿಂದ ಉಪದಿಷ್ಟವಾದ ಮಹತ್ತಾದುದೆಂದು ತಿಳಿದ ನಿನ್ನ ಪಾದವೆಂಬ ದೋಣಿಯಿಂದ ಸಂಸಾರವೆಂಬ ಸಮುದ್ರವನ್ನು ಕರುವಿನ ಹೆಜ್ಜೆಯಲ್ಲಿ ನಿಂತ ನೀರನ್ನು ಹೇಗೋ ಹಾಗೆ ಸುಲಭವಾಗಿ ದಾಟುತ್ತಾರೆ.

೧. ಶ್ರೀಮದ್ ಭಾಗವತ-ಕಪಿಲಗೀತಾ-ತೃತೀಯ ಸ್ಕಂಧ (೩-೨೯-೨೧)
೨. ಶ್ರೀಮದ್ ಭಾಗವತ-ಕಪಿಲಗೀತಾ-ತೃತೀಯ ಸ್ಕಂಧ (೩-೨೯-೨೨)
೩. ಶ್ರೀಮದ್ ಭಾಗವತ ದಶಮಸ್ಕಂಧ (೧೦-೩-೫)

ಮೌನಿಧ್ಯೇಯ ಗಂಧರ್ವಗೇಯ ವೇದವೇದ್ಯನ ಅನವದ್ಯನ ಶ್ರೀ ಶ್ರೀಃ ॥

ಇಲ್ಲಿ ಶ್ರೀನಿವಾಸನಿಗೆ ನಾಲ್ಕು ವಿಶೇಷಣಗಳನ್ನು ಕೊಟ್ಟಿದ್ದಾರೆ –

೧. ಮೌನಿಧ್ಯೇಯ ೨. ಗಂಧರ್ವಗೇಯ
೩. ವೇದವೇದ್ಯ ೪. ಅನವದ್ಯ

೧. ಮೌನಿಧ್ಯೇಯ –

ಆ ಶ್ರೀನಿವಾಸನು ಮುನಿಗಳಿಂದ ಧ್ಯೇಯನಾಗಿದ್ದಾನೆ. ಇದಕ್ಕೆ ಕಾರಣ ಹೀಗಿದೆ –

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥[೪]

ಎಲ್ಲ ಶಾಸ್ತ್ರಗಳನ್ನು ಮಥಿಸಿ, ಮತ್ತೆ ಮತ್ತೆ ವಿಚಾರ ಮಾಡಿದಾಗ ಯಾವಾಗಲೂ ನಾರಾಯಣನೇ ಧ್ಯೇಯನಾಗಿದ್ದಾನೆ ಎಂಬುದು ನಿಶ್ಚಿತವಾಗಿ ತಿಳಿದು ಬರುತ್ತದೆ.

ಆದ್ದರಿಂದ ನಾರಾಯಣಾಭಿನ್ನ ಶ್ರೀನಿವಾಸನು ಮುನಿಗಳಿಂದ ಧ್ಯೇಯನಾಗಿದ್ದಾನೆ.

೨. ಗಂಧರ್ವಗೇಯ –

ಆ ಶ್ರೀನಿವಾಸನು ಗಂಧರ್ವರಿಂದ ಗಾನಮಾಡಲ್ಪಡುತ್ತಾನೆ.

ಆ ಭಗವಂತನ ಲೀಲೆಗಳನ್ನು ಕಂಡು ಗಂಧರ್ವರು ಅನೇಕ ಪ್ರಸಂಗಗಳಲ್ಲಿ ಗಾನಮಾಡಿರುವುದು ಕಂಡು ಬರುತ್ತದೆ.

ಗಜೇಂದ್ರನನ್ನು ಮೊಸಳೆಯ ಬಾಯಿಯಿಂದ ಬಿಡಿಸಿದಾಗ ಆ ಭಗವಂತನನ್ನು ಕುರಿತು ಗಂಧರ್ವರು ಸ್ತೋತ್ರ ಮಾಡಿರುವುದು ಶ್ರೀಮದ್ ಭಾಗವತದಲ್ಲಿ ಉಲ್ಲೇಖಗೊಂಡಿದೆ.

ನೇದುರ್ದುಂದುಭಯೋ ದಿವ್ಯಾ ಗಂಧರ್ವಾ ನನೃತುರ್ಜಗುಃ ।
ಋಷಯಶ್ಚಾರಣಾಃ ಸಿದ್ಧಾಸ್ತುಷ್ಟುವುಃ ಪುರುಷೋತ್ತಮಮ್ ॥[೫]

ಆಗ ದೇವಲೋಕದ ದುಂದುಭಿಗಳು ಮೊಳಗಿದವು. ಗಂಧರ್ವರು ಗಾನ ಮಾಡಿದರು. ಅಪ್ಸರೆಯರು ನರ್ತನ ಮಾಡಿದರು. ಋಷಿಗಳು, ಸಿದ್ಧರು, ಚಾರಣರು ಪುರುಷೋತ್ತಮನಾದ ಶ್ರೀಹರಿಯನ್ನು ಕುರಿತು ಸ್ತೋತ್ರಮಾಡಿ ಸಂತೋಷಪಡಿಸಿದರು.

೪. ಶ್ರೀಮಹಾಭಾರತ ತಾತ್ಪರ್ಯ ನಿರ್ಣಯ (೨-೬೮)
೫. ಶ್ರೀಮದ್ ಭಾಗವತ (೮-೪-೨)

೩. ವೇದವೇದ್ಯ -

ಆ ಶ್ರೀನಿವಾಸನು ವೇದಗಳಿಂದ ವೇದ್ಯನಾಗಿದ್ದಾನೆ - ಶ್ರೀ ಸೂತಾಚಾರ್ಯರು ಶೌನಕಾದಿ ಋಷಿಗಳನ್ನು ಕುರಿತು ಹೇಳುತ್ತಾರೆ.

ಯೂಯಂ ಗತ್ವಾ ವೆಂಕಟೇಶಂ ರಮೇಶಂ
ನತ್ವಾ ಸ್ತುತ್ವಾ ವೇದವೇದ್ಯಂ ಚ ಭಕ್ತ್ಯಾ ।
ಭಕ್ತೇಭ್ಯೋಽಭೀಷ್ಟಾರ್ಥವರ್ಷ ಪ್ರಬುದ್ಧಂ
ಸಂಪ್ರೀಣಿದ್ವಂ ತೇನ ವೋಽಭೀಷ್ಟಸಿದ್ಧಿಃ ॥[೬]

ಇಲ್ಲಿ ಶ್ರೀ ವೆಂಕಟೇಶನನ್ನು ''ವೇದವೇದ್ಯ''ನೆಂದು ಕರೆದಿರುವುದು ಗಮನಾರ್ಹವಾಗಿದೆ.

ಶ್ರೀಕೃಷ್ಣ ಅಷ್ಟೋತ್ತರಶತನಾಮಸ್ತೋತ್ರದಲ್ಲಿ ಭಗವಂತನನ್ನು ''ವೇದವೇದ್ಯೋ ದಯಾನಿಧಿಃ'' ಎಂಬುದಾಗಿ ಕರೆದಿರುವುದನ್ನು ನೆನಪಿಸಿಕೊಳ್ಳಬಹುದು.

೪. ಅನವದ್ಯನ -

ಆ ಶ್ರೀನಿವಾಸನು ಅನವದ್ಯ ಅಂದರೆ ದೋಷದೂರನಾಗಿದ್ದಾನೆ.

ಶ್ರೀನಿವಾಸನನ್ನು ಆದಿತ್ಯಪುರಾಣದಲ್ಲಿ ಹೀಗೆ ವರ್ಣಿಸಿದ್ದಾರೆ.

ಲಕ್ಷ್ಮೀನಾಥಂ ಕಮಲನಯನಂ ಹಾರಕೇಯೂರಭೂಷಂ
ಅಂಡವ್ಯಾಪ್ತಂ ಬಹುಗುಣಭರಂ ದೋಷದೂರಂ ದಯಾಬ್ಧಿಮ್ ॥[೭]

ಇಲ್ಲಿ ಶ್ರೀನಿವಾಸನು ಬಹುಗುಣಗಳಿಂದ ಭರಿತ, ದೋಷದೂರನೆಂದು ವರ್ಣಿಸಿರುವುದು ಗಮನಾರ್ಹ.

ಇನ್ನು ಈ ನುಡಿಯಲ್ಲಿ ಕೊನೆಗೆ ಶ್ರೀ ಶ್ರೀಃ ಎಂಬುದಾಗಿ ನುಡಿದಿದ್ದಾರೆ - ''ಆದರಾದ್ದ್ವಿರುಕ್ತಿಃ'' ಉಕ್ತಿಯಂತೆ ಆ ಶ್ರೀನಿವಾಸನನ್ನು ಆದರದಿಂದ ಶ್ರೀ ಶ್ರೀ ಎಂಬ ವಿಶೇಷಣದಿಂದ ಕರೆದಿದ್ದಾರೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಭಗವಂತನನ್ನು ''ಅನಂತ ಶ್ರೀಃ'' ಎಂಬುದಾಗಿ ಕರೆದಿದ್ದಾರೆ. ಅಂದರೆ ಭಗವಂತನು ನಾಶರಹಿತವಾದ ಸ್ವರೂಪ ಶ್ರೀ ಉಳ್ಳವನಾಗಿದ್ದಾನೆ.

೬. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೫-೬೩)
೭. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೪೪)

ಹಾಗೆ ಇಲ್ಲಿ ಶ್ರೀದಾಸರು ಭಗವಂತನು ಶ್ರೀ ಸಹಿತನಾಗಿ ಇರುವವನು ಎಂಬುದನ್ನು ಆದರದಿಂದ ಶ್ರೀ ಶ್ರೀಃ ಎಂದಿದ್ದಾರೆ ಅದು ಸಂಗತವೇ.

ಧರಿಯ ವೈಕುಂಠಾಧಿವಾಸನ ಶ್ರೀಶನಾಕ್ಷಯಕೋಶನಾ ।
ಪರಮ ಪಾವನ ನಾಮಧೇಯ ಪರಪುರುಷನಾಚಿದ್ಧರುಷನಾ ॥ ೧ ॥

ಆ ಶ್ರೀನಿವಾಸನು ಭೂವೈಕುಂಠದಲ್ಲಿ ವಾಸಮಾಡಿದ್ದಾನೆ. ಲಕ್ಷ್ಮೀದೇವಿಯರಿಗೆ ಸ್ವಾಮಿ, ಪತಿಯಾಗಿದ್ದಾನೆ. ಅಕ್ಷಯವಾದ ಕೋಶಕ್ಕೆ ಸ್ವಾಮಿಯಾಗಿದ್ದಾನೆ. ಶ್ರೇಷ್ಠ ಮಂಗಲಕರ ನಾಮಧೇಯವುಳ್ಳವನಾಗಿದ್ದಾನೆ. ಶ್ರೇಷ್ಠ, ಉತ್ತಮ ಪುರುಷನಾಗಿದ್ದಾನೆ ಹಾಗೂ ಜ್ಞಾನಾನಂದವುಳ್ಳವನಾಗಿದ್ದಾನೆ.

ಧರಿಯ ವೈಕುಂಠಾಧಿವಾಸನ ಶ್ರೀಶನಾಕ್ಷಯಕೋಶನಾ ।

ಆ ಶ್ರೀನಿವಾಸನು ಭೂವೈಕುಂಠದಲ್ಲಿ ವಾಸಮಾಡಿದ್ದಾನೆ -

ಮಾಯಾವೀ ಪರಮಾನಂದಂ ತ್ಯಕ್ತ್ವಾ ವೈಕುಂಠಮುತ್ತಮಮ್ ।
ಸ್ವಾಮಿಪುಷ್ಕರಣೀ ತೀರೇ ರಮಯಾ ಸಹಮೋದತೇ ॥[೮]

ತನ್ನ ಇಚ್ಛೆಯಿಂದ ಆ ಶ್ರೀನಿವಾಸನು ಉತ್ತಮವಾದ ವೈಕುಂಠವನ್ನು ಬಿಟ್ಟು ಸ್ವಾಮಿಪುಷ್ಕರಣೀ ತೀರದಲ್ಲಿ ಶ್ರೀಲಕ್ಷ್ಮೀದೇವಿಯರ ಜೊತೆಗೆ ಕ್ರೀಡೆ ಮಾಡುತ್ತಾನೆ.

ಈ ಕಾರಣದಿಂದ ವೆಂಕಟಾಚಲವು ಭೂ ವೈಕುಂಠವೆನಿಸಿದೆ. ಅಲ್ಲಿ ಶ್ರೀನಿವಾಸನು ವಾಸಮಾಡಿ ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ.

ಆ ಶ್ರೀನಿವಾಸನು ಶ್ರೀಶ ಅಂದರೆ ಲಕ್ಷ್ಮೀಪತಿಯಾಗಿದ್ದಾನೆ. ಅಕ್ಷಯಕೋಶಕ್ಕೆ ಅಂದರೆ - ಅಕ್ಷಯವಾದ ಐಶ್ವರ್ಯಕ್ಕೆ ಸ್ವಾಮಿಯಾಗಿದ್ದಾನೆ.

ದೇವಶರ್ಮ ಬ್ರಾಹ್ಮಣರು ಈ ವಿಷಯವನ್ನು ಬಣ್ಣಿಸುವ ಪರಿ ಹೀಗಿದೆ

ಅನಂತ ವೇದ ಸಂವೇದ್ಯ ಲಕ್ಷ್ಮೀನಾಥಾಂಡಕಾರಣ ।
ಜ್ಞಾನಾನಂದೈಶ್ವರ್ಯಪೂರ್ಣ ನಮಸ್ತೇ ಕರುಣಾಕರ ॥[೯]

ಪರಮಪಾವನ ನಾಮಧೇಯ ಪರಪುರುಷನಾಚಿದ್ಧರುಷನಾ ॥

೮. ಶ್ರೀ ಬ್ರಹ್ಮಾಂಡ ಪುರಾಣ
೯. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೧೦)

ಆ ಶ್ರೀನಿವಾಸನು ಪರಮ ಮಂಗಲನಾಮವುಳ್ಳವನು ಹಾಗೂ ಶ್ರೇಷ್ಠ ಪುರುಷನು, ಜ್ಞಾನಾನಂದವುಳ್ಳವನಾಗಿದ್ದಾನೆ.

ಪೂರ್ಣಾನಂದ ಜ್ಞಾನದಯಾಮೂರ್ತಿಃ ಪರಮ ಮಂಗಲಃ ।
ಮಂಗಲಾಂಗೋ ಮಂಗಲಾಂಕೋ ಭಕ್ತಮಂಗಲದಾಯಕಃ ॥

ಶ್ರೀ ವೆಂಕಟೇಶ ಮಹಾತ್ಮೆ - ೫ನೇ ಅಧ್ಯಾಯ ೪೩ನೆ ಶ್ಲೋಕ

ಆ ಭಗವಂತನನ್ನು ಶ್ರೀಮದ್ ಭಾಗವತದಲ್ಲಿ –

ತೀರ್ಥಶ್ರವಃ ಶ್ರವಣ ಮಂಗಲ ನಾಮಧೇಯ ॥

ಎಂಬುದಾಗಿ ಕರೆದಿರುವುದನ್ನು ಇಲ್ಲಿ ಸ್ಮರಿಸಬಹುದು.

ಭಗವಂತನ ನಾಮಗಳು ಬರೀನಾಮಗಳಲ್ಲ. ಅನ್ವರ್ಥಕ ನಾಮಗಳು, ಪಾವನ ನಾಮಗಳಾಗಿವೆ – ಎಂದು ತಿಳಿಯಬೇಕು.

ಇದನ್ನು ಶ್ರೀಮದ್ ಭಾಗವತದಲ್ಲಿ ಆ ಭಗವಂತನನ್ನು –

ಪರಂ ಪರಮಪೂರುಷಃ ॥

ಶ್ರೇಷ್ಠ, ಸರ್ವೋತ್ತಮನಾದ ಪುರುಷನೆಂದು ಕರೆದಿದ್ದಾರೆ.

ಚಿತ್ ಎಂದರೆ ಜ್ಞಾನ, ಹರುಷ ಎಂದರೆ ಆನಂದ, ಚಿದ್ಧರುಷನಾ ಎಂದರೆ ಜ್ಞಾನಾನಂದವುಳ್ಳನೆಂದು ಅರ್ಥವು.

ಆದಿತ್ಯಪುರಾಣ ವೆಂಕಟೇಶ ಮಹಾತ್ಮೆಯಲ್ಲಿ –

''**ಜ್ಞಾನಾನಂದೈಶ್ವರ್ಯಪೂರ್ಣ**'' ಎಂದಾಗಿ ತಿಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಶ್ರೀ ನಾರಾಯಣಪಂಡಿತಾಚಾರ್ಯರು ತಮ್ಮ ಗ್ರಂಥದ ಮಂಗಲಾಚರಣದಲ್ಲಿ –

ವಂದೇ ಗೋವಿಂದಮಾನಂದಜ್ಞಾನದೇಹಂ ಪತಿಂ ಶ್ರಿಯಃ ॥[೧೦]

ಎಂದಿದ್ದಾರೆ.

೧೦. ಮಣಿಮಂಜರೀ (೧-೧)

ಜ್ಞಾನ, ಆನಂದಗಳೇ ದೇಹವಾಗಿ ಉಳ್ಳ, ಲಕ್ಷ್ಮೀದೇವಿಯರಿಗೆ ಪತಿಯಾದ, ವೇದಗಳಿಂದ ವೇದ್ಯನಾದ ಶ್ರೀಹರಿಯನ್ನು ನಮಸ್ಕರಿಸುತ್ತೇನೆ.

ಸ್ವಾಮಿ ಪುಷ್ಕರ ವರಹ ವೆಂಕಟನಾಥನಾ ಪುಣ್ಯನಾಥನಾ ।
ಕಾಮಿತಾರ್ಥದ ಕರುಣನಿಧಿಪೂರ್ಣ ಕಾಮನಾಂತನಾಮನಾ ಶ್ರೀ ಶ್ರೀಃ ॥ ೨ ॥

ಸ್ವಾಮಿ ಪುಷ್ಕರಣೀ ತೀರದಲ್ಲಿ ವಾಸಮಾಡುವ ವರಾಹರೂಪೀ ಶ್ರೀ ವೆಂಕಟನಾಥನನ್ನು, ಪುಣ್ಯಸ್ವಾಮಿಯಾದವನನ್ನು, ಭಕ್ತರಿಗೆ ಇಚ್ಛಿತ ವರಗಳನ್ನು ಕೊಡುವ, ಕರುಣಾ ಸಮುದ್ರನಾದ, ತನ್ನ ಇಚ್ಛೆಯಂತೆ ನಾಮಗಳನ್ನು ಧರಿಸಿದ ಆ ಶ್ರೀನಿವಾಸನನ್ನು ನೆನೆಯುವೆ.

ಸ್ವಾಮಿ ಪುಷ್ಕರ ವರಹ ವೆಂಕಟನಾಥನಾ ಪುಣ್ಯನಾಥನಾ ॥

ಶ್ರೀವರಾಹರೂಪೀ ವೆಂಕಟನಾಥನನ್ನು ವೆಂಕಟೇಶಮಹಾತ್ಮೆಯಲ್ಲಿ ಹೀಗೆ ವರ್ಣಿಸಿದ್ದಾರೆ –

ಶ್ರೀಸ್ವಾಮಿತೀರ್ಥ ದುಗ್ಧಾಬ್ಧೌ ಶ್ವೇತದ್ವೀಪೇ ಸುಮಂಡಪೇ ।
ಶ್ರೀಭೂಭ್ಯಾಂ ವಿಹರನ್ ವಿಷ್ಣೋ ಮುಕ್ತಿಂ ಭಕ್ತಾಯ ದೇಹಿ ಮೇ ॥[೧೧]

ಶ್ರೀ ಸ್ವಾಮಿ ಪುಷ್ಕರಣೀ ತೀರ್ಥವೆಂಬ ಕ್ಷೀರಸಮುದ್ರದಲ್ಲಿ ಶ್ವೇತದ್ವೀಪದಂತಿರುವ ಸುಂದರಮಂಟಪದಲ್ಲಿ ಶ್ರೀ ಭೂದೇವಿಯರಿಂದ ಸಹಿತನಾಗಿ ವಿಹರಿಸುತ್ತಾನೆ.

ಶ್ರೀನಿವಾಸನು ಪುಣ್ಯಕ್ಕೆ ಸ್ವಾಮಿಯಾಗಿದ್ದಾನೆ. ಅವನು ಭಕ್ತರಿಂದ ಸತ್ಕರ್ಮಗಳನ್ನು ಮಾಡಿಸಿ ಅವರಿಗೆ ಪುಣ್ಯವನ್ನು ಕೊಟ್ಟು ಅನುಗ್ರಹಿಸುತ್ತಾನೆ.

ಕಾಮಿತಾರ್ಥದ ಕರುಣನಿಧಿಪೂರ್ಣ ಕಾಮನಾಂತನಾಮನಾ ಶ್ರೀ ಶ್ರೀಃ ॥

ಭಕ್ತರು ಇಚ್ಛಿಸಿದ ವರಗಳನ್ನು ಕೊಡುವ, ತನ್ನ ಇಚ್ಛೆಯಂತೆ ನಾಮಗಳನ್ನು ಧರಿಸುವ ಶ್ರೀನಿವಾಸನನ್ನು ನೆನೆವೆ.

ಶ್ರೀವೆಂಕಟೇಶಸಹಸ್ರನಾಮಸ್ತೋತ್ರದಲ್ಲಿ ಶ್ರೀನಿವಾಸನನ್ನು ಸ್ತೋತ್ರ ಮಾಡಿರುವ ಪರಿ ಹೀಗಿದೆ.

ಶ್ರೀಪತಿರ್ಭಾರ್ಗವೀಜಾನಿರ್ವಿಮಲಾದ್ಯಾದಿ ಸಂವೃತಃ ।
ಜಗತ್ಕುಟುಂಬೀ ಜನಿತಾ ರಕ್ಷಕಃ ಕಾಮಿತಾರ್ಥದಃ ॥[೧೨]

೧೧. ಆದಿತ್ಯಪುರಾಣ ವೆಂ.ಮ. (೫-೫೪) ೧೨. ಬ್ರಹ್ಮಾಂಡಪುರಾಣ

ಆ ಭಗವಂತನು ಕರುಣಾಪೂರ್ಣನಾಗಿದ್ದಾನೆ –

ಆದಿತ್ಯ ಪುರಾಣದಲ್ಲಿ ಬರುವ ಭಗವಂತನ ವರ್ಣನೆ ಹೀಗಿದೆ –

ಏವಂ ಮಹಾಭಾರವಹಸ್ಯ ವಿಶ್ವ
ಕುಟುಂಬಿನಃ ಕರುಣಾಪೂರ್ಣಸಿಂಧೋಃ ।
ಮಮ ತ್ವದೀಯಸ್ಯ ಸುಸೂಕ್ಷ್ಮಲೇಶ
ಲವಾತ್ಮಕ ಸ್ಯೋದ್ಧರಣಂ ಕಿಯತ್ ತೇ ॥

ವೆಂ.ಮ. ೫ನೆಯ ಅಧ್ಯಾಯ ೪೯ನೆ ಶ್ಲೋಕ

ತನ್ನ ಇಚ್ಛೆಯಂತೆ ಭಗವಂತ ನಾಮಗಳನ್ನು ಧರಿಸುತ್ತಾನಾದ್ದರಿಂದ ಅವನಿಗೆ ''ಕಾಮನಾಂತನಾಮನಾ'' ಎಂದು ಹೆಸರು ಬಂದಿದೆ. ಅವನಿಗೆ ಅನಂತ ನಾಮಗಳುಂಟು –

ನಾಮಧೇಯಾನ್ಯನಂತಾನಿ ಜ್ಞಾನಾನಂದಾದಯೋ ಗುಣಾಃ ॥

ವೆಂ.ಮ. ೨ನೆ ಅಧ್ಯಾಯ ೮೦ನೆ ಶ್ಲೋಕ

ಭಕ್ತಾಭೀಷ್ಟದ ವಿಬುಧ ಧೇನುಮಣಿಭೂಜನಾರ್ಕಾನಂತತೇಜನಾ ।
ಮುಕ್ತಿದಾಯಕ ಮೃತ್ಯುಮಾರಕ ಪ್ರಸನ್ನ ವೇಂಕಟಾದ್ರೀಶನಾ ಶ್ರೀ ಶ್ರೀಃ ॥ ೩ ॥

ಭಕ್ತರ ಅಭೀಷ್ಟಗಳನ್ನು ಕೊಡುವ, ಕಾಮಧೇನು, ಚಿಂತಾಮಣಿಗಳಂತೆ ಇರುವ, ಅನಂತ ಸೂರ್ಯರ ತೇಜಸ್ಸುಳ್ಳ, ಮುಕ್ತಿಯನ್ನು ಕೊಡುವ, ಮೃತ್ಯುವಿಗೂ ಮೃತ್ಯುವೆನಿಸಿದ, ಪ್ರಸನ್ನ ವೆಂಕಟಾದ್ರೀಶನ ಚರಣಕಮಲವನ್ನು ನೆನೆವೆ ಎಂಬುದಾಗಿ ಶ್ರೀ ದಾಸರು ಇಲ್ಲಿ ತಿಳಿಸಿದ್ದಾರೆ.

ಆ ಭಗವಂತನು ಭಕ್ತಾಭೀಷ್ಟದನಾಗಿದ್ದಾನೆ –

ಅಶೇಷಗುಣಪೂರ್ಣಾಯ ದೋಷದೂರಾಯ ವಿಷ್ಣವೇ ।
ನಮಃ ಶ್ರೀ ಪ್ರಾಣನಾಥಾಯ ಭಕ್ತಾಭೀಷ್ಟ ಪ್ರದಾಯಿನೇ ॥

ಶ್ರೀ ಛಾಂದೋಗ್ಯಭಾಷ್ಯ ಖಂಡಾರ್ಥ

ಅನಂತಗುಣಪೂರ್ಣನಾದ, ದೋಷದೂರನಾದ, ಪ್ರಾಣದೇವರಿಗೆ ಸ್ವಾಮಿಯಾದ, ಭಕ್ತರ ಅಭೀಷ್ಟಗಳನ್ನು ಕೊಡುವ, ವಿಷ್ಣುವೇ ನಿನಗೆ ನಮಸ್ಕಾರವು.

ಆ ಭಗವಂತ ಕಾಮಧೇನು, ಚಿಂತಾಮಣಿಗಳಂತೆ ಇದ್ದಾನೆ.

ಕಾಮಧೇನುಃ ಕಲ್ಪವೃಕ್ಷಶ್ಚಿಂತಾಮಣಿರಿತಿ ತ್ರಯಮ್ ।

ವೆಂಕಟೇಶ ತ್ವಮೇವಾಸಿ ಶೇಷಾಗೇ ಸರ್ವದಾನತಃ ।
ದದಾತಿ ಕಾಮಾನ್ ಅನ್ನಾದೀನ್ ಮಣಿಧೇನುಶ್ಚಪಾದಪಃ ॥[೧೩]

ಆ ಭಗವಂತ ಅನಂತಸೂರ್ಯರ ತೇಜಸ್ಸುಳ್ಳವನಾಗಿದ್ದಾನೆ.

ಶ್ರೀವಾಮನ ಪುರಾಣದಲ್ಲಿ ಬರುವ ವರ್ಣನೆ ಹೀಗಿದೆ –

ಅನಂತನಾಗಪರ್ಯಂಕೇ ಸಹಸ್ರಫಣಶೋಭಿತೇ ।
ದೀಪ್ಯಮಾನೇಽಮಲೇ ದಿವ್ಯೇ ಸಹಸ್ರಾರ್ಕಸಮಪ್ರಭೇ ॥

ಇಲ್ಲಿ ಸಹಸ್ರಾರ್ಕಸಮಪ್ರಭೇ ಎಂದಿದ್ದಾರೆ. ''ಸಹಸ್ರಶಬ್ದೋಽನಂತವಾಚೀ'' ಎಂದಿರುವುದರಿಂದ ಭಗವಂತನು ಅನಂತ ಸೂರ್ಯರ ತೇಜಸ್ಸುಳ್ಳವನು ಎಂದು ತಿಳಿದು ಬರುತ್ತದೆ.

ಆ ಭಗವಂತ ಮುಕ್ತಿದಾಯಕನಾಗಿದ್ದಾನೆ – ಶ್ರೀವಾಮನ ಪುರಾಣದಲ್ಲಿ ಇದನ್ನು ತಿಳಿಸಿದ್ದಾರೆ.

ಶ್ರಿಯಃ ಕಾಂತಾಯ ದಾಂತಾಯ ಭಕ್ತಾನಾಂ ಮುಕ್ತಿದಾಯಿನೇ ।
ಶಕ್ರಾದಿಲೋಕಪಾಲಾನಾಂ ಪಾಲಯಿತ್ರೇ ನಮೋಽಸ್ತುತೇ ॥

ಆದಿತ್ಯಪುರಾಣದಲ್ಲಿ ಬರುವ ವರ್ಣನೆ ಹೀಗಿದೆ –

ಕರ್ಮಿಣೇಽಕರ್ಮಲಿಪ್ತಾಯ ಜ್ಞಾನಾಯ ಜ್ಞಾನದಾಯಿನೇ ।
ನಿತ್ಯಮುಕ್ತಾಯ ಹರಯೇ ನಿತ್ಯಮುಕ್ತಿಪ್ರದಾಯಿನೇ ॥

ಆ ಭಗವಂತ ಮೃತ್ಯು ಮಾರಕನಾಗಿದ್ದಾನೆ – ಅಂದರೆ ಮೃತ್ಯುವಿಗೂ ಮೃತ್ಯುವಾಗಿದ್ದಾನೆ.

ಶ್ರೀವೆಂಕಟೇಶಸಹಸ್ರನಾಮ ಸ್ತೋತ್ರದಲ್ಲಿ ಇದನ್ನು ತಿಳಿಸಿದ್ದಾರೆ.

ಉಗ್ರೋ ವೀರೋ ಮಹಾವಿಷ್ಣುರ್ಜ್ವಲನಃ ಸರ್ವತೋಮುಖಃ ।
ನೃಸಿಂಹೋ ಭೀಷಣೋ ಭದ್ರೋ ಮೃತ್ಯುಮೃತ್ಯುಃ ಸನಾತನಃ ॥[೧೪]

ಇಂಥ ಪ್ರಸನ್ನವೆಂಕಟರೂಪೀ ಶ್ರೀನಿವಾಸನ ಪಾದಕಮಲವನ್ನು ನೆನೆವೆ ಎಂಬುದಾಗಿ ಶ್ರೀದಾಸರು ಇಲ್ಲಿ ತಿಳಿಸಿ ಮಹೋಪಕಾರ ಮಾಡಿದ್ದಾರೆ.

--*

---

೧೩. ಆದಿತ್ಯಪುರಾಣ ವೆಂ.ಮ. (೨-೮೯) ೧೪. ಬ್ರಹ್ಮಾಂಡಪುರಾಣ

೨. ಪ್ರಹ್ಲಾದವರದ ಭಯಗಜಕೆ ಸಿಂಹ

ಪ್ರಹ್ಲಾದವರದ ಭಯಗಜಕೆ ಸಿಂಹ ಪರಮ
ಆಹ್ಲಾದ ಪದವಿತ್ತು ಪೊರೆಯೋ ನರಸಿಂಹ ॥ ಪ ॥

ಹಿಂದೆ ಹಿರಣ್ಯಕನುದರದಲಿ ಜನಿಸಿ ಪ್ರಹ್ಲಾದ
ನೊಂದವನ ಬಾಧೆಯಲಿ ಮರಗಿ ಕೊರಗಿ ।
ಇಂದಿರೇಶ ಸಲಹೆನಲು ಗಾಢಸ್ತಂಭದಲೊದಗಿ
ಬಂದವನುದರ ಬಗಿದು ರುಧಿರವನು ಸವಿದೆ ॥ ೧ ॥

ಅಸುರ ಕೆಡಲದ ಕಂಡು ಅತಿ ಹರುಷದಿಂದ ತ್ರಿ
ದಶರಂಬರದಿ ಪೂಮಳೆಗರೆಯಲು
ಶಿಶುವೇಕ ಮಾನಸದಿ ಮೊರೆಹೊಕ್ಕು ಪೊಗಳುತಿರೆ
ಬಿಸಜಾಕ್ಷ ಕರುಣದಿಂದವನ ಸಲಹಿದೆಯಾಗಿ ॥ ೨ ॥

ಹಲವು ಯೋನಿಗಳಲ್ಲಿ ತಿರುಗಿ ಬಳಲಿದೆನಯ್ಯ
ನಳಿನಾಕ್ಷ ನಿಮ್ಮ ಗುರುತವ ಕಾಣದೇ ।
ಇಳೆಯಲ್ಲಿ ದ್ವಿಜನಾಗಿ ಪುಟ್ಟಿ ತವ ಪದವಿಡಿದೆ
ಗೆಲಿಸು ಭವದುರಿತವ ಪ್ರಸನ್ವೆಂಕಟ ನೃಸಿಂಹ ॥ ೩ ॥

ಪ್ರಸ್ತುತ ಪದ್ಯದಲ್ಲಿ ಆ ನರಸಿಂಹದೇವರು ಪ್ರಹ್ಲಾದವರದರಾಗಿದ್ದಾರೆ. ಭಯವೆಂಬ ಆನೆಗೆ ಸಿಂಹದಂತೆ ಇದ್ದಾರೆ. ನರಸಿಂಹದೇವರೇ! ನೀವು ನನಗೆ ಶ್ರೇಷ್ಠವಾದ ಆನಂದಪದ ಎಂದರೆ ವೈಕುಂಠವನ್ನಿತ್ತು ರಕ್ಷಿಸಬೇಕೆಂದು ಬೇಡಿಕೊಂಡಿದ್ದಾರೆ ಶ್ರೀದಾಸರು. ಶ್ರೀ ಪ್ರಹ್ಲಾದರಾಜರಿಗೆ ತಂದೆಯಾದ ಹಿರಣ್ಯಕಶಿಪುವು ಅನೇಕ ರೀತಿಯ ತೊಂದರೆ ಕೊಟ್ಟರೂ ಅವರು ನರಸಿಂಹದೇವರೇ ನನ್ನನ್ನು ರಕ್ಷಿಸಿರಿ ಎಂಬುದಾಗಿ ಮೊರೆ ಇಡಲು ಶ್ರೀನರಸಿಂಹದೇವರು ಸ್ತಂಭದಿಂದ ಪ್ರಕಟರಾಗಿ ಪ್ರಹ್ಲಾದರಾಜರನ್ನು ರಕ್ಷಿಸಿ ಅನುಗ್ರಹಿಸಿದರು.

ಪ್ರಹ್ಲಾದವರದ ಭಯಗಜಕೆಸಿಂಹ ಪರಮ
ಆಹ್ಲಾದ ಪದವಿತ್ತು ಪೊರೆಯೋ ನರಸಿಂಹ ॥ ಪ ॥

ಪ್ರಹ್ಲಾದ ವರದರಾದ ಆ ನರಸಿಂಹದೇವರು ಭಯವೆಂಬ ಆನೆಗೆ ಸಿಂಹದಂತೆ ಇದ್ದಾರೆ. ಇಂಥ ನರಸಿಂಹದೇವರೇ ನನಗೆ ಆನಂದಪದ ಎಂದರೆ ವೈಕುಂಠವನ್ನಿತ್ತು ಪೊರೆಯಬೇಕೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಶ್ರೀನರಸಿಂಹದೇವರು ಪ್ರಹ್ಲಾದವರದರಾಗಿದ್ದಾರೆ. ಶ್ರೀನರಸಿಂಹಸಹಸ್ರನಾಮ ಸ್ತೋತ್ರದಲ್ಲಿ - ನಾವು ಇದನ್ನು ಕಾಣಬಹುದು.

ಪ್ರಹ್ಲಾದ ವರದಾಯೈವ ಪ್ರತ್ಯಕ್ಷ ವರದಾಯ ಚ ॥
೧೯ನೆಯ ಶ್ಲೋಕ

ಶ್ರೀನರಸಿಂಹದೇವರು ಭಯವೆಂಬ ಆನೆಗೆ ಸಿಂಹದಂತೆ ಇದ್ದಾರೆ. ಸಿಂಹವು ಹೇಗೆ ಆನೆಯ ಗಂಡಸ್ಥಳಕ್ಕೆ ನೆಗೆದು ಸಂಹಾರಮಾಡುವುದೋ ಆ ರೀತಿ ಭಯವನ್ನು ನಾಶಮಾಡುವುದರಲ್ಲಿ ಸಮರ್ಥರಾಗಿದ್ದಾರೆ.

ಶ್ರೀಮದ್ ಭಾಗವತದಲ್ಲಿ ಹೀಗೆ ವರ್ಣಿಸಿದ್ದಾರೆ.

ತ್ಯೈವಿಷ್ಟಪೋರು ಭಯಹಾರಿ ನೃಸಿಂಹ ರೂಪಂ
ಕೃತ್ವಾ ಭ್ರಮದ್ಭ್ರುಕುಟಿದಂಷ್ಟ್ರ ಕರಾಳ ವಕ್ತ್ರಮ್ ॥ ೨-೭-೧೪

ಯಾರು ನರಸಿಂಹದೇವರ ಸ್ಮರಣೆ ಮಾಡುವರೋ ಅವರಿಗೆ ನರಸಿಂಹದೇವರು ಶ್ರೇಷ್ಠವಾದ ಆನಂದ ಪದವಾದ ಮುಕ್ತಿಯನ್ನು ದಯಪಾಲಿಸುತ್ತಾರೆ.

ನೃಸಿಂಹೇತಿ ನೃಸಿಂಹೇತಿ ನೃಸಿಂಹೇತಿ ಸದಾ ಸ್ಮರೇತ್ ।
ಪುಮಾನ್ನಲಿಪ್ಯತೇ ಪಾಪೈರ್ಭುಕ್ತಿಂ ಮುಕ್ತಿಂ ಚ ವಿಂದತಿ ॥
ಶ್ರೀಲಕ್ಷ್ಮೀನರಸಿಂಹಸಹಸ್ರನಾಮ ಸ್ತೋತ್ರ -

ಹಿಂದೆ ಹಿರಣ್ಯಕನುದರದಲಿ ಜನಿಸಿ ಪ್ರಹ್ಲಾದ
ನೊಂದವನ ಬಾಧೆಯಲಿ ಮರಗಿ ಕೊರಗಿ
ಇಂದಿರೇಶ ಸಲಹೆನಲು ಗಾಢಸ್ತಂಭದಲೊದಗಿ
ಬಂದವನುದರ ಬಗಿದು ರುಧಿರವನು ಸವಿದೆ ॥ ೧ ॥

ಹಿಂದೆ ಪ್ರಹ್ಲಾದನು ಹಿರಣ್ಯಕಶಿಪುವಿನ ಮಗನಾಗಿ ಹುಟ್ಟಿದನು. ಶ್ರೀಹರಿಯಭಕ್ತನಾಗಿದ್ದನು. ತನ್ನ ತಮ್ಮನನ್ನು ಕೊಂದ ಶ್ರೀಹರಿಯನ್ನು ನೆನೆಸುತ್ತಿರುವುದನ್ನು ನೋಡಿದ ಹಿರಣ್ಯಕಶಿಪುವು ಪ್ರಹ್ಲಾದನಿಗೆ ಅನೇಕವಿಧವಾದ ತೊಂದರೆಗಳನ್ನು ಕೊಟ್ಟನು. ತಂದೆಯು ಕೊಡುತ್ತಿರುವ ಬಾಧೆಗಳನ್ನು ಸಹಿಸಲಾರದೇ ಪ್ರಹ್ಲಾದನು ಮರುಗಿ, ಕೊರಗಿ ಇಂದಿರಾಪತಿಯಾದ ಶ್ರೀಹರಿಯೇ ನೀನೇ ನನ್ನನ್ನು ರಕ್ಷಿಸೆಂದು (ಕೇಳಿಕೊಂಡಾಗ) ಪ್ರಾರ್ಥನೆ ಸಲ್ಲಿಸಿದಾಗ ಆ ಭಗವಂತ ಸ್ತಂಭದಿಂದ ಪ್ರಾದುರ್ಭೂತನಾಗಿ ಬಂದು ಹಿರಣ್ಯಕಶಿಪುವಿನ ಉದರವನ್ನು ಬಗಿದು ಅವನ ರಕ್ತವನ್ನು ಕುಡಿದಂತೆ ತೋರಿಸಿದ.

ಈ ಪ್ರಸಂಗವು ''ಸಪ್ತಮಸ್ಕಂಧ'' ಶ್ರೀಮದ್‌ಭಾಗವತದಲ್ಲಿ ಉಕ್ತವಾಗಿದೆ.

ಹಿರಣ್ಯಕಶಿಪುವಿಗೆ ನಾಲ್ಕು ಜನ ಮಕ್ಕಳಿದ್ದರು. ಈ ನಾಲ್ವರಲ್ಲಿ ಪ್ರಹ್ಲಾದರಾಜರು ಜ್ಯೇಷ್ಠರು. ಅವರು ಶೀಲವಂತರು, ಸತ್ಯಪ್ರತಿಜ್ಞರು, ಜಿತೇಂದ್ರಿಯರು ಆಗಿದ್ದರು. ಬಾಲಕರಾದ ಪ್ರಹ್ಲಾದರಾಜರು ಆಟಪಾಠಗಳನ್ನು ಬಿಟ್ಟು ಶ್ರೀಹರಿಯ ಧ್ಯಾನವನ್ನೇ ಮಾಡುತ್ತಿದ್ದರು. ''ಕೃಷ್ಣಗ್ರಹ ಗೃಹೀತಾತ್ಮಾ'' ಎಂಬಂತೆ ಶ್ರೀಹರಿಯೆಂಬ ಗ್ರಹದಿಂದ ಏಕೀಕೃತ ಮನಸ್ಸುಳ್ಳವರಾಗಿದ್ದರು. ದುಷ್ಟಬಾಲಕರ ಸಹವಾಸವನ್ನು ಬಿಟ್ಟು ಭಕ್ತಿಯಿಂದ ಶ್ರೀಹರಿಯನ್ನು ಸೇವಿಸಿ ಸುಖವನ್ನು ಅನುಭವಿಸುತ್ತಿದ್ದರು. ಇಂಥ ಮಹಾಭಗವದ್ಭಕ್ತರಾದ ಪ್ರಹ್ಲಾದರಾಜರನ್ನು ಹಿರಣ್ಯಕಶಿಪುವು ಅವರು ಮಹಾತ್ಮರೆಂದು ತಿಳಿಯದೇ ಕೊಲ್ಲಲು ಪ್ರಯತ್ನಿಸಿದನು. ಅದಕ್ಕೆ ಕಾರಣ ಹೀಗಿದೆ.

ಹಿರಣ್ಯಕಶಿಪುವು ಪ್ರಹ್ಲಾದರಾಜರನ್ನು ಶುಕ್ರಾಚಾರ್ಯರ ಮಕ್ಕಳಾದ ಶಂಡಾಮರ್ಕರಲ್ಲಿ ವಿದ್ಯಾಭ್ಯಾಸಕ್ಕಾಗಿ ಕಳಿಸಿಕೊಟ್ಟನು. ಅವರು ಪ್ರಹ್ಲಾದರಾಜರಿಗೂ ಇತರ ಬಾಲಕರಿಗೂ ಪಾಠ ಹೇಳುತ್ತಿದ್ದರು. ಪ್ರಹ್ಲಾದರಾಜರು ಗುರುಗಳು ಹೇಳಿದ ಪಾಠವನ್ನು ಕೇಳುತ್ತಿದ್ದರೇ ಹೊರತು ಅಭ್ಯಾಸ ಮಾಡುತ್ತಿರಲಿಲ್ಲ.

ಒಂದು ದಿನ ಹಿರಣ್ಯಕಶಿಪುವು ಮಗನನ್ನು ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ನೀನು ಯಾವ ಪಾಠ ಕಲಿತಿರುವೆ? ಹೇಳು ಎನ್ನಲು ಪ್ರಹ್ಲಾದರಾಜರು ''ಈ ಸಂಸಾರವು ಅಜ್ಞಾನದ ಕೂಪವಾಗಿದೆ. ಅಧಃಪತನಕ್ಕೆ ಕಾರಣವಾಗಿದೆ. ಇದರಿಂದ ಪಾರಾಗಲು ಜೀವರು ಸಜ್ಜನರ ಸಹವಾಸವನ್ನು ಮಾಡಿ ಶ್ರೀಹರಿಯೇ ಸರ್ವಸ್ವಾಮಿಯೆಂದು ಭಕ್ತಿಯಿಂದ ಆಶ್ರಯಿಸಬೇಕು'' ಎಂದರು.

ಈ ಮಾತನ್ನು ಕೇಳಿದ ಹಿರಣ್ಯಕಶಿಪುವು ''ಇವನು ನನ್ನ ತಮ್ಮನನ್ನು ಕೊಂದ ಶ್ರೀಹರಿಯನ್ನು ಬೆನ್ನು ಹತ್ತಿದ್ದಾನೆ'', ಎಂದುಕೊಂಡು ಸಿಟ್ಟಿನಿಂದ ಗುರುಗಳನ್ನು ಕರೆದು ''ಈ ಬಾಲಕನಿಗೆ ನಮ್ಮ ಸಿದ್ಧಾಂತವನ್ನೇ ಕಲಿಸಿರಿ. ಯಾರೋ ವಿಷ್ಣುಪಕ್ಷದ ಜನರು ಇವನ ಬುದ್ಧಿಯನ್ನು ಕೆಡಿಸುತ್ತಿದ್ದಾರೆ ಎಚ್ಚರ'' ಎಂದು ಹೇಳಿಕಳಿಸಿದನು.

ಗುರುಗಳು ಒಂದು ದಿನ ಪ್ರಹ್ಲಾದರಾಜರನ್ನು ಕರೆದು ಏಕಾಂತದಲ್ಲಿ ''ನಿನಗೆ ಅನ್ಯಥಾಜ್ಞಾನ ಹೇಗೆ ಬಂತು? ಯಾರು ಕಲಿಸಿದರು ಹೇಳು'' ಎಂದರು. ಆಗ ಪ್ರಹ್ಲಾದರಾಜರು ''ಶ್ರೀಹರಿಯು ಅವರವರ ಕರ್ಮವನ್ನು ಅನುಸರಿಸಿ, ಅವರವರ ಯೋಗ್ಯತೆಗೆ ತಕ್ಕಂತೆ ಜ್ಞಾನವನ್ನು ಕೊಡುವನು. ಅವನು ಸರ್ವಸ್ವಾಮಿಯು. ಅಯಸ್ಕಾಂತದ ಹತ್ತಿರ ಕಬ್ಬಿಣವು ಹೇಗೆ ತಾನಾಗಿಯೇ ಅದರೆಡೆಗೆ ಚಲಿಸುವದೋ

ಹಾಗೆಯೇ ನನ್ನ ಮನಸ್ಸು ಶ್ರೀಹರಿಯ ಇಚ್ಛೆಯಿಂದ ಅವನನ್ನೇ ಕುರಿತು ಹೋಗುತ್ತದೆ,'' ಎಂದರು.

ಗುರುಗಳಾದ ಶಂಡಾಮರ್ಕರು ಈ ಮಾತುಗಳನ್ನು ಕೇಳಿ ''ದೈತ್ಯರೆಂಬ ಚಂದನವನದ ಮುಳ್ಳುಗಿಡದಂತಿರುವ ಇವನು ಆ ಚಂದನವನದ ಮರದ ಬೇರುಗಳನ್ನು ಕತ್ತರಿಸುವ ವಿಷ್ಣುವೆಂಬ ಕೊಡಲಿಗೆ ಕಾವಿನಂತಿರುವನು'' ಎಂದು ಭಾವಿಸಿದರು.

ಕೆಲವು ದಿನಗಳ ನಂತರ ಒಮ್ಮೆ ಪ್ರಹ್ಲಾದರಾಜರನ್ನು ಹಿರಣ್ಯಕಶಿಪುವಿನ ಹತ್ತಿರ ಕರೆತಂದರು. ಹಿರಣ್ಯಕಶಿಪುವು ಮಗನನ್ನು ಅಪ್ಪಿ ಮುದ್ದಾಡಿ ತೊಡೆಯ ಮೇಲೆ ಕೂಡಿಸಿಕೊಂಡು ''ವತ್ಸ! ನೀನು ಗುರುಗಳಿಂದ ಕಲಿತ ಉತ್ತಮ ವಿಷಯವನ್ನು ಹೇಳು'' ಎಂದನು.

ಪ್ರಹ್ಲಾದರಾಜರು ಹೇಳಲು ಪ್ರಾರಂಭಿಸಿದರು – ಜೀವರು ಆ ವಿಷ್ಣುವಿನಲ್ಲಿ ಶ್ರವಣವೇ ಮೊದಲಾದ ನವವಿಧಭಕ್ತಿಗಳನ್ನು ಮಾಡಿದ್ದಾದರೆ ಈ ಸಂಸಾರದಿಂದ ಪಾರಾಗುತ್ತಾರೆ. ಹಿರಣ್ಯಕಶಿಪುವು ಈ ಮಾತುಗಳನ್ನು ಕೇಳಿ ಸಿಟ್ಟಿನಿಂದ ಗುರುಗಳನ್ನು ಜಬರಿಸಿ ನೀವು ಕಲಿಸಬಾರದ್ದನ್ನು ನನ್ನ ಮಗನಿಗೆ ಕಲಿಸಿರುವಿರಿ ಎನ್ನಲು ಗುರುಗಳು ಬಾಲಕ ಪ್ರಹ್ಲಾದರಾಜರ ಬುದ್ಧಿಯು ಸ್ವಾಭಾವಿಕ. ಯಾರೂ ಕಲಿಸಿಕೊಟ್ಟದ್ದಲ್ಲ ಎಂದರು.

ಹಿರಣ್ಯಕಶಿಪುವು ಈ ಉತ್ತರ ಕೇಳುತ್ತಲೇ ಮಗನನ್ನು ಕೆಳಗೆ ತಳ್ಳಿ ಈ ಮಗನನ್ನು ಹೇಗಾದರೂ ಮಾಡಿ ಕೊಂದು ಬಿಡಿರಿ ಎಂದು ಆಜ್ಞೆ ಮಾಡಿದನು. ಅವನ ಭೃತ್ಯರು ಪ್ರಹ್ಲಾದರಾಜರಿಗೆ ಅನೇಕ ವಿಧವಾದ ತೊಂದರೆ ಕೊಟ್ಟರು. ಹಿಂಸೆಪಡಿಸಿದರು. ಆದರೆ ಆ ದೈತ್ಯರು ಮಾಡಿದ ಎಲ್ಲ ವಧೋಪಾಯಗಳು ನಿಷ್ಫಲವಾದವು. ಇದರಿಂದ ಚಿಂತಿತನಾದ ಹಿರಣ್ಯಕಶಿಪುವು ''ಇವನು ಅಮರನು ಇವನ ದ್ವೇಷದಿಂದ ನನಗೆ ಸಾವು ನಿಶ್ಚಿತ'' ಎನ್ನುತ್ತ ಮತ್ತೆ ಪ್ರಹ್ಲಾದರಾಜರನ್ನು ಗುರುಗಳ ಹತ್ತಿರ ಕಳಿಸಿಕೊಟ್ಟನು.

ಬಾಲಕರಾದ ಪ್ರಹ್ಲಾದರಾಜರನ್ನು ಜೊತೆಯ ಬಾಲಕರು ಆಟಕ್ಕೆ ಕರೆದಾಗ ಅವರನ್ನು ಕುರಿತು ''ಶ್ರೀಹರಿಯ ಪ್ರೀತಿಯನ್ನು ಉದ್ದೇಶಿಸಿ ಕರ್ಮಗಳನ್ನು ಮಾಡಬೇಕು'' ಎಂಬುದಾಗಿ ಉಪದೇಶಿಸಿದರು.

ಶಂಡಾಮರ್ಕರು ಪ್ರಹ್ಲಾದರಾಜರ ನುಡಿಗಳನ್ನು ಆಲಿಸಿ ರಾಜನ ಹತ್ತಿರ ಹೋಗಿ ಈ ವಿಷಯವನ್ನು ನಿವೇದಿಸಿಕೊಂಡರು. ಹಿರಣ್ಯಕಶಿಪುವು ಸಿಟ್ಟಿನಿಂದ ''ಎಲ್ಲರ ಬುದ್ಧಿಯನ್ನು ಕೆಡಿಸುವ ನಿನ್ನನ್ನು ಯಮಸದನಕ್ಕೆ ಕಳಿಸುತ್ತೇನೆ ಎಂದು ಪ್ರಹ್ಲಾದರಾಜರನ್ನು ಜಬರಿಸುತ್ತ ಅವರನ್ನು ಕುರಿತು'' ನನ್ನ ಶಾಸನವನ್ನು ಅತಿಕ್ರಮಿಸುವ ನಿನಗೆ ಯಾರು ಬಲ? ಎಂದು ಕೇಳಿದನು.

ಪ್ರಹ್ಲಾದರಾಜರು ''ರಾಜನೇ! ನನಗೂ ನಿನಗೂ ಬ್ರಹ್ಮಾದಿ ಎಲ್ಲ ಸ್ಥಾವರ, ಜಂಗಮ ಜಗತ್ತಿಗೆ ಶ್ರೀಹರಿಯೇ ಬಲನಾಗಿದ್ದಾನೆ. ಎಲ್ಲವೂ ಅವನ ವಶದಲ್ಲಿದೆ ಈ ಸಮಸ್ತ ಜಗತ್ತಿಗೆ ನಿಯಾಮಕನಾಗಿ ಸೃಷ್ಟಿ, ಸ್ಥಿತಿ, ಲಯಾದಿಗಳನ್ನು ಅವನೇ ಮಾಡುವವನು'' ಎಂದರು.

ಆಗ ಹಿರಣ್ಯಕಶಿಪುವು ಎಲೋ ಮಂದಭಾಗ್ಯ! ನೀನು ಹೇಳುವ ಆ ಜಗನ್ನಿಯಾಮಕ ಎಲ್ಲಿದ್ದಾನೆ? ಅವನೇಕೆ ಕಾಣುವದಿಲ್ಲಾ? ಈ ಸ್ತಂಭದಲ್ಲಿ ಏಕೆ ಕಾಣುವದಿಲ್ಲಾ? ನಾನೇ ಜಗನ್ನಿಯಾಮಕನು, ನೀನು ಅಸಂಗತವಾಗಿ ಬೊಗಳುತ್ತಿರುವಿ, ನಿನ್ನ ತಲೆಯನ್ನು ದೇಹದಿಂದ ಕಿತ್ತೊಗೆಯುವೆ. ನೀನು ಹೇಳುವ ಆ ಶ್ರೀಹರಿ ನಿನ್ನನ್ನು ರಕ್ಷಿಸಲಿ ಎನ್ನುತ್ತಾ ಅಲ್ಲಿದ್ದ ಸ್ತಂಭವನ್ನು ತನ್ನ ಮುಷ್ಟಿಯಿಂದ ಜೋರಾಗಿ ಬಡಿದನು. ಕೂಡಲೇ ಭಯಂಕರ ಶಬ್ದಮಾಡುತ್ತ ತನ್ನ ಭೃತ್ಯರಾದ ಬ್ರಹ್ಮದೇವರ ವರವನ್ನು, ಭಕ್ತರಾದ ಪ್ರಹ್ಲಾದರಾಜರ ಮಾತನ್ನು ಸತ್ಯವನ್ನಾಗಿ ಮಾಡಲು ಶ್ರೀನರಸಿಂಹದೇವರು ಸ್ತಂಭದಿಂದ ವ್ಯಕ್ತರಾಗಿ, ಗರುಡನು ವಿಷಪೂರಿತ ಸರ್ಪವನ್ನು ಕೊಕ್ಕಿನಿಂದ ಸೀಳಿ ಹಾಕುವಂತೆ, ಹೊಸ್ತಿಲಲ್ಲಿ ಕುಳಿತು ತೊಡೆಯ ಮೇಲೆ ಆ ದೈತ್ಯನನ್ನು ಹಾಕಿಕೊಂಡು ಲೀಲಾಜಾಲವಾಗಿ ಉಗುರುಗಳಿಂದ ಅವನ ಉದರವನ್ನು ಬಗಿದು ಸಂಹರಿಸಿ ರಕ್ತವನ್ನು ಕುಡಿದವರಂತೆ ತೋರಿಸಿದರು.

ಅಸುರ ಕೆಡಲದ ಕಂಡು ಅತಿ ಹರುಷದಿಂದ ತ್ರಿ
ದಶರಂಬರದಿ ಪೂಮಳೆಗರೆಯಲು
ಶಿಶುವೇಕಮಾನಸದಿ ಮೊರೆಹೊಕ್ಕು ಪೊಗಳುತಿರೆ
ಬಿಸಜಾಕ್ಷ ಕರುಣದಿಂದವನ ಸಲಹಿದೆಯಾಗಿ ॥ ೨ ॥

ಅಸುರ ಹಿರಣ್ಯಕಶಿಪುವು ಅಸುನೀಗಿರುವುದನ್ನು ಕಂಡು ಅತಿ ಹರುಷದಿಂದ ದೇವತೆಗಳು ಆಕಾಶಮಾರ್ಗದಲ್ಲಿ ಪುಷ್ಪವೃಷ್ಟಿಯನ್ನು ಮಾಡಿದರು. ಆಗ ಪ್ರಹ್ಲಾದರಾಜರು ಶ್ರೀನರಸಿಂಹದೇವರನ್ನು ಮೊರೆಹೊಕ್ಕು ಸ್ತೋತ್ರ ಮಾಡುತ್ತಿರಲು ಕಮಲಾಕ್ಷರಾದ ಶ್ರೀನರಸಿಂಹದೇವರು ಕರುಣೆಯಿಂದ ಅವರನ್ನು ಸಲಹಿದರು, ರಕ್ಷಿಸಿದರು.

ಅಸುರ ಕೆಡಲದ ಕಂಡು ಅತಿ ಹರುಷದಿಂದ ತ್ರಿ
ದಶರಂಬರದಿ ಪೂಮಳೆಗರೆಯಲು ।

ಅಸುರ ಹಿರಣ್ಯಕಶಿಪುವು ಅಸುನೀಗಿರುವುದನ್ನು ಕಂಡು ಅತಿ ಹರುಷದಿಂದ ದೇವತೆಗಳು ಆಕಾಶದಲ್ಲಿ ಪುಷ್ಪವೃಷ್ಟಿಯನ್ನು ಮಾಡಿದರು.

ಹಿರಣ್ಯಕಶಿಪೋರ್ವಕ್ಷೋ ವಿದಾರ್ಯಾತೀವ ರೋಷಿತಃ ।
ಉದ್ಧೃತ್ಯ ಚಾಂತ್ರಮಾಲ್ಯಾನಿ ನಖೈರ್ವಜ್ರ ಸಮಪ್ರಭೈಃ ।
ಮೇನೇ ಕೃತಾರ್ಥಮಾತ್ಮಾನಂ ಸರ್ವತಃ ಪರ್ಯವೈಕ್ಷತ ।
ಹರ್ಷಿತಾ ದೇವತಾಃ ಸರ್ವಾಃ ಪುಷ್ಪವರ್ಷಮವಾಕಿರನ್ ॥

ಶ್ರೀನರಸಿಂಹಸಹಸ್ರನಾಮಸ್ತೋತ್ರಮ್

ಶಿಶುವೇಕಮಾನಸದಿ ಮೊರೆಹೊಕ್ಕು ಪೊಗಳುತಿರೆ
ಬಿಸಜಾಕ್ಷ ಕರುಣದಿಂದವನ ಸಲಹಿದೆಯಾಗಿ ॥

ದೇವತೆಗಳು ಶ್ರೀನರಸಿಂಹದೇವರ ಮೇಲೆ ಪುಷ್ಪವೃಷ್ಟಿ ಮಾಡಿದ ನಂತರ ಪ್ರಹ್ಲಾದರಾಜರು ಶ್ರೀನರಸಿಂಹದೇವರನ್ನು ಒಂದೇ ಮನಸ್ಸಿನಿಂದ ಸ್ತೋತ್ರ ಮಾಡುತ್ತಿರಲು ಕಮಲಾಕ್ಷರಾದ ಶ್ರೀನರಸಿಂಹದೇವರು ಕರುಣೆಯಿಂದ ಪ್ರಹ್ಲಾದರಾಜರನ್ನು ಸಂತೈಸಿದರು, ರಕ್ಷಿಸಿದರು.

ಶ್ರೀಮದ್ ಭಾಗವತದಲ್ಲಿ ಈ ಪ್ರಸಂಗವನ್ನು ಚೆನ್ನಾಗಿ ಬಣ್ಣಿಸಿದ್ದಾರೆ.

ಅಸ್ತೌಷೀದ್ಧರಿಮೇಕಾಗ್ರ ಮನಸಾ ಸುಸಮಾಹಿತಃ ।
ಪ್ರೇಮಗದ್ಗದಯಾ ವಾಚಾ ತನ್ಯಸ್ತ ಹೃದಯೇಕ್ಷಣಃ ॥ (7-9-7)

ಪ್ರಹ್ಲಾದರಾಜರು ಶ್ರೀನರಸಿಂಹದೇವರನ್ನು ಏಕಾಗ್ರ ಮನಸ್ಸಿನಿಂದ, ಪ್ರೇಮಗದ್ಗದವಾದ ಮಾತುಗಳಿಂದ ಸ್ತೋತ್ರಮಾಡಿದರು. ಸ್ತೋತ್ರದಿಂದ ಸಂತುಷ್ಟರಾದ ಶ್ರೀನರಸಿಂಹದೇವರು ಪ್ರಹ್ಲಾದರಾಜರನ್ನು ಕುರಿತು ಹೇಳುತ್ತಾರೆ.

ಪ್ರಹ್ಲಾದ ಭದ್ರ ಭದ್ರಂತೇ ಪ್ರೀತೋಽಹಂ ತೇಽಸುರೋತ್ತಮ ।
ವರಂ ವೃಣೀಷ್ವಾಭಿಮತಂ ಕಾಮ ಪೂರೋಽಸ್ಮ್ಯಹಂ ನೃಣಾಮ್ ॥

ಮಾಮಪ್ರೀಣತ ಆಯುಷ್ಮನ್ ದರ್ಶನಂ ದುರ್ಲಭಂ ಹಿ ಮೇ ।
ದೃಷ್ಟ್ವಾಮಾಂ ನ ಪುನರ್ಜಂತುರಾತ್ಮಾನಂ ತಪ್ತುಮರ್ಹತಿ ॥

ಪ್ರೀಣಂತಿ ಹ್ಯಥ ಮಾಂ ಧೀರಾಃ ಸರ್ವಭಾವೇನ ಮಾಧವಮ್ ।
ಶ್ರೇಯಸ್ಕಾಮಾ ಮಹಾಭಾಗಾಃ ಸರ್ವೇಷಾಮಾಶಿಷಾಂ ಪತಿಮ್ ॥

ಶ್ರೀಮದ್ ಭಾಗವತ (7-9-52)

ಶ್ರೀನರಸಿಂಹದೇವರು ಕರುಣೆಯಿಂದ ಪ್ರಹ್ಲಾದರಾಜರನ್ನು ಸಂತೈಸಿ ನಿನಗೇನು ವರಬೇಕು ಕೇಳಿಕೋ ಎನ್ನಲು ಭಗವಂತನಲ್ಲಿ ಭಕ್ತಿಯುಳ್ಳ ಪ್ರಹ್ಲಾದರಾಜರು ಏನನ್ನೂ ಬಯಸಲಿಲ್ಲ.

ಹಲವು ಯೋನಿಗಳಲ್ಲಿ ತಿರುಗಿ ಬಳಲಿದೆನಯ್ಯ
ನಳಿನಾಕ್ಷ ನಿಮ್ಮ ಗುರುತವ ಕಾಣದೇ ।
ಇಳೆಯಲ್ಲಿ ದ್ವಿಜನಾಗಿ ಪುಟ್ಟಿ ತವ ಪದವಿಡಿದೆ
ಗೆಲಿಸು ಭವದುರಿತವ ಪ್ರಸನ್ವೆಂಕಟ ನೃಸಿಂಹ ॥ ೩ ॥

ಶ್ರೀ ನೃಸಿಂಹದೇವರನ್ನು ಕುರಿತು ಪ್ರಹ್ಲಾದರಾಜರು ಹೇಳುತ್ತಾರೆ. ಭಗವಂತ! ನಾನು ಅನೇಕಯೋನಿಗಳಲ್ಲಿ ತಿರುಗಿ ತಿರುಗಿ ಬಳಲಿದೆ ನೊಂದೆ. ಕಮಲಾಕ್ಷನೇ ನಿಮ್ಮ ಮಹಿಮೆಯನ್ನು ನಾನು ತಿಳಿಯಲಿಲ್ಲ. ಈಗ ಭೂಮಿಯಲ್ಲಿ ಕ್ಷತ್ರಿಯನಾಗಿ ಹುಟ್ಟಿ ನಿಮ್ಮ ಪಾದಕಮಲವನ್ನು ಹೊಂದಿದೆ. ನೀವು ದಯವಿಟ್ಟು ನಿಮ್ಮ ಪಾದಕಮಲದಲ್ಲಿ ದಾಸ್ಯತ್ವವನ್ನು ಕೊಟ್ಟು ಈ ಸಂಸಾರದಿಂದ ಪಾರು ಮಾಡಿರಿ.

ಶ್ರೀಮದ್ ಭಾಗವತದಲ್ಲಿ ಈ ಮಾತು ಬಂದಿದೆ– ಪ್ರಹ್ಲಾದರಾಜರು ಹೇಳುತ್ತಾರೆ–

ಯಸ್ಮಾತ್ ಪ್ರಿಯಾಪ್ರಿಯ ವಿಯೋಗ ಸುಯೋಗ ಜನ್ಮ
ಶೋಕಾಗ್ನಿನಾ ಸಕಲಯೋನಿಷು ದಹ್ಯಮಾನಃ ।
ದುಃಖೌಷಧಂ ತದಪಿ ದುಃಖಮತದ್ಧಿಯಾऽಹಂ
ಭೂಮನ್ ಭ್ರಮಾಮಿ ವದ ಮೇ ತವದಾಸ್ಯಯೋಗಮ್ ॥ (7–9–17)

ಶ್ರೀನರಸಿಂಹ! ನಾನು ಅನೇಕ ಯೋನಿಗಳಲ್ಲಿ ಜನ್ಮ ತಳೆದು ಬಂದೆ. ಅಲ್ಲಿ ಪ್ರಿಯ ವಿಯೋಗ, ಅಪ್ರಿಯ ಪದಾರ್ಥಗಳ ಸಂಯೋಗದಿಂದ ದುಃಖವನ್ನೇ ಹೊಂದಿದೆ. ಆ ದುಃಖದಿಂದ ಬಳಲಿದೆ, ನೊಂದೆ. ಈ ದುಃಖಕ್ಕೆ ಔಷಧವನ್ನು ಹುಡುಕಲು ಹೊರಟರೆ ಅದೂ ಮತ್ತೆ ದುಃಖವನ್ನೇ ತರುತ್ತದೆ. ಕಾರಣ ನೀನು ನಿನ್ನ ಪಾದಕಮಲಗಳಲ್ಲಿ ದಾಸ್ಯವನ್ನು ಕೊಟ್ಟು ಈ ಸಂಸಾರದಿಂದ ನನ್ನನ್ನು ಪಾರುಮಾಡು.

ಈಗ ದ್ವಿಜನಾಗಿ, ಕ್ಷತ್ರಿಯನಾಗಿ ಹುಟ್ಟಿ ನಿನ್ನ ಪಾದಕಮಲವನ್ನು ಹೊಂದಿದ್ದೇನೆ. ನನ್ನನ್ನು ಸಂಸಾರ ತಾಪತ್ರಯದಿಂದ ಗೆಲಿಸಿ ಪಾರು ಮಾಡಿ ರಕ್ಷಿಸಬೇಕು ಪ್ರಸನ್ನವೆಂಕಟ ನರಸಿಂಹ ಎಂಬುದಾಗಿ ಕೇಳಿಕೊಂಡಿರುವುದು ಗಮನಾರ್ಹವಾಗಿದೆ.

––*

೩. ಎಂದು ಕಾಂಬೆನು ತಂದೆ ಉಡುಪಿಯ ಜಾಣನ

ಎಂದು ಕಾಂಬೆನು ಎನ್ನ ಸಲಹುವ
ತಂದೆ ಉಡುಪಿಯ ಜಾಣನ ।
ಮಂದಹಾಸ ಪ್ರವೀಣನ
ಇಂದಿರಾ ಭೂರಮಣನ ॥ ಪ ॥

ಕಡಲದಡದೊಳು ಎಸೆವ ರಂಗನ
ಕಡಗೋಲ್ಕೇಣನು ಪಿಡಿದನ ।
ಮೃಡ ಪುರಂದರರೊಡೆಯನ ಈ
ರಡಿಗಳಲಿ ಶಿರವಿಡುವೆನಾ ॥ ೧ ॥

ದೇವಕಿಯ ಜಠರದಲಿ ಬಂದನಾ
ಆವ ಪಳ್ಳಿಲಿ ನಿಂದನ ।
ಮಾವ ಕಂಸನ ಕೊಂದನ
ಕಾವನಯ್ಯ ಮುಕುಂದನ ॥ ೨ ॥

ಪೂರ್ಣಪ್ರಜ್ಞರಿಗೊಲಿದು ದ್ವಾರಕೆ
ಮಣ್ಣಿನೊಳ್ ಪ್ರಕಟಿಸಿದನ । ಭ
ವಾರ್ಣವಕೆ ಪ್ಲವನಾದನ । ಪ್ರ
ಸನ್ನ ವೆಂಕಟಕೃಷ್ಣನ ॥ ೩ ॥

ಶ್ರೀ ಪ್ರಸನ್ನವೆಂಕಟದಾಸರು ಪಂಢರಪುರದ ''ನಾದಬ್ರಹ್ಮ''ನನ್ನು, ತಿರುಪತಿಯ ''ಕಾಂಚನ ಬ್ರಹ್ಮ''ನನ್ನು ಸಂದರ್ಶಿಸಿ ಆನಂದದಲ್ಲಿ ಮುಳುಗಿದವರಾಗಿ ಉಡುಪಿಯ ''ಅನ್ನಬ್ರಹ್ಮ''ನನ್ನು ಎಂದು ನೋಡುವೆ ಎಂಬುದಾಗಿ ವಿಚಾರ ಮಗ್ನರಾದರು. ಆಗ ಅವರ ಅಂತರಾಳದಿಂದ ''ಎಂದು ಕಾಂಬೆನು ಎನ್ನ ಸಲಹುವ ತಂದೆ ಉಡುಪಿಯ ಜಾಣನ'' ಎಂಬುದಾಗಿ ಪದ್ಯವೊಂದು ಹೊರ ಹೊಮ್ಮಿತು.

ಪ್ರಸ್ತುತ ಪದ್ಯದಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಮಂದಹಾಸಪೂರ್ಣನಾದ, ಶ್ರೀದೇವಿ ಭೂದೇವಿಯರಿಗೆ ಸ್ವಾಮಿಯಾದ, ನೀಲಮೇಘಶ್ಯಾಮನಾದ ಉಡುಪಿಯ ಕೃಷ್ಣನನ್ನು ಎಂದು ನೋಡುವೆ ಎಂಬುದಾಗಿ ಹಂಬಲಿಸಿ ಸ್ತೋತ್ರ ಮಾಡಿದ್ದಾರೆ.

ಎಂದು ಕಾಂಬೆನು ಎನ್ನ ಸಲಹುವ ತಂದೆ ಉಡುಪಿಯ ಜಾಣನ ।
ಮಂದಹಾಸ ಪ್ರವೀಣನ ಇಂದಿರಾ ಭೂರಮಣನ ॥

ಶ್ರೀಮನ್ ಮಧ್ವಾಚಾರ್ಯರು ಸಜ್ಜನ ಸಮುದಾಯಕ್ಕೆ ಬರಬಹುದಾದ ಅನೇಕ ವಿಘ್ನಗಳ ಪರಿಹಾರಕ್ಕಾಗಿ –

ಸಿದ್ಧಿ ವಿಘ್ನಮುಖದೋಷಭೇಷಜಮ್ ॥[೧]

ಎಂಬಂತೆ ರಜತಪೀಠಪುರವೆನಿಸಿದ ಉಡುಪಿ ಕ್ಷೇತ್ರದಲ್ಲಿ ಶ್ರೀಕೃಷ್ಣನನ್ನು ಪ್ರತಿಷ್ಠೆ ಮಾಡಿದರು. ಮೋಕ್ಷಾದಿ ಪುರುಷಾರ್ಥಗಳನ್ನು ಕೊಟ್ಟು ಸಲಹುವ, ಸಮಸ್ತ ಜಗತ್ತಿಗೆ ತಂದೆಯಾದ, ಮಂದಹಾಸೋಪೇತನಾದ ಶ್ರೀಕೃಷ್ಣನನ್ನು ಎಂದು ಕಾಣುವೆ, ಎಂದು ಮನದಣಿ ನೋಡುವೆ ಎಂಬುದಾಗಿ ದರ್ಶನಾಕಾಂಕ್ಷಿಗಳಾದ ಶ್ರೀದಾಸರು ಸ್ತೋತ್ರಗೈದಿದ್ದಾರೆ.

ಇಲ್ಲಿ ''ತಂದೆ ಉಡುಪಿಯ ಜಾಣನ'' ಎಂದಾಗಿ ಹೇಳುತ್ತ ಶ್ರೀಕೃಷ್ಣನು ಎಲ್ಲರಿಗೂ ತಂದೆಯಾಗಿದ್ದಾನೆಂದು ಶ್ರೀದಾಸರು ತಿಳಿಸಿದ್ದಾರೆ.

ಯೋನಃ ಪಿತಾ ಜನಿತಾ ಯೋ ವಿಧಾತಾ ॥[೨]

ಅಹಂ ಬೀಜಪ್ರದಃ ಪಿತಾ ॥[೩]

ಹಾಗೂ ''**ಪಿತಾಸಿ ಲೋಕಸ್ಯ ಚರಾಚರಸ್ಯ**'' ಇತ್ಯಾದಿ ಗೀತಾವಾಕ್ಯಗಳಲ್ಲಿಯೂ ನಾವು ಕಾಣಬಹುದು.

ಉಡುಪಿ ಶ್ರೀಕೃಷ್ಣನಿಂದ ಅಭಿನ್ನರಾದ ಶ್ರೀನಿವಾಸದೇವರು ಸಜ್ಜನರನ್ನು ಸಲಹುತ್ತಾರೆ ಎಂಬುದಾಗಿ ಕೆಳಗಿನ ಪುರಾಣ ವಾಕ್ಯದಲ್ಲಿ ಕಾಣುತ್ತೇವೆ.

ಶರಣಾಗತ ಸಂತ್ರಾಣಃ ಶ್ರೀನಿವಾಸಃ ಸತಾಂ ಗತಿಃ ।
ಪಾಲಕೋ ಹಿ ಬಹೂನಾಂ ಚ ಭಕ್ತಾನಾಂ ಭಕ್ತವತ್ಸಲಃ ॥[೪]

ಆ ಭಗವಂತನು ಶರಣಾಗತರನ್ನು ರಕ್ಷಿಸುತ್ತಾನೆ. ಸಜ್ಜನರಿಗೆ ಗತಿ ಪ್ರದನಾಗಿದ್ದಾನೆ ಮತ್ತು ಭಕ್ತವತ್ಸಲನೂ ಆಗಿದ್ದಾನೆ.

ಇಲ್ಲಿ ಶ್ರೀಕೃಷ್ಣನಿಗೆ ದಾಸರು ''ಮಂದಹಾಸ ಪ್ರವೀಣನ'' ಮತ್ತು ''ಇಂದಿರಾ ಭೂರಮಣನ'' ಎಂಬ ಎರಡು ವಿಶೇಷಣಗಳನ್ನು ಕೊಟ್ಟಿದ್ದಾರೆ. ಇವು ಸಾರ್ಥಕವಾಗಿರುವ ಪರಿ ಹೀಗಿದೆ –

೧. ಶ್ರೀ ಸುಮಧ್ವವಿಜಯ ಮಹಾಕಾವ್ಯ (೯-೪೦)
೨. ಶ್ರುತಿ ವಾಕ್ಯ
೩. ಶ್ರೀಭಗವದ್ಗೀತಾ (೧೪-೪)
೪. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೧-೩೦)

ಶ್ರೀಮಧ್ವಾಚಾರ್ಯರು ಪ್ರತಿಷ್ಠಾಪಿಸಿದ ಶ್ರೀಕೃಷ್ಣನ ವರ್ಣನೆಯನ್ನು ಶ್ರೀ ನಾರಾಯಣ ಪಂಡಿತಾಚಾರ್ಯರು ಹೀಗೆ ಮಾಡಿದ್ದಾರೆ.

ಮಂದಹಾಸ ಮೃದುಸುಂದರಾನನಂ
ನಂದನಂದನಮತೀಂದ್ರಿಯಾಕೃತಿಮ್ ।
ಸುಂದರಂ ಸ ಇಹ ಸನ್ನ್ಯಧಾಪಯ
ದ್ವಂದ್ಯಮಾಕೃತಿ ಶುಚಿ ಪ್ರತಿಷ್ಠಯಾ ॥[೫]

ಮಂದಹಾಸದಿಂದ ಕೂಡಿದ, ಕೋಮಲವೂ ಸುಂದರವೂ ಆದ ಮುಖವುಳ್ಳ, ಪ್ರಾಕೃತ ಇಂದ್ರಿಯಗಳಿಗೆ ಗೋಚರಿಸದ ರೂಪವುಳ್ಳ, ರಮಣೀಯನೂ, ಸುಂದರನೂ, ವಂದ್ಯನೂ ಆದ ನಂದರಾಜರಿಗೆ ನಂದನನೆನಿಸಿದ ಶ್ರೀಕೃಷ್ಣನನ್ನು ರಜತಪೀಠಪುರದಲ್ಲಿ ಶ್ರೀಮನ್ ಮಧ್ವಾಚಾರ್ಯರು ಪ್ರತಿಷ್ಠಾಪಿಸಿದರು.

ಆ ಭಗವಂತನು ಶ್ರೀದೇವಿ ಹಾಗೂ ಭೂದೇವಿಯರಿಗೆ ರಮಣ ಎಂದರೆ – ಪತಿ, ಸ್ವಾಮಿಯಾಗಿದ್ದಾನೆ.

ಅನಂತ ವೇದೈರ್ಬ್ರಹ್ಮಾದ್ಯೈಃ ಅವೇದ್ಯೋ ಅಪ್ರಾಕೃತೋ ಹರಿಃ ।
ಶ್ರೀಧರಾಭ್ಯಾಂ ಸಮಾಶ್ಲಿಷ್ಟೋ ಬ್ರಹ್ಮರುದ್ರೇಂದ್ರ ಸೇವಿತಃ ॥[೬]

ಶ್ರೀವತ್ಸವಕ್ಷಸಂ ಶ್ರೀಶಂ ಶ್ರೀಲೋಲಂ ಶ್ರೀಕರಗ್ರಹಮ್ ।
ಶ್ರೀಮಂತಂ ಶ್ರೀನಿಧಿಂ ಶ್ರೀಡ್ಯಂ ಶ್ರೀನಿವಾಸಂ ಭಜೇಽನಿಶಮ್ ॥[೭]

ಇಂಥ ಶ್ರೀಕೃಷ್ಣನನ್ನು ಎಂದು ಕಾಣುವೆ ಎನ್ನುತ್ತಾ ಹಂಬಲಿಸಿ ದಾಸರು ಸ್ತೋತ್ರ ಮಾಡಿದ್ದಾರೆ.

ಕಡಲದಡದೊಳು ಎಸೆವ ರಂಗನ
ಕಡಗೋಲ್ನೇಣನು ಪಿಡಿದನ ।
ಮೃಡ ಪುರಂದರರೊಡೆಯನ ಈ
ರಡಿಗಳಲಿ ಶಿರವಿಡುವೆನಾ ॥ ೧ ॥

ಉಡುಪಿಯ ಕ್ಷೇತ್ರವು ಸಮುದ್ರ ತೀರದಲ್ಲಿದೆ. ಈ ಕ್ಷೇತ್ರದಲ್ಲಿ ಶ್ರೀಕೃಷ್ಣನು ಶೋಭಿಸುತ್ತಿದ್ದಾನೆ. ಕೈಯಲ್ಲಿ ಕಡಗೋಲು ಹಗ್ಗವನ್ನು ಹಿಡಿದಿದ್ದಾನೆ. ಇವನು ರುದ್ರ,

೫. ಶ್ರೀ ಸುಮಧ್ವವಿಜಯ ಮಹಾಕಾವ್ಯ (೯-೪೩)
೬. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೫-೪೨)
೭. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ = (೩-೧೬)

ಇಂದ್ರರೇ ಮೊದಲಾದ ದೇವತೆಗಳಿಗೆಲ್ಲ ಒಡೆಯನು, ಸ್ವಾಮಿಯು ಆಗಿದ್ದಾನೆ. ಇಂಥ ಶ್ರೀಕೃಷ್ಣನ ಪಾದಕಮಲಗಳಲ್ಲಿ ನನ್ನ ಶಿರವನ್ನಿಟ್ಟು ಸಾಷ್ಟಾಂಗ ನಮಸ್ಕಾರ ಮಾಡುವೆನೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಶ್ರೀವಾದಿರಾಜ ಪೂಜ್ಯಚರಣರು ಶ್ರೀಕೃಷ್ಣನು ಉಡುಪಿಯಲ್ಲಿ ಇರುವುದನ್ನು ವರ್ಣಿಸಿದ ಪರಿ ಹೀಗಿದೆ.

ದ್ವಾರಾವತೀಂ ಸಕಲ ಭಾಗ್ಯವತೀಮುಪೇಕ್ಷ್ಯ
ಗೋಪಾಲಬಾಲ ಲಲನಾ ಕರಪೂಜನಂ ಚ ।
ವಾರ್ಧಿಂ ವಧೂಗೃಹಮತೀತ್ಯ ಸ ಮಧ್ವನಾಥಃ
ಯತ್ರಾಸ್ತಿ ತದ್ರಜತಪೀಠ ಪುರಂ ಗರೀಯಃ ॥[೮]

ಶ್ರೀಕೃಷ್ಣನು ಸಕಲ ಭಾಗ್ಯಗಳಿಂದ ಕೂಡಿದ ದ್ವಾರಾವತಿಯನ್ನು ಬಿಟ್ಟು ಶ್ರೀಮಧ್ವರಿಗೆ ಸ್ವಾಮಿಯಾದ ಅವನು ಶ್ರೇಷ್ಠವಾದ ರಜತಪೀಠ ಪುರಕ್ಕೆ ಬಂದು ನೆಲೆಸಿ ಇಲ್ಲಿ ಶೋಭಿಸುತ್ತಿದ್ದಾನೆ.

ಶ್ರೀಕೃಷ್ಣನು ಕೈಯಲ್ಲಿ ಕಡಗೋಲು, ಹಗ್ಗಗಳನ್ನು ಹಿಡಿದಿದ್ದಾನೆ. ಇದನ್ನು ಶ್ರೀವಾದಿರಾಜರು ಸುಂದರವಾಗಿ ವರ್ಣಿಸಿದ್ದಾರೆ.

ಕುಂಡಲಮಂಡಿತಗಂಡಂ
ಕಂಬುಗ್ರೀವಂ ಮನೋರಮೋರಸ್ಕಂ ।
ದಂಡಂ ದಾಮ ಚ ದಧತಂ ಪಾಂಡವ ಸಖಿಂ
ಅರ್ಚ್ಯಂ ಅರ್ಚ್ಯಯಾಮಿ ಕದಾ ॥

ಶ್ರೀಕೃಷ್ಣನು ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದಾನೆ. ಶಂಖದಂತೆ ಕಂಠವುಳ್ಳವನಾಗಿದ್ದಾನೆ. ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತಾನೆ. ಕೈಯಲ್ಲಿ ಕಡೆಗೋಲು ಮತ್ತು ಹಗ್ಗ ಹಿಡಿದುಕೊಂಡು ಶೋಭಿಸುತ್ತಿದ್ದಾನೆ.

ಶ್ರೀಕೃಷ್ಣನು ರುದ್ರ ಹಾಗೂ ಇಂದ್ರಾದಿ ದೇವತೆಗಳಿಗೆ ಒಡೆಯನಾಗಿದ್ದಾನೆ. ಇದು ಈ ಕೆಳಗಿನ ಪ್ರಮಾಣಗಳಿಂದ ಸ್ಪಷ್ಟ.

ಮಾವಿಧೀರ ಶಿವ ವೀಶಫಣೀಶೇಂದ್ರಾರ್ಕ
ಸೋಮ ಹುತಭುಜ್ಮುಖ ವಂದ್ಯೇ ॥[೯]

೮. ತೀರ್ಥಪ್ರಬಂಧಃ(ಪಶ್ಚಿಮ ಪ್ರಬಂಧಃ) ೯. ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೪೦)

ಉಚ್ಯತೇ ಸರ್ವವೇದೋರು ವಾದ್ಯೈರಜಃ
ಸ್ವರ್ಚಿತೋ ಬ್ರಹ್ಮ ರುದ್ರೇಂದ್ರ ಪೂರ್ವೈಃ ಸದಾ ॥[೧೦]

ಇಂಥ ಶ್ರೀಕೃಷ್ಣನ ಪಾದಕಮಲಗಳಿಗೆ ನಮಸ್ಕರಿಸುವರು ಇನ್ನೊಮ್ಮೆ ಸಂಸಾರಕ್ಕೆ ಬರುವದಿಲ್ಲ.

ಏಕೋಽಪಿ ಕೃಷ್ಣಸ್ಯ ಕೃತಪ್ರಣಾಮೋ
ದಶಾಶ್ವಮೇಧಾವಭೃತೇನ ತುಲ್ಯಃ ।
ದಶಾಶ್ವಮೇಧೀ ಪುನರೇತಿಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ ॥[೧೧]

ಶ್ರೀಕೃಷ್ಣನಿಗೆ ಭಕ್ತಿಪೂರ್ವಕ ಮಾಡಿದ ಶಿರಸಾಷ್ಟಾಂಗ ನಮಸ್ಕಾರವು ಹತ್ತು ಅಶ್ವಮೇಧಯಾಗಗಳಿಗೆ ಸರಿಹೋಗುತ್ತದೆ. ಹತ್ತು ಅಶ್ವಮೇಧಯಾಗ ಮಾಡಿದವನು ಮತ್ತೆ ಜನ್ಮ ಪಡೆಯುತ್ತಾನೆ. ಆದರೆ ಶ್ರೀಕೃಷ್ಣನ ಪಾದಕಮಲಗಳಿಗೆ ಭಕ್ತಿಯಿಂದ ನಮಸ್ಕಾರ ಮಾಡಿದವನು ಇನ್ನೊಮ್ಮೆ ಸಂಸಾರಕ್ಕೆ ಬರುವುದೇ ಇಲ್ಲ. ಕಾರಣ ಶ್ರೀದಾಸರು ಇಂಥ ಶ್ರೀಕೃಷ್ಣನ ಪಾದಕಮಲಗಳಲ್ಲಿ ಶಿರವಿಡುವೆನೆಂಬುದಾಗಿ ತಿಳಿಸುವ ಮಾತು ಗಮನಾರ್ಹವಾಗಿದೆ.

ದೇವಕಿಯ ಜಠರದಲಿ ಬಂದನ
ಆವಪಳ್ಳಿಲಿ ನಿಂದನ ।
ಮಾವ ಕಂಸನ ಕೊಂದನ
ಕಾವನಯ್ಯ ಮುಕುಂದನ ॥ ೨ ॥

ಶ್ರೀಕೃಷ್ಣನು ದೇವಕಿದೇವಿಯರಿಂದ ವ್ಯಕ್ತನಾದ. ಗೋಕುಲಕ್ಕೆ ಹೋಗಿ ಅನೇಕ ಕ್ರೀಡೆಗಳನ್ನು ಮಾಡಿ, ಅನೇಕ ದೈತ್ಯರ ಸಂಹಾರ ಮಾಡಿ ಸಜ್ಜನರನ್ನು ಸಂತೋಷಪಡಿಸಿ ಮಾವನಾದ ಕಂಸನನ್ನು ಸಂಹಾರ ಮಾಡಿದ. ಇಂಥ ಶ್ರೀಕೃಷ್ಣನೇ, ಕಾಮ ಎಂದರೆ ಪ್ರದ್ಯುಮ್ನನ ತಂದೆಯೂ ಆಗಿದ್ದಾನೆ.

ಶ್ರೀಕೃಷ್ಣ ದೇವಕೀದೇವಿಯರಿಂದ ವ್ಯಕ್ತನಾದ ವಿಷಯವು ಹೀಗೆ ತಿಳಿದುಬರುತ್ತದೆ.

ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಃ ಸರ್ವಗುಹಾಶ್ರಯಃ ।
ಆವಿರಾಸೀದ್ ಯಥಾ ಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ ॥[೧೨]

೧೦. ಶ್ರೀ ದ್ವಾದಶ ಸ್ತೋತ್ರ (೮-೮)
೧೧. ಪಾಂಡವಗೀತಾ ೧೨ನೆ ಶ್ಲೋಕ
೧೨. ಶ್ರೀಮದ್ ಭಾಗವತ (೧೦-೩-೧)

ಮತ್ತು **ದೇವಕೀ ಜಠರ ಭೂರುಡುರಾಜಃ ॥**[೧೩]

ಶ್ರೀಕೃಷ್ಣನು ಅವತಾರ ಮಾಡಿದ ನಂತರದಲ್ಲಿ ಗೋಕುಲಕ್ಕೆ ಬಂದು ಅಲ್ಲಿ ಅನೇಕ ದೈತ್ಯಜನರ ಸಂಹಾರಮಾಡಿ ಗೋವರ್ಧನೋದ್ಧರಣವನ್ನು ಮಾಡಿ ಮಾವ ಕಂಸನನ್ನು ಕೂಡ ಸಂಹರಿಸಿದ.

ಗರುಡನು ಶ್ರೀಕೃಷ್ಣನನ್ನು ಕುರಿತು ಸ್ತೋತ್ರ ಮಾಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ದೇವಕೀ ತನಯೋ ಭವಾನ್ ಚಾಣೂರ ಮಥನಶ್ಚೈವ
ಗೋಪ್ರಿಯಃ ಕಂಸಹಾ ಭವಾನ್ ॥[೧೪]

ಗೋವರ್ಧನ ಧರಶ್ಚೈವ ಮಲ್ಲಾರಿರ್ಮಲ್ಲಭಾವನಃ ।
ಮಲ್ಲಪ್ರಿಯೋ ಮಹಾಮಲ್ಲೋ ಮಹಾಪುರುಷ ಇತ್ಯಪಿ ॥[೧೫]

ಕಾಮನೇ ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀಕೃಷ್ಣ ರುಕ್ಮಿಣೀದೇವಿಯರಲ್ಲಿ ಬಂದಿರುವುದು ಕೆಳಗಿನ ಪ್ರಮಾಣಗಳಿಂದ ವಿದಿತವಾಗುತ್ತದೆ.

ಕಾಮಸ್ತು ವಾಸುದೇವಾಂಶೋ ದಗ್ಧಃ ಪ್ರಾಕ್ ರುದ್ರ ಮನ್ಯುನಾ ।
ದೇಹೋಪಪತ್ತಯೇ ಭೂಯಃ ತಮೇವ ಪ್ರತ್ಯಪದ್ಯತ ॥

ಸ ಏವ ಜಾತೋ ವೈದರ್ಭ್ಯಾಂ ಕೃಷ್ಣವೀರ್ಯಸಮುದ್ಭವಃ ।
ಪ್ರದ್ಯುಮ್ನ ಇತಿ ವಿಖ್ಯಾತಃ ॥[೧೬]

ಕಾಮನೇ ಪ್ರದ್ಯುಮ್ನನು, ಅಮರಕೋಶದಲ್ಲಿ - ತಿಳಿಸಿದ್ದಾರೆ.

ಮದನೋಮನ್ಮಥೋಮಾರಃ ಪ್ರದ್ಯುಮ್ನೋ ಮೀನಕೇತನಃ ।
ಕಂದರ್ಪೋ ದರ್ಪಕೋಽನಂಗಃ ಕಾಮಃ ಪಂಚಶರಸ್ಸ್ಮರಃ ॥[೧೭]

ಪೂರ್ಣಪ್ರಜ್ಞರಿಗೊಲಿದು ದ್ವಾರಕೆ
ಮಣ್ಣಿನೊಳ್ ಪ್ರಕಟಿಸಿದನ । ಭ
ವಾರ್ಣವಕೆ ಪ್ಲವನಾದನ । ಪ್ರ
ಸನ್ನವೆಂಕಟಕೃಷ್ಣನ ॥ ೩ ॥

೧೩. ಶ್ರೀಮದ್ ಭಾಗವತ (೧೦-೩೫-೨೩)
೧೪. ಶ್ರೀಹರಿವಂಶ ವಿಷ್ಣುಪರ್ವ
೧೫. ಶ್ರೀಹರಿವಂಶ ವಿಷ್ಣುಪರ್ವ
೧೬. ಶ್ರೀಹರಿವಂಶ ಮಹಾಪುರಾಣ
೧೭. ಅಮರಕೋಶ ಸ್ವರ್ಗವರ್ಗ ೨೬ನೆ ಶ್ಲೋಕ

ಶ್ರೀಕೃಷ್ಣನು ಶ್ರೀಪೂರ್ಣಪ್ರಜ್ಞಾಚಾರ್ಯರಿಗೆ ಅಂದರೆ ಶ್ರೀಮಧ್ವರಿಗೆ ಒಲಿದು ಗೋಪೀಚಂದನ ಗಡ್ಡೆಯಲ್ಲಿ ಪ್ರಾದುರ್ಭೂತನಾದ.

ಶ್ರೀಕೃಷ್ಣನು ಘೋರವಾದ ಸಂಸಾರಕ್ಕೆ ನೌಕೆಯಂತೆ ಇದ್ದಾನೆ. ಪ್ರಸನ್ನವೆಂಕಟ ಕೃಷ್ಣನೆಂಬ ನೌಕೆಯಲ್ಲಿ ಪ್ರಯಾಣ ಮಾಡುವವರಿಗೆ ಮುಕ್ತಿ ದೊರೆಯುವದು ನಿಶ್ಚಿತವೇ.

ಶ್ರೀಪೂರ್ಣಪ್ರಜ್ಞರು ಸಮುದ್ರಸ್ನಾನವನ್ನು ಮಾಡಿ ಜಪಾದಿಗಳಲ್ಲಿ ನಿರತರಾಗಿದ್ದಾಗ ಬೇರೆ ದ್ವೀಪದಿಂದ ಬರುತ್ತಿದ್ದ ನೌಕೆಯೊಂದು ದಡವನ್ನು ತಲುಪದೇ ಸಮುದ್ರದಲ್ಲಿ ಹೊಯ್ದಾಡತೊಡಗಿದಾಗ ಅದರಲ್ಲಿ ಕುಳಿತ ನಾವಿಕರು ಆಚಾರ್ಯರನ್ನು ಪ್ರಾರ್ಥಿಸಿದಾಗ, ಆಚಾರ್ಯರು ತಮ್ಮ ಶಾಟಿಯನ್ನು ಬೀಸಿ ನೌಕೆಯು ಸುರಕ್ಷಿತವಾಗಿ ದಡ ತಲುಪುವಂತೆ ಅನುಗ್ರಹಿಸಿದರು. ಸಂತುಷ್ಟರಾದ ನಾವಿಕರು ಏನಾದರೂ ಕಾಣಿಕೆಯನ್ನು ಸ್ವೀಕರಿಸಬೇಕೆಂದು ಒತ್ತಾಯಮಾಡಿ ಪ್ರಾರ್ಥಿಸಲು ಆ ನಾವೆಯಲ್ಲಿದ್ದ ಗೋಪಿಚಂದನದ ಗಡ್ಡೆಯನ್ನು ಸ್ವೀಕರಿಸಿದರು. ಇದರಲ್ಲಿ ಶ್ರೀಕೃಷ್ಣನು ಪ್ರಕಟನಾದನು. ಅವನೇ ಸಜ್ಜನರನ್ನು ಸಂಸಾರ ಸಾಗರದಿಂದ ಪಾರುಮಾಡುತ್ತಾನೆ.

ಭವಾರ್ಣವಂ ಭೀಮಮದಭ್ರಸೌಹೃದಾಃ
ಭವತ್ ಪದಾಂಭೋರುಹ ನಾವಮತ್ರತೇ ।
ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥[೧೮]

ಇಲ್ಲಿ ತಿಳಿಸಿದಂತೆ ... ಶ್ರೀಕೃಷ್ಣನು ಸಂಸಾರ ಸಾಗರ ದಾಟುವವರಿಗೆ ನೌಕೆಯಂತೆ ಇದ್ದಾನೆ. ಶ್ರೀಕೃಷ್ಣನ ಪಾದಕಮಲಗಳನ್ನು ಆಶ್ರಯಿಸಿದವರು ಮುಕ್ತಿ ಹೊಂದುವದು ನಿಶ್ಚಿತ.

ಶ್ರೀಕೃಷ್ಣನು ಗೀತೆಯಲ್ಲಿ ಹೇಳಿದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ॥[೧೯]

ಜನನ ಮರಣ ರೂಪವಾದ ಸಂಸಾರ ಸಾಗರದಿಂದ ನಾನೇ ಸಜ್ಜನರನ್ನು ಪಾರುಮಾಡಿ ಉದ್ಧರಿಸುತ್ತೇನೆ.

ಇಂಥ ಶ್ರೀಕೃಷ್ಣನನ್ನು ಎಂದು ಕಾಣುವೆ, ಎಂದು ನೋಡುವೆನೆಂದು ಹಂಬಲಿಸಿ ದರ್ಶನಾಕಾಂಕ್ಷಿಗಳಾಗಿ ಶ್ರೀಪ್ರಸನ್ನವೆಂಕಟದಾಸರು ಸ್ತೋತ್ರ ಮಾಡಿರುವುದನ್ನು ಇಲ್ಲಿ ನಾವು ಕಾಣಬಹುದು.

--*

೧೮. ಶ್ರೀಮದ್ ಭಾಗವತ (೧೦-೨-೩೧) ೧೯. ಶ್ರೀಮದ್ ಭಗವದ್ಗೀತಾ (೧೨-೭)

೪. ನೆನೆ ಮನವೆ ದಾನವಾರಿಯ

ನೆನೆ ಮನವೆ ದಾನವಾರಿಯ
ಹಿತಕಾರಿಯಾಶ್ರಿತ ದೊರೆಯ ॥ ಪ ॥

ಹೀನ ಪಾಪಾಖ್ಯ ವಿಪಿನದಾವಕೃಶಾನು
ಸನಾತನ ನಾರಾಯಣ ಶ್ರೀನಾಥನ ॥ ೧ ॥

ಘೋರ ನಿರಯವಿದೂರ ಕರುಣಾಪಾರ
ವಾರಿಜಾಸನವಂದ್ಯ ಸುರಶ್ರೇಷ್ಠನ ॥ ೨ ॥

ತನ್ನವರಿಗೆ ಪ್ರಸನ್ನವೆಂಕಟಕೃಷ್ಣ
ಮಾನ್ಯ ಸದ್ಭಕ್ತರ ಪಾವನ್ನ ನಾಮನ ॥ ೩ ॥

ಪ್ರಸ್ತುತ ಪದ್ಯದಲ್ಲಿ ಶ್ರೀದಾಸರು ಹಿತಕಾರಿಯಾದ, ಆಶ್ರಿತದೊರೆಯಾದ, ದೈತ್ಯರಿಗೆ ಶತ್ರುವಾದ ಶ್ರೀಹರಿಯನ್ನು ನೆನೆ ಎಂಬುದಾಗಿ ಮನಸ್ಸಿಗೆ ತಿಳಿಸುತ್ತಿದ್ದಾರೆ. ಹಾಗೆಯೇ ಭಕ್ತರ ಪಾಪಗಳೆಂಬ ಅರಣ್ಯಕ್ಕೆ ಕಾಡ್ಗಿಚ್ಚಿನಂತಿರುವ ಸನಾತನ ಶ್ರೀನಾಥನಾದ ನಾರಾಯಣನನ್ನು ನೆನೆ ಇತ್ಯಾದಿಯಾಗಿ ತಿಳಿಸಿ ಶ್ರೀದಾಸರು ಉಪಕರಿಸಿದ್ದಾರೆ.

ನೆನೆ ಮನವೆ ದಾನವಾರಿಯ
ಹಿತಕಾರಿಯಾಶ್ರಿತ ದೊರೆಯ ॥ ಪ ॥

ಹಿತಕಾರಿಯಾದ, ಆಶ್ರಿತ ದೊರೆಯಾದ, ದೈತ್ಯರಿಗೆ ಶತ್ರುವಾದ ಶ್ರೀಹರಿಯನ್ನು ನೆನೆ ಎಂಬುದಾಗಿ ಶ್ರೀದಾಸರು ಮನಸ್ಸಿಗೆ ತಿಳಿಸುತ್ತಿದ್ದಾರೆ.

ಮನಸ್ಸು ಯಾವಾಗಲೂ ಶ್ರೀಹರಿಯನ್ನು ನೆನೆಯುತ್ತಿರಬೇಕು. ಅಂದರೆ ಸ್ಮರಣೆ ಮಾಡುತ್ತಿರಬೇಕು. ಇದಕ್ಕೆ ಕಾರಣ ಹೀಗಿದೆ –

ಹರಿಃ ಸ್ಮೃತಿಃ ಸರ್ವ ವಿಪದ್ವಿಮೋಕ್ಷಿಣೀ ॥[೧]

ಶ್ರೀಹರಿಸ್ಮರಣೆ ನಮ್ಮನ್ನು ಎಲ್ಲ ವಿಪತ್ತುಗಳಿಂದ ಪಾರು ಮಾಡುತ್ತದೆ.

ಇನ್ನು ಮನಸ್ಸು ಚಂಚಲವಾದದ್ದು. ''ಚಂಚಲಂ ಹಿ ಮನಃ ಕೃಷ್ಣ'' ಉಕ್ತಿಯು ಇದನ್ನೇ ತಿಳಿಸಿಕೊಡುತ್ತದೆ. ಈ ಚಂಚಲವಾದ ಮನಸ್ಸನ್ನು ನಿಗ್ರಹಿಸಿ ಶ್ರೀಹರಿಯನ್ನು ನೆನೆಯುವಂತೆ ಮಾಡಬೇಕಾದುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

೧. ಶ್ರೀಮದ್ ಭಾಗವತ (೮-೧೦-೫೫)

ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ ॥

ಉಕ್ತಿಯಂತೆ ಮನಸ್ಸು ಸಂಸಾರದ ಬಂಧನಕ್ಕೂ ಮತ್ತು ಸಂಸಾರದ ವಿಮೋಚನೆಗೂ ಕಾರಣವಾಗಿದೆ. ಮನಸ್ಸು ವಿಷಯ ಪದಾರ್ಥಗಳನ್ನು ನೆನೆಯುತ್ತ ಇರುವುದಾದರೆ ಅದು ಸಂಸಾರದ ಬಂಧವನ್ನು ತಂದುಕೊಡುತ್ತದೆ. ಅದೇ ಮನಸ್ಸು ಭಗವಂತನನ್ನು ನೆನೆದದ್ದಾದರೆ ಸಂಸಾರದ ವಿಮೋಚನೆಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ದಾನವಾರಿಯ ನೆನೆಮನವೆ ಎಂದಿದ್ದಾರೆ.

ದಾನವಾರಿ ಎಂದರೆ ದೈತ್ಯಾರಿ, ದಾನವಾಂತಕ ಎಂದು ಅರ್ಥವಾಗುತ್ತದೆ. ಶ್ರೀ ಜಗನ್ನಾಥದಾಸರು ''ಪ್ರಣವ ಪ್ರತಿಪಾದ್ಯ'' ಪದ್ಯದಲ್ಲಿ

ದಾನವಾಂತಕನೆ ವಿಜ್ಞಾಪನೆಯ ಕೈಕೊಂಡು
ದೀನರುದ್ಧರಿಸುವುದು ದಯದಿಂದ ನಿರುತ ॥

ಶ್ರೀಹರಿಯನ್ನು ''ದಾನವಾಂತಕ''ನೆಂಬುದಾಗಿ ಸಂಬೋಧಿಸಿರುತ್ತಾರೆ.

ಇನ್ನು ಆ ದೈತ್ಯಾರಿಯು ಶ್ರೀಹರಿಯೇ ಎಂಬುದಾಗಿ ಕೋಶವೊಂದು ತಿಳಿಸುತ್ತದೆ.

ದೈತ್ಯಾರಿಃ ಪುಂಡರೀಕಾಕ್ಷೋ ಗೋವಿಂದೋ ಗರುಡಧ್ವಜಃ ॥[೨]

ಆ ಶ್ರೀಹರಿಗೆ ದೈತ್ಯಾರಿ, ಪುಂಡರೀಕ್ಷಾಕ್ಷ, ಗೋವಿಂದ, ಗರುಡಧ್ವಜ ಮೊದಲಾದ ಅನೇಕ ನಾಮಾಂತರಗಳುಂಟು. ಶ್ರೀಹರಿಕಥಾಮೃತಸಾರದಲ್ಲಿ ಶ್ರೀಜಗನ್ನಾಥದಾಸರು **ಬಲ್ಲ ಬಹುಗುಣಭರಿತ ದಾನವ-ದಲ್ಲಣ ಜಗನ್ನಾಥವಿತ್ಠಲ** ಎಂಬುದಾಗಿ ತಿಳಿಸಿರುವುದು ಗಮನಾರ್ಹವಾಗಿದೆ.

ಶ್ರೀಹರಿಯು ಹಿತಕಾರಿ, ಆಶ್ರಿತದೊರೆಯು ಆಗಿದ್ದಾನೆ.

ಶ್ರೀಹರಿಯು ಎಲ್ಲ ಜೀವರಾಶಿಗಳಿಗೂ ''ಹಿತಕಾರಿ'' ಅಂದರೆ ಅನಿಮಿತ್ತೋಪ ಕಾರಿಯಾಗಿದ್ದಾನೆ.

ಶ್ರೀಹರಿಯು ''ಹಿತಕಾರಿ'' ಎಂಬುದನ್ನು ಶ್ರೀ ಟೀಕಾರಾಯರು ತಮ್ಮ ಶ್ರೀವಿಷ್ಣುತತ್ವ ವಿನಿರ್ಣಯ ಗ್ರಂಥದ ಟೀಕೆಯಲ್ಲಿ ವಿವರಿಸಿದ್ದಾರೆ.

೨. ಅಮರಕೋಶ-ಸ್ವರ್ಗವರ್ಗ

ಸ್ವಾಪಂ ಪ್ರಾಪಯತಿ ಶ್ರಮಾಪಹೃತಯೇ ಕಲ್ಪಾವಸಾನೇ ಚ ಯಃ ॥

ಜೀವರು ಸಂಸಾರದಲ್ಲಿ ಅನೇಕ ಯೋನಿಗಳಲ್ಲಿ ಹುಟ್ಟಿ ಬಳಲಿ ನೊಂದು, ಬೆಂದು, ಶ್ರಮ ಹೊಂದಿರುತ್ತಾರೆ. ಈ ಜೀವರ ಭೌತಿಕ ದೇಹಗಳನ್ನು ತೆಗೆದು ಸೂಕ್ಷ್ಮದೇಹಗಳನ್ನು ಕೊಟ್ಟು, ತನ್ನ ಉದರದಲ್ಲಿಟ್ಟುಕೊಂಡು ಅವರಿಗೆ ನಿದ್ರೆ ಬರುವಂತೆ ಮಾಡಿ ಅವರ ಶ್ರಮವನ್ನು ಪರಿಹರಿಸಿ, ಜೀವರಿಗೆ ಮತ್ತೆ ಸೃಷ್ಟಿಕಾಲದಲ್ಲಿ ಒಳ್ಳೆಯ ಸಾಧನ ಶರೀರಗಳನ್ನು ಕೊಟ್ಟು ರಕ್ಷಿಸುತ್ತಾನೆ. ಇದರಿಂದ ಅವನು ''ಹಿತಕಾರಿ'' ಎನಿಸಿದ್ದಾನೆ.

ಶ್ರೀ ವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಭಗವಂತನನ್ನು ಸ್ತೋತ್ರ ಮಾಡಿರುವ ಪರಿ ಹೀಗಿದೆ –

ಸುಘೋಷಃ ಸುಖದಃ ಸುಹೃತ್ ॥[೩]

ಹಾಗೂ ನಿವಾಸಃ ಶರಣಂ ಸುಹೃತ್ ॥[೪]

ಎಂಬುದಾಗಿ ಶ್ರೀಕೃಷ್ಣನೇ ತಿಳಿಸಿದ್ದಾನೆ.

ಆ ಭಗವಂತನು ''ಆಶ್ರಿತದೊರೆ'' ಆಗಿದ್ದಾನೆ. ಅಂದರೆ ತನ್ನನ್ನು ಆಶ್ರಯಿಸಿ ಬಂದ ಭಕ್ತರಿಗೆ ರಕ್ಷಕನಾಗಿದ್ದಾನೆ.

ಆದಿತ್ಯ ಪುರಾಣದಲ್ಲಿ ಭಗವಂತನನ್ನು ಕುರಿತ ಪ್ರಾರ್ಥನೆ ಹೀಗಿದೆ –

ಶರಣಾಗತಸಂತ್ರಾಣಃ ಶ್ರೀನಿವಾಸಃ ಸತಾಂಗತಿಃ ।
ಪಾಲಕೋ ಹಿ ಬಹೂನಾಂ ಚ ಭಕ್ತಾನಾಂ ಭಕ್ತವತ್ಸಲಃ ॥[೫]

ಶ್ರೀನಿವಾಸನು ಶರಣು ಬಂದವರನ್ನು ಚೆನ್ನಾಗಿ ಸಲಹುತ್ತಾನೆ. ಸಜ್ಜನರಿಗೆ ಆಶ್ರಯದಾತನಾಗಿದ್ದಾನೆ. ಭಕ್ತವತ್ಸಲನಾದ ಶ್ರೀನಿವಾಸನು ಬಹು ಭಕ್ತರ ರಕ್ಷಕನಾಗಿದ್ದಾನೆ.

ಶ್ರೀವಿಷ್ಣುಸಹಸ್ರನಾಮಸ್ತೋತ್ರದಲ್ಲಿ ಭಗವಂತನನ್ನು ಹೀಗೆ ವರ್ಣಿಸಲಾಗಿದೆ.

ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ ॥[೬]

ಆ ಶ್ರೀಹರಿಯು ಮಹತ್ತಾದ ಇಚ್ಛೆ ಉಳ್ಳವನು ಮತ್ತು ಸರ್ವಗತನಾಗಿರುವನು. ಲಕ್ಷ್ಮೀದೇವಿಯರಿಗೆ, ಕಾಮನಿಗೆ ಸ್ವಾಮಿಯಾಗಿರುವವನು. ಯೋಗ್ಯರಿಗೆ ಸಂಪತ್ತನ್ನು ಕೊಡುವವನು. ಭಕ್ತರಿಗೆ, ಜ್ಞಾನಿಗಳಿಗೆ ಆಶ್ರಯನಾಗಿದ್ದಾನೆ.

೩. ಅನುಶಾಸನ ಪರ್ವ-ಶ್ರೀಮನ್ ಮಹಾಭಾರತ ೪. ಶ್ರೀ ಭಗವದ್ಗೀತಾ (೯-೧೮)
೫. ವೆಂಕಟೇಶ ಮಹಾತ್ಮೆ (೧-೩೦,೩೧)
೬. ಶ್ರೀಮನ್ ಮಹಾಭಾರತ ಅನುಶಾಸನ ಪರ್ವ (ವಿ.ಸ. ೨೦ನೆ ಶ್ಲೋಕ)

ಹೀನ ಪಾಪಾಖ್ಯ ವಿಪಿನದಾವಕೃಶಾನು
ಸನಾತನ ನಾರಾಯಣ ಶ್ರೀನಾಥನ ॥ ೧ ॥

ಶ್ರೀಹರಿಯು ಕೆಟ್ಟ ಪಾಪಗಳೆಂಬ ಅರಣ್ಯಕ್ಕೆ ಅಗ್ನಿಯಂತೆ ಇದ್ದಾನೆ. ಅಂದರೆ ಪಾಪಗಳನ್ನು ಸುಟ್ಟು ಹಾಕುತ್ತಾನೆ. ಅವನು ಸನಾತನ, ನಾರಾಯಣ, ಶ್ರೀನಾಥ ಮುಂತಾದ ನಾಮಗಳಿಂದ ಪ್ರಸಿದ್ಧನಾಗಿದ್ದಾನೆ.

ಶ್ರೀಹರಿಯ ಸ್ಮರಣೆ, ಸ್ಮರಿಸುವವರ ಎಲ್ಲ ಪಾಪಗಳನ್ನು ಸುಟ್ಟು ಹಾಕುತ್ತದೆ. ಅಂತೆಯೇ ಶ್ರೀದಾಸರು – ನೆನೆ ಮನವೆ ದಾನವಾರಿಯ ಎಂದಿದ್ದಾರೆ.

ಶ್ರೀಮದಾನಂದತೀರ್ಥ ಭಗವತ್ಪಾದರು ಮೇಲಿನ ವಿಷಯವನ್ನು ತಿಳಿಸುವ ಪರಿ ಹೀಗಿದೆ.

ಗೋವಿಂದ ಸ್ಮರಣಂ ಪುಂಸಾಂ ಪಾಪರಾಶಿಮಹಾಚಲಂ ।
ಅಸಂಶಯಂ ದಹತ್ಯಾಶು ತೂಲರಾಶಿಮಿವಾನಲಃ ॥[೭]

ಬೆಂಕಿಯ ಕಣವು ಹತ್ತಿಯ ಮಹಾರಾಶಿಯನ್ನು ಕ್ಷಣದಲ್ಲಿ ಸುಡುವಂತೆ ಭಕ್ತನು ಮಾಡುವ ಹರಿನಾಮಸ್ಮರಣೆಯು ಬೆಟ್ಟದಂತಹ ಪಾಪರಾಶಿಯನ್ನು ಕೂಡಲೇ ಸುಟ್ಟು ಹಾಕುತ್ತದೆ. ಸಂಶಯವಿಲ್ಲ.

ಇದನ್ನೇ ಬೇರೊಂದು ರೀತಿಯಲ್ಲಿ ಶ್ರೀದಾಸರು ಶ್ರೀಹರಿಯ ಸ್ಮರಣೆ –

''ಹೀನ ಪಾಪಾಖ್ಯ ವಿಪಿನದಾವಕೃಶಾನು'' – ಪಾಪಗಳೆಂಬ ಅರಣ್ಯವನ್ನು ಕಾಡ್ಗಿಚ್ಚಿನಂತೆ ನಾಶಮಾಡುತ್ತದೆ ಎಂಬುದಾಗಿ ತಿಳಿಸಿದ್ದಾರೆ.

ಆ ಶ್ರೀಹರಿಗೆ ಸನಾತನ, ನಾರಾಯಣ, ಶ್ರೀನಾಥ ಮೊದಲಾದ ಪ್ರಸಿದ್ಧ ನಾಮಗಳಿವೆ.

ಶ್ರೀಹಯಗ್ರೀವ ಅಷ್ಟೋತ್ತರಶತನಾಮಸ್ತೋತ್ರದಲ್ಲಿ ಭಗವಂತನು ''ಸನಾತನ'' ಎಂಬುದಾಗಿ ತಿಳಿಸಿದ್ದಾರೆ.

ಆದಿತ್ಯಃ ಸರ್ವವಾಗೀಶಃ ಸರ್ವಾಧಾರಃ ಸನಾತನಃ ॥[೮]

ಶ್ರೀಕೃಷ್ಣ ಅಷ್ಟೋತ್ತರಶತನಾಮಸ್ತೋತ್ರದಲ್ಲಿ ಹೀಗೆ ವರ್ಣಿಸಿದ್ದಾರೆ.

೭. ಶ್ರೀ ಕೃಷ್ಣಾಮೃತ ಮಹಾರ್ಣವ – ೪೬ನೆ ಶ್ಲೋಕ
೮. ಪಂಚರಾತ್ರ – ಕಪಿಂಜಲ ಸಂಹಿತೆ

ಶ್ರೀಕೃಷ್ಣಃ ಕಮಲಾನಾಥೋ ವಾಸುದೇವಃ ಸನಾತನಃ ॥[೯]

ಶ್ರೀವೆಂಕಟೇಶಮಹಾತ್ಮೆ ಪುರಾಣದಲ್ಲಿ ಭಗವಂತನು 'ಸನಾತನ'ನೆಂದು ತಿಳಿಸಿದ್ದಾರೆ.

ಸುಲಭಂ ದುರ್ಲಭಂ ವಂದೇ ಭಗವಂತಂ ಸನಾತನಮ್ ॥[೧೦]

ಸನಾತನ ಎಂದರೆ ನಿತ್ಯ , ಶಾಶ್ವತನಾಗಿರುವವನು ಎಂದರ್ಥವು.

ಇನ್ನು ಆ ಭಗವಂತನನ್ನು ''ನಾರಾಯಣ''ನೆಂದು ಇಲ್ಲಿ ಸಂಬೋಧಿಸಿದ್ದಾರೆ.

ಶ್ರೀನರಸಿಂಹ ಸಹಸ್ರನಾಮಸ್ತೋತ್ರದಲ್ಲಿ ಭಗವಂತನನ್ನು ''ನಾರಾಯಣ'' ಶಬ್ದದಿಂದ ಬಣ್ಣಿಸಿದ್ದಾರೆ –

ನಮೋಽಸ್ತು ನಾರಾಯಣ ನಾರಸಿಂಹ ನಮೋಽಸ್ತು ನಾರಾಯಣ ವೀರಸಿಂಹ ।
ನಮೋಽಸ್ತು ನಾರಾಯಣ ಕ್ರೂರಸಿಂಹ ನಮೋಽಸ್ತು ನಾರಾಯಣ ದಿವ್ಯಸಿಂಹ ।
ನಮೋಽಸ್ತು ನಾರಾಯಣ ವ್ಯಾಘ್ರಸಿಂಹ ನಮೋಽಸ್ತು ನಾರಾಯಣ ಪುಚ್ಛಸಿಂಹ ॥[೧೧]

ಶ್ರೀ **ವಿಷ್ಣುಸಹಸ್ರನಾಮ ಸ್ತೋತ್ರದಲ್ಲಿ –**

ಜಹ್ನುರ್ನಾರಾಯಣೋ ನರಃ ॥[೧೨] ಎಂಬುದಾಗಿ ತಿಳಿಸಿದ್ದಾರೆ.

ಶ್ರೀಕೃಷ್ಣ ಅಷ್ಟೋತ್ತರಶತನಾಮ ಸ್ತೋತ್ರದಲ್ಲಿ –

ನಾರಾಯಣಃ ಪರಂಬ್ರಹ್ಮ ಪನ್ನಗಾಶನವಾಹನಃ ॥[೧೩]

ಆ ನಾರಾಯಣನು ಪರಂಬ್ರಹ್ಮನು ಹಾಗೂ ಗರುಡವಾಹನನೆಂಬುದಾಗಿ ತಿಳಿಸಿರುವರು.

ಆ ಶ್ರೀಹರಿಗೆ ''ನಾರಾಯಣ''ನೆಂದು ಹೆಸರು ಬರಲು ಕಾರಣ ಹೀಗಿದೆ –

ಆಪೋ ನಾರಾ ಇತಿ ಪ್ರೋಕ್ತಃ ಆಪೋ ವೈ ನರಸೂನವಃ ।
ಅಯನಂ ತಸ್ಯ ತಾಃ ಪೂರ್ವಂ ತೇನ ನಾರಾಯಣ ಸ್ಮೃತಃ ॥[೧೪]

೯. ಶ್ರೀ ಬ್ರಹ್ಮಾಂಡಪುರಾಣ - ಬ್ರಹ್ಮನಾರದ ಸಂವಾದ
೧೦. ಆದಿತ್ಯಪುರಾಣ ವೆಂ. ಮ. (೪-೩೨)
೧೧. ಶ್ರೀ ನರಸಿಂಹ ಪುರಾಣ
೧೨. ಶ್ರೀಮನ್ ಮಹಾಭಾರತ - ಅನುಶಾಸನಪರ್ವ
೧೩. ಬ್ರಹ್ಮಾಂಡಪುರಾಣ
೧೪. ಶ್ರೀಮದ್ ಬ್ರಹ್ಮಸೂತ್ರಭಾಷ್ಯ

ನಾರಾ ಎಂದರೆ ನೀರು. ಅದಕ್ಕೆ ಆಶ್ರಯನಾಗಿ ಭಗವಂತನು ನೀರಿನಲ್ಲಿ ಮಲಗಿದ್ದಾನೆ. ಕಾರಣ ಸಮುದ್ರ ಶಾಯಿಯಾದ ಭಗವಂತನಿಗೆ ''ನಾರಾಯಣ'' ಎಂದು ಹೆಸರು ಬಂದಿದೆ.

1. **ನಾರಾಃ ಮುಕ್ತಾಃ ತೇಷಾಂ ಅಯನಃ ನಾರಾಯಣಃ ।**
ಮುಕ್ತರಿಗೆ ಆಶ್ರಯನಾಗಿರುವುದರಿಂದ ಭಗವಂತನಿಗೆ ನಾರಾಯಣನೆಂದು ಹೆಸರು.

2. **ಅರಾಣಾಂ ದೋಷಾಣಾಂ ವಿರುದ್ಧತ್ವಾತ್ ನಾರಾಃ ಗುಣಾಃ**
ತೇಷಾಂ ಅಯನತ್ವಾತ್ ನಾರಾಯಣಃ ।
ಗುಣಪೂರ್ಣನಾದುದರಿಂದ ಭಗವಂತನಿಗೆ ನಾರಾಯಣನೆಂದು ಹೆಸರು.

3. **ನಾರಂ ಜ್ಞಾನಂ ತೇನ ನಾರೇಣ ಈಯತ ಇತಿ ನಾರಾಯಣಃ ।**
ಜ್ಞಾನ ವಿಷಯನಾದ್ದರಿಂದ ಭಗವಂತನಿಗೆ ನಾರಾಯಣನೆಂದು ಹೆಸರು.

4. **ಅರಾಃ ದೋಷಾಃ, ಅರಾಣಾಂ ಅಯನಂ ನ ಭವತಿ ಇತಿ ನಾರಾಯಣಃ ।**
ದೋಷದೂರನಾದ್ದರಿಂದ ಭಗವಂತನಿಗೆ ನಾರಾಯಣನೆಂದು ಹೆಸರು.

5. **ನಾರಾ ಲಕ್ಷ್ಮೀ ತಸ್ಯಾಃ ಅಯನಂ ಆಶ್ರಯಃ ನಾರಾಯಣಃ ।**
ಲಕ್ಷ್ಮೀದೇವಿಯರಿಗೆ ಪತಿಯಾದ್ದರಿಂದ ನಾರಾಯಣ.

6. **ನರಾಣಾಂ ಅಧಿಪತಿಃ ಮುಖ್ಯವಾಯುಃ ತದಾಶ್ರಯತ್ವಾತ್ ನಾರಾಯಣಃ ।**
ವಾಯುದೇವರಿಗೆ ಸ್ವಾಮಿಯಾದ್ದರಿಂದ ನಾರಾಯಣ.

ಆ ಶ್ರೀಹರಿಯು ಶ್ರೀನಾಥ ಅಂದರೆ ಲಕ್ಷ್ಮೀಪತಿಯಾಗಿದ್ದಾನೆ.

ಲಕ್ಷ್ಮೀನಾಥಂ ಕಮಲನಯನಂ ಹಾರಕೇಯೂರ ಭೂಷಂ
ಅಂಡವ್ಯಾಪ್ತಂ ಬಹುಗುಣಭರಂ ದೋಷದೂರಂ ದಯಾಬ್ಧಿಮ್ ॥[೧೫]

ಆ ಶ್ರೀಹರಿಯು ಲಕ್ಷ್ಮೀದೇವಿಯರಿಗೆ ಸ್ವಾಮಿಯು, ಕಮಲದಂತೆ ಕಣ್ಣುಳ್ಳವನು, ಹಾರ, ಬಾಹುಭೂಷಣವುಳ್ಳವನು, ಬ್ರಹ್ಮಾಂಡದಲ್ಲಿ ವ್ಯಾಪ್ತನು, ಬಹುಗುಣ ಭರಿತನು, ದೋಷದೂರನು ದಯಾಸಮುದ್ರನು ಆಗಿದ್ದಾನೆ.

ಶ್ರೀ ದೇವಶರ್ಮಬ್ರಾಹ್ಮಣನು ಶ್ರೀನಿವಾಸನನ್ನು ಕುರಿತು ಸ್ತೋತ್ರ ಮಾಡುತ್ತಾನೆ.

೧೫. ಆದಿತ್ಯಪುರಾಣ ವೆಂ.ಮ. (೩-೪೪)

ಅನಂತವೇದ ಸಂವೇದ್ಯ ಲಕ್ಷ್ಮೀನಾಥಾಂಡಕಾರಣ ।
ಜ್ಞಾನಾನಂದೈಶ್ವರ್ಯಪೂರ್ಣ ನಮಸ್ತೇ ಕರುಣಾಕರ ॥

ವೆಂ.ಮ. (೩-೧)

ಘೋರ ನಿರಯ ವಿದೂರ ಕರುಣಾಪಾರ
ವಾರಿಜಾಸನ ವಂದ್ಯ ಸುರಶ್ರೇಷ್ಠನ ॥ ೨ ॥

ಆ ದಾನವಾರಿಯಾದ ಶ್ರೀಹರಿಯು ಘೋರವಾದ ನರಕ ವಿದೂರನಾಗಿದ್ದಾನೆ. ಕರುಣಾಸಮುದ್ರನಾಗಿದ್ದಾನೆ. ಬ್ರಹ್ಮಾದಿಗಳಿಂದ ನಮಸ್ಕೃತನಾದ ದೇವತಾ ಶ್ರೇಷ್ಠನಾಗಿದ್ದಾನೆ. ಇಂಥ ಶ್ರೀಹರಿಯನ್ನು ನೆನೆ ಎಂಬುದಾಗಿ ಮನಸ್ಸಿಗೆ ತಿಳಿ ಹೇಳುತ್ತಿದ್ದಾರೆ ಶ್ರೀದಾಸರು.

ಘೋರನಿರಯವಿದೂರ -

ಆ ಭಗವಂತನು ಘೋರ ನರಕಾದಿ ವಿದೂರನಾಗಿದ್ದಾನೆ -

ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನ ॥

ಉಕ್ತಿಯಂತೆ ದೇವತೆಗಳಿಗೆ ನರಕವಿಲ್ಲ, ತಮಸ್ಸಂತೂ ಸರ್ವಥಾ ಇಲ್ಲವೇ ಇಲ್ಲ. ದೇವತೆಗಳಿಗೆ ನರಕವಿಲ್ಲವೆಂದಮೇಲೆ ದೇವಶ್ರೇಷ್ಠನಾದ, ಸರ್ವೋತ್ತಮನಾದ ಶ್ರೀಹರಿಗೆ ನರಕವಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ ಇದು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ.

ಭಗವಂತ ಕರುಣಾಪಾರನಾಗಿದ್ದಾನೆ. ಅಂದರೆ ಕರುಣಾಸಮುದ್ರನಾಗಿದ್ದಾನೆ.

ಪ್ರಣತಾಶ್ರಯಣಂ ಕೃಷ್ಣಂ ಶರಣ್ಯಂ ಕರುಣಾರ್ಣವಮ್ ॥[೧೬]

ಉಕ್ತಿಯು ಶರಣ್ಯನಾದ, ಕರುಣಾಸಮುದ್ರನಾದ, ಪ್ರಣತರಿಗೆ ಆಶ್ರಯನಾದ, ಶ್ರೀಕೃಷ್ಣನನ್ನು ಶರಣು ಹೊಂದಬೇಕು ಎಂಬುದಾಗಿ ತಿಳಿಸುತ್ತದೆ. ಇದರಿಂದ ಆ ಭಗವಂತ ಕರುಣಾಸಮುದ್ರನೆಂದು ತಿಳಿದುಬರುತ್ತದೆ.

ಅವನ ಶ್ರೀಪತಿರಪ್ರತಿರಧಿಕೇಶಾದಿಭವಾದೇ ।
ಕರುಣಾಪೂರ್ಣ ವರಪ್ರದಚರಿತಂ ಜ್ಞಾಪಯ ಮೇ ತೇ ॥[೧೭]

ಇಲ್ಲಿ ಆ ಭಗವಂತನನ್ನು ''ಕರುಣಾಪೂರ್ಣ''ನೆಂಬುದಾಗಿ ಶ್ರೀಮದಾನಂದ ತೀರ್ಥರು ಸ್ತೋತ್ರ ಮಾಡಿರುವುದು ಗಮನಾರ್ಹವಾಗಿದೆ.

ವಾರಿಜಾಸನವಂದ್ಯ ಸುರಶ್ರೇಷ್ಠನ ।

೧೬. ಶ್ರೀಮದ್ ಭಾಗವತ (೪-೮-೪೬)
೧೭. ಶ್ರೀ ದ್ವಾದಶಸ್ತೋತ್ರ (೧೦-೧)

ಆ ಶ್ರೀಹರಿಯು ಬ್ರಹ್ಮದೇವರಿಂದ ವಂದ್ಯನಾಗಿದ್ದಾನೆ ಮತ್ತು ದೇವತೆಗಳಲ್ಲೆಲ್ಲಾ ಶ್ರೇಷ್ಠನಾಗಿದ್ದಾನೆ.

ಬ್ರಹ್ಮರುದ್ರಾದಿವಂದ್ಯಂ ತ್ವಾಂ ಭಜೇ ವೆಂಕಟನಾಯಕಂ ॥[೧೮]

ವೆಂಕಟಪರ್ವತಕ್ಕೆ ಸ್ವಾಮಿಯಾದ, ಬ್ರಹ್ಮರುದ್ರಾದಿ ದೇವತೆಗಳಿಂದ ವಂದ್ಯನಾದ ಶ್ರೀಹರಿಯೇ ನಿನ್ನನ್ನು ನಾನು ಸೇವಿಸುತ್ತೇನೆ.

ಶ್ರೀಮದಾನಂದತೀರ್ಥ ಭಗವತ್ಪಾದರು ಭಗವಂತನನ್ನು ಹೀಗೆ ಸ್ತೋತ್ರ ಮಾಡಿದ್ದಾರೆ.

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭವಂದಿತಮ್ ॥[೧೯]

ಬ್ರಹ್ಮ, ರುದ್ರ, ಇಂದ್ರ ಇವರೇ ಮೊದಲಾದ ದೇವತೆಗಳಿಂದ ವಂದ್ಯನಾದ ಆನಂದರೂಪೀ ಭಗವಂತನನ್ನು ನಮಸ್ಕರಿಸುತ್ತೇನೆ.

ಆ ಭಗವಂತನು ''ಸುರಶ್ರೇಷ್ಠ'' ಅಂದರೆ ದೇವತೆಗಳಲ್ಲೆಲ್ಲಾ ಶ್ರೇಷ್ಠನಾಗಿದ್ದಾನೆ.

ಶ್ರೀವಿಷ್ಣುಸಹಸ್ರನಾಮ ಸ್ತೋತ್ರದಲ್ಲಿ -

ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥[೨೦]

ಇಲ್ಲಿ ಆ ಭಗವಂತನನ್ನು ''ಪುರುಷೋತ್ತಮ'' ಎಂಬುದಾಗಿ ಕರೆದಿದ್ದಾರೆ. ಈ ಜಗತ್ತಿನಲ್ಲಿ ಪುರುಷರೆನಿಸಿದ ದೇವತೆಗಳಲ್ಲಿ ಉತ್ತಮ, ಶ್ರೇಷ್ಠನಾದವನು ಶ್ರೀಹರಿ ಎನಿಸಿದ್ದಾನೆ.

ಇನ್ನೊಂದೆಡೆಗೆ ''ಈಶ್ವರಃ'' ಎಂಬುದಾಗಿ ಕರೆದಿದ್ದಾರೆ.

ಸಮರ್ಥರಾದ ದೇವತೆಗಳಲ್ಲೆಲ್ಲಾ ಶ್ರೇಷ್ಠನಾದವನು ಶ್ರೀಹರಿ ಎಂದರ್ಥ ವಾಗುತ್ತದೆ.

ಶ್ರೀಕೃಷ್ಣನು ತಾನು ''ಸುರಶ್ರೇಷ್ಠ'' ಎಂಬ ಮಾತನ್ನು ಹೀಗೆ ತಿಳಿಸಿದ್ದಾನೆ.

ಯಸ್ಮಾತ್ ಕ್ಷರಮತೀತೋಽಹಂ ಅಕ್ಷರಾದಪಿ ಚೋತ್ತಮಃ ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥[೨೧]

೧೮. ಶ್ರೀ ವೆಂ. ಮಹಾತ್ಮೆ (೧-೧) ೧೯. ಶ್ರೀ ದ್ವಾದಶಸ್ತೋತ್ರ (೧೧-೧)
೨೦. ಅನುಶಾಸನಪರ್ವ ಶ್ರೀಮನ್ ಮಹಾಭಾರತ ೨೧. ಶ್ರೀ ಭಗವದ್ಗೀತಾ (೧೫-೧೮)

ಈ ಪ್ರಪಂಚದಲ್ಲಿ ಕ್ಷರ ಮತ್ತು ಅಕ್ಷರರೆಂಬ ಇಬ್ಬರು ಪುರುಷರಿದ್ದಾರೆ. ಶರೀರನಾಶವುಳ್ಳ ಬ್ರಹ್ಮಾದಿ ದೇವತೆಗಳು ಕ್ಷರ ಪುರುಷರು, ಅಕ್ಷರ (ನಾಶರಹಿತ) ದೇಹವುಳ್ಳವಳು ಆ ಲಕ್ಷ್ಮೀದೇವಿಯು. ಇವರಿಬ್ಬರಿಗಿಂತ ಉತ್ತಮನು ಶ್ರೇಷ್ಠನು ನಾನೇ ಎಂಬುದಾಗಿ ಶ್ರೀಕೃಷ್ಣನು ಗೀತೆಯಲ್ಲಿ ತಿಳಿಸಿಕೊಟ್ಟಿರುವುದು ಗಮನಾರ್ಹವಾಗಿದೆ.

ತನ್ನವರಿಗೆ ಪ್ರಸನ್ನವೆಂಕಟಕೃಷ್ಣ
ಮಾನ್ಯ ಸದ್ಭಕ್ತರ ಪಾವನ್ನ ನಾಮನ ॥ ೩ ॥

ತನ್ನ ಭಕ್ತರಿಗೆ ಪ್ರಸನ್ನವೆಂಕಟಕೃಷ್ಣನು ಮಾನ್ಯನಾಗಿರುವನು. ಪಾವನನಾದ ನಾಮವುಳ್ಳವನಾಗಿರುವನು. ಇಂಥ ಪಾವನ ನಾಮವನ್ನು ಸದ್ಭಕ್ತರು ಯಾವಾಗಲೂ ನೆನೆಯುತ್ತಲೇ ಇರುತ್ತಾರೆ.

ಪ್ರಸನ್ನವೆಂಕಟಕೃಷ್ಣನೆಂಬ ಶ್ರೀಹರಿಯು ''ಮಾನ್ಯ''ನಾಗಿದ್ದಾನೆ.

ಶ್ರೀವಿಷ್ಣುಸಹಸ್ರನಾಮದಲ್ಲಿ[೨೨] – ಶ್ರೀಹರಿಯನ್ನು ''**ಅಮಾನೀ ಮಾನದೋ ಮಾನ್ಯೋ**'' ಎಂಬುದಾಗಿ ಸ್ತೋತ್ರಮಾಡಿದ್ದಾರೆ.

ಇಲ್ಲಿ ಬಂದಿರುವ ''ಮಾನ್ಯ'' ಶಬ್ದಕ್ಕೆ ಅನೇಕಾರ್ಥಗಳುಂಟು –

೧. ಮತ್ತೊಬ್ಬರಿಂದ ಪ್ರೇರಿಸಿಕೊಳ್ಳಲು ಯೋಗ್ಯನಲ್ಲದವನು.
೨. ಲಕ್ಷ್ಮೀದೇವಿಯು ಯಾರಿಂದ ಪ್ರೇರಿಸಿಕೊಳ್ಳಲು ಯೋಗ್ಯಳಾಗಿರುವಳೋ ಅವನು
೩. ಲಕ್ಷ್ಮೀದೇವಿಯರು ಹಾಗೂ ಎಲ್ಲ ಜೀವರಾಶಿಯಿಂದ ಅನ್ಯನಾಗಿರುವವನು.

ಇನ್ನು ಶ್ರೀಹರಿಯು ''ಪಾವನನಾಮ'' ಅಂದರೆ ಪವಿತ್ರನಾಮವುಳ್ಳವನಾಗಿದ್ದಾನೆ.

ಶ್ರೀವಿಷ್ಣುಸಹಸ್ರನಾಮದ ಪ್ರಸ್ತಾವನೆಯಲ್ಲಿ –

''ಪವಿತ್ರಾಣಾಂ ಪವಿತ್ರಂ'' ಎಂಬುದಾಗಿ ಶ್ರೀಹರಿಯನ್ನು ಕುರಿತು ಸ್ತೋತ್ರ ಮಾಡಿರುವುದು ಗಮನಾರ್ಹವಾಗಿದೆ.

ಆ ಶ್ರೀಹರಿಯ ಪವಿತ್ರನಾಮಗಳು ಸದ್ಭಕ್ತರಿಗೆ ಕಾಮಧೇನು, ಕಲ್ಪವೃಕ್ಷ ಸದೃಶಗಳಾಗಿವೆ. ಭಕ್ತರು ಪವಿತ್ರನಾಮಗಳನ್ನು ಉಚ್ಚರಿಸಿ ಪವಿತ್ರರಾಗುತ್ತಾರೆ ಅಷ್ಟೇ ಅಲ್ಲ ಎಲ್ಲ ಭಯಗಳಿಂದ ಪಾರಾಗಿ, ಶುದ್ಧಾಂತಃಕರಣರಾಗಿ ಸನಾತನನೆನಿಸಿದ ಪರಬ್ರಹ್ಮನನ್ನು ಹೊಂದುತ್ತಾರೆ.

-*-*-*-

೨೨. ಶ್ರೀಮನ್ ಮಹಾಭಾರತ ಅನುಶಾಸನಪರ್ವ

೫. ಬಿಡೆ ನಿನ್ನ ಚರಣವ ಉಡುಪಿಕೃಷ್ಣನೆ

ಬಿಡೆ ನಿನ್ನ ಚರಣವ ಉಡುಪಿಕೃಷ್ಣನೆ ಭವ
ಕಡಲ ದಾಟಿಸು ಕೈಯವಿಡಿದು ಪಾಲಿಸು ತಂದೆ ॥ ಪ ॥

ಧ್ರುವ ಶುಕ ಪ್ರಹ್ಲಾದ ಬಲಿ ಅಜಾಮಿಳನು
ದ್ಧವ ಅಂಬರೀಷ ವಿದುರ ಮುಖ್ಯರು
ತವ ಪಾದವಿಡಿಯಲವರಿಗಿಂಬು ನೀಡ್ದ
ಹವಣವ ಬಲ್ಲೆ ನಾನೇನ ಮಾಡಿದರೇನ ॥ ೧ ॥

ಪಾಂಚಾಲಿ ಮಾನವ ಕಾಯ್ದೆ ಪೆಠರಿಗಂದು
ಅಚ್ಯುತ ನಿನ್ನಂಗುಟವು ಸೋಂಕಲು
ನಿಚ್ಚಳ ಸತಿಯಾದಳೆಂಬ ಸಾಹಸಕೇಳಿ
ಮುಚ್ಚು ಮರೆಯ ಮಾಡಿದರೆ ನಿಮ್ಮ ಮರೆಯೆನು ॥ ೨ ॥

ನಿನ್ನ ಪಾದಾಂಬುಜ ಧ್ಯಾನ ಮರೆಯದಂತೆ
ಎನ್ನ ಮನದ ವಕ್ರಗತಿಯ ತಿರ್ದು
ಮನ್ನಿಸು ತಂದೆ ಪ್ರಸನ್ನವೆಂಕಟ ಕೃಷ್ಣ
ಪೂರ್ಣಪ್ರಜ್ಞಾರ್ಚಿತ ಚರಣಕಮಲನೆ ॥ ೩ ॥

ಪ್ರಸ್ತುತ ಪದ್ಯದಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಉಡುಪಿಯ ಕೃಷ್ಣನೆ! ನಿನ್ನ ಪಾದವನ್ನು ಬಿಡಲಾರೆ. ನೀನು ನನ್ನ ಕೈಹಿಡಿದು ಪಾಲಿಸು. ಧ್ರುವ, ಶುಕ, ಪ್ರಹ್ಲಾದ ಮೊದಲಾದ ಭಗವದ್ಭಕ್ತರು ನಿನ್ನ ಪಾದವನ್ನು ಹಿಡಿಯಲು ಅವರಿಗೆ ಆಶ್ರಯವನ್ನು ನೀನು ನೀಡಿದ್ದು ನಾ ಬಲ್ಲೆ. ಪಾಂಚಾಲಿಯ ಮಾನವ ಕಾಯ್ದೆ, ಕಲ್ಲಾದ ಅಹಲ್ಯೆಯನ್ನು ಉದ್ಧರಿಸಿದೆ. ನಿನ್ನ ಪಾದಕಮಲದ ಧ್ಯಾನವನ್ನು ಮರೆಯದಂತೆ ನನ್ನ ಮನಸ್ಸಿನ ವಕ್ರಗತಿಯನ್ನು ತಿದ್ದಿ ನನ್ನನ್ನು ಕ್ಷಮಿಸು. ಪ್ರಸನ್ನವೆಂಕಟಕೃಷ್ಣನೆ ನೀನು ಪೂರ್ಣಪ್ರಜ್ಞರಿಂದ ಪೂಜಿತ ಚರಣಕಮಲವುಳ್ಳವನಾಗಿದ್ದೀ.

ಬಿಡೆ ನಿನ್ನ ಚರಣವ ಉಡುಪಿಕೃಷ್ಣನೆ ಭವ
ಕಡಲದಾಟಿಸು ಕೈಯವಿಡಿದು ಪಾಲಿಸು ತಂದೆ ॥ ಪ ॥

ಉಡುಪಿಯ ಕೃಷ್ಣನೇ! ನಿನ್ನ ಪಾದಕಮಲವನ್ನು ಬಿಡಲಾರೆ. ನೀನು ನನ್ನ ಕೈಹಿಡಿದು ಈ ಸಂಸಾರ ಸಾಗರವನ್ನು ದಾಟಿಸು. ಅಂದರೆ ಸಂಸಾರ ಸಾಗರದಿಂದ ಉದ್ಧರಿಸು. ನೀನು ತಂದೆಯಾಗಿ ನನ್ನನ್ನು ರಕ್ಷಿಸು.

ಉದ್ಧವನು ಶ್ರೀಕೃಷ್ಣನನ್ನು ಕುರಿತು ಹೇಳಿದ ಮಾತನ್ನು ಇಲ್ಲಿ ಸ್ಮರಿಸಬೇಕು.

ನಾಹಂ ತವಾಂಘ್ರಿಯುಗಲಂ ಕ್ಷಣಾರ್ಧಮಪಿಕೇಶವ
ತ್ಯಕ್ತುಂ ಸಮುತ್ಸಹೇ ನಾಥ ॥[೧]

ಹೇ ಶ್ರೀಕೃಷ್ಣ! ನಾನು ನಿನ್ನ ಪಾದಕಮಲಗಳನ್ನು ಅರ್ಧಕ್ಷಣವಾದರೂ ಬಿಟ್ಟಿರಲಾರೆ. ನಿನ್ನ ಜೊತೆಯಲ್ಲೇ ಇರುವ ಆಸೆ ನನಗೆ ಸ್ವಾಮೀ.

ಶ್ರೀಕೃಷ್ಣ! ನೀನು ಈ ಸಂಸಾರ ಸಾಗರದಿಂದ ನನ್ನನ್ನು ಉದ್ಧರಿಸು. ಈ ಕೆಳಗಿನ ಶ್ಲೋಕವನ್ನು ಇಲ್ಲಿ ಅವಲೋಕಿಸಬಹುದು. ಶ್ರೀಕೃಷ್ಣ ಹೇಳುತ್ತಾನೆ.

ತೇಷಾಮಹಂ ಸಮುದ್ಧರ್ತಾ ಮೃತ್ಯು ಸಂಸಾರಸಾಗರಾತ್ ॥[೨]

ನಾನೇ ಆ ಎಲ್ಲ ಭಕ್ತರನ್ನು ಸಂಸಾರ ಸಾಗರದಿಂದ ಪಾರು ಮಾಡುತ್ತೇನೆ ನಿಶ್ಚಿತ.

ಶ್ರೀಕೃಷ್ಣನಿಗೆ ತಂದೆಯಾಗಿ ನೀನು ಕೈಹಿಡಿದು ರಕ್ಷಿಸು ಎನ್ನುತ್ತಿದ್ದಾರೆ ಶ್ರೀದಾಸರು.

ಶ್ರೀಕೃಷ್ಣನು ಎಲ್ಲರಿಗೂ ತಂದೆಯಾಗಿದ್ದಾನೆ. ಶ್ರೀಕೃಷ್ಣನೇ ಹೇಳಿದ ಮಾತನ್ನು ಇಲ್ಲಿ ಕಾಣಬಹುದು.

ಪಿತಾಹಮಸ್ಯ ಜಗತೋ ಮಾತಾ ಧಾತಾ ಪಿತಾಮಹಃ ॥[೩]

ಈ ಸಮಸ್ತ ಜಗತ್ತಿಗೆ ನಾನೇ ತಂದೆ, ತಾಯಿ, ಪೋಷಕ, ಪಿತಾಮಹ ಎಲ್ಲವೂ ನಾನೇ ಆಗಿದ್ದೇನೆ.

ಧ್ರುವ ಶುಕ ಪ್ರಹ್ಲಾದ ಬಲಿ ಅಜಾಮಿಳನು
ದ್ಧವ ಅಂಬರೀಷ ವಿದುರ ಮುಖ್ಯರು
ತವ ಪಾದವಿಡಿಯಲವರಿಗಿಂಬು ನೀಡ್ದ
ಹವಣವ ಬಲ್ಲೆ ನಾನೇನ ಮಾಡಿದರೇನ ॥ ೧ ॥

ಧ್ರುವರಾಜ, ಶುಕಾಚಾರ್ಯರು, ಪ್ರಹ್ಲಾದರಾಜ, ಬಲಿರಾಜ, ಅಜಾಮಿಳ, ಉದ್ಧವ, ಅಂಬರೀಷ, ವಿದುರ ಇವರೆಲ್ಲರೂ ನಿನ್ನ ಪಾದವನ್ನು ಹಿಡಿಯಲು ಅವರಿಗೆ ಆಶ್ರಯ ನೀಡಿದ ಉಪಾಯವನ್ನು ನಾನು ಬಲ್ಲೆ. ಆದರೆ ನಾನು ಏನು ಮಾಡಿದರೇನು?

---

೧. ಶ್ರೀಮದ್ ಭಾಗವತ (೧೧-೬-೪೪)
೨. ಶ್ರೀಮದ್ ಭಗವದ್ಗೀತೆ (೧೨-೭)
೩. ಶ್ರೀಮದ್ ಭಗವದ್ಗೀತೆ (೯-೧೭)

ಇಲ್ಲಿ ಎಂಟುಜನ ಭಕ್ತರ ಹೆಸರನ್ನು ಉದ್ಧರಿಸಿದ್ದಾರೆ ಶ್ರೀದಾಸರು. ಇವರೆಲ್ಲರೂ ಆ ಭಗವಂತನ ಪಾದವನ್ನು ಹಿಡಿದುಕೊಂಡು ಸಂಸಾರವನ್ನು ದಾಟಿದವರು. ಅವರ ಚರಿತ್ರೆಯನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ –

1. ಧ್ರುವರಾಜ :- ಶ್ರೀಮದ್ ಭಾಗವತ ಚತುರ್ಥ ಸ್ಕಂಧದಲ್ಲಿ ಧ್ರುವರಾಜರ ಚರಿತ್ರೆ ವರ್ಣಿತವಾಗಿದೆ. ಮಲತಾಯಿಯಾದ ಸುರುಚಿಯಿಂದ ಅವಮಾನಿತರಾದ ಧ್ರುವರಾಜರು ತಾಯಿ ಸುನೀತಿಯ ಉಪದೇಶದಂತೆ ಭಗವಂತನನ್ನು ಪ್ರಸನ್ನೀಕರಿಸಿಕೊಳ್ಳಲು ಕಾಡಿಗೆ ನಡೆದರು. ದಾರಿಯಲ್ಲಿ ನಾರದರ ಭೇಟ್ಟಿಯಾಯಿತು. ಅವರು ಎಲ್ಲಿಗೆ ಹೊರಟಿರುವಿ? ಎಂದು ಕೇಳಲು, ನಡೆದ ಎಲ್ಲ ವೃತ್ತಾಂತವನ್ನು ತಿಳಿಸಿ ತಾನು ತಪಸ್ಸಿಗಾಗಿ ಕಾಡಿಗೆ ಹೊರಟಿರುವುದಾಗಿ ಹೇಳಿದರು. ನಾರದರು ಅವರಿಗೆ ''ಓಂ ನಮೋ ಭಗವತೇ ವಾಸುದೇವಾಯ'' ಎಂಬ ದ್ವಾದಶಾಕ್ಷರ ಮಂತ್ರವನ್ನು ಉಪದೇಶಿಸಿದರು. ನಂತರ ಧ್ರುವರಾಜರು ಕಾಡಿನಲ್ಲಿ ನಿರ್ಭಯರಾಗಿ ತಪಸ್ಸು ಮಾಡುತ್ತಿರಲು ಭಗವಂತ ಅವರ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾದ. ಅವರಿಗೆ ಇಚ್ಛಿತ ವರಕೊಟ್ಟು ಸಂತೋಷಪಡಿಸಿದ. ಹೀಗೆ ಧ್ರುವರಾಜರು ಭಗವಂತನ ಪಾದವನ್ನು ಆಶ್ರಯಿಸಿ ''ಧ್ರುವ'' ಪದವಿಯನ್ನು ಪಡೆದುಕೊಂಡರು.

2. ಶುಕಾಚಾರ್ಯರು :- ನಾರದರಿಂದ ಪ್ರಾರ್ಥಿತರಾದ ಶ್ರೀವೇದವ್ಯಾಸರು ಶ್ರೀಮದ್ ಭಾಗವತವನ್ನು ರಚಿಸಿ ತಮ್ಮ ಮಕ್ಕಳಾದ ಶುಕಾಚಾರ್ಯರಿಗೆ ಅದನ್ನು ಉಪದೇಶಿಸಿದರು. ಶುಕಾಚಾರ್ಯರು ಶ್ರೀಮದ್ ಭಾಗವತವನ್ನು ಪರೀಕ್ಷಿತ್ ಮಹಾರಾಜರಿಗೆ ಉಪದೇಶಿಸಿದರು. ಇವರು ಸಾಕ್ಷಾತ್ ರುದ್ರದೇವರ ಅವತಾರರು.

3. ಪ್ರಹ್ಲಾದರಾಜರು :- ಪ್ರಹ್ಲಾದರಾಜರು ಮಹಾಭಗವದ್ಭಕ್ತರು. ತಂದೆಯಾದ ಹಿರಣ್ಯಕಶಿಪುವು ಅನೇಕ ತರಹದ ತೊಂದರೆಕೊಟ್ಟರೂ ಶಿಕ್ಷೆ ವಿಧಿಸಿದರೂ ತಾವು ಮಾತ್ರ ಭಗವಂತವನ್ನು ಆಶ್ರಯಿಸಿ ಅವನ ಸ್ಮರಣೆ ಬಿಡಲಿಲ್ಲ. ಶ್ರೀನರಸಿಂಹರೂಪದಿಂದ ಆ ಭಗವಂತನು ಕಂಬದಿಂದ ಪ್ರತ್ಯಕ್ಷನಾಗಿ ಬಂದು ಅವರನ್ನು ರಕ್ಷಿಸಿದನು.

4. ಬಲಿರಾಜರು :- ಪ್ರಹ್ಲಾದರಾಜರ ಮಗ ವಿರೋಚನ. ಅವನ ಮಕ್ಕಳೇ ಬಲಿರಾಜರು. ಗುರುಗಳಾದ ಶುಕ್ರಾಚಾರ್ಯರು ಬಲಿರಾಜರಿಂದ ''ವಿಶ್ವಜಿತ್'' ಎಂಬ ಯಾಗವನ್ನು ಮಾಡಿಸಿದರು. ಇದರಿಂದ ತೇಜಃಪುಂಜರಾದ ಬಲಿರಾಜರು ಸ್ವರ್ಗವನ್ನು ಆಕ್ರಮಿಸಿ ಪಡೆದುಕೊಂಡರು. ಇಂದ್ರದೇವರು ಸ್ವರ್ಗವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಿ ವಾಸಿಸಿದರು. ದೇವಮಾತೆ ಅದಿತಿಯು ''ಪಯೋವ್ರತ''ವನ್ನು ಮಾಡಲು ಸಂತುಷ್ಟನಾದ ಭಗವಂತ ''ವಾಮನ'' ರೂಪವನ್ನು ಧರಿಸಿ, ಬಲಿರಾಜರ ಯಜ್ಞವಾಟಕ್ಕೆ

ಆಗಮಿಸಿ ಬಲಿರಾಜರಿಂದ ಮೂರುಪಾದ ಭೂಮಿಯನ್ನು ಪಡೆದುಕೊಂಡನು. ನಂತರ ತ್ರಿವಿಕ್ರಮ ರೂಪವನ್ನು ಧರಿಸಿ ಎರಡು ಪಾದಗಳಿಂದ ಭೂಮಿ, ಅಂತರಿಕ್ಷ ಲೋಕಗಳನ್ನು ಆಕ್ರಮಿಸಿದನು. ಆಗ ಮೂರನೆಯ ಪಾದವನ್ನು ತಮ್ಮ ತಲೆಯ ಮೇಲೆ ಇಡಬೇಕೆಂದು ಬಲಿರಾಜರು ಪ್ರಾರ್ಥಿಸಲು ತ್ರಿವಿಕ್ರಮರೂಪೀ ಭಗವಂತ ಹಾಗೆ ಮಾಡಿ ಅವರನ್ನು ಸುತಲಲೋಕಕ್ಕೆ ಕಳಿಸಿಕೊಟ್ಟನು.

5. ಅಜಾಮಿಳ :- ದಾಸಿಯ ಸಂಗದಿಂದ ದೂಷಿತನಾದ ಅಜಾಮಿಳನು ತನ್ನ ಅಂತ್ಯಕಾಲವು ಸಮೀಪಿಸುತ್ತಿರಲು, ಆಟದಲ್ಲಿ ಮಗ್ನನಾದ ''ನಾರಾಯಣ''ನೆಂಬ ಹೆಸರುಳ್ಳ ಮಗನನ್ನು ಕರೆದನು. ಅರ್ಥಾನುಸಂಧಾನ ಪೂರ್ವಕ ಮಾಡಿದ ಆ ನಾರಾಯಣ ಸ್ಮರಣೆಯಿಂದ ವಿಷ್ಣುಪಾರ್ಷದರು ಬಂದು ಅವನನ್ನು ಯಮನ ಪಾಶಗಳಿಂದ ಬಿಡಿಸಿದರು. ಕಾಲಕ್ರಮದಲ್ಲಿ ಭಗವಂತನ ಪಾದವನ್ನು ಆಶ್ರಯಿಸಿ ಮುಕ್ತಿ ಹೊಂದಿದನು.

6. ಉದ್ಧವ :- ಶ್ರೀಕೃಷ್ಣನ ಪ್ರಿಯಭಕ್ತನು. ಯಾದವರೆಲ್ಲರೂ ಪ್ರಭಾಸಕ್ಷೇತ್ರಕ್ಕೆ ಹೊರಡಲು ಸನ್ನದ್ಧರಾದುದನ್ನು ಕಂಡು ಶ್ರೀಕೃಷ್ಣನ ಹತ್ತಿರ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ ಕೈಮುಗಿದು ತನ್ನನ್ನು ಉದ್ಧರಿಸಬೇಕೆಂದು ಕೇಳಿಕೊಂಡ. ಆಗ ಶ್ರೀಕೃಷ್ಣನು ಏಕಾಂತ ಭಕ್ತನಾದ, ಪ್ರಿಯಸೇವಕನಾದ ಉದ್ಧವನಿಗೆ ಉಪದೇಶ ಮಾಡಿ ಅನುಗ್ರಹಿಸಿದ.

7. ಅಂಬರೀಷ :- ನಾಭಾಗನ ಮಗನೇ ಅಂಬರೀಷನು. ಅಂಬರೀಷನು ರಾಜ್ಯಕೋಶಾದಿ ಸಂಪತ್ತನ್ನೂ, ರಾಜವೈಭವವನ್ನು ಹೊಂದಿದ್ದರೂ ಅದೆಲ್ಲವೂ ಅಶಾಶ್ವತವೆಂದು ತಿಳಿದು ಶ್ರೀಹರಿಯಲ್ಲಿ, ಶ್ರೀಹರಿಯ ಭಕ್ತರಲ್ಲಿ ಶ್ರೇಷ್ಠವಾದ ಭಕ್ತಿಯನ್ನು ಹೊಂದಿದ್ದನು. ಅಂಬರೀಷರಾಜನ ಭಕ್ತಿಗೆ ಮೆಚ್ಚಿ ಭಗವಂತನು ಅವನ ರಕ್ಷಣೆಗಾಗಿ ತನ್ನ ಸುದರ್ಶನ ಚಕ್ರವನ್ನು ಕೊಟ್ಟಿದ್ದನು. ರಾಜ ಅಂಬರೀಷನು ಮಾಡಿದ ಯಜ್ಞಗಳಲ್ಲಿ ದೇವತೆಗಳು ಸಾಕ್ಷಾತ್ತಾಗಿ ಬಂದು ತಮ್ಮ ಹವಿರ್ಭಾಗವನ್ನು ಸ್ವೀಕರಿಸುತ್ತಿದ್ದರು.

ಅಂಬರೀಷರಾಜನು ತಿಥಿತ್ರಯವನ್ನು ಪಾಲಿಸುತ್ತಿದ್ದನು. ಒಮ್ಮೆ ಕಾರ್ತಿಕ ಶುದ್ಧ ಏಕಾದಶೀ ಉಪವಾಸ ಮಾಡಿ, ದ್ವಾದಶಿಯಂದು ಯಮುನಾನದಿಯಲ್ಲಿ ಸ್ನಾನ ಮಾಡಿ ಮಧುವನದಲ್ಲಿ ವೈಭವದಿಂದ ಶ್ರೀಹರಿಪೂಜೆ ಮಾಡಿ ಬ್ರಾಹ್ಮಣರಿಗೆ ಗೋದಾನವನ್ನು ಮಾಡಿ, ಅವರಿಗೆ ಭೋಜನ ಮಾಡಿಸಿ ತಾನು ಪಾರಣೆ ಮಾಡಲು ಸಿದ್ಧನಾದನು. ಅದೇ ಸಮಯಕ್ಕೆ ಅಲ್ಲಿಗೆ ದುರ್ವಾಸ ಋಷಿಗಳು ಬಂದರು. ಅವರನ್ನು ಪೂಜಿಸಿ ರಾಜನು ಅಲ್ಲಿಯೇ ಭೋಜನ ಮಾಡಲು ಕೇಳಿಕೊಂಡನು. ದುರ್ವಾಸರು ಒಪ್ಪಿ ಯಮುನೆಗೆ ಹೋಗಿ ಸ್ನಾನ, ಆಹ್ನೀಕಗಳನ್ನು ಮಾಡಿ ಬರುವುದಾಗಿ ತಿಳಿಸಿ ಹೋದರು. ಅಲ್ಲಿ

ಸ್ನಾನಾದಿಗಳನ್ನು ಮುಗಿಸಿ ಪರಬ್ರಹ್ಮನನ್ನು ಧ್ಯಾನಿಸುತ್ತ ಇದ್ದುಬಿಟ್ಟರು. ಅಷ್ಟರಲ್ಲಿ ದ್ವಾದಶೀ ತಿಥಿಯು ಅರ್ಧ ಮುಹೂರ್ತ ಉಳಿದಿರಲು ಬ್ರಾಹ್ಮಣರನ್ನು ವಿಚಾರಿಸಲು ಅವರು ಜಲಪಾರಣೆ ಮಾಡಿದರೆ ಏನೂ ದೋಷವಿಲ್ಲ ಎನ್ನಲು ರಾಜ ಹಾಗೆ ಮಾಡಿದ. ದುರ್ವಾಸರು ನಿತ್ಯವಿಧಿ ಮುಗಿಸಿ ಬಂದರು. ರಾಜ ಜಲಪಾನರೂಪ ಪಾರಣೆ ಮಾಡಿದ್ದನ್ನು ಜ್ಞಾನದೃಷ್ಟಿಯಿಂದ ತಿಳಿದು ಆಭಿಚಾರಿಕ ಕೃತ್ಯಮಾಡಿ ರಾಜನ ಮೇಲೆ ಬಿಟ್ಟರು. ರಾಜ ತನ್ನ ಸ್ಥಾನದಿಂದ ಕದಲಲಿಲ್ಲ. ಭಕ್ತನ ರಕ್ಷಣೆಗಾಗಿ ಕೊಡಲ್ಪಟ್ಟ ಚಕ್ರವು ಆ ಆಭಿಚಾರಿಕ ದೇವತೆಯನ್ನು ಸುಟ್ಟು ಹಾಕಿ ದುರ್ವಾಸರ ಬೆನ್ನು ಹತ್ತಿತು. ದುರ್ವಾಸರು ಪ್ರಾಣರಕ್ಷಣೆಗಾಗಿ ಎಲ್ಲ ಕಡೆ ಹೋಗಿ ಭಗವಂತನ ಹತ್ತಿರ ಬರಲು ಭಗವಂತನು ''ನಾನು ಭಕ್ತಪರಾಧೀನ, ನೀವು ಅಂಬರೀಷರಾಜನ ಹತ್ತಿರ ಹೋಗಿರಿ'' ಎಂದನು. ದುರ್ವಾಸರು ಅಂಬರೀಷ ರಾಜನ ಹತ್ತಿರ ಬರಲು ರಾಜನು ಚಕ್ರಕ್ಕೆ ಶಾಂತವಾಗುವಂತೆ ಪ್ರಾರ್ಥಿಸಲು ಅದು ಶಾಂತವಾಯಿತು. ಅದುವರೆಗೆ ಭೋಜನ ಮಾಡದಿದ್ದ ರಾಜನು ದುರ್ವಾಸರಿಗೆ ಭೋಜನ ಮಾಡಿಸಿ ತೃಪ್ತಿಗೊಳಿಸಿದನು.

8. ವಿದುರ :- ಯಮಧರ್ಮನ ಅವತಾರನೇ ವಿದುರ. ಮಹಾಜ್ಞಾನಿಯು. ಧರ್ಮರಾಜನಿಗೆ ಮಂತ್ರಿಯಾಗಿದ್ದನು. ಶ್ರೀಕೃಷ್ಣನ ಪರಮಭಕ್ತನಾಗಿದ್ದನು. ಪಾಂಡವರ ಹಿತೈಷಿಯಾಗಿದ್ದನು. ಶ್ರೀಕೃಷ್ಣ ಸಂಧಾನಕ್ಕೆ ಬಂದಾಗ್ಗೆ ವಿದುರನ ಆತಿಥ್ಯವನ್ನು ಸ್ವೀಕರಿಸಿ ಅನುಗ್ರಹಿಸಿದ.

ಹೀಗೆ ಎಂಟು ಜನ ಭಕ್ತರನ್ನು ಭಗವಂತ ನೀನು ಉದ್ಧರಿಸಿದೆ. ನಾನು ಏನು ಮಾಡಿದರೇನು? ನಾನು ನಿನ್ನ ಭಕ್ತ . ನನ್ನನ್ನು ನೀನು ಉದ್ಧರಿಸು ಎಂಬುದಾಗಿ ಶ್ರೀದಾಸರು ಕೇಳಿಕೊಂಡಿದ್ದಾರೆ.

ಪಾಂಚಾಲಿ ಮಾನವಕಾಯ್ದೆ ಪೆತರಿಗಂದು
ಅಚ್ಯುತ ನಿನ್ನಂಗುಟವು ಸೋಂಕಲು
ನಿಚ್ಚಳ ಸತಿಯಾದಳೆಂಬ ಸಾಹಸಕೇಳಿ
ಮುಚ್ಚು ಮರೆಯ ಮಾಡಿದರೆ ನಿಮ್ಮ ಮರೆಯೆನು ॥ ೨ ॥

ಭಗವಂತ! ನೀನು ಪಾಂಚಾಲಿ ದ್ರೌಪದಿಯ ಮಾನವನ್ನು ಕಾಯ್ದೆ. ನಿನ್ನ ಅಂಗುಟವು ಕಲ್ಲಿಗೆ ತಾಕಲು ಅಹಲ್ಯೆಯು ನಿಜರೂಪಧರಿಸಿದಳು. ನಿನ್ನ ಸಾಹಸವನ್ನು ಕೇಳಿದ್ದೇನೆ. ನೀನು ಮುಚ್ಚುಮರೆ ಮಾಡಿದರೆ ನಿನ್ನನ್ನು ನಾನು ಮರೆಯಲಾರೆ.

ಆ ಭಗವಂತ ದ್ರೌಪದಿಯ ಮಾನವನ್ನು ಕಾಯ್ದ ಪ್ರಸಂಗವು ಶ್ರೀಮನ್ ಮಹಾಭಾರತದಲ್ಲಿ ಉಕ್ತವಾಗಿದೆ.

ಕೌರವನ ತುಂಬಿದ ಸಭೆಯಲ್ಲಿ ದುಃಶ್ಶಾಸನನು ದ್ರೌಪದೀದೇವಿಯರ ಸೀರೆಯನ್ನು ಸೆಳೆದು ಅವರ ಮಾನಭಂಗಮಾಡಲು ಯತ್ನಿಸಿದ. ಆಗ ದ್ರೌಪದೀದೇವಿಯರು ಶ್ರೀಕೃಷ್ಣನಿಗೆ ತನ್ನನ್ನು ರಕ್ಷಿಸಲು ಮೊರೆಯಿಟ್ಟರು.

ಗೋವಿಂದ ದ್ವಾರಕಾವಾಸಿನ್ ಕೃಷ್ಣಗೋಪೀ ಜನಪ್ರಿಯ
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ॥
ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇಽವಸೀದತೀಮ್ ॥[೪]

ಈ ಸ್ತೋತ್ರದಿಂದ ಪ್ರಸನ್ನನಾದ ಭಗವಂತ ಶ್ರೀಕೃಷ್ಣ ದ್ರೌಪದೀದೇವಿಯರಿಗೆ ಒಲಿದು ಅಕ್ಷಯಾಂಬರವನಿತ್ತು ರಕ್ಷಿಸಿ ಅನುಗ್ರಹಿಸಿದ.

ಪೆತರಿಗಂದು, ಅಚ್ಯುತ ನಿನ್ನಂಗುಟವು ಸೋಂಕಲು
ನಿಚ್ಚಳ ಸತಿಯಾದಳೆಂಬ ಸಾಹಸಕೇಳಿ
ಮುಚ್ಚು ಮರೆಯ ಮಾಡಿದರೆ ನಿಮ್ಮ ಮರೆಯೆನು ॥

ಅಚ್ಯುತರೂಪೀ ಶ್ರೀರಾಮದೇವರ ಅಂಗುಟವು ಕಲ್ಲಿಗೆ ಸೋಂಕಲು ಅಹಲ್ಯೆಯು ಸತಿಯಾದ ಸಾಹಸ ಸುದ್ದಿ ಕೇಳಿದೆ. ನೀವು ಅದನ್ನು ಮುಚ್ಚುಮರೆ ಮಾಡಿದರೆ ನಿಮ್ಮನ್ನು ಮರೆಯಲು ಸಾಧ್ಯವಿಲ್ಲ.

ಅಹಲ್ಯೆ ಸತಿಯಾದ ವಿಷಯವನ್ನು ಕೆಳಗಿನ ಶ್ಲೋಕದಿಂದ ತಿಳಿಯಬಹುದು.

ಅಥೋ ಅಹಲ್ಯಾಂ ಪತಿನಾऽಭಿಶಪ್ತಾಂ ಪ್ರಧರ್ಷಣಾದಿಂದ್ರಕೃತಾತ್ ಶಿಲೀಕೃತಾಮ್ ।
ಸ್ವದರ್ಶನಾನ್ನಾನುಷತಾಮುಪೇತಾಂ ಸುಯೋಜಯಾಮಾಸ ಸ ಗೌತಮೇನ ॥[೫]

ನಿನ್ನ ಪಾದಾಂಬುಜಧ್ಯಾನ ಮರೆಯದಂತೆ
ಎನ್ನ ಮನದ ವಕ್ರಗತಿಯ ತಿರ್ದು
ಮನ್ನಿಸು ತಂದೆ ಪ್ರಸನ್ನವೆಂಕಟಕೃಷ್ಣ
ಪೂರ್ಣಪ್ರಜ್ಞಾರ್ಚಿತ ಚರಣಕಮಲನೇ ॥ ೩ ॥

ಶ್ರೀಕೃಷ್ಣ! ನಿನ್ನ ಪಾದಕಮಲದ ಧ್ಯಾನ ಮರೆಯದಂತೆ ನನ್ನ ಮನಸ್ಸಿನ ವಕ್ರಗತಿಯನ್ನು ತಿದ್ದಿ ನನ್ನನ್ನು ಕ್ಷಮಿಸಬೇಕು. ನೀನು ಪೂರ್ಣಪ್ರಜ್ಞಾಚಾರ್ಯರಿಂದ ಅರ್ಚಿತ ಪಾದಕಮಲವುಳ್ಳವನಾಗಿರುವಿ.

೪. ಶ್ರೀಮನ್ ಮಹಾಭಾರತ
೫. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೪-೧೦)

ಆ ಭಗವಂತನ ಪಾದಕಮಲಗಳನ್ನು ಧ್ಯಾನ ಮಾಡಬೇಕೆಂದು ಕಪಿಲರೂಪಿಯು ತನ್ನ ತಾಯಿಗೆ ತಿಳಿಸಿಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬೇಕು.

ಸಂಚಿತಯೇತ್ ಭಗವತಶ್ಚರಣಾರವಿಂದಂ
ವಜ್ರಾಂಕುಶಧ್ವಜ ಸರೋರುಹಲಾಂಛನಾಢ್ಯಮ್ ।
ಉತ್ತುಂಗರಕ್ತವಿಲಸನ್ನಖಿಚಕ್ರವಾಲ
ಜ್ಯೋತ್ಸ್ನಾಭಿರಾಹತ ಮಹತ್ ಹೃದಯಾಂಧಕಾರಮ್ ॥[೬]

ವಜ್ರ, ಅಂಕುಶ, ಧ್ವಜ ಇತ್ಯಾದಿ ಪರಮ ಮಂಗಲಕರವಾದ ಚಿಹ್ನೆಗಳಿಂದ ಅಲಂಕೃತವಾದ, ಉತ್ತುಂಗವಾದ, ರಕ್ತವರ್ಣೋಪೇತವಾದ, ನಖಮಂಡಲದಿಂದ ಸೂಸುವ ಪ್ರಕಾಶವಿಶೇಷದಿಂದ ಭಕ್ತರ ಹೃದಯದಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವ ಭಗವಂತನ ಪಾದಕಮಲಗಳನ್ನು ಮುಮುಕ್ಷುಗಳು ಧ್ಯಾನ ಮಾಡಬೇಕು.

ಎನ್ನ ಮನದ ವಕ್ರಗತಿಯತಿರ್ದು
ಮನ್ನಿಸು ತಂದೆ ಪ್ರಸನ್ನವೆಂಕಟಕೃಷ್ಣ ।

ಇಲ್ಲಿ ಶ್ರೀ ಪ್ರಸನ್ನವೆಂಕಟದಾಸರು, ಮಕ್ಕಳ ಮನದ ವಕ್ರಗತಿಯನ್ನು ತಂದೆಯು ಹೇಗೆ ಕ್ಷಮಿಸುವನೋ ಹಾಗೆ ನೀನು ತಿದ್ದಿ ಕ್ಷಮಿಸಬೇಕು ಎನ್ನುತ್ತಿದ್ದಾರೆ.

ಮನಸ್ಸು ಬಹಳ ಚಂಚಲವಾದದ್ದು, ವಕ್ರಗತಿಯುಳ್ಳದ್ದು. ಅರ್ಜುನ ಶ್ರೀಕೃಷ್ಣನನ್ನು ಕುರಿತು ಈ ಮಾತನ್ನು ಹೇಳುತ್ತಾನೆ.

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ॥[೭]

ಶ್ರೀಕೃಷ್ಣ! ಮನಸ್ಸು ಅತಿ ಚಂಚಲವಾದುದು. ದೇಹೇಂದ್ರಿಯಗಳಿಗೆ ಕ್ಷೋಭೆಯನ್ನು ಉಂಟುಮಾಡುತ್ತದೆ. ಜಯಿಸುವುದಕ್ಕೆ ಅಶಕ್ಯವಾಗಿದೆ. ಈ ಮನಸ್ಸಿನ ನಿಗ್ರಹವು ಗಾಳಿಯ ನಿಗ್ರಹದಂತೆ ಕಠಿಣವಾದುದು.

ಇನ್ನೊಂದೆಡೆಗೆ ಮನಸ್ಸು ವಕ್ರಗತಿವುಳ್ಳದ್ದು. ಅಂದರೆ ಎಲ್ಲೆಲ್ಲೋ ಚಲಿಸುತ್ತದೆ ಎಂಬ ಮಾತನ್ನು ಈ ರೀತಿ ತಿಳಿಸುತ್ತಾರೆ.

೬. ಶ್ರೀಮದ್ ಭಾಗವತ (೩-೨೯-೨೧)
೭. ಶ್ರೀಮದ್ ಭಗವದ್ಗೀತಾ (೬-೩೪)

ಇಂದ್ರಿಯಾಣಾಂ ವಿಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತೇ ಪ್ರಜ್ಞಾಂ ವಾಯುರ್ನಾವಮಿವಾಂಭಸಿ ॥[೮]

ಬಿರುಗಾಳಿಯು ಸಮುದ್ರದಲ್ಲಿರುವ ನಾವೆಯನ್ನು ಅಸ್ಥಿರಗೊಳಿಸುವಂತೆ ಮನಸ್ಸು ಬುದ್ಧಿಯನ್ನು ಅಸ್ಥಿರಗೊಳಿಸುತ್ತದೆ.

ಹಾಗಾದರೆ ಮನಸ್ಸನ್ನು ನಿಗ್ರಹ ಮಾಡುವುದು ಹೇಗೆ? ಎಂದರೆ ಶ್ರೀಕೃಷ್ಣ ಉತ್ತರ ಕೊಡುತ್ತಾನೆ.

ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥[೯]

ಕ್ರಮವಾಗಿ ಮನಸ್ಸನ್ನು ನಿಯಂತ್ರಿಸುವ ಅಭ್ಯಾಸ ಮಾಡುವದರಿಂದ ಮತ್ತು ವಿಷಯ ಪದಾರ್ಥಗಳಲ್ಲಿ ಸ್ನೇಹವನ್ನು ಬಿಡುವುದರಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಬಹುದು. ಇದನ್ನು ಆ ತಂದೆಯೆನಿಸಿದ ಪ್ರಸನ್ನವೆಂಕಟಕೃಷ್ಣನು ನಮ್ಮನ್ನು ಕ್ಷಮಿಸಿ ನಡೆಸಿಕೊಡಬೇಕು.

ಇನ್ನು ಆ ಶ್ರೀಕೃಷ್ಣನು ಪೂರ್ಣಪ್ರಜ್ಞರಿಂದ ಅರ್ಚಿತ ಪಾದಕಮಲವುಳ್ಳವನಾಗಿದ್ದಾನೆ. ಇದು ಕೆಳಗಿನ ಶ್ಲೋಕವನ್ನು ಅವಲೋಕಿಸಿದಾಗ ತಿಳಿದುಬರುತ್ತದೆ.

ಶ್ರೀಮಧ್ವನಾಥ ಕರಾರ್ಚಿತ ಪಾದಯುಗಾಬ್ಜ ಜಯಾಖಿಲವಿಘ್ನಹರ ।
ಶ್ರೀನಾಥ ವೇಣುಧರಾಮಿತಸದ್ಗುಣ ಸಜ್ಜನಪೂಜಿತ ಪಾದಜಯ ॥[೧೦]

ಹೀಗೆ ಆ ಶ್ರೀಪೂರ್ಣಪ್ರಜ್ಞಾಚಾರ್ಯರಿಂದ ಅರ್ಚಿತ ಪಾದವುಳ್ಳ ಶ್ರೀಕೃಷ್ಣನೇ ನೀನು ಈ ಸಂಸಾರ ಸಾಗರದಿಂದ ನಮ್ಮನ್ನು ದಾಟಿಸಿ ರಕ್ಷಿಸಬೇಕು ಎಂಬುದಾಗಿ ಶ್ರೀಪ್ರಸನ್ನವೆಂಕಟದಾಸರು ಪ್ರಾರ್ಥನೆ ಸಲ್ಲಿಸಿ ಮಹೋಪಕಾರ ಮಾಡಿದ್ದಾರೆ.

--*

೮. ಶ್ರೀಮದ್ ಭಗವದ್ಗೀತಾ (೨-೬)
೯. ಶ್ರೀಮದ್ ಭಗವದ್ಗೀತಾ (೬-೩೫)
೧೦. ಶ್ರೀ ನೃಸಿಂಹ ಗೀತಿ - ೧೧ನೆಯ ಶ್ಲೋಕ

೬. ಹರಿಯೇ ಗತಿಯೆನ್ನಿರೈ-

ಹರಿಯೆ ಗತಿಯೆನ್ನಿರೈ ಶ್ರೀನರಹರಿಯೆ ಶರಣೆನ್ನಿರೈ ॥ ಪ ॥

ಹರಿಪಾದಕಮಲವ ನಂಬದ ಮೂಢನು ಮನುಜನಲ್ಲ ದನುಜ ಶ್ರೀ
ಹರಿಚರಿತಾಮೃತ ಕೇಳದೇ ಗರ್ವಿಪ ನರನು ಪಾಮರನು ॥ ೧ ॥

ಹರಿಯ ಬಂಟರ ಅನುಸರಣೆಗಳ ಪರಿತ್ಯಾಗಿ ವೃದ್ಧಗೂಗಿ ।
ಹರಿಮಹಿಮೆಯ ಹೊಗಳಾಡದ ಮಾತಿನ ಮುಖನು ಮಂಡೂಕನು ॥ ೨ ॥

ಕೃಷ್ಣಗೆ ಪ್ರಿಯವ್ರತ ದಾನಕೆ ವಿಮುಖಾದ ಧನಪನವ ಕುಣಪ ।
ಕೃಷ್ಣಾಕೃತಿಯ ಬಹಿರಂತರದಿ ನೋಡದ ಜಾಣನವ ಕೋಣ ॥ ೩ ॥

ಕೃಷ್ಣಗೆ ನಮಿಸದೆ ಸತಿ ಸುತರೊಳು ಭೂರಿತುಷ್ಟ ಹಿತನಷ್ಟ ಶ್ರೀ
ಕೃಷ್ಣನವರ ಕಂಡೆರಗದವ ವಿಷಯದ ಭೋಗಿ ಭವರೋಗಿ ॥ ೪ ॥

ಗೋವಿಂದ ಸರ್ವೋತ್ತಮನಿರೆ ಬೇರೆಂಬಜ್ಞಾನಿ ಮದ್ಯಪಾನಿ ।
ಗೋವಿಂದನೊಳು ವಿಶ್ವಾಸಿಲ್ಲದ ಭಕ್ತಿಯ ಧೀರ ಶುದ್ಧಚಾರ ॥ ೫ ॥

ಗೋವಿಂದತೀರ್ಥ ಪ್ರಸಾದವನರಿಯದ ಬಲ್ಲನೆ ಕಳ್ಳನು ।
ಗೋವಿಂದನೊಪ್ಪದ ಮತವಿಡಿದವ ಮಹಿಗೆ ಕಕ್ಕಸ ರಕ್ಕಸ ॥ ೬ ॥

ಪ್ರಸನ್ನಮೂರುತಿ ವಿಧಿಭವವಂದ್ಯನ ಅರ್ಚಕ ಧನ್ಯರೆ ಮಾನ್ಯರು ।
ಪ್ರಸನ್ನವೆಂಕಟಪತಿ ಕಂಡುಂಡಾ ಭಕ್ತಿಯಾಸಕ್ತರೆ ಮುಕ್ತರು ॥ ೭ ॥

ಪ್ರಸ್ತುತ ಪದ್ಯದಲ್ಲಿ ಶ್ರೀಪ್ರಸನ್ನವೆಂಕಟದಾಸರು ಶ್ರೀಹರಿಯೇ ಗತಿಯು. ಆ ಶ್ರೀಹರಿಗೆ ನಾವು ಶರಣು ಹೋಗಬೇಕು ಎಂದು ತಿಳಿಸುತ್ತ ಜೀವನದಲ್ಲಿ ಪ್ರತಿಯೊಬ್ಬರು ಯಾವುದನ್ನು ಮಾಡಿದರೆ ಈ ಸಂಸಾರದಲ್ಲಿರುವದಕ್ಕೆ ಯೋಗ್ಯರು ಎಂಬುದನ್ನು ವಿವರಿಸಿದ್ದಾರೆ.

ಹರಿಯೇ ಗತಿಯೆನ್ನಿರೈ ಶ್ರೀನರಹರಿಯೇ ಶರಣೆನ್ನಿರೈ ॥ ಪ ॥

ಶ್ರೀಹರಿಯೇ ನಮಗೆ ಗತಿ ಎನ್ನಿರಿ. ಶ್ರೀನರಸಿಂಹದೇವರಿಗೆ ಶರಣು ಎನ್ನಿರಿ.

ಆ ಶ್ರೀನಿವಾಸರೂಪೀ ಶ್ರೀಹರಿಯು ಶರಣಾಗತ ರಕ್ಷಕನು, ಸಜ್ಜನರಿಗೆ ಗತಿಯೂ ಆಗಿದ್ದಾನೆಂಬುದು ಈ ಕೆಳಗಿನ ಪುರಾಣವಾಕ್ಯದಿಂದ ತಿಳಿಯಬಹುದು.

ಶರಣಾಗತ ಸಂತ್ರಾಣಃ ಶ್ರೀನಿವಾಸಃ ಸತಾಂಗತಿಃ ॥[೧]

ಶ್ರೀಕೃಷ್ಣನು ಅರ್ಜುನನನ್ನು ಕುರಿತು ಹೇಳಿರುವ ಮಾತು ಮನನೀಯವಾಗಿದೆ.

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ॥[೨]

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ॥[೩]

ಹರಿಪಾದಕಮಲವ ನಂಬದ ಮೂಢನು ಮನುಜನಲ್ಲ ದನುಜ ಶ್ರೀ
ಹರಿಚರಿತಾಮೃತ ಕೇಳದೆ ಗರ್ವಿಪ ನರನು ಪಾಮರನು ॥ ೧ ॥

ಪ್ರತಿಯೊಬ್ಬರೂ ಶ್ರೀಹರಿಪಾದಕಮಲವನ್ನು ನಂಬಬೇಕು. ಹೀಗೆ ನಂಬದವನು ಮಾನವನೇ ಅಲ್ಲ. ಅವನು ದಾನವನು. ಶ್ರೀಹರಿಯ ಚರಿತಾಮೃತವನ್ನು ಪ್ರತಿಯೊಬ್ಬರೂ ಕೇಳಬೇಕು. ಕೇಳದೇ ಯಾವನು ಗರ್ವಪಡುವನೋ ಅವನು ಸಾಮಾನ್ಯ ಮನುಷ್ಯನು.

ತ್ವಯ್ಯಂಬುಜಾಕ್ಷಾಖಿಲಸತ್ವಧಾಮ್ನೀ
ಸಮಾಧಿನಾऽऽವೇಶಿತ ಚೇತಸೋ ಯೇ ।
ತ್ವತ್ಪಾದ ಪೋತೇನ ಮಹತ್ಕತೇನ
ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥[೪]

ಕಮಲದಂತೆ ಕಣ್ಣುಳ್ಳ, ಸಕಲ ಗುಣಪೂರ್ಣನಾದ ಭಗವಂತನೇ! ನಿನ್ನಲ್ಲಿ ಉಪಾಸನೆಯಿಂದ ಇಡಲ್ಪಟ್ಟ ಮನಸ್ಸುಳ್ಳವರು ಅಂದರೆ ನಿನ್ನನ್ನು ನಂಬಿದವರು, ಸಂಸಾರ ಸಮುದ್ರವನ್ನು ನಿನ್ನ ಪಾದಕಮಲಗಳೆಂಬ ನೌಕೆಯಿಂದ, ಆಕಳ ಕರುವಿನ ಹೆಜ್ಜೆಯಿಂದ ನಿರ್ಮಿತವಾದ ತಗ್ಗಿನಲ್ಲಿ ನಿಂತ ನೀರನ್ನು ಅನಾಯಾಸವಾಗಿ ದಾಟುವಂತೆ ದಾಟಿಬಿಡುತ್ತಾರೆ.

ಹೀಗಿರುವಾಗ ಆ ಶ್ರೀಹರಿಯ ಪಾದಕಮಲವನ್ನು ನಂಬದ ಮೂಢನು ಮನುಷ್ಯನೇ ಅಲ್ಲ ಅವನು ದಾನವನು ಎಂಬುದು ಶ್ರೀದಾಸರ ಆಶಯವಾಗಿದೆ.

ಇನ್ನು ಶ್ರೀಹರಿಚರಿತಾಮೃತವನ್ನು ಕೇಳುತ್ತಿರಬೇಕು.

---

೧. ಆದಿತ್ಯಪುರಾಣ ವೆಂ.ಮ. (೧೯-೨೯)
೨. ಶ್ರೀಭಗವದ್ಗೀತಾ (೧೮-೬೨)
೩. ಶ್ರೀಮದ್ ಭಗವದ್ಗೀತಾ (೧೮-೬೬)
೪. ಶ್ರೀಮದ್ ಭಾಗವತ (೧೦-೩-೪೧)

ಪಿಬಂತಿ ಯೇ ಭಗವತ ಆತ್ಮನಃ ಸತಾಂ
ಕಥಾಮೃತಂ ಶ್ರವಣಪುಟೇಷು ಸಂಭೃತಮ್ ।
ಪುನಂತಿ ತೇ ವಿಷಯ ವಿದೂಷಿತಾಶಯಂ
ವ್ರಜಂತಿ ತಚ್ಚರಣ ಸರೋರುಹಾಂತಿಕಮ್ ॥[೫]

ಯಾರು ಶ್ರೀಹರಿಯ ಕಥಾಮೃತವನ್ನು ಜ್ಞಾನ ಭಕ್ತಿ ವಿರಕ್ತ್ಯಾದಿಗಳಿಂದ ಕೂಡಿದ ಸಜ್ಜನರ ಮುಖದಿಂದ ತಮ್ಮ ಕಿವಿಗಳೆಂಬ ಬಟ್ಟಲಿನಿಂದ ಕುಡಿಯುತ್ತಾರೋ ಅವರು ವಿಷಯ ಭೋಗಗಳಿಂದ ಕಲುಷಿತವಾದ ಅಂತಃಕರಣವನ್ನು ಪರಿಶುದ್ಧಗೊಳಿಸಿಕೊಂಡು ಶ್ರೀಹರಿಯ ಪಾದಕಮಲವನ್ನು ಅಂದರೆ ವೈಕುಂಠವನ್ನು ಹೊಂದುತ್ತಾರೆ.

ಹೀಗಿರುವಾಗ ಆ ಶ್ರೀಹರಿಯ ಚರಿತಾಮೃತವನ್ನು ಕೇಳದೇ ಯಾವನು ಗರ್ವಪಡುತ್ತಾನೆಯೋ ಅವನು ಸಾಮಾನ್ಯ ಮನುಷ್ಯನೇ ಸರಿ ಎಂಬುದು ಶ್ರೀದಾಸರ ಆಶಯವಾಗಿದೆ.

ಹರಿಯಬಂಟರ ಅನುಸರಣೆಗಳ ಪರಿತ್ಯಾಗಿ ವೃದ್ಧಗೂಗಿ
ಹರಿಮಹಿಮೆಯ ಹೊಗಳಾಡದ ಮಾತಿನ ಮುಖನು ಮಂಡೂಕನು ॥ ೨ ॥

ಶ್ರೀಹರಿಯದಾಸರ ಅನುಸರಣೆಗಳ ಅಂದರೆ ಆಚರಣೆಗಳನ್ನು ಪರಿತ್ಯಾಗ ಮಾಡುವವನು ವೃದ್ಧಗೂಗಿಯೆನಿಸುತ್ತಾನೆ. ಶ್ರೀಹರಿಯ ಮಹಿಮೆಯನ್ನು ಹೊಗಳಿ ಹಾಡದ ಮನುಷ್ಯನು ಕಪ್ಪೆಯೆನಿಸುತ್ತಾನೆ.

ದೊಡ್ಡವರು ಆಚರಿಸಿದ ಕರ್ಮಗಳನ್ನು ನಾವೂ ಆಚರಿಸಬೇಕು. ಶ್ರೀಕೃಷ್ಣ ಈ ವಿಷಯವನ್ನು ತಿಳಿಸಿದ್ದಾನೆ.

ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕ ಸ್ತದನುವರ್ತತೇ ॥[೬]

ಶ್ರೇಷ್ಠರಾದ ಶ್ರೀಹರಿಯ ಭಕ್ತರು ಆಚರಿಸುವುದನ್ನು ನೋಡಿ ಲೋಕದ ಜನರು ಅದನ್ನು ಅನುಸರಿಸುತ್ತಾರೆ ಅಂದರೆ ತಾವೂ ಅದನ್ನೇ ಆಚರಿಸುತ್ತಾರೆ. ಇಂಥ ದೊಡ್ಡವರ ಆಚರಣೆ ಪರಿತ್ಯಾಗ ಮಾಡಕೂಡದು. ಪರಿತ್ಯಾಗ ಮಾಡಿದವನು ವೃದ್ಧಗೂಗಿ ಎನಿಸಿಕೊಳ್ಳುತ್ತಾನೆ.

---

೫. ಶ್ರೀಮದ್ ಭಾಗವತ (೨-೨-೩೭)
೬. ಶ್ರೀಭಗವದ್ಗೀತಾ (೩-೨೧)

ಇನ್ನು ಶ್ರೀಹರಿಯ ಮಹಿಮೆಯನ್ನು ಹೊಗಳುತ್ತಿರಬೇಕು. ಹಾಗೆ ಮಾಡದೇ ಲೌಕಿಕ, ಮಾತಿಗೆ ಬಾರದ ಮಾತುಗಳನ್ನು ಆಡುತ್ತಿದ್ದರೆ ಅವನು ಕಪ್ಪೆಯೆನಿಸಿಕೊಳ್ಳುತ್ತಾನೆ.

ಶ್ರೀಮದ್ ಭಾಗವತದಲ್ಲಿ ಹೇಳಿರುವ ಮಾತು ಇಲ್ಲಿ ಪ್ರಸ್ತುತವಾಗಿದೆ.

ವಾಣೀ ಗುಣಾನುಕಥನೇ ॥[೭]

ನಾವು ನಮ್ಮ ವಾಣಿಯನ್ನು ಭಗವಂತನ ಮಹಿಮೆಗಳನ್ನು ಹೊಗಳುವುದರಲ್ಲಿ ತೊಡಗಿಸಿರಬೇಕು.

ಸಾ ವಾಗನಂತಸ್ಯ ಗುಣಾನ್ ಗೃಣೀತೇ ॥[೮]

ಭಗವಂತನ ಗುಣಗಳನ್ನು, ಮಹಿಮೆಯನ್ನು ಹೊಗಳುವ ನಾಲಿಗೆ ಸಾರ್ಥಕವಾದುದು.

ಕೃಷ್ಣಗೆ ಪ್ರಿಯ ವ್ರತ ದಾನಕೆ ವಿಮುಖಾದ ಧನಪನವ ಕುಣಪ ।
ಕೃಷ್ಣಾಕೃತಿಯ ಬಹಿರಂತರದಿ ನೋಡದ ಜಾಣನವಕೋಣ ॥ ೩ ॥

ಶ್ರೀಕೃಷ್ಣನಿಗೆ ಪ್ರಿಯವಾದ ವ್ರತ, ದಾನಕ್ಕೆ ವಿಮುಖನಾದ ಅಂದರೆ ದಾನ ಕೊಡದಿದ್ದ ಧನವಂತನು ಹೆಣಕ್ಕೆ ಸಮಾನ ದೇಹವುಳ್ಳವನು. ಶ್ರೀಕೃಷ್ಣನ ಆಕೃತಿ, ರೂಪವನ್ನು ಹೊರಗೆ ಮತ್ತು ಅಂತರಂಗದಲ್ಲಿ ನೋಡದಿರುವ ಜಾಣನು ಕೋಣನೆನಿಸುತ್ತಾನೆ.

ಧನವುಳ್ಳ ಮನುಷ್ಯನು ಶ್ರೀಕೃಷ್ಣನಿಗೆ ಪ್ರಿಯವಾದ ಧರ್ಮ ಅಂದರೆ ವ್ರತ, ದಾನಾದಿಗಳನ್ನು ಮಾಡುತ್ತಿರಬೇಕು. ಏಕೆಂದರೆ ಶ್ರೀಮದ್ ಭಾಗವತ ಹೇಳುತ್ತಿದೆ –

ಧನಂ ಹಿ ಧರ್ಮೈಕಫಲಂ ಯತೋಽಸ್ಯ ॥[೯]

ಹೀಗೆ ಧನವನ್ನು ಧರ್ಮಮಾಡುವುದರಲ್ಲಿ ವಿನಿಯೋಗಿಸದಿದ್ದರೆ ಆ ಧನವಂತನು ಹೆಣಕ್ಕೆ ಸಮಾನ ದೇಹವುಳ್ಳವನು ಎಂದು ತಿಳಿಯಬೇಕು.

ಶ್ರೀಕೃಷ್ಣನ ಆಕೃತಿ, ರೂಪವನ್ನು ಹೊರಗೆ ಮತ್ತು ಅಂತರಂಗದಲ್ಲಿ ನೋಡುತ್ತಿರಬೇಕು. ಪರೀಕ್ಷಿತ್ ಮಹಾರಾಜರು ಶ್ರೀ ಶುಕಾಚಾರ್ಯರನ್ನು ಪ್ರಾರ್ಥಿಸುವ ಪರಿ ಹೀಗಿತ್ತು –

೭. ಶ್ರೀಮದ್ ಭಾಗವತ (೧೦-೧೧-೩೯)
೮. ಶ್ರೀಮದ್ ಭಾಗವತ (೧೦-೯೮-೧೯)
೯. ಶ್ರೀಮದ್ ಭಾಗವತ (೧೧-೫-೧೨)

ವೀರ್ಯಾಣಿ ತಸ್ಯಾಖಿಲದೇಹಭಾಜಾಂ
ಅಂತರ್ಬಹಿಃ ಪೂರುಷಕಾಲರೂಪೈಃ ।
ಪ್ರಯಚ್ಛತೋ ಮೃತ್ಯುಮನಾಮಯಂ ಚ
ಮಾಯಾಮನುಷ್ಯಸ್ಯ ವದಸ್ವ ವಿದ್ವನ್ ॥[೧೦]

ಜೀವಾಂತಸ್ಥಿತವಾದ ಬಿಂಬರೂಪದಿಂದ ಮೋಕ್ಷವನ್ನು, ಹೊರಗೆ ಪ್ರಕಟವಾದ ಕಾಲರೂಪಗಳಿಂದ ಮೃತ್ಯುವನ್ನು ಎಲ್ಲ ದೇಹಧಾರಿಗಳಿಗೆ ಉಂಟುಮಾಡುವ ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನ ಬಂಧಮೋಕ್ಷಪ್ರದತ್ವ ರೂಪವಾದ ಅದ್ಭುತಕಾರ್ಯಗಳನ್ನು ನನಗೋಸ್ಕರ ವಿವರಿಸಿರಿ ಎಂಬುದಾಗಿ ಶುಕಾಚಾರ್ಯರನ್ನು ಕುರಿತು ಪರೀಕ್ಷಿದ್ರಾಜರು ಪ್ರಾರ್ಥಿಸುತ್ತಾರೆ.

ಈ ರೀತಿಯಾಗಿ ಶ್ರೀಕೃಷ್ಣನ ರೂಪವನ್ನು ಹೊರಗೆ ಮತ್ತು ಅಂತರಂಗದಲ್ಲಿ ಯಾರೂ ನೋಡುವುದಿಲ್ಲವೋ ಆ ಜಾಣನು ಕೋಣನೆನಿಸಿಕೊಳ್ಳುತ್ತಾನೆ.

ಕೃಷ್ಣಗೆ ನಮಿಸದೆ ಸತಿಸುತರೊಳು ಭೂರಿತುಷ್ಟ ಹಿತನಷ್ಟ ಶ್ರೀ
ಕೃಷ್ಣನವರ ಕಂಡೆರಗದ ವಿಷಯದ ಭೋಗಿ ಭವರೋಗಿ ॥ ೪ ॥

ಶ್ರೀಕೃಷ್ಣನಿಗೆ ನಮಸ್ಕರಿಸದೇ ಹೆಂಡತಿ, ಮಕ್ಕಳು ಇವರಲ್ಲಿ ಸಂತೋಷದಿಂದ ಇರುವ ಮನುಷ್ಯನು ತನ್ನ ಹಿತವನ್ನು ಮಾಡಿಕೊಳ್ಳದೇ ನಷ್ಟಕ್ಕೆ ಒಳಗಾಗುವನು. ಶ್ರೀಕೃಷ್ಣನ ಭಕ್ತರನ್ನು ಕಂಡು ಅವರಿಗೆ ನಮಸ್ಕರಿಸದಿರುವ ವಿಷಯ ಭೋಗಿಯಾದ ಮನುಷ್ಯನು ''ಭವರೋಗಿ'' ಎನಿಸುತ್ತಾನೆ.

ಶ್ರೀಕೃಷ್ಣನಿಗೆ ಭಕ್ತಿಪೂರ್ವಕವಾಗಿ ಒಂದು ನಮಸ್ಕಾರ ಮಾಡಿದರೆ ಬರುವ ಫಲವನ್ನು ಇಲ್ಲಿ ವಿವರಿಸಿದ್ದಾರೆ –

ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮಃ
ದಶಾಶ್ವಮೇಧಾವಭೃತೇನ ತುಲ್ಯಃ ।
ದಶಾಶ್ವಮೇಧೀ ಪುನರೇತಿ ಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ ॥[೧೧]

ಶ್ರೀಕೃಷ್ಣನಿಗೆ ಮಾಡಲ್ಪಟ್ಟ ಒಂದು ನಮಸ್ಕಾರವು ಹತ್ತು ಅಶ್ವಮೇಧ ಯಾಗಗಳನ್ನು ಆಚರಿಸಿ ಅವಭೃತಸ್ನಾನ ಮಾಡಿದ್ದಕ್ಕೆ ಸಮಾನವೆನಿಸುತ್ತದೆ. ಹತ್ತು ಅಶ್ವಮೇಧ ಯಾಗ

೧೦. ಶ್ರೀಮದ್ ಭಾಗವತ (೧೦-೧-೭)
೧೧. ಶ್ರೀ ಪಾಂಡವ ಗೀತಾ ॥

ಮಾಡಿದವನು ಮತ್ತೆ ಜನ್ಮ ಪಡೆಯುತ್ತಾನೆ. ಆದರೆ ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದವನು ಇನ್ನೊಮ್ಮೆ ಹುಟ್ಟಿಬರುವುದೇ ಇಲ್ಲ.

ಹೀಗಿರುವಾಗ ಶ್ರೀಕೃಷ್ಣನಿಗೆ ನಮಸ್ಕಾರ ಮಾಡದೇ, ಹೆಂಡತಿ ಮಕ್ಕಳು ಇವರಲ್ಲಿಯೇ ಸಂತೋಷಪಡುವ ಮನುಷ್ಯನು ತನ್ನ ಹಿತವನ್ನು ಮಾಡಿಕೊಳ್ಳದೇ ನಷ್ಟಕ್ಕೆ ಒಳಗಾಗುವದು ನಿಶ್ಚಿತವೇ.

ಶ್ರೀಕೃಷ್ಣನ ಭಕ್ತರನ್ನು ಕಂಡು ಅವರಿಗೆ ನಮಸ್ಕರಿಸುವದು ಅವಶ್ಯ.

ನಮೋ ಮಹದ್ಭ್ಯೋಽಸ್ತು ನಮಃ ಶಿಶುಭ್ಯೋ
ನಮೋ ಯುವಭ್ಯೋ ನಮ ಆಬಟುಭ್ಯಃ ।
ಯೇ ಬ್ರಾಹ್ಮಣಾ ಗಾಮವಧೂತ ಲಿಂಗಾ
ಶ್ಚರಂತಿ ತೇಭ್ಯಃ ಶಿವಮಸ್ತು ರಾಜ್ಞಾಂ ॥[೧೨]

ಬೂದಿ ಮುಚ್ಚಿದ ಕೆಂಡದಂತೆ ತಮ್ಮ ನಿಜವಾದ ಯೋಗ್ಯತೆಯನ್ನು ಮುಚ್ಚಿಕೊಂಡು ಜಗತ್ತಿನಲ್ಲಿ ಸಂಚರಿಸುವ ಬ್ರಹ್ಮಜ್ಞಾನಿಗಳಿಂದ ರಾಜರ ಕುಲಕ್ಕೆ ಕ್ಷೇಮವಾಗಲಿ. ಅಂತಹ ಅವಧೂತರಿಗೆ ನಮಸ್ಕಾರವು. ಅವರು ಸಜ್ಜನ ಲಕ್ಷಣವುಳ್ಳ ಮಹಾತ್ಮರಾಗಲೀ, ಶಿಶುಗಳಾಗಲೀ, ಯುವಕರಾಗಲೀ, ಬಾಲಕರಾಗಲೀ ಅವರೆಲ್ಲರನ್ನೂ ನಾನು ನಮಸ್ಕರಿಸುತ್ತೇನೆ ಎಂಬುದಾಗಿ ರಹೂಗಣರಾಜನು ಹೇಳುತ್ತಾನೆ.

ಹೀಗೆ ಶ್ರೀಕೃಷ್ಣನ ಭಕ್ತರು ಯಾರೇ ಆಗಿರಲಿ ಅವರಿಗೆ ನಮಸ್ಕಾರ ಮಾಡಬೇಕು. ಹೀಗೆ ಮಾಡದಿರುವ, ವಿಷಯ ಪದಾರ್ಥಗಳಲ್ಲಿಯೇ ರತರಾಗಿ ಭೋಗಿಯಾದದ್ದಾದರೆ ಅಂಥವರು ''ಭವರೋಗಿ''ಯಾಗುತ್ತಾರೆ. ಅಂದರೆ ಈ ಸಂಸಾರದಲ್ಲಿಯೇ ಕೊಳೆಯಬೇಕಾಗುತ್ತದೆ ನಿಶ್ಚಿತ.

ಗೋವಿಂದ ಸರ್ವೋತ್ತಮನಿರೆ ಬೇರೆಂಬ ಜ್ಞಾನಿ ಮದ್ಯಪಾನಿ
ಗೋವಿಂದನೊಳು ವಿಶ್ವಾಸಿಲ್ಲದ ಭಕ್ತಿಯ ಧೀರ ಶುದ್ಧಜಾರ ॥ ೫ ॥

ಗೋವಿಂದನು ಸರ್ವೋತ್ತಮವಸ್ತು ಇರುವಾಗ ಇನ್ನೊಬ್ಬನು ಸರ್ವೋತ್ತಮನಿದ್ದಾನೆ ಎಂದು ಹೇಳುವ ಜ್ಞಾನಿ ಮದ್ಯಪಾನಿ ಎನಿಸುತ್ತಾನೆ. ಆ ಗೋವಿಂದನಲ್ಲಿ ವಿಶ್ವಾಸವಿಲ್ಲದೇ ಭಕ್ತಿಯನ್ನು ಮಾಡುವ ಧೀರ (ಬುದ್ಧಿವಂತ) ಅವನು ಶುದ್ಧ ಜಾರನೆನಿಸುತ್ತಾನೆ.

೧೨. ಶ್ರೀಮದ್ ಭಾಗವತ (೫-೧೩-೨೩)

ಸತ್ಯಂ ಸತ್ಯಂ ಪುನಃ ಸತ್ಯಂ ಉದ್ಧೃತ್ಯ ಭುಜಮುಚ್ಯತೇ ।
ವೇದಶಾಸ್ತ್ರಾತ್ ಪರಂ ನಾಸ್ತಿ ನದೈವಂ ಕೇಶವಾತ್ ಪರಂ ॥[೧೩]

ಎರಡೂ ತೋಳುಗಳನ್ನೆತ್ತಿ ಶಪಥ ಪೂರ್ವಕವಾಗಿ ಸತ್ಯ, ಸತ್ಯ, ಸತ್ಯ ಎಂಬುದಾಗಿ ನನ್ನಿಂದ ಹೇಳಲ್ಪಡುತ್ತದೆ. ವೇದ ಶಾಸ್ತ್ರಕ್ಕಿಂತ ಮಿಗಿಲಾದ ಶಾಸ್ತ್ರವಿಲ್ಲ. ಶ್ರೀಹರಿಗಿಂತ ಉತ್ತಮ ದೇವರಿಲ್ಲ.

ಹೀಗಿದ್ದರೂ ಶ್ರೀಹರಿಯಿಂದ ಅಭಿನ್ನನಾದ ಗೋವಿಂದನಿಗಿಂತ ಸರ್ವೋತ್ತಮ ದೇವ ಬೇರೆ ಇದ್ದಾನೆಂದು ಹೇಳುವವನು ಮದ್ಯಪಾನಿ ಎಂದೇ ಹೇಳಬೇಕಾಗುತ್ತದೆ.

ಇನ್ನು ಆ ಗೋವಿಂದರೂಪೀ ಭಗವಂತನಲ್ಲಿ ವಿಶ್ವಾಸವನ್ನು ಮಾಡುವುದು ಅವಶ್ಯ.

ರಕ್ಷತೀತ್ಯೇವ ವಿಶ್ವಾಸಃ ತದೀಯೋಽಹಮಿತಿ ಸ್ಮೃತಿಃ ।
ಶರಣಾಗತಿರೇಷಾಸ್ಯಾತ್ ವಿಷ್ಣೋರ್ಮೋಕ್ಷಪ್ರದಾಯಿನಿ ॥[೧೪]

ಭಗವಂತನು ಬ್ರಹ್ಮಾದಿ ದೇವತೆಗಳನ್ನು ತನ್ನ ಉದರದಲ್ಲಿಟ್ಟುಕೊಂಡು ಪ್ರಲಯಕಾಲದಲ್ಲಿಯೂ ಇತರ ಎಲ್ಲ ಕಾಲಗಳಲ್ಲಿಯೂ ರಕ್ಷಿಸುತ್ತಾನೆಂದು ದೃಢವಿಶ್ವಾಸವುಳ್ಳವರಿಗೆ ಮತ್ತು ಶರಣಾಗತಿ ಉಳ್ಳವರಿಗೆ ಮೋಕ್ಷವನ್ನು ಕೊಡುತ್ತಾನೆ.

ಹೀಗಿರುವಾಗ ಆ ಭಗವಂತನಲ್ಲಿ ವಿಶ್ವಾಸವಿಲ್ಲದೇ ಭಕ್ತಿಯನ್ನು ಮಾಡುವ ಧೀರನು ಶುದ್ಧಜಾರನೆನಿಸುತ್ತಾನೆ.

ಗೋವಿಂದತೀರ್ಥ ಪ್ರಸಾದವನರಿಯದ ಬಲ್ಲನೆ ಕಳ್ಳನು ।
ಗೋವಿಂದನೊಪ್ಪದ ಮತವಿಡಿದವ ಮಹಿಗೆ ಕಕ್ಕಸ ರಕ್ಕಸ ॥ ೬ ॥

ಗೋವಿಂದನ ತೀರ್ಥ, ಪ್ರಸಾದವನ್ನು ಪ್ರತಿಯೊಬ್ಬರೂ ನಿತ್ಯದಲ್ಲಿ ಸ್ವೀಕರಿಸಬೇಕು. ಹೀಗೆ ಮಾಡದಿರುವವನು ಕಳ್ಳನು. ಗೋವಿಂದನು ಒಪ್ಪದಿರುವ ಮತವನ್ನು ಹಿಡಿಯದವನು ಈ ಭೂಮಿಗೆ ಕಕ್ಕಸ (ಪಾಯಖಾನೆ) ಇದ್ದಂತೆ. ಅವನೊಬ್ಬ ರಾಕ್ಷಸನೆಂದೇ ಹೇಳಬೇಕು.

ಗೋವಿಂದನ ಅಂದರೆ ಶಾಲಿಗ್ರಾಮ ತೀರ್ಥವನ್ನು ಹಾಗೂ ಗೋವಿಂದನಿಗೆ ನಿವೇದಿತವಾದ ಪ್ರಸಾದವನ್ನು ನಿತ್ಯದಲ್ಲಿ ಸ್ವೀಕರಿಸುವದು ಅವಶ್ಯ ಎಂಬುದಾಗಿ ಶ್ರೀದಾಸರು ಹೇಳುತ್ತಿದ್ದಾರೆ.

೧೩. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೨-೭೦)
೧೪. ಶ್ರೀ ವಿಷ್ಣುರಹಸ್ಯ

ಪಾದೋದಕಂ ಚ ನಿರ್ಮಾಲ್ಯಂ ಮಸ್ತಕೇ ಧಾರಯೇತ್ ಸದಾ ।
ವಿಷ್ಣೋರ್ದೃಷ್ಟಂ ಭಕ್ಷಿತವ್ಯಂ ತುಲಸೀದಲಮಿಶ್ರಿತಮ್ ॥[೧೫]

ಶ್ರೀವಿಷ್ಣುವಿನ ಪಾದೋದಕ ಅಂದರೆ ತೀರ್ಥ, ನಿರ್ಮಾಲ್ಯಗಳನ್ನು ಶಿರಸ್ಸಿನಲ್ಲಿ ಧರಿಸಬೇಕು. ತುಲಸೀದಲಮಿಶ್ರಿತವಾದ ಶ್ರೀವಿಷ್ಣುನೈವೇದ್ಯವನ್ನು ಭುಂಜಿಸಬೇಕು.

ಭುಕ್ತಶೇಷಂ ಭಗವತೋ ಭೃತ್ಯಾತಿಥಿ ಪುರಸ್ಸರಃ ।
ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್ಗತ ಮಾನಸಃ ॥[೧೬]

ಭಗವಂತನ ನೈವೇದ್ಯವನ್ನು ಪರಿವಾರದವರ ಜೊತೆಯಲ್ಲಿ ಸ್ವೀಕರಿಸಬೇಕು.

ಹೀಗೆ ಭಗವಂತನ ನೈವೇದ್ಯ, ಪ್ರಸಾದವನ್ನು ಸ್ವೀಕರಿಸದವನು ಕಳ್ಳನೆನಿಸುತ್ತಾನೆ.

ಆ ಗೋವಿಂದನ ಮತವನ್ನೇ ನಾವು ಅನುಸರಿಸಬೇಕು.

ಹನುಮನಮತವೇ ಹರಿಯಮತವು
ಹರಿಯಮತವೇ ಹನುಮನಮತವು ॥[೧೭]

ಉಕ್ತಿಯಂತೆ ಹನುಮನಮತವೇ ಗೋವಿಂದನ ಮತವು. ಈ ಮತವನ್ನು ಯಾರು ಅನುಸರಿಸುವದಿಲ್ಲವೋ, ಹಿಡಿಯುವದಿಲ್ಲವೋ ಅವನು ಈ ಭೂಮಿಯಲ್ಲಿ ರಾಕ್ಷಸನೆನಿಸುತ್ತಾನೆ.

ಪ್ರಸನ್ನಮೂರುತಿ ವಿಧಿಭವವಂದ್ಯನ ಅರ್ಚಕ ಧನ್ಯರೆ ಮಾನ್ಯರು ।
ಪ್ರಸನ್ನವೆಂಕಟಪತಿ ಕಂಡುಂಡಾ ಭಕ್ತಿಯಾಸಕ್ತರೆ ಮುಕ್ತರು ॥ ೬ ॥

ಪ್ರಸನ್ನ ಮೂರುತಿ ಶ್ರೀಹರಿಯು ಬ್ರಹ್ಮ ರುದ್ರಾದಿಗಳಿಂದ ವಂದ್ಯನಾಗಿದ್ದಾನೆ. ಅವನ ಅರ್ಚಕರೇ ಧನ್ಯರು ಅವರೇ ಮಾನ್ಯರು. ಪ್ರಸನ್ನವೆಂಕಟಪತಿಯಾದ ಶ್ರೀಹರಿಯನ್ನು ಕಂಡು ಅನುಭವಿಸಿ ಭಕ್ತಿಯನ್ನು ಮಾಡುವ ಭಕ್ತರೇ ಮುಕ್ತರೆನಿಸುತ್ತಾರೆ ಎಂಬುದಾಗಿ ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಪ್ರಸನ್ನಮೂರುತಿ ಶ್ರೀಹರಿಯು ಬ್ರಹ್ಮರುದ್ರಾದಿಗಳಿಂದ ವಂದ್ಯನಾಗಿರುವನೆಂಬುದು ಈ ಕೆಳಗಿನ ಪ್ರಮಾಣ ವಚನಗಳಿಂದ ತಿಳಿದು ಬರುತ್ತದೆ.

---

೧೫. ಶ್ರೀ ಭವಿಷ್ಯೋತ್ತರ ಪುರಾಣ
೧೬. ಸದಾಚಾರಸ್ಮೃತಿಃ ೧೩ನೆ ಶ್ಲೋಕ
೧೭. ಶ್ರೀ ಪುರಂದರದಾಸರ ಕೃತಿ.

ಬ್ರಹ್ಮರುದ್ರಾದಿವಂದ್ಯಂ ತ್ವಾಂ ಭಜೇ ವೆಂಕಟನಾಯಕಂ ॥[೧೮]

ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಮ್ ॥[೧೯]

ಇಂಥ ಬ್ರಹ್ಮರುದ್ರಾದಿಗಳಿಂದ ವಂದ್ಯನಾದ ಶ್ರೀಹರಿಯ ಅರ್ಚಕರೇ ಧನ್ಯರು, ಮಾನ್ಯರೂ ಕೂಡ.

ಪ್ರಸನ್ನವೆಂಕಟಪತಿಯಾದ ಶ್ರೀಹರಿಯನ್ನು ಕಂಡು ಭಕ್ತಿಮಾಡುವವರೇ ಮುಕ್ತರೆನಿಸುತ್ತಾರೆ.

ಭಕ್ತೈ ರ್ವ ವೃಣುತೇ ವಿಷ್ಣುಃ ಭಕ್ತ್ಯಾದದ್ಯಾನ್ನಿಜಂ ಪದಮ್ ॥[೨೦]

ಭಕ್ತರ ಭಕ್ತಿಗೆ ಮೆಚ್ಚಿ ''ನಿಜಪದ''ವೆನಿಸಿದ ಮುಕ್ತಿಯನ್ನು ಆ ಭಗವಂತ ನೀಡುತ್ತಾನೆ. ಮುಕ್ತರಾದ ಮೇಲೆ ಕೂಡ ಭಕ್ತರು ಭಗವಂತನಲ್ಲಿ ಭಕ್ತಿ ಮಾಡುತ್ತಾರೆ ಎಂಬುದಾಗಿ ಶ್ರೀ ದಾಸರು ತಿಳಿಸಿ ಮಹೋಪಕಾರ ಮಾಡಿದ್ದಾರೆ.

***

ನಮ್ಮ ಮುಂದಿನ ಪ್ರಕಟಣೆ – ನಿರೀಕ್ಷಿಸಿ
ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೀರ್ತನೆಗಳಲ್ಲಿಯ
ಆಧ್ಯಾತ್ಮಿಕ ಒಳನೋಟ – ಸಂಪುಟ – 6
– ಪ್ರಕಾಶಕರು

---

೧೮. ಶ್ರೀ ವೆಂಕಟೇಶ ಮಹಾತ್ಮೆ (೧-೧)
೧೯. ಶ್ರೀ ದ್ವಾದಶ ಸ್ತೋತ್ರ (೧೧-೧)
೨೦. ಪದ್ಮ ಮಹಾಪುರಾಣ

೭. ಸಂಗವಾಗಲಿ ಸಾಧುಸಂಗವಾಗಲಿ

ಸಂಗವಾಗಲಿ ಸಾಧುಸಂಗವಾಗಲಿ
ಸಂಗದಿಂದ ಲಿಂಗದೇಹ ಭಂಗವಾಗಲಿ ॥ ಪ ॥

ಅಚ್ಯುತಾಂಘ್ರಿನಿಷ್ಠರ ಯದೃಚ್ಛಾಲಾಭತುಷ್ಟರ
ನಿಶ್ಚಯಜ್ಞಾನವಂತರ ಅಚ್ಚಭಾಗವತರ ನಿತ್ಯ ॥ ೧ ॥

ತಂತ್ರಸಾರ ಅಷ್ಟಮಹಾಮಂತ್ರ ಪರಿಪೂರ್ಣಸ್ನೇಹ
ಯಂತ್ರದಿಂದ ಮಾಡಿ ಜಗತ್ ಸ್ವಾತಂತ್ರ್ಯನ ಗುರಿಮಾಡುವವರ ॥ ೨ ॥

ಪಂಚ ಸಂಸ್ಕಾರ ಭೇದ ಪಂಚಯುಕ್ತರಾಗಿ ಪ್ರ
ಪಂಚಸೂತ್ರ ಪ್ರಸನ್ನವೆಂಕಟ ಪಂಚಬಾಣನಯ್ಯನವರ ॥ ೩ ॥

ಶ್ರೀಮದ್ ಭಾಗವತದಲ್ಲಿ ಅರೆಕ್ಷಣದ ಸತ್ಸಂಗವು ಕೂಡ ಮನುಷ್ಯರಿಗೆ ಶ್ರೇಷ್ಠ ನಿಧಿಯಾಗಿದೆಯೆಂದು ತಿಳಿಸಿದ್ದಾರೆ. ಪೂರ್ವದಲ್ಲಿ ನಾರದರು ಬ್ರಹ್ಮದೇವರ ಮನಸ್ಸಿನಿಂದ ಜನಿಸಿ ಮಾನಸಪುತ್ರರೆನಿಸಿ, ಮುಂದಿನ ಜನ್ಮದಲ್ಲಿ ಬ್ರಹ್ಮದೇವರ ತೊಡೆಯಿಂದ ಜನಿಸಿದರು. ಸತ್ಸಂಗದ ಲಾಭದಿಂದಲೇ ಈ ಪುತ್ರತ್ವವು ಅವರಿಗೆ ಲಭಿಸಿತು. ಹಾಗಾಗಿ ಸತ್ಸಂಗವು ಪ್ರತಿಯೊಬ್ಬ ಮಾನವನಿಂದ ಅಪೇಕ್ಷಣೀಯವಾಗಿದೆ ಯೆಂಬುದಾಗಿ ಶ್ರೀವಿಷ್ಣುರಹಸ್ಯ ಗ್ರಂಥದಲ್ಲಿ ತಿಳಿಸಿದ್ದಾರೆ.

ಪ್ರಸುತ ಪದ್ಯದಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಸಾಧು ಸಜ್ಜನರ ಸಹವಾಸವು ಮಾನವರಿಗೆ ನಿರಂತರ ಆಗುತ್ತಿರಬೇಕು. ಇಂಥ ಸಾಧು ಸಂಗದಿಂದ ಲಿಂಗದೇಹ ಭಂಗವಾಗುತ್ತದೆ. ನಂತರ ಶಾಶ್ವತ ಸುಖರೂಪವಾದ ಮೋಕ್ಷವು ದೊರೆಯುವದು ನಿಶ್ಚಿತವೆಂದು ತಿಳಿಸಿದ್ದಾರೆ.

ಸಂಗವಾಗಲಿ ಸಾಧು ಸಂಗವಾಗಲಿ ।
ಸಂಗದಿಂದ ಲಿಂಗದೇಹ ಭಂಗವಾಗಲಿ ॥ ಪ ॥

ಮೊದಲನೆಯದಾಗಿ ''ಸಂಗ''ವೆಂದರೇನು? ವಿಚಾರಿಸುವಾ

ಷಂಜ-ಸಂಗೇ ಘಂಯ್ ಎಂಬ ಧಾತುವಿನಿಂದ ಉತ್ಪನ್ನವಾದ ಈ ಪದಕ್ಕೆ ಸಂಬಂಧ, ಸಹವಾಸ ಎಂದು ಅರ್ಥವಾಗುತ್ತದೆ.

''ಸಾಧು ಸಂಗವಾಗಲಿ'' ಎಂದರೆ ಸಾಧುಜನರ ಸಹವಾಸವು ಉಂಟಾಗಲಿ ಎಂದು ಅಭಿಪ್ರಾಯವು. ಈಗ ಸಾಧುಗಳೆಂದರೆ ಯಾರು? ತಿಳಿಯೋಣ.

ನಿರ್ವೈರಃ ಸದಯಃ ಶಾಂತಃ ದಂಭಾಹಂಕಾರವರ್ಜಿತಃ ।
ನಿರಪೇಕ್ಷೋ ಮುನಿರ್ವಿೀತರಾಗಃ ಸಾಧುರಿಹೋಚ್ಯತೇ ॥

ಸುಭಾಷಿತ ರತ್ನಾವಲಿ

ವೈರರಹಿತನಾಗಿ ದಯೆಯಿಂದ ಕೂಡಿದವನಾಗಿ, ಶಾಂತಸ್ವಭಾವದಿಂದ ಕೂಡಿದ, ಭಗವಂತನಲ್ಲಿಯೇ ಮನಸ್ಸಿಟ್ಟು, ದಂಭ, ಅಹಂಕಾರಗಳನ್ನು ಬಿಟ್ಟ, ಅಪೇಕ್ಷೆರಹಿತನಾದ, ವಿಷಯ ಪದಾರ್ಥಗಳಲ್ಲಿ ಆಸಕ್ತಿರಹಿತನಾದವನು ಯಾವನೋ ಅವನು ''ಸಾಧು'' ಎಂಬುದಾಗಿ ಕರೆಯಲ್ಪಡುತ್ತಾನೆ.

ಧರ್ಮಾಧರ್ಮ ವಿವೇಕೇನ ವೇದಮಾರ್ಗಾನುಸಾರಿಣಃ ।
ಸರ್ವಲೋಕ ಹಿತಾಸಕ್ತಾಃ ಸಾಧವಃ ಪರಿಕೀರ್ತಿತಾಃ ॥

ಪುರಾಣವಚನ

ಧರ್ಮ ಯಾವುದು? ಅಧರ್ಮ ಯಾವುದು? ಎಂಬುದನ್ನು ಚೆನ್ನಾಗಿ ಅರಿತುಕೊಂಡು ವೇದೋಕ್ತ ಧರ್ಮಮಾರ್ಗವನ್ನು ಅನುಸರಿಸುವವರು, ಎಲ್ಲ ಸಜ್ಜನರಿಗೂ ಹಿತವನ್ನು ಮಾಡುವುದರಲ್ಲಿ ಆಸಕ್ತರು ''ಸಾಧು''ಗಳೆಂದು ಹೇಳಲ್ಪಡುತ್ತಾರೆ.

ಇನ್ನು ಸಾಧುಗಳ ಲಕ್ಷಣವೇನು? ತಿಳಿಯೋಣ

ನ ಪ್ರಹೃಷ್ಯತಿ ಸಮ್ಮಾನೇ ನಾವಮಾನೇನ ಕುಪ್ಯತಿ ।
ನ ಕ್ರುದ್ಧಃ ಪರುಷಂ ಬ್ರೂಯಾತ್ ಸಾಧೋರೇತಸ್ತು ಲಕ್ಷಣಂ ॥

ಪುರಾಣ ವಚನ

ತನ್ನನ್ನು ಗೌರವಿಸಿದಾಗ ಸಂತೋಷದಿಂದ ಹಿಗ್ಗದಿರುವುದು, ಅವಮಾನದಿಂದ ಕುಗ್ಗದೇ ಇರುವುದು, ಸಿಟ್ಟು ಮಾಡದಿರುವುದು, ಸಿಟ್ಟಿನಿಂದ ಕಠಿಣ ಮಾತುಗಳನ್ನು ಆಡದಿರುವುದು, ಇವೆಲ್ಲ ಸಾಧುಗಳ ಲಕ್ಷಣಗಳಾಗಿವೆ.

ಇಂಥ ಸಾಧು ಜನರ ಸಂಗವು ಅತೀ ಅವಶ್ಯವಾಗಿದೆ. ಕಾರಣವೆಂದರೆ ಸುಭಾಷಿತವೊಂದು ಹೀಗೆ ಹೇಳುತ್ತದೆ.[೧]

---

೧. ಸುಭಾಷಿತ ರತ್ನಾವಲಿ

ಸಾಧೂನಾಂ ದರ್ಶನಂ ಪುಣ್ಯಂ ತೀರ್ಥಭೂತಾಹಿ ಸಾಧವಃ ।
ಕಾಲೇನ ಫಲತೇ ತೀರ್ಥಂ ಸದ್ಯಃ ಸಾಧು ಸಮಾಗಮಃ ॥

ಸಾಧುಗಳ ದರ್ಶನವು ಪುಣ್ಯಪ್ರದವು. ಸಾಧುಗಳು ತೀರ್ಥಸಮಾನರೇ ಆಗಿರುತ್ತಾರೆ. ತೀರ್ಥವು ಕೆಲವು ಕಾಲದ ನಂತರ ಫಲಕೊಡುವುದಾದರೆ ಸಾಧುಗಳ ಸಮಾಗಮವು, ಸಂಗವು ಕೂಡಲೇ ಫಲಿಸುತ್ತದೆ.

ಇದನ್ನೇ ಶ್ರೀಮದ್ ಭಾಗವತಕಾರರು ಹೀಗೆ ತಿಳಿಸಿದ್ದಾರೆ.

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।[೨]
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥

ಕೇವಲ ನದಿಗಳಲ್ಲಿ ಕಾಣುವ ಜಲವೇ ತೀರ್ಥವಲ್ಲ. ಮಣ್ಣು, ಕಲ್ಲಿನ ಪ್ರತಿಮೆಗಳೇ ದೇವತೆಗಳಲ್ಲ, ಆದರೆ ಅಲ್ಲಿ ಸನ್ನಿಹಿತರಾದ ದೇವತೆಗಳನ್ನು, ತೀರ್ಥಮಾನಿ ಸುರರನ್ನು ಅನುಸಂಧಾನದಿಂದ ತಿಳಿದು ಭಕ್ತಿಯಿಂದ ಸೇವಿಸುವವರನ್ನು ಅವರು ಪಾವನಗೊಳಿಸುತ್ತಾರೆ. ದೇವಪ್ರತಿಮಾ ದರ್ಶನಕ್ಕೆಂದು ಬರುವ ಸಜ್ಜನರು, ಸಾಧುಗಳು ಜ್ಞಾನಪ್ರದರಾದ ಶ್ರೀಪ್ರಾಣವಲ್ಲಭನ ಸಚ್ಚಾಸ್ತ್ರವನ್ನು ಉಪದೇಶಿಸಿ ತತ್‌ಕ್ಷಣವೇ ಮನುಷ್ಯರನ್ನು ಪಾವನ ಮಾಡುತ್ತಾರೆ.

ಭಗವಂತನೇ ಹೇಳಿದ ಮಾತೊಂದನ್ನು ಪರಿಶೀಲಿಸಿದರೆ ಸಾಧುಗಳ ಮಹಿಮೆ ಎಷ್ಟೆಂದು ವಿದಿತವಾಗುತ್ತದೆ.

ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವದ್ವಿಜ ।
ಸಾಧುಭಿರ್ಗ್ರಸ್ತ ಹೃದಯೋ ಭಕ್ತೈರ್ಭಕ್ತಜನಪ್ರಿಯಃ ॥[೩]

ನಾನು ಭಕ್ತರ ಅಧೀನನಾಗಿರುತ್ತೇನೆ. ಅಸ್ವತಂತ್ರನಂತೆ ಇರುತ್ತೇನೆ. ಸಾಧುಗಳಿಂದ ನನ್ನ ಮನಸ್ಸು ವಶೀಕೃತವಾಗಿದೆ. ನಾನು ಭಕ್ತಜನರಿಗೆ ಪ್ರಿಯನಾಗಿರುತ್ತೇನೆ.

ಇಂಥ ಸಾಧುಗಳಲ್ಲಿ ಭಗವಂತನು ನೆಲೆಸಿರುತ್ತಾನೆಂದು ತಿಳಿಸಿದ್ದಾರೆ.

ಸಾಧವೋ ನ್ಯಾಸಿನಃ ಶಾಂತಾ ಬ್ರಹ್ಮಿಷ್ಠಾ ಲೋಕಪಾವನಾಃ ।
ಹರಂತ್ಯಘಂ ತೇಽಂಗ ಸಂಗಾತ್ ತೇಷ್ವಾಸ್ತೇ ಹ್ಯಘಭಿದ್ಧರಿಃ ॥[೪]

೨. ಶ್ರೀಮದ್ ಭಾಗವತ (೧೦-೮೪-೧೧)
೩. ಶ್ರೀಮದ್ ಭಾಗವತ (೯-೬-೫೧)
೪. ಶ್ರೀಮದ್ ಭಾಗವತ (೯-೭-೬)

ಲೋಕವನ್ನು ಪವಿತ್ರೀಕರಿಸುವ ಬ್ರಹ್ಮಜ್ಞಾನಿಗಳು, ಸನ್ಯಾಸಿಗಳು, ಸಾಧುಗಳು ತಮ್ಮ ಅಂಗಸಂಗದಿಂದ ಗಂಗೆಯಲ್ಲಿಯ ಪಾಪವನ್ನು ಪರಿಹರಿಸುತ್ತಾರೆ. ಪಾಪ ಪರಿಹಾರಕನಾದ ಶ್ರೀಹರಿಯು ಅಂತಹ ಸಾಧುಗಳಲ್ಲಿ ನೆಲೆಸಿರುತ್ತಾನೆ.

ಸಾಧುಗಳ ಸಂಗವು ಸುಖನೀಡುವುದೆಂದು ಇಲ್ಲಿ ತಿಳಿಸಿದ್ದಾರೆ.

ಸಂಗಮಃ ಖಲು ಸಾಧೂನಾಮ್ ಉಭಯೇಷಾಂ ಚ ಸಮ್ಮತಃ ।
ಯತ್ ಸಂಭಾಷಣ ಸಂಪ್ರಶ್ನಃ ಸರ್ವೇಷಾಂ ವಿತನೋತಿ ಶಮ್ ॥[೫]

ಸಾಧುಗಳ ಸಂಗವು, ಸಂಭಾಷಣೆಯು, ಪರಿಪ್ರಶ್ನೆಯು ಉಭಯ ಸಜ್ಜನರಿಗೂ ಸುಖವನ್ನು ತಂದುಕೊಡುತ್ತದೆ.

ಶ್ರೀಪ್ರಹ್ಲಾದರಾಜರು -

ಹಿತ್ವಾಽಽತ್ಮಪಾತಂ ಗೃಹಮಂಧಕೂಪಂ ವನಂ
ಗತೋ ಯದ್ ಹರಿಮಾಶ್ರಯೇತ ॥[೬]

ಎಂಬುದಾಗಿ ಹೇಳಿದ್ದಾರೆ.

ಇಲ್ಲಿ ವನ ಎಂದರೆ ಸಜ್ಜನ ಸಂಗವೆಂದೂ, ಗೃಹವೆಂದರೆ ದುಷ್ಟಜನಸಂಗವೆಂದೂ ತಿಳಿಸಿ ಸಜ್ಜನ ಸಂಗವನ್ನು ಮಾಡಿ ಶ್ರೀಹರಿಯನ್ನು ಹೊಂದಬೇಕೆಂದು ತಿಳಿಸಿರುವುದು ಗಮನಾರ್ಹ.

ಸಾಧು ಸಜ್ಜನ ಸಂಗದ ಕುರಿತಂತೆ ಪುರಾಣ ವಾಕ್ಯವೊಂದು ಹೀಗೆ ತಿಳಿಸುತ್ತದೆ.

ದುರ್ಲಭಾಃ ಪುರುಷಾ ಲೋಕೇ ಭಗವದ್ಭಕ್ತಿ ಲಾಲಸಾ ।
ತೇಷಾಂ ಸಂಗೋ ಭವೇದ್ಯಸ್ಯ ತಸ್ಯ ಶಾಂತಿರ್ಹಿ ಶಾಶ್ವತೀ ॥[೭]

ಈ ಲೋಕದಲ್ಲಿ ಭಗವಂತನಲ್ಲಿ ನಿರತಿಶಯವಾದ ಭಕ್ತಿಯನ್ನು ಮಾಡಿ ಅದರಲ್ಲಿಯೇ ಆನಂದಪಡುತ್ತಿರುವ ಸಜ್ಜನರು ಪರಮ ದುರ್ಲಭರೇ ಸರಿ. ಅಂಥ ಸಾಧುಸತ್ಪುರುಷರ ಸಂಗವಾದರೆ ಮಾನವನಿಗೆ ಶಾಶ್ವತವಾದ ಶಾಂತಿಯು ದೊರೆಯುವದು ನಿಶ್ಚಿತ.

೫. ಶ್ರೀಮದ್ ಭಾಗವತ (೪-೨೨-೧೯)
೬. ಶ್ರೀಮದ್ ಭಾಗವತ (೭-೫-೫)
೭. ಶ್ರೀ ನಾರದ ಮಹಾಪುರಾಣ

ಇನ್ನೊಂದು ಪುರಾಣವಾಕ್ಯ ಹೀಗೆ ವರ್ಣಿಸುತ್ತದೆ.

ಸಂಸಾರೇಽಸ್ಮಿನ್ ಕ್ಷಣಾರ್ಧೋಽಪಿ ಸತ್ಸಂಗಃ ಶೇವಧಿರ್ನೃಣಾಂ ।
ಯಸ್ಮಾದವಾಪ್ಯತೇ ಸರ್ವಂ ಪುರುಷಾರ್ಥ ಚತುಷ್ಟಯಮ್ ॥[೮]

ಈ ಸಂಸಾರದಲ್ಲಿ ಅರೆಕ್ಷಣವಾದರೂ ಸಾಧುಗಳ ಸಂಗ ದೊರಕಿದರೆ ಅದುವೆ ಒಂದು ದೊಡ್ಡ ನಿಧಿಯಿದ್ದಂತೆ. ಏಕೆಂದರೆ ಅದರಿಂದ ಎಲ್ಲ ನಾಲ್ಕು ಪುರುಷಾರ್ಥಗಳು ಲಭಿಸುತ್ತವೆ.

ಶ್ರೀಮನ್ ಮಹಾಭಾರತದಲ್ಲಿ ಸಜ್ಜನ ಸಂಗದ ಕುರಿತು ಹೀಗೆ ತಿಳಿಸಿರುವರು.

ಮೋಹಜಾಲಸ್ಯ ಯೋನಿರ್ಹಿ ಮೂಢೈರೇವ ಸಮಾಗಮಃ ।
ಅಹನ್ಯಹನಿ ಧರ್ಮಸ್ಯ ಯೋನಿಃ ಸಾಧು ಸಮಾಗಮಃ ।
ಸದ್ಭಿಶ್ಚ ಸಹ ಸಂಸರ್ಗಃ ಕಾರ್ಯಂ ಶಮಪರಾಯಣೈಃ ॥[೯]

ಮೂಢಜನರ ಸಮಾಗಮವು ಮೋಹಜಾಲಕ್ಕೆ ಕಾರಣವಾಗುತ್ತದೆ. ಆದರೆ ಸಾಧು ಸಮಾಗಮವು ಧರ್ಮಕ್ಕೆ ಕಾರಣವಾಗುತ್ತದೆ. ಈ ಕಾರಣದಿಂದ ಭಗವದ್ಭಕ್ತರು ಸಜ್ಜನರ ಜೊತೆ ಸಂಸರ್ಗವನ್ನು ಮಾಡಬೇಕಾದುದು ಅವಶ್ಯವಾಗಿದೆ.

ಸಜ್ಜನಸಂಗದಿಂದಾಗುವ ಲಾಭವನ್ನು ಹೀಗೆ ತಿಳಿಸಿಕೊಟ್ಟಿದ್ದಾರೆ.

ಸತಾಂ ಪ್ರಸಂಗಾನ್ಮಮ ವೀರ್ಯಸಂಪದೋ
ಭವಂತಿ ಹೃತ್ಕರ್ಣ ರಸಾಯನಾಃ ಕಥಾಃ ।
ತಜ್ಜೋಷಣಾದಾಶ್ವಪವರ್ಗವರ್ತ್ಮನಿ
ಶ್ರದ್ಧಾವತೀ ಭಕ್ತಿರನುಕ್ರಮಿಷ್ಯತಿ ॥[೧೦]

ಸಜ್ಜನ ಸಹವಾಸದಿಂದ ಕಿವಿ ಮನಸ್ಸುಗಳಿಗೆ ಅಮೃತದಂತೆ ಆನಂದವನ್ನುಂಟು ಮಾಡುವ ಶ್ರೀಹರಿಯ ಮಹಿಮೆಗಳ ಸಂಪದ್ಯುಕ್ತ ಚರಿತ್ರೆಗಳ ಲಾಭವಾಗುತ್ತದೆ. ನಂತರ ಭಗವದಪರೋಕ್ಷಕ್ಕೆ ಮಹಾತ್ಮರ ಸೇವೆಯ ಪ್ರಭಾವದಿಂದ ಸಾಕ್ಷಾತ್ ಸಾಧಕವಾದ ಭಕ್ತಿಯು ಕ್ರಮೇಣ ಅಭಿವೃದ್ಧಿ ಹೊಂದುತ್ತದೆ.

---

೮. ಶ್ರೀ ಪದ್ಮಮಹಾಪುರಾಣ
೯. ವನಪರ್ವ
೧೦. ಶ್ರೀಮದ್ ಭಾಗವತ (೩-೨೬-೨೫)

ಸಾಧುಗಳ ಸೇವನೆಯಿಂದ ತಾನಾಗಿಯೇ ಬರುವ ಈ ಭಕ್ತಿಯು ಲಿಂಗದೇಹ ಭಂಗಕ್ಕೆ ಕಾರಣವಾಗಿ ಮೋಕ್ಷವನ್ನು ದೊರಕಿಸಿ ಕೊಡುತ್ತದೆ.[೧೧]

ಈ ಎಲ್ಲ ಕಾರಣಗಳಿಂದ ನಾವು ಯಾವಾಗಲೂ

ದೇಹಿ ಸದಾ ಸಜ್ಜನಾನಾಂ ಚ ಸಂಗಂ ।
ದಗ್ಧಂ ಕುರು ದುರ್ಜನಾನಾಂ ಚ ಸಂಗಂ ॥[೧೨]

ಆ ಭಗವಂತನಲ್ಲಿ ಸಜ್ಜನಸಂಗವನ್ನು ಕೊಡು ದುರ್ಜನ ಸಂಗವನ್ನು ನಾಶ ಮಾಡು ಎಂಬುದಾಗಿ ಪ್ರಾರ್ಥಿಸುತ್ತಿರಬೇಕು.

ಅಂತೆಯೇ ''ಶ್ರೀದಾಸರು ಸಂಗವಾಗಲಿ ಸಾಧು ಸಂಗವಾಗಲಿ'' ಎಂಬುದಾಗಿ ಹೇಳಿರುವ ಮಾತು ಮತ್ತೆ ಮತ್ತೆ ಮೆಲುಕು ಹಾಕುವಂತಿದೆ.

ಅಚ್ಯುತಾಂಘ್ರಿನಿಷ್ಠರ ಯದೃಚ್ಛಾಲಾಭ ತುಷ್ಟರ
ನಿಶ್ಚಯ ಜ್ಞಾನವಂತರ ಅಚ್ಚ ಭಾಗವತರ ನಿತ್ಯ ॥ ೧ ॥

ಇಲ್ಲಿ

೧. ಭಗವಂತನ ಪಾದಾರವಿಂದಗಳಲ್ಲಿಯೇ ನಿಷ್ಠೆಯಿಂದ ಮನಸ್ಸಿಟ್ಟವರ,
೨. ಭಗವಂತನಿಂದ ಕೊಡಲ್ಪಟ್ಟ ಅನ್ನಾದಿ ವಿಷಯಗಳಲ್ಲಿ ತೃಪ್ತಿಯಿಂದ ಇರುವವರ
೩. ತಾರತಮ್ಯೋಪೇತವಾಗಿ ಭಗವಂತನೇ ಸರ್ವೋತ್ತಮನೆಂಬ ನಿಶ್ಚಿತವಾದ ಜ್ಞಾನವುಳ್ಳವರ.
೪. ಭಾಗವತ ಧರ್ಮಗಳನ್ನೇ ನಿತ್ಯದಲ್ಲಿ ಆಚರಿಸುವವರ ಸಂಗವಾಗಲಿ ಎಂಬುದಾಗಿ ತಿಳಿಸಿಕೊಟ್ಟಿದ್ದಾರೆ.

ಮೊದಲು ''ಅಚ್ಯುತಾಂಘ್ರಿನಿಷ್ಠರ'' ಪದದ ಔಚಿತ್ಯವನ್ನು ನೋಡೋಣ. ಭಗವಂತನಿಗೆ ''ಅಚ್ಯುತ''ನೆಂಬ ಹೆಸರು ಶ್ರೀವಿಷ್ಣುಸಹಸ್ರನಾಮದಲ್ಲಿ ಬಂದಿದೆ.[೧೩]

ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ ॥

---

೧೧. ಲಭತೇ ಮಯಿಸದ್ಭಕ್ತಿಂ ಮತ್ಸೃತಿಃ ಸಾಧು ಸೇವಯಾ ॥
ಶ್ರೀಮದ್ ಭಾಗವತ (೧೧-೧೧-೪೭)
೧೨. ಶ್ರೀ ಗರುಡಪುರಾಣ
೧೩. ಶ್ರೀಮನ್ ಮಹಾಭಾರತ-ಅನುಶಾಸನಪರ್ವ ೧೦೩ನೆಯ ನಾಮ

''ಅಚ್ಯುತ'' ನಾಮದ ಅರ್ಥಗಳನ್ನು ಅವಲೋಕಿಸಿದಾಗ ಶ್ರೀದಾಸರು ಈ ನಾಮವನ್ನು ಉಲ್ಲೇಖಿಸಿದ ಔಚಿತ್ಯವೇನೆಂದು ತಿಳಿದುಬರುತ್ತದೆ.

೧. **ದೇಶತಃ ಕಾಲತಃ ಗುಣತಶ್ಚ ಚ್ಯುತಿರಹಿತತ್ವಾತ್ ಅಚ್ಯುತಃ ॥**[೧೪]
ದೇಶ, ಕಾಲ ಗುಣಗಳಿಂದ ನಾಶರಹಿತನಾದ ಪ್ರಯುಕ್ತ ಭಗವಂತನಿಗೆ ಅಚ್ಯುತನೆಂದು ಹೆಸರಿದೆ.

೨. **ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ**[೧೫]
ನಿತ್ಯದಲ್ಲಿಯೂ ಬಿಡದೇ ಎಲ್ಲ ಗುಣಗಳಿಂದ ತುಂಬಿರುವವನಾದ್ದರಿಂದ ಅಚ್ಯುತನು.

೩. **ಕದಾಽಪಿ ಸ್ವಪದಾತ್ ನ ಚ್ಯವತೇ ಭ್ರಶ್ಯತ ಇತಿ ಅಚ್ಯುತಃ ।**
ತನ್ನ ಸ್ಥಾನದಿಂದ ಎಂದೂ ಭ್ರಷ್ಟನಾಗದಿರುವವನಾದ್ದರಿಂದ ಅಚ್ಯುತನು.

೪. **ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ಶಕ್ತಿಃ ಪರಾತ್ಮನಃ ।**
ನಿತ್ಯಾನಂದೋಽವ್ಯಯಃ ಪೂರ್ಣೋ ಭಗವಾನ್ ವಿಷ್ಣುರಚ್ಯುತಃ ॥[೧೬]
ಭಗವಂತನ ಜ್ಞಾನ, ಕ್ರಿಯಾ, ಬಲ, ಶಕ್ತ್ಯಾದಿಗಳು ನಿತ್ಯವಾಗಿವೆ. ಭಗವಂತನು ನಿತ್ಯಾನಂದನು, ಅವ್ಯಯನು, ಪೂರ್ಣನು ಇವನೇ ''ಅಚ್ಯುತ''ನೆಂಬ ಹೆಸರಿನಿಂದ ಪ್ರತಿಪಾದ್ಯನು ಎಂಬುದಾಗಿ ಶ್ರೀಮದಾಚಾರ್ಯರು ತಿಳಿಸಿರುವರು.

ಇಂಥ ಭಗವಂತನ ಪಾದಗಳಲ್ಲಿ ನಿಷ್ಠೆಯುಳ್ಳವರ ಸಂಗ ದೊರೆಯಬೇಕು ಎನ್ನುತ್ತಿದ್ದಾರೆ ಶ್ರೀದಾಸರು.

ಶಾಂತಾಃ ಸಮದೃಶಃ ಶುದ್ಧಾಃ ಸರ್ವಭೂತಾನುರಂಜಕಾಃ ।
ಯಾಂತ್ಯಂಜಸಾಚ್ಯುತ ಪದಮ್ ಅಚ್ಯುತ ಪ್ರಿಯಬಾಂಧವಾಃ ॥[೧೭]

ಇಲ್ಲಿ ತಿಳಿಸಿದಂತೆ ಯಾರು ಶಾಂತರೋ, ಶುದ್ಧರೋ, ಸರ್ವಪ್ರಾಣಿಗಳಲ್ಲಿ ದಯೆವುಳ್ಳವರೋ, ಎಲ್ಲ ಅಧಿಷ್ಠಾನಗಳಲ್ಲಿ ಭಗವಂತನನ್ನು ನಿರ್ದೋಷವಾಗಿ ನೋಡುವವರೋ ಅವರು ಅಚ್ಯುತನೆನಿಸಿದ ಶ್ರೀಹರಿಯ ಪಾದಗಳನ್ನು ಹೊಂದುತ್ತಾರೆ.

---

೧೪. ಶ್ರೀ ಸತ್ಯಸಂಧೀಯ ವಿಷ್ಣುಸಹಸ್ರನಾಮ ಭಾಷ್ಯ
೧೫. ಶ್ರೀ ದ್ವಾದಶ ಸ್ತೋತ್ರ (೮-೮)
೧೬. ಅನುವ್ಯಾಖ್ಯಾನ (೧-೨-೭)
೧೭. ಶ್ರೀಮದ್ ಭಾಗವತ (೪-೧೨-೩೭)

ಇಂಥವರ ಸಂಗವು ಆಗಬೇಕಾದುದು ಅವಶ್ಯವೇ ಸರಿ. ಇನ್ನು ಶ್ರೀಮದ್ ಭಾಗವತದಲ್ಲಿ -

ಸ್ತ್ರೀಣಾಂ ಸ್ತ್ರೀಸಂಗಿನಾಂ ಸಂಗಂ ತ್ಯಕ್ತಾ ದೂರತ ಆತ್ಮವಾನ್ (೧೧-೧೪-೨೯) ಎಂಬುದಾಗಿ ಹೇಳಿದ್ದಾರೆ.

ಇದರ ಅರ್ಥವನ್ನು ಶ್ರೀಮದಾಚಾರ್ಯರು ಶ್ರೀಭಾಗವತ ತಾತ್ಪರ್ಯದಲ್ಲಿ - ಅರ್ಥೈಸಿರುವ ಪರಿ ಹೀಗಿದೆ -

ಸ್ತ್ರೀ ಪದಕ್ಕೆ ''ಕೇಶವೇ ತು ಅನ್ಯಥಾ ಬುದ್ಧಿಃ ಸ ಏವ ಸ್ತ್ರೀ ಪರಿಕೀರ್ತಿತಾ'' - ಎಂಬುದಾಗಿ ಹೇಳಿ ಭಗವಂತನಲ್ಲಿ ಮಾಡುವ ಅನ್ಯಥಾ ಬುದ್ಧಿ ಅಂದರೆ ಭಗವಂತನು ಸ್ವತಂತ್ರನು ನಾವು ಅಸ್ವತಂತ್ರರು ಎಂದು ತಿಳಿಯದೇ ನಾನೇ ಬ್ರಹ್ಮನು ಎಂಬುದಾಗಿ ಯಾರು ಚಿಂತನ ಮಾಡುವರೋ, ಅವರ ಬುದ್ಧಿಗೆ ಸ್ತ್ರೀ ಎಂದು ಕರೆಯುತ್ತಾರೆ. ಇಂಥ ಜನರ ಸಂಗವು ಎಂದಿಗೂ ಕೂಡದು. ಇದನ್ನು ಬಿಟ್ಟು ''ಸ್ವತಂತ್ರೋ ಭಗವಾನ್ ವಿಷ್ಣುಃ'' ಭಗವಂತನು ಸ್ವತಂತ್ರನು, ನಾವು ಅವನ ದಾಸರು ಅವನೇ ಈಶ ಹೀಗೆ ತಿಳಿಯುತ್ತ ಭಗವಂತನ ಪಾದಕಮಲಗಳಲ್ಲಿ ನಿಷ್ಠೆಹೊಂದಿರುವ, ಸಾಧು ಜನರ ಸಂಗವು ಅಪೇಕ್ಷಣೀಯವಾಗಿದೆ.

ಇನ್ನು ''ಯದೃಚ್ಛಾಲಾಭತುಷ್ಟರ'' ಪದದ ಔಚಿತ್ಯವನ್ನು ನೋಡೋಣ -

ಯದೃಚ್ಛೆಯಿಂದ ಅಂದರೆ ಭಗವಂತನಿಂದ ಕೊಡಲ್ಪಟ್ಟ ಅನ್ನಾದಿ ವಿಷಯಗಳಲ್ಲಿ ತೃಪ್ತಿಯಿಂದ ಇರುವ ಸಾಧುಸಜ್ಜನರ ಸಂಗವು ಅವಶ್ಯವಾಗಿದೆ.

ಯದೃಚ್ಛಾ ಪ್ರಾಪ್ತದ್ರವ್ಯೇಣ ಯೇ ತು ಸಂತುಷ್ಟಾಃ
ತೇಷ್ವತ್ರಯೋಗ್ಯಾಃ ॥[೧೮]

ಯದೃಚ್ಛೆಯಿಂದ ಬಂದ ದ್ರವ್ಯಾದಿಗಳಿಂದ ಯಾರು ಸಂತುಷ್ಟರಾಗಿರುವರೋ ಅವರು ಯೋಗ್ಯರೆನಿಸುತ್ತಾರೆ.

ಯದೃಚ್ಛಾಲಾಭ ತುಷ್ಟಸ್ಯ ತೇಜೋ ವಿಪ್ರಸ್ಯ ವರ್ಧತೇ ॥[೧೯]

ಎಂಬಂತೆ ಯದೃಚ್ಛಾಲಾಭ ಸಂತುಷ್ಟರಾದ ಬ್ರಾಹ್ಮಣರ ತೇಜಸ್ಸು ವರ್ಧಿಸುತ್ತದೆ.

---

೧೮. ಗರುಡ ಪುರಾಣ ವಚನ
೧೯. ಶ್ರೀಮದ್ ಭಾಗವತ (೮-೧೯-೨೬)

ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।
ಸಮಃ ಸಿದ್ಧಾವಸಿದ್ಧೌಚ ಕೃತ್ವಾಪಿ ನ ನಿಬದ್ಧ್ಯತೇ ॥[೨೦]

ಪ್ರಯತ್ನವಿಲ್ಲದೇ ಭಗವದಿಚ್ಛೆಯಿಂದ ಬಂದ ವಿಷಯಗಳಿಂದ ಸಂತುಷ್ಟನಾದ, ಫಲವು ಬಂದರೂ ಬಾರದಿದ್ದರೂ ಸುಖದುಃಖಗಳನ್ನು ಹೊಂದದಿರುವ, ಮಾತ್ಸರ್ಯ ರಹಿತನಾಗಿರುವ, ಮನುಷ್ಯನು ಕರ್ಮಗಳನ್ನು ಮಾಡಿದಾಗ್ಯೂ ಕರ್ಮದಿಂದ ಬದ್ಧನಾಗುವದಿಲ್ಲ.

ಇಂಥ ''ಯದೃಚ್ಛಾಲಾಭತುಷ್ಟರ'' ಸಂಗವು ಲಭಿಸಲಿ ಎಂಬುದಾಗಿ ಶ್ರೀದಾಸರು ಹೇಳುತ್ತಿದ್ದಾರೆ.

ಇನ್ನು ''ನಿಶ್ಚಯಜ್ಞಾನವಂತರ'' ಪದದ ಅರ್ಥವನ್ನು ತಿಳಿಯುವಾ –

೧. ಭಗವಂತನೇ ಸೃಷ್ಟ್ಯಾದಿ ವ್ಯಾಪಾರಗಳನ್ನು ಮಾಡುವವನು.

ಉತ್ಪತ್ತಿಸ್ಥಿತಿ ಸಂಹಾರಾ ನಿಯತಿರ್ಜ್ಞಾನಮಾವೃತಿಃ ।
ಬಂಧ ಮೋಕ್ಷೌ ಚ ಪುರುಷಾತ್ ಯಸ್ಮಾತ್ ಸ ಹರಿರೇಕರಾಟ್ ॥[೨೧]

ಎಂಬಂತೆ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮೋಕ್ಷಗಳು ಆ ಶ್ರೀಹರಿಯಿಂದಲೇ ಆಗುತ್ತವೆ ಎಂಬ ನಿಶ್ಚಿತ ಜ್ಞಾನ ಇರುವವರ ಸಂಗವು ಆಗಬೇಕು.

೨. ಭಗವಂತನೊಬ್ಬನೇ ಸರ್ವೋತ್ತಮನು, ಅವನು ಸಮಾಧಿಕ ರಹಿತನು,

ಏಕಮೇವಾದ್ವಿತೀಯಂ ಬ್ರಹ್ಮ ॥ ಶ್ರುತಿ
ವಿಷ್ಣೋಃ ಸರ್ವೋತ್ತಮತ್ವ ಏವ ಮಹಾತಾತ್ಪರ್ಯಂ ಸರ್ವಾಗಮಾನಾಮ್ ॥[೨೨]

ಎಂಬಂತೆ ಭಗವಂತನು ಅದ್ವಿತೀಯನಾಗಿದ್ದಾನೆ. ಎಲ್ಲ ವೇದಗಳ ಮಹಾತಾತ್ಪರ್ಯವು ಶ್ರೀವಿಷ್ಣುಸರ್ವೋತ್ತಮತ್ವವೇ ಆಗಿದೆ.

ಶ್ರೀಕೃಷ್ಣನನ್ನು ಕುರಿತು ಅರ್ಜುನ ಹೇಳುತ್ತಾನೆ –

೨೦. ಶ್ರೀಮದ್ ಭಗವದ್ಗೀತಾ (೪-೨೨)
೨೧. ಬ್ರಹ್ಮಸೂತ್ರ ಭಾಷ್ಯದಲ್ಲಿ ಸ್ಕಾಂದ ವಚನ (೧-೧-೨)
೨೨. ಶ್ರೀ ವಿಷ್ಣುತತ್ವವಿನಿರ್ಣಯ

ನ ತ್ವತ್ ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮ ಪ್ರಭಾವ ॥[೨೩]

ಭಗವಂತ! ನಿನಗೆ ಸಮನಾದವನು ಇನ್ನೊಬ್ಬನಿಲ್ಲ, ಹಾಗಿರುವಾಗ ಅಧಿಕನೆಲ್ಲಿ? ಇರಲು ಸಾಧ್ಯವೇ ಇಲ್ಲ.

ಹೀಗೆ ನಿಶ್ಚಿತ ಜ್ಞಾನವುಳ್ಳವರ ಸಂಗವು ಭಗವಂತನಲ್ಲಿ ಭಕ್ತಿಯ ಅಭಿವೃದ್ಧಿಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

೩. ತಾರತಮ್ಯ ಕ್ರಮದಲ್ಲಿ ಶ್ರೀಹರಿಯೇ ಸರ್ವೋತ್ತಮನು.

ಇಂದ್ರಿಯೇಭ್ಯಃ ಪರಂ ಮನೋ ಮನಸಸ್ತು ಸತ್ತ್ವಮುತ್ತಮಮ್ ।
ಸತ್ತ್ವಾದಧಿಮಹಾನಾತ್ಮಾ ಮಹತೋಽವ್ಯಕ್ತಮುತ್ತಮಮ್ ॥

ಅವ್ಯಕ್ತಾತ್ತು ಪರಃ ಪುರುಷೋ ವ್ಯಾಪಕೋಽಲಿಂಗ ಏವ ಚ ।
ತಂ ಜ್ಞಾತ್ವಾ ಮುಚ್ಯತೇ ಜಂತುಃ ಅಮೃತ ತ್ವಂ ಚ ಗಚ್ಛತಿ ॥[೨೪]

ಇಂದ್ರಿಯಾಭಿಮಾನಿ ದೇವತೆಗಳಿಗಿಂತ ಮನೋಭಿಮಾನಿ ದೇವತೆಯು ಉತ್ತಮನು. ಮನೋಭಿಮಾನಿ ದೇವತೆಗಿಂತ ಬುದ್ಧಿಗೆ ಅಭಿಮಾನಿ ದೇವತೆಯು ಉತ್ತಮಳು. ಅವಳಿಗಿಂತ ಮಹತ್ತತ್ತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮನು ಉತ್ತಮನು. ಅವನಿಗಿಂತ ಅವ್ಯಕ್ತ ತತ್ತ್ವಾಭಿಮಾನಿಯಾದ ರಮಾದೇವಿಯು ಉತ್ತಮಳು ಅವಳಿಗಿಂತ ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತ ಉತ್ತಮನು. ಅವನು ಅಪರಿಚ್ಛಿನ್ನನೂ ಮತ್ತು ಪ್ರಾಕೃತ ದೇಹ ರಹಿತನೂ ಆಗಿದ್ದಾನೆ. ಇಂತಹ ಭಗವಂತನು ತಾರತಮ್ಯದಲ್ಲಿ ಅತ್ಯುತ್ತಮ ಸ್ಥಾನವನ್ನು ಪಡೆದಿದ್ದಾನೆ.

ಹೀಗೆ ತಿಳಿದ ಜ್ಞಾನಿಯು ಸಂಸಾರದಿಂದ ಮುಕ್ತನಾಗುತ್ತಾನೆ. ಅಂದರೆ ಜನನ ಮರಣಗಳಿಲ್ಲದ ಮೋಕ್ಷವನ್ನು ಹೊಂದುತ್ತಾನೆ.

ಇಂಥ ಜ್ಞಾನಿಗಳ ಸಂಗವಾಗಲಿ ಎಂಬುದು ಶ್ರೀದಾಸರ ಆಶಯವಾಗಿದೆ.

ಇನ್ನು ''ಅಚ್ಚಭಾಗವತರ ನಿತ್ಯ'' ಪದದ ಅರ್ಥವನ್ನು ತಿಳಿಯೋಣ – ನಿತ್ಯದಲ್ಲಿಯೂ ಭಾಗವತ ಧರ್ಮಗಳನ್ನು ಪಾಲಿಸುವವರು ''ಅಚ್ಚಭಾಗವತರೆಂದು ಕರೆಸಿಕೊಳ್ಳುತ್ತಾರೆ.

೨೩. ಶ್ರೀಮದ್ ಭಗವದ್ಗೀತಾ (೧೧-೪೩)
೨೪. ಕಾಠಕೋಪನಿಷತ್ (೨-೩-೭,೮)

ಯೇ ಹಿತಾಸ್ಸರ್ವಜಂತೂನಾಂ ಗತಾಸೂಯಾ ಅಮತ್ಸರಾಃ ।
ವಶಿನೋ ನಿಃಸ್ಪೃಹಾಃ ಶಾಂತಾಸ್ತೇವೈ ಭಾಗವತೋತ್ತಮಾಃ ॥[೨೫]

ಎಲ್ಲ ಪ್ರಾಣಿಗಳಿಗೆ ಹಿತವನ್ನುಂಟು ಮಾಡುವವರು, ನಿಜವಾದ ಭಾಗವತರಲ್ಲಿ ಮಾತ್ಸರ್ಯವನ್ನು ಹೊಂದದಿರುವವರು, ಸ್ವಾರ್ಥ ದುರಾಸೆಗಳಿಲ್ಲದಿರುವವರು, ಸ್ವಭಾವದಿಂದ ಶಾಂತರಾಗಿ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿರುವವರು ''ಭಾಗವತೋತ್ತಮ''ರೆಂದು ಕರೆಸಿಕೊಳ್ಳುತ್ತಾರೆ.

ಭಾಗವತ ಧರ್ಮಗಳು ಒಟ್ಟು ಮೂವತ್ತು ಇರುತ್ತವೆ.

ಸರ್ವತೋ ಮನಸೋಽಸಂಗಮಾದೌ ಸಂಗಂ ಚ ಸಾಧುಷು ।
ದಯಾಂ ಮೈತ್ರೀಂ ಪ್ರಶ್ರಯಾಂ ಚ ಭೂತೇಷ್ವದ್ಧಾ ಯಥೋಚಿತಮ್ ॥

ಶೌಚಂ ತಪಸ್ತಿತಿಕ್ಷಾಂ ಚ ಮೌನಂ ಸ್ವಾಧ್ಯಾಯಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾಂ ಚ ಸಮತ್ವಂ ದ್ವಂದ್ವ ಸಂಜ್ಞಯೋಃ ॥

ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಂ ಅನಿಕೇತನಮ್ ।
ವಿವಿಕ್ತಂ ಚೀರವಸನಂ ಸಂತೋಷಂ ಯೇನಕೇನಚಿತ್ ॥

ಶ್ರದ್ಧಾಂ ಭಾಗವತೇ ಶಾಸ್ತ್ರೇ ಅನಿಂದಾಮನ್ಯತ್ರ ಚಾಪಿ ಹಿ ।
ಮನೋವಾಕ್ ಕರ್ಮದಂಡಂ ಚ ಸತ್ಯಂ ಶಮದಮಾವಪಿ ॥

ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತ ಕರ್ಮಣಃ ।
ಜನ್ಮಕರ್ಮ ಗುಣಾನಾಂ ಚ ತದರ್ಥೇಽಖಿಲಚೇಷ್ಟಿತಮ್ ॥

ಇಷ್ಟಂ ದತ್ತಂ ತಪೋಜಪ್ತಂ ವೃತ್ತಂ ಯಚ್ಚಾತ್ಮನಃ ಪ್ರಿಯಮ್ ।
ದಾರಾನ್ ಸುತಾನ್ ಗೃಹಾನ್ ಪ್ರಾಣಾನ್ ಯತ್ ಪರಸ್ಮೈನಿವೇದನಮ್ ॥[೨೬]

೧. ಸರ್ವತಃ ಮನಸಃ ಅಸಂಗ, ೨. ಸಾಧುಜನರ ಸಂಗ, ೩. ಸಜ್ಜನರಲ್ಲಿ ದಯೆ, ೪. ಸಜ್ಜನರಲ್ಲಿ ಮಿತ್ರತೆ, ೫. ಸಜ್ಜನರಲ್ಲಿ ಭಕ್ತಿ, ೬. ಶೌಚ, ೭. ತಪಸ್ಸು, ೮. ತಿತಿಕ್ಷಾ, ೯. ಮೌನ, ೧೦. ಸ್ವಾಧ್ಯಾಯ, ೧೧. ಆರ್ಜವ, ೧೨. ಬ್ರಹ್ಮಚರ್ಯ, ೧೩. ಅಹಿಂಸಾ, ೧೪. ದ್ವಂದ್ವಸಮತ್ವ, ೧೫. ಸರ್ವತ್ರ ಆತ್ಮೇಶ್ವರ ಅನ್ವೀಕ್ಷಾ, ೧೬. ಕೈವಲ್ಯ, ೧೭. ಅನಿಕೇತತೆ, ೧೮. ವಿವಿಕ್ತತೆ, ೧೯. ಚೀರವಸನ, ೨೦. ಸಂತೋಷ, ೨೧. ಭಾಗವತ

೨೫. ಶ್ರೀ ನಾರದ ಮಹಾಪುರಾಣ
೨೬. ಶ್ರೀಮದ್ ಭಾಗವತಪುರಾಣ (೧೧-೩-೨೩)

ಶಾಸ್ತ್ರದಲ್ಲಿ ಶ್ರದ್ಧೆ, ೨೨. ಅನ್ಯಶಾಸ್ತ್ರನಿಂದೆ, ೨೩. ಮನೋವಾಕ್ಕರ್ಮದಂಡ, ೨೪. ಸತ್ಯ, ೨೫. ಶಮ, ೨೬. ದಮ, ೨೭. ಶ್ರವಣ, ೨೮. ಕೀರ್ತನ, ೨೯. ಹರಿಧ್ಯಾನ, ೩೦. ಸರ್ವ ಸಮರ್ಪಣೆ.

ಅಚ್ಚ ಭಾಗವತರ ವೈಶಿಷ್ಟ್ಯ ಪೂರ್ಣವಾದ ಲಕ್ಷಣ ಹೀಗಿದೆ -

ದೇಹೇಂದ್ರಿಯ ಪ್ರಾಣ ಮನೋಧಿಯಾಂ ಯೋ
ಜನ್ಮಾಪ್ಯಯ ಕ್ಷುದ್ಭಯ ತರ್ಷಕೃಚ್ಛ್ರೈಃ ।
ಸಂಸಾರಧರ್ಮೈಃ ಅವಿಮುಹ್ಯಮಾನಃ
ಸ್ಮೃತ್ಯಾ ಹರೇಃ ಭಾಗವತ ಪ್ರಧಾನಃ ॥[೨೭]

ದೇಹ, ಇಂದ್ರಿಯ, ಪ್ರಾಣ ಮನೋಬುದ್ಧಿಗಳಿಂದ ಬಂದೊದಗುವ ಜನನ, ಮರಣ, ಹಸಿವೆ, ನೀರಡಿಕೆ, ಭಯ, ಆಸೆ, ಕಷ್ಟಗಳೆಂಬ ಸಂಸಾರ ಧರ್ಮಗಳ ಸ್ವರೂಪವನ್ನು ಸರಿಯಾಗಿ ತಿಳಿದು ಶ್ರೀಹರಿಯ ಸಂತತ ಸ್ಮರಣೆಯಿಂದ ನಿರ್ವಿಕಾರನಾಗಿರುವವನು ಭಾಗವತೋತ್ತಮನು.

ಇಂಥವರ ಸಂಗವು ಅಪೇಕ್ಷಿತವಾದುದೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ತಂತ್ರಸಾರ ಅಷ್ಟಮಹಾಮಂತ್ರ ಪರಿಪೂರ್ಣಸ್ನೇಹ ।
ಯಂತ್ರದಿಂದ ಮಾಡಿ ಜಗತ್ ಸ್ವಾತಂತ್ರ್ಯನ ಗುರಿಮಾಡುವವರ ॥ ೨ ॥

ತಂತ್ರಸಾರೋಕ್ತ ಪೂಜೆಯನ್ನು ಮಾಡುತ್ತ, ಅಷ್ಟಮಹಾಮಂತ್ರಗಳನ್ನು ನಿತ್ಯವೂ ತಪ್ಪದೇ ಜಪಿಸುತ್ತ, ಭಗವಂತನಲ್ಲಿ ಇತರ ಎಲ್ಲ ವಸ್ತುಗಳಿಗಿಂತಲೂ ಅಧಿಕಾಧಿಕ ಸ್ನೇಹ(ಭಕ್ತಿ)ವನ್ನು ಮಾಡುತ್ತ, ಈ ಜಗತ್ತಿನಲ್ಲಿ ಸ್ವತಂತ್ರನಾದವನು ಭಗವಂತನೊಬ್ಬನೇ ಎಂಬುದಾಗಿ ತಿಳಿಯುವವರ ಸಂಗವಾಗಲಿ ಎಂದು ದಾಸರು ಇಲ್ಲಿ ತಿಳಿಸಿದ್ದಾರೆ.

ಈಗ ''ತಂತ್ರಸಾರ''ದ ಬಗ್ಗೆ ತಿಳಿಯೋಣ -

''ತಂತ್ರ''ವೆಂದರೆ -

ತನೋತಿ ವಿಪುಲಾನರ್ಥಾನ್ ತಂತ್ರಮಂತ್ರ ಸಮನ್ವಿತಾನ್ ।
ತ್ರಾಣಂ ಚ ಕುರುತೇ ಯಸ್ಮಾತ್ ತಂತ್ರಮಿತ್ಯಭಿಧೀಯತೇ ॥[೨೮]

೨೭. ಶ್ರೀಮದ್ ಭಾಗವತಪುರಾಣ (೧೧-೨-೪೯)
೨೮. ತಂತ್ರಗ್ರಂಥಗಳು-ಚತುರ್ಮುಖ ಬ್ರಹ್ಮ ಮತ್ತು ವಿಷ್ಣುವಿನ ಸಂವಾದ ರೂಪವಾದುದು.

ತತ್ವಗಳನ್ನು, ಮಂತ್ರಗಳನ್ನು ತಿಳಿಸಿಕೊಡುವುದಲ್ಲದೇ ಸಂಸಾರ ಭಯದಿಂದ ರಕ್ಷಣೆ ನೀಡುವುದರಿಂದ ''ತಂತ್ರ'' ಎಂಬ ಅನ್ವರ್ಥಕನಾಮ ಎಂದು ತಂತ್ರ ಗ್ರಂಥಗಳಲ್ಲಿ ಈ ಶಾಸ್ತ್ರದ ಹಿರಿಮೆಯನ್ನು ತಿಳಿಸಲಾಗಿದೆ.

ಇನ್ನು ''ತಂತ್ರಸಾರ''ವೆಂದರೇನು? ವಿಚಾರಿಸುವಾ.

ಶ್ರೀಹರಿಯು ಮೂಲರೂಪದಿಂದ ತನ್ನ ಮಗನಾದ ಚತುರ್ಮುಖನಿಗೆ ಉಪದೇಶಿಸಿದ ಅತಿ ವಿಸ್ತೃತವಾದ ಗ್ರಂಥದ ಹೆಸರು ''ತಂತ್ರಸಾರ''ವಾಗಿದೆ. ಈ ಗ್ರಂಥದಲ್ಲಿಯ ಮುಖ್ಯ ಅಂಶಗಳನ್ನು ತೆಗೆದುಕೊಂಡು ಶ್ರೀಮದಾಚಾರ್ಯರು ಸಂಗ್ರಹರೂಪವಾದ ''ತಂತ್ರಸಾರ''ವೆಂಬ ಗ್ರಂಥವನ್ನು ನಮಗೆ ಕೊಟ್ಟು ಉಪಕರಿಸಿದ್ದಾರೆ.

ವಿಷ್ಣುರ್ವರಿಷ್ಠೋ ದೇವಾನಾಂ ಹ್ರದಾನಾಮ್ ಉದಧಿರ್ಯಥಾ ।
ತಥಾ ಸಮಸ್ತ ಶಾಸ್ತ್ರಾಣಾಂ ತಂತ್ರಶಾಸ್ತ್ರಮನುತ್ತಮಮ್ ॥

ದೇವತೆಗಳಲ್ಲಿ ವಿಷ್ಣುವು ಹೇಗೆ ಶ್ರೇಷ್ಠನೋ, ದೊಡ್ಡ ಮಡುವುಗಳಲ್ಲಿ ಸಮುದ್ರವು ಹೇಗೆ ಶ್ರೇಷ್ಠವೋ, ಹಾಗೆ ಸಮಸ್ತ ಶಾಸ್ತ್ರಗಳಲ್ಲಿ ತಂತ್ರಸಾರವು ಶ್ರೇಷ್ಠವಾದದ್ದು.

ಶ್ರೀ ನಾರಾಯಣಪಂಡಿತಾಚಾರ್ಯರು ''ತಂತ್ರಸಾರ''ವನ್ನು ಕುರಿತು ಹೇಳುತ್ತಾರೆ.

ಕಸ್ತಂತ್ರಸಾರಂ ಸಂಪ್ರಾಪ್ಯ ನ ಸ್ಯಾತ್ ಪರ್ಯಾಪ್ತವಾಂಛಿತಃ ।
ಅಮರೈರಾಶ್ರಿತಚ್ಛಾಯಂ ಕಲ್ಪದ್ರುಮಮಿಮೋತ್ತಮಮ್ ॥[೨೯]

ದೇವತೆಗಳಿಂದ ಆಶ್ರಯಿಸಲ್ಪಡುವ ನೆರಳನ್ನು ಹೊಂದಿದ ಕಲ್ಪವೃಕ್ಷದಂತೆ ಉತ್ತಮವೂ, ದೇವತೆಗಳಿಂದ ಅಂಗೀಕೃತವಾದ ಸಿದ್ಧಾಂತವನ್ನು ಹೊಂದಿರುವುದೂ, ಆದ ತಂತ್ರಸಾರವು ಸಜ್ಜನರ ಅಭೀಷ್ಟಗಳನ್ನು ಪೂರೈಸುತ್ತದೆ.

ಇಂಥ ''ತಂತ್ರಸಾರ'' ಗ್ರಂಥದಲ್ಲಿ ತಿಳಿಸಿದಂತೆ ಶ್ರೀಹರಿಪೂಜೆಯನ್ನು ನಡೆಸುವವರ ಸಂಗವಾಗಲಿ ಎಂಬುದು ಶ್ರೀದಾಸರ ಆಶಯವಾಗಿದೆ.

ಇನ್ನು ಅಷ್ಟಮಹಾಮಂತ್ರಗಳು ಹೀಗಿವೆ.

ಪ್ರಣವೋ ಮಾತೃಕಾಷ್ಟಾವರ್ಣೋ
ವ್ಯಾಹೃತಿರ್ದ್ವಾದಶಾಕ್ಷರಃ ॥

೨೯. ಶ್ರೀಸುಮಧ್ವವಿಜಯ ಮಹಾಕಾವ್ಯ (೧೫-೨೮)

ಗಾಯತ್ರೀ ಪೌರುಷಂ ವಿಷ್ಣುಃ
ಮಹಾಮಂತ್ರಾಃ ಪರಿಕೀರ್ತಿತಾಃ ॥[೩೦]

೧. ಪ್ರಣವಮಂತ್ರ, ೨. ಮಾತೃಕಾಮಂತ್ರ, ೩. ಅಷ್ಟಾಕ್ಷರೀ ಮೂಲಮಂತ್ರ, ೪. ವ್ಯಾಹೃತಿಮಂತ್ರ, ೫. ದ್ವಾದಶಾಕ್ಷರೀ ಮಂತ್ರ, ೬. ಗಾಯತ್ರೀ ಮಂತ್ರ, ೭. ಪುರುಷಮಂತ್ರ ಮತ್ತು, ೮. ವಿಷ್ಣುಮಂತ್ರ ಇವು ಅಷ್ಟ ಮಹಾಮಂತ್ರಗಳೆಂದು ಪ್ರಸಿದ್ಧವಾಗಿವೆ. ಇಲ್ಲಿ

೧. ಓಂ ಎಂಬುದು ಪ್ರಣವಮಂತ್ರ.
೨. ಅಕಾರಾದಿ ವರ್ಣಮಾಲೆಯು ಮಾತೃಕಾಮಂತ್ರ.
೩. ಓಂ ನಮೋ ನಾರಾಯಣಾಯ - ಇದು ಅಷ್ಟಾಕ್ಷರೀ ಮೂಲಮಂತ್ರ.
೪. ಓಂ ಭೂರ್ಭುವಸ್ಸುವಃ ಎಂಬುದು ವ್ಯಸ್ತ ಸಮಸ್ತ ವ್ಯಾಹೃತಿಮಂತ್ರ.
೫. ಓಂ ನಮೋ ಭಗವತೇ ವಾಸುದೇವಾಯ ಇದು ದ್ವಾದಶಾಕ್ಷರ ಮಂತ್ರ.
೬. ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋನಃ ಪ್ರಚೋದಯಾತ್ ಇದು ಬ್ರಹ್ಮಗಾಯತ್ರಿ ಮಂತ್ರ.
೭. ಓಂ ಸಹಸ್ರಶೀರ್ಷಾ ಪುರುಷಃ ... ಇದು ಪುರುಷಸೂಕ್ತಮಂತ್ರ.
೮. ಓಂ ವಿಷ್ಣವೇ ನಮಃ ಇದು ವಿಷ್ಣು ಷಡಕ್ಷರಮಂತ್ರ.

ಈ ಅಷ್ಟಮಹಾಮಂತ್ರಗಳನ್ನು ನಿತ್ಯ ಜಪಿಸುತ್ತಿರಬೇಕು. ಇಂಥವರ ಸಂಗ ದೊರೆಯಲಿ ಎನ್ನುತ್ತಾರೆ ದಾಸರು.

ಇನ್ನು ''ಪರಿಪೂರ್ಣ ಸ್ನೇಹಯಂತ್ರದಿಂದ ಕೂಡಿ'' ಎಂದಿದ್ದಾರೆ.

ಭಗವಂತನಲ್ಲಿ ಪರಿಪೂರ್ಣಸ್ನೇಹ ಎಂದರೆ ಪರಿಪೂರ್ಣ ಭಕ್ತಿಯನ್ನು ಮಾಡಬೇಕು ಎಂದರ್ಥವಾಗುತ್ತದೆ.

ಸ್ನೇಹ - ಪದಕ್ಕೆ ಶ್ರೀಮದಾಚಾರ್ಯರು ಭಕ್ತಿ ಎಂಬುದಾಗಿ ತಿಳಿಸಿರುವುದು ಗಮನಾರ್ಹ.

ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ ॥[೩೧]

೩೦. ಚಾತುರ್ಮಾಸ ವರಾಹ ಕಲ್ಪ (೮-೩)
೩೧. ಶ್ರೀ ಮ.ಭಾ. ತಾತ್ಪರ್ಯ ನಿರ್ಣಯ (೧-೮೪)

ಭಗವಂತನ ಮಾಹಾತ್ಮ್ಯ ಜ್ಞಾನವನ್ನು ತಿಳಿದುಕೊಂಡು ಅವನೇ ಎಲ್ಲರಿಗಿಂತ ಸರ್ವೋತ್ತಮನೆಂದು ದೃಢವಾಗಿ ನಂಬಿ ಅವನಲ್ಲಿ ಮಾಡುವ ಸ್ನೇಹವೇ ಭಕ್ತಿ ಎಂಬುದಾಗಿ ಕರೆಸಿಕೊಳ್ಳುತ್ತದೆ. ಇಂಥ ಭಕ್ತಿಯಿಂದಲೇ ಮುಕ್ತಿಯು ದೊರೆಯುತ್ತದೆ. ಅನ್ಯಥಾ ದೊರೆಯಲಾರದು.

ಅವರೇ ಇನ್ನೊಂದೆಡೆಗೆ ಹೀಗೆ ತಿಳಿಸಿದ್ದಾರೆ.

ಜ್ಞಾನಪೂರ್ವಃ ಪರಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ ॥[೩೨]

ಮಾಹಾತ್ಮ್ಯ ಜ್ಞಾನಪೂರ್ವಕವಾದ, ಪತ್ನೀ ಪುತ್ರಾದಿಗಳಲ್ಲಿರುವುದಕ್ಕಿಂತ ತುಂಬಾ ಶ್ರೇಷ್ಠವೂ, ಸುದೃಢವೂ ಆದ ಸ್ನೇಹವೇ ''ಭಕ್ತಿ'' ಎಂದು ಹೇಳಲ್ಪಡುತ್ತದೆ.

ಇಂಥ ಭಕ್ತಿಯನ್ನು ಭಗವಂತನಲ್ಲಿ ಮಾಡುವವರ ಸಂಗವಾಗಲಿ ಎಂದಿದ್ದಾರೆ ಶ್ರೀದಾಸರು. ಕೊನೆಗೆ ''ಜಗತ್ ಸ್ವಾತಂತ್ರ್ಯನ ಗುರಿ ಮಾಡುವವರ'' ಎಂದಿದ್ದಾರೆ. ಈ ಜಗತ್ತಿನಲ್ಲಿ ಸ್ವತಂತ್ರ ವಸ್ತುವು ಭಗವಂತನೊಬ್ಬನೇ.

ಸ್ವತಂತ್ರಮಸ್ವತಂತ್ರಂ ಚ ದ್ವಿವಿಧಂ ತತ್ವಮಿಷ್ಯತೇ ।
ಸ್ವತಂತ್ರೋ ಭಗವಾನ್ ವಿಷ್ಣುಃ ಭಾವಾಭಾವೌದ್ವಿಧೇತರತ್ ॥[೩೩]

ಯಾರು ಭಗವಂತನನ್ನು ಹೊಂದುವುದನ್ನೇ ಗುರಿಯಾಗಿಟ್ಟುಕೊಂಡಿದ್ದಾರೋ ಅಂಥವರ ಸಂಗವು ಆಗಲಿ ಎನ್ನುತ್ತಾರೆ ಶ್ರೀದಾಸರು.

ಕರ್ಮಣಾ ಮನಸಾ ವಾಚಾ ಯಾ ಚೇಷ್ಟಾ ಮಮನಿತ್ಯಶಃ ।
ಕೇಶವಾರಾಧನೇ ಸಾ ಸ್ಯಾತ್ ಜನ್ಮಜನ್ಮಾಂತರೇಷ್ವಪಿ ॥[೩೪]

ಕರ್ಮ, ಮನಸ್ಸು, ವಾಗಿಂದ್ರಿಯ ಮೊದಲಾದವುಗಳಿಂದ ನಾನು ಯಾವ ಕಾರ್ಯಗಳನ್ನು ಮಾಡುವೆನೋ ಅವೆಲ್ಲವೂ ಪ್ರತಿಜನ್ಮದಲ್ಲಿ ಕೇಶವರೂಪಿ ಭಗವಂತನ ಆರಾಧನಾರೂಪವಾಗಿ ಇರಲಿ.

ಹೀಗೆ ಹೇಳುವ ಸಜ್ಜನರ ಸಂಗವಾಗಲಿ ಎನ್ನುತ್ತಿದ್ದಾರೆ ದಾಸರು.

ಪಂಚಸಂಸ್ಕಾರ ಭೇದಪಂಚಯುಕ್ತರಾಗಿ ಪ್ರ
ಪಂಚಸೂತ್ರ ಪ್ರಸನ್ನವೆಂಕಟ ಪಂಚಬಾಣನಯ್ಯನವರ ॥ ೩ ॥

೩೨. ಶ್ರೀ ಮ.ಭಾ. ತಾತ್ಪರ್ಯ ನಿರ್ಣಯ (೧-೧೦೩)
೩೩. ತತ್ವ ಸಂಖ್ಯಾನ
೩೪. ಪಂಚರಾತ್ರಾಂತರ್ಗತ ಜಿತಂತೇಸ್ತೋತ್ರ (೨-೧೬)

ಪಂಚಸಂಸ್ಕಾರಗಳನ್ನು ಹೊಂದಿ, ಪಂಚಭೇದಗಳನ್ನು ಅರಿತವರಾಗಿ ಈ ಪ್ರಪಂಚಕ್ಕೆ ಸೂತ್ರಧಾರನಾದ, ಕಾಮನ ತಂದೆಯಾದ ಪ್ರಸನ್ನವೆಂಕಟನನ್ನು ಯಾರು ನಂಬಿರುವರೋ, ಯಾರು ಭಜಿಸುವರೋ ಅಂಥವರ ಸಂಗವು ಆಗಲಿ ಎಂಬುದಾಗಿ ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಮೊದಲನೆಯದಾಗಿ ಪಂಚಸಂಸ್ಕಾರಗಳು ಯಾವವು? ವಿಚಾರಿಸುವಾ.

ತಾಪಃ ಪುಂಡ್ರಸ್ತಥಾ ನಾಮ ಮಂತ್ರೋ ಯಾಗಶ್ಚ ಪಂಚಮಃ ॥

ಉಕ್ತಿಯಂತೆ ವೈಷ್ಣವರಿಗೆ ಆಗಬೇಕಾದ ಸಂಸ್ಕಾರಗಳು ಐದು ಎಂದು ತಿಳಿಯಬೇಕು.

ಪ್ರತಿಯೊಬ್ಬ ವೈಷ್ಣವನಿಗೆ ಷೋಡಶ ಸಂಸ್ಕಾರಗಳು ಆಗಲೇಬೇಕು. ಇವುಗಳಲ್ಲದೇ ಈ ಐದು ಸಂಸ್ಕಾರಗಳು ಅತಿ ಅವಶ್ಯವೆಂದು ಪರಿಗಣಿಸಿದ್ದಾರೆ.

೧. ತಮ್ಮ ಪೀಠಾಧಿಪತಿಗಳಿಂದ ಹೊಂದಬೇಕಾದ ತಪ್ತಮುದ್ರಾಧಾರಣ.
೨. ನಿತ್ಯ ಸ್ನಾನಾನಂತರ ಧರಿಸಬೇಕಾದ ಹನ್ನೆರಡು ನಾಮಗಳು, ಊರ್ಧ್ವಪುಂಡ್ರಧಾರಣ.
೩. ಆಚಾರ್ಯರಿಂದ (ಗುರುಗಳಿಂದ) ಮಾಡಲ್ಪಟ್ಟ ದಾಸಾಂತ ನಾಮಕರಣವು ನಾಮ.
೪. ಆಚಾರ್ಯರಿಂದ (ಗುರುಗಳಿಂದ) ಮಂತ್ರೋಪದೇಶ ಪಡೆಯುವದು ಮಂತ್ರ.
೫. ಆಚಾರ್ಯರಿಂದ (ಗುರುಗಳಿಂದ) ಅನುಗ್ರಹಿಸಲ್ಪಟ್ಟ ದೇವತಾಪೂಜಾಧಿಕಾರವು ಯಾಗ.

ಇನ್ನು ಪಂಚ ಭೇದಗಳನ್ನು ಅರಿತವರಾಗಿರಬೇಕು-

ಜೀವೇಶ್ವರ ಭಿದಾಚೈವ ಜಡೇಶ್ವರ ಭಿದಾತಥಾ ।
ಜೀವಭೇದೋ ಮಿಥಶ್ಚೈವ ಜಡಜೀವ ಭಿದಾತಥಾ ।
ಮಿಥಶ್ಚ ಜಡಭೇದೋಽಯಂ ಪ್ರಪಂಚೋ ಭೇದಪಂಚಕಃ ॥[೩೫]

೧. ಜೀವ-ಈಶ್ವರ, ೨. ಜಡ-ಈಡ್ವರ, ೩. ಜಡ-ಜೀವ, ೪. ಜೀವ-ಜೀವ, ೫. ಜಡ-ಜಡ ಹೀಗೆ ಐದು ಭೇದಗಳಿಂದ ಕೂಡಿರುವುದು ಈ ಪ್ರಪಂಚವೆಂದು ತಿಳಿಯಬೇಕು. ಅಂದರೆ ಪ್ರಕೃಷ್ಟಃ ಪಂಚವಿಧೋ ಭೇದಃ ಪ್ರಪಂಚಃ ಎಂದರ್ಥವು.

೩೫. ಶ್ರೀ ವಿಷ್ಣುತತ್ವವಿನಿರ್ಣಯ ಪರಮಶ್ರುತಿಃ

ಇಂಥ ಪ್ರಪಂಚಕ್ಕೆ ಭಗವಂತನು ಸೂತ್ರಧಾರನಾಗಿದ್ದಾನೆ. ಶ್ರೀಕೃಷ್ಣ ಹೇಳಿರುವುದನ್ನು ಇಲ್ಲಿ ಗಮನಿಸಬೇಕು.

ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ।
ಮಯಿಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥[೩೬]

ನನ್ನಿಂದ ಭಿನ್ನವಾದ ಸರ್ವೋತ್ತಮವಾದ ವಸ್ತು ಒಂದಾದರೂ ಇರುವದಿಲ್ಲ. ಈ ಪ್ರಕೃತಿಯೇ ಮೊದಲಾದ ಸಮಸ್ತಜಗತ್ತು ದಾರದಲ್ಲಿ ಪೋಣಿಸಿದ ಮಣಿಗಳ ಸಮುದಾಯದಂತೆ ನನ್ನನ್ನೇ ಆಶ್ರಯಿಸಿರುತ್ತದೆ.

ಪಂಚ ಬಾಣನೆಂದರೆ ಕಾಮನು. ಕಾಮನೇ ಪ್ರದ್ಯುಮ್ನನೆಂಬ ಹೆಸರಿನಿಂದ ಶ್ರೀ ರುಕ್ಮಿಣೀದೇವಿಯಲ್ಲಿ ಜನ್ಮ ಪಡೆದಿದ್ದಾನೆ. ಕಾರಣ ಪಂಚಬಾಣನಯ್ಯ ಎಂದರೆ ಶ್ರೀಕೃಷ್ಣನೇ ಆಗಿದ್ದಾನೆ.

ಹೀಗೆ ಈ ಪ್ರಪಂಚಕ್ಕೆ ಸೂತ್ರಧಾರನೆನಿಸಿದ, ಕಾಮನ ತಂದೆಯಾದ ಶ್ರೀಕೃಷ್ಣನ ಪ್ರೀತಿಪಾತ್ರರಾದ ಭಕ್ತರಾದ ಸಾಧುಜನರ ಸಂಗವಾಗಲಿ ಎಂಬುದಾಗಿ ಶ್ರೀಪ್ರಸನ್ನವೆಂಕಟದಾಸರು ಇಲ್ಲಿ ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

⁂

೩೬. ಶ್ರೀಮದ್ ಭಗವದ್ಗೀತಾ (೭-೭)

೮. ನಂಬೋ ನಂಬೋ ಹರಿಪದವ ನಂಬೋ

ನಂಬೋ ನಂಬೋ ಹರಿಪದವ ನಂಬೋ ॥ ಪ ॥

ಮಾತುಳನ ಚಂದನ ಪ್ರೀತಿಲಿ ಕೊಟ್ಟ ಮನ
ಸೋತವಳಂಗ ಪುನೀತ ಮಾಡಿದನಂಘ್ರಿಯ ॥ ೧ ॥

ಅಜಾಮಿಳ ಸಹಜ ತನುಜನ ಕರೆಯಲಾಗಿ
ನಿಜಭಟರಟ್ಟಿದ ಸುಜನೇಶನಂಘ್ರಿಯ ॥ ೨ ॥

ನಂಬಿದರವಗುಣ ಕುಂದನೋಡದೆ ಹೊರೆವ
ತಂದೆ ಪ್ರಸನ್ನವೆಂಕಟೇಶನಂಘ್ರಿಯ ॥ ೩ ॥

ಪ್ರಸ್ತುತ ಪದ್ಯದಲ್ಲಿ ಶ್ರೀಹರಿಪದವನ್ನು ನಂಬು ಎಂಬುದಾಗಿ ಎಚ್ಚರಿಕೆ ಕೊಡುತ್ತಿದ್ದಾರೆ. ಇದಕ್ಕೆ ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಕಂಸನ ಸೇವಕಿಯಾದ ಕುಬ್ಜೆಯು ಶ್ರೀಕೃಷ್ಣನಿಗೆ ಗಂಧವನ್ನು ಪ್ರೀತಿಯಿಂದ ಕೊಟ್ಟಿದ್ದಕ್ಕಾಗಿ ಅವಳನ್ನು ಸ್ವೀಕರಿಸಿ ಪುನೀತಳನ್ನಾಗಿ ಮಾಡಿದ ಆ ಶ್ರೀಕೃಷ್ಣ. ಅಜಾಮಿಳನು ತನ್ನ ಕೊನೆಯ ಕಾಲದಲ್ಲಿ ''ನಾರಾಯಣ'' ಎಂಬ ಹೆಸರಿನ ಮಗನನ್ನು ಕರೆಯಲಾಗಿ ಶ್ರೀಹರಿಯು ತನ್ನ (ವಿಷ್ಣುದೂತ) ದೂತರನ್ನು ಕಳಿಸಿಕೊಟ್ಟು ಅವನನ್ನು ರಕ್ಷಿಸಿದ. ಆ ಶ್ರೀಹರಿಯು ತನ್ನನ್ನು ನಂಬಿದವರ ಅವಗುಣಗಳನ್ನು ಗಣನೆಗೆ ತಾರದೇ ಪೊರೆವನಾದ್ದರಿಂದ ಆ ಪ್ರಸನ್ನವೆಂಕಟೇಶನಂಘ್ರಿಯನ್ನು ನಂಬು ನಂಬು ಎಂಬುದಾಗಿ ಆದರ ಪೂರ್ವಕ ತಿಳಿಸಿ ಮಹೋಪಕಾರ ಮಾಡಿದ್ದಾರೆ.

ನಂಬೋ ನಂಬೋ ಹರಿಪದವ ನಂಬೋ ॥ ಪ ॥

ಶ್ರೀಹರಿಯಪಾದವನ್ನು ನಂಬು, ನಂಬು ಎಂಬುದಾಗಿ ಶ್ರೀದಾಸರು ಇಲ್ಲಿ ಹೇಳುತ್ತಿದ್ದಾರೆ.

''ಆದರಾದ್ದ್ವರುಕ್ತಿಃ'' ಎಂಬ ಮಾತಿನಂತೆ ಶ್ರೀಹರಿಯ ಪಾದವನ್ನು ನಂಬು ಎಂಬುದಾಗಿ ಆದರಪೂರ್ವಕವಾಗಿ ಹೇಳುತ್ತಿದ್ದಾರೆ.

ಶ್ರೀಹರಿಯ ಪಾದವನ್ನು ನಂಬು ಎಂಬುದಕ್ಕೆ ಕಾರಣವೂ ಇದೆ. ಶ್ರೀಮದ್ ಭಾಗವತ ದಶಮಸ್ಕಂಧದಲ್ಲಿ ಹೀಗೆ ತಿಳಿಸಿದ್ದಾರೆ.

ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮನ್
ಭವಾರ್ಣವಂ ಭೀಮಮದಭ್ರಸೌಹೃದಾಃ ।
ಭವತ್ಪದಾಂಭೋರುಹನಾವಮತ್ರ ತೇ
ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥[೧]

ಜ್ಞಾನಮೂರ್ತಿಯಾದ ಭಗವಂತನೇ! ಯಾರು ತಮ್ಮ ಯೋಗ್ಯತಾನುಸಾರ ಪೂರ್ಣಭಕ್ತಿವುಳ್ಳವರೋ, ಅವರು ಬಹುಕಷ್ಟದಿಂದ ದಾಟಲು ಅಸಾಧ್ಯವಾದ, ಭಯಾನಕವಾದ ಸಂಸಾರ ಸಮುದ್ರವನ್ನು ನಿನ್ನ ಪಾದಕಮಲಗಳೆಂಬ ನೌಕೆಯನ್ನು ಆಶ್ರಯಿಸಿ, ನಂಬಿಕೊಂಡು ಸುಲಭವಾಗಿ ತಾವು ದಾಟುವರಲ್ಲದೇ, ತಮ್ಮ ಉಪದೇಶದ್ವಾರಾ ಶಿಷ್ಯರನ್ನು ಕೂಡಾದಾಟಿಸಿ ಲಿಂಗಭಂಗರೂಪವಾದ ಮೋಕ್ಷವನ್ನು ಹೊಂದುತ್ತಾರೆ.

ತ್ವಯ್ಯಂಬುಜಾಕ್ಷಾಖಿಲಸತ್ವಧಾಮ್ನಿ
ಸಮಾಧಿನಾऽऽವೇಶಿತ ಚೇತಸೋ ಯೇ ।
ತ್ವತ್ಪಾದಪೋತೇನ ಮಹತ್ಕತೇನ
ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥[೨]

ಕಮಲದಂತೆ ಕಣ್ಣುಳ್ಳ, ಸಕಲಗುಣಪೂರ್ಣನಾದ ಭಗವಂತನೇ, ನಿನ್ನಲ್ಲಿ ಉಪಾಸನೆಯಿಂದ ಇಡಲ್ಪಟ್ಟ ಮನಸ್ಸುಳ್ಳವರು. ಅಂದರೆ ನಿನ್ನನ್ನು ನಂಬಿದವರು, ಸಂಸಾರ ಸಮುದ್ರವನ್ನು ನಿನ್ನ ಪಾದಕಮಲಗಳೆಂಬ ನೌಕೆಯಿಂದ, ಆಕಳ ಕರುವಿನ ಹೆಜ್ಜೆಯಿಂದ ನಿರ್ಮಿತವಾದ ತಗ್ಗಿನಲ್ಲಿ ನಿಂತ ನೀರನ್ನು ಅನಾಯಾಸವಾಗಿ ದಾಟುವಂತೆ ದಾಟಿಬಿಡುತ್ತಾರೆ.

ಇಲ್ಲಿ ದಾಸರು ''ಹರಿಪದವ ನಂಬು'' ಎನ್ನುತ್ತಿದ್ದಾರೆ. ಶ್ರೀಹರಿಯಲ್ಲಿ ಅಂಥ ಒಂದು ವಿಶೇಷ ಉಂಟು. ''ಹರಿ'' ಶಬ್ದದ ಅರ್ಥ ನೋಡಿದಾಗ ಅದು ವಿದಿತವಾಗುತ್ತದೆ.

೧. **ಚಿತ್ತಸ್ಥಃಸನ್ ಕಲಿಕೃತಾನ್ ಸರ್ವಾನ್ ಪರಿಹರತೀತಿ ಹರಿಃ ।**
ಮನಸ್ಸಿನಲ್ಲಿದ್ದು ಕಲಿಕೃತವಾದ ಎಲ್ಲ ದೋಷಗಳನ್ನು ಪರಿಹರಿಸುವದರಿಂದ ಇವನು ಹರಿ.

---

೧. ಶ್ರೀಮದ್ ಭಾಗವತ (೧೦-೩-೩೨)
೨. ಶ್ರೀಮದ್ ಭಾಗವತ (೧೦-೩-೩೧)

೨. **ಸ್ಮರಣಾದೇವ ಭಕ್ತಾನಾಂ ಅನೇಕ ಜನ್ಮಾರ್ಜಿತ ಪಾಪಸಂಚಯಂ**
ಅಪಹರತೀತಿ ಹರಿಃ ।
ತನ್ನ ಸ್ಮರಣೆ ಮಾತ್ರದಿಂದ ಭಕ್ತರ ಅನೇಕ ಜನ್ಮಗಳ ಪಾಪ ಸಮೂಹವನ್ನು ಅಪಹರಿಸುವದರಿಂದ ಇವನು ಹರಿ. ಅಂತೆಯೇ ಶ್ರೀಪುರಂದರ ದಾಸರು ''ನಂಬಿ ಕೆಟ್ಟವರಿಲ್ಲವೋ ರಂಗಯ್ಯನ ನಂಬದೇ ಕೆಟ್ಟರೆ ಕೆಡಲಿ'' ಎಂಬುದಾಗಿ ಹೇಳಿರುವುದು ಗಮನಾರ್ಹ.

ಮಾತುಳನ ಚಂದನ ಪ್ರೀತಿಲಿ ಕೊಟ್ಟ ಮನ
ಸೋತವಳಂಗ ಪುನೀತ ಮಾಡಿದನಂಘ್ರಿಯ ॥ ೧ ॥

ಕಂಸನ ಸೇವಕಿಯಾದ ಕುಬ್ಜೆಯು, ಶ್ರೀಕೃಷ್ಣನಿಗೆ ಗಂಧವನ್ನು ಪ್ರೀತಿಯಿಂದ ಕೊಟ್ಟಳು. ಅವಳ ಈ ಸೇವೆಯನ್ನು ಸ್ವೀಕರಿಸಿ, ಮನಸೋತು ಅವಳನ್ನು ಪುನೀತಳನ್ನಾಗಿ ಮಾಡಿದ ಶ್ರೀಕೃಷ್ಣನ ಪಾದವನ್ನು ನಂಬು ಎಂಬುದಾಗಿ ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಈ ಪ್ರಸಂಗವು ಶ್ರೀಮದ್‌ಭಾಗವತ ದಶಮಸ್ಕಂಧ ಪೂರ್ವಾರ್ಧದಲ್ಲಿ ಉಕ್ತವಾಗಿದೆ. ಕಂಸನು ಶ್ರೀಕೃಷ್ಣ ಬಲರಾಮರನ್ನು ಸಂಹರಿಸುವ ಉದ್ದೇಶವಿಟ್ಟುಕೊಂಡು ಧನುರ್ಯಾಗವನ್ನು ಏರ್ಪಡಿಸಿದನು. ಶ್ರೀಕೃಷ್ಣ, ಬಲರಾಮರನ್ನು ಕರೆತರಲು ಅಕ್ರೂರನನ್ನು ಕಳಿಸಿಕೊಟ್ಟನು. ಅಕ್ರೂರನು ಸಂತೋಷದಿಂದ ಒಪ್ಪಿಕೊಂಡು ಅವರಿಬ್ಬರನ್ನು ಕರೆತಂದನು. ಅವರನ್ನು ಊರ ಹೊರಗಿನ ಉದ್ಯಾನವನದಲ್ಲಿ ಉಳಿದುಕೊಳ್ಳುವಂತೆ ಮಾಡಿ ಅಕ್ರೂರ ತನ್ನ ಮನೆಗೆ ಹೋದನು. ಮರುದಿನ ಶ್ರೀಕೃಷ್ಣ ಬಲರಾಮರು ಮಧುರಾ ಪಟ್ಟಣವನ್ನು ನಿರೀಕ್ಷಿಸಲು ಹೊರಗೆ ಹೊರಟರು. ದಾರಿಯಲ್ಲಿ ರಜಕನ ಭೆಟ್ಟಿಯಾಯಿತು. ಶ್ರೀಕೃಷ್ಣನು ''ನಮಗೆ ವಸ್ತ್ರಗಳನ್ನು ಕೊಡು'' ಎಂದು ಕೇಳಿದನು. ಅವನು ಗರ್ವದಿಂದ ಕೊಬ್ಬಿ ಮಾತಾಡಲು ಅವನ ಶಿರವನ್ನು ಕತ್ತರಿಸಿ ತಮಗೆ ಉಚಿತವಾದ ಬಟ್ಟೆಗಳನ್ನು ಸ್ವೀಕರಿಸಿ ಮುಂದೆ ನಡೆದರು. ನಂತರ ಮಾಲಾಕಾರ ಸುದಾಮನ ಹತ್ತಿರ ಹೋದಾಗ ಅವನು ಭಕ್ತಿಯಿಂದ ಸುಗಂಧವಿಶಿಷ್ಟವಾದ ಹೂವಿನ ಹಾರವನ್ನು ಅರ್ಪಿಸಿದನು. ಶ್ರೀಕೃಷ್ಣನು ಅವನಿಗೆ ತನ್ನ ಪಾದಕಮಲಗಳಲ್ಲಿ ನಿಶ್ಚಲವಾದ ಭಕ್ತಿಯನ್ನು ಕೊಟ್ಟು ಸಂತೋಷಪಡಿಸಿದನು. ದಾರಿಯಲ್ಲಿ ತ್ರಿವಕ್ರೆ (ಕುಬ್ಜೆ)ಯ ಭೆಟ್ಟಿಯಾಯಿತು. ಕಂಸನಿಗಾಗಿ ಸುವಾಸಿತ ಗಂಧವನ್ನು ತೆಗೆದುಕೊಂಡು ಹೊರಟಿದ್ದಳು. ಶ್ರೀಕೃಷ್ಣನಿಗೆ ಆ ಸುವಾಸಿತ ಗಂಧವನ್ನು ಕೊಟ್ಟು ಸಂತೋಷಪಡಿಸಿದಳು. ಶ್ರೀಕೃಷ್ಣನು ಅವಳ ಮೇಲೆ ಅನುಗ್ರಹ ಮಾಡಿ ಅವಳನ್ನು ಸುಂದರಾಂಗಿಯನ್ನಾಗಿ ಮಾಡಿದನು.

ಅಜಾಮಿಳ ಸಹಜ ತನುಜನ ಕರೆಯಲಾಗಿ
ನಿಜ ಭಟರಟ್ಟಿದ ಸುಜನೇಶನಂಘ್ರಿಯ ॥ ೨ ॥

ಅಜಾಮಿಳನು ತನ್ನ ಕೊನೆಯಕಾಲದಲ್ಲಿ ''ನಾರಾಯಣ'' ಎಂಬ ಹೆಸರಿನ ಮಗನನ್ನು ಕರೆಯಲಾಗಿ ಶ್ರೀಹರಿಯು ತನ್ನ ದೂತರನ್ನು (ವಿಷ್ಣುದೂತರನ್ನು) ಕಳಿಸಿಕೊಟ್ಟು ಅವನನ್ನು ರಕ್ಷಿಸಿದ. ಸಜ್ಜನರಿಗೆ ಸ್ವಾಮಿಯಾದ ಆ ಶ್ರೀಹರಿಯ ಪಾದವನ್ನು ನಂಬು ಎಂಬುದಾಗಿ ಶ್ರೀದಾಸರು ಹೇಳುತ್ತಿದ್ದಾರೆ.

ಅಜಾಮಿಳನ ವೃತ್ತಾಂತವು ಷಷ್ಠಸ್ಕಂಧ ಭಾವತದಲ್ಲಿ ಉಕ್ತವಾಗಿದೆ.

ಕ್ಯಾನಕುಬ್ಜ ದೇಶದಲ್ಲಿ ಅಜಾಮಿಳ ಎಂಬ ಬ್ರಾಹ್ಮಣನಿದ್ದನು. ದಾಸಿಯ ಸಂಗಮಾಡಿ ಅವನು ಪತಿತನಾಗಿದ್ದನು. ಅವನಿಗೆ ಹತ್ತು ಜನ ಮಕ್ಕಳಿದ್ದರು. ಕೊನೆಯ ಮಗನಿಗೆ ''ನಾರಾಯಣ'' ಎಂದು ಹೆಸರಿಟ್ಟಿದ್ದನು. ಅವನಲ್ಲಿ ಅಜಾಮಿಳನಿಗೆ ಸ್ನೇಹವು ಹೆಚ್ಚಾಗಿತ್ತು. ಹೀಗಿರಲು ಅಜಾಮಿಳನ ಮರಣಕಾಲವು ಸಮೀಪಿಸಿರಲು ಮಗನಾದ ನಾರಾಯಣನೆಂಬ ಬಾಲಕನಲ್ಲಿ ಮನಸಿಟ್ಟನು. ಅಜಾಮಿಳನನ್ನು ಕರೆದುಕೊಂಡು ಹೋಗಲು ಮೂವರು ಪುರುಷರು ಬಂದರು. ಅವರನ್ನು (ಯಮದೂತರನ್ನು) ನೋಡಿ ಅಜಾಮಿಳನ ಇಂದ್ರಿಯಗಳು ದುರ್ಬಲವಾದವು. ಅವನು ದುಃಖದಿಂದ ''ದೂರೇ ಕ್ರೀಡನಕಾಸಕ್ತಂ ಪುತ್ರಂ ನಾರಾಯಣಾಹ್ವಯಂ'' ಉಕ್ತಿಯಂತೆ ದೂರದಲ್ಲಿ ಆಟದಲ್ಲಿ ಮಗ್ನನಾಗಿದ್ದ ನಾರಾಯಣನೆಂಬ ಹೆಸರಿನ ಮಗನನ್ನು ''ನಾರಾಯಣ'' ಎಂದು ಕೂಗಿದನು. ಆ ಹೆಸರಿನ ಮುಖ್ಯಸ್ವಾಮಿಯಾದ ನಾರಾಯಣನ ಸ್ಮರಣೆಬಂದು ಹಿಂದಿನ ಸುಕೃತದ ಪ್ರಭಾವದಿಂದ ಶ್ರೀಹರಿಯಲ್ಲಿ ನಿರತಿಶಯ ಭಕ್ತಿಹುಟ್ಟಿ ಇಂದ್ರಿಯಗಳು ಭಗವಂತನಲ್ಲಿ ಆಸಕ್ತವಾದವು. ಬ್ರಹ್ಮಾಂಡದ ಹೊರಗೆ ಜಗತ್ ಸೃಷ್ಟ್ಯಾದಿ ಕ್ರೀಡೆಗಳಿಂದ ಕೂಡಿದ, ಪುನ್ನಾಮನರಕದಿಂದ ರಕ್ಷಿಸುವ ''ನಾರಾಯಣ''ನನ್ನು ಗಟ್ಟಿಯಾಗಿ ಕೂಗುತ್ತಿರಲು ವಿಷ್ಣುದೂತರು ಅಲ್ಲಿಗೆ ಬಂದರು. ಅಜಾಮಿಳನನ್ನು ಯಮಪಾಶಗಳಿಂದ ಬಿಡಿಸಿದರು.

ವಿಕ್ರುಶ್ಯ ಪುತ್ರಮಘವಾನ್ಯದಜಾಮಿಳೋಽಪಿ
ನಾರಾಯಣೇತಿ ಮ್ರಿಯಮಾಣ ಇಯಾಯ ಮುಕ್ತಿಂ ॥[೩]

ಹೀಗೆ ಸಜ್ಜನರಿಗೆ ಸ್ವಾಮಿಯಾದ ಆ ಶ್ರೀಹರಿಯು ಅಜಾಮಿಳನನ್ನು ರಕ್ಷಿಸಿ ಕಾಲಕ್ರಮದಲ್ಲಿ ಅವನಿಗೆ ಮುಕ್ತಿಯನ್ನು ದಯಪಾಲಿಸಿದನು. ಇಂಥ ಶ್ರೀಹರಿಯ ಪಾದವ ನಂಬು ಎಂಬುದಾಗಿ ಶ್ರೀದಾಸರು ಇಲ್ಲಿ ಹೇಳುತ್ತಿದ್ದಾರೆ.

೩. ಶ್ರೀಮದ್ ಭಾಗವತ (೬-೩-೨೪)

ನಂಬಿದರವಗುಣ ಕುಂದನೋಡದೆ ಹೊರೆವ
ತಂದೆ ಪ್ರಸನ್ನವೆಂಕಟೇಶನಂಘ್ರಿಯ ॥ ೩ ॥

ಆ ಭಗವಂತನ ತನ್ನನ್ನು ನಂಬಿದ ಸಜ್ಜನರ ಅವಗುಣ, ಕುಂದುಗಳನ್ನು ಎಣಿಸದೆ ಅವರನ್ನು ಪೊರೆಯುತ್ತಾನೆ, ರಕ್ಷಿಸುತ್ತಾನೆ. ಇಂಥ ಜಗತ್ತಿಗೆ ತಂದೆಯಾದ ಪ್ರಸನ್ನವೆಂಕಟೇಶನ ಪಾದವನ್ನು ನಂಬು ಎಂಬುದಾಗಿ ಶ್ರೀದಾಸರು ಎಚ್ಚರಿಕೆ ನೀಡಿದ್ದಾರೆ.

ಆ ಭಗವಂತನು ತನ್ನನ್ನು ನಂಬಿದ ಸಜ್ಜನರ ಅವಗುಣ, ಕುಂದುಗಳನ್ನು ಎಣಿಸದೆ ರಕ್ಷಿಸುತ್ತಾನೆಂಬುದನ್ನು ಶ್ರೀ ಜಗನ್ನಾಥದಾಸರು ಶ್ರೀಹರಿಕಥಾಮೃತಸಾರದಲ್ಲಿ ತಿಳಿಸಿಕೊಟ್ಟಿದ್ದಾರೆ.

ಶ್ರೀನಿವಾಸನ ಪೋಲ್ವಕರುಣಿಗ
ಳೀನಳಿನಜಾಂಡದೊಳುಕಾಣೆ ಪ್ರ
ವೀಣರಾದವರರಸಿ ನೋಳ್ಪುದು ಶ್ರುತಿ ಪುರಾಣದೊಳು ।
ದ್ರೋಣ ಭೀಷ್ಮಕೃಪಾದಿಗಳು ಕುರು
ಸೇನೆಯೊಳಗಿರಲವರವಗುಣಗ
ಳನು ನೋಡದೆ ಪಾಲಿಸಿದ ಪರಮಾತ್ಮ ಪರಗತಿಯ ॥[೪]

ಆ ಭಗವಂತ ಶ್ರೀರಾಮಾವತಾರದಲ್ಲಿ ತನ್ನನ್ನೇ ನಂಬಿಬಂದ ವಿಭೀಷಣನನ್ನು ಕೈಬಿಡದೆ ರಕ್ಷಿಸಿ ಅವನನ್ನು ಲಂಕಾಧಿಪತಿಯನ್ನಾಗಿ ಮಾಡಿದ ವಿಷಯವು ಶ್ರೀವಾಲ್ಮೀಕಿ ರಾಮಾಯಣದಲ್ಲಿ ಉಕ್ತವಾಗಿದೆ.

ಹಿಂದೆ ರಾವಣನ ತಮ್ಮನಾದ ವಿಭೀಷಣನು ಸೀತಾದೇವಿಯರನ್ನು ಶ್ರೀರಾಮ ಚಂದ್ರದೇವರಿಗೆ ಹಿಂತಿರುಗಿ ಒಪ್ಪಿಸಲು ರಾವಣನಿಗೆ ಸಲಹೆ ನೀಡಲು ಕುಪಿತನಾದ ರಾವಣನು ಅವನನ್ನು ಪರಿತ್ಯಾಗ ಮಾಡಿದ.

ಶ್ರೀರಾಮಚಂದ್ರದೇವರು ದಕ್ಷಿಣ ಸಮುದ್ರದ ಬಳಿಗೆ ಬಂದು ತಾನು ಜಗತ್ತಿಗೆ ಸರ್ವೋತ್ತಮನಾಗಿದ್ದರೂ, ಅಚಿಂತ್ಯಶಕ್ತಿ ಸಂಪನ್ನನಾಗಿದ್ದರೂ, ಮೊದಲು ಮೃದುವರ್ತನೆಯು ಧರ್ಮವೆಂದು ತಿಳಿಸಲು ಸಮುದ್ರರಾಜನಿಂದ ಮಾರ್ಗವನ್ನು ಕೇಳಲು ದರ್ಭೆಯ ಹಾಸಿಗೆಯ ಮೇಲೆ ಮಲಗಿದರು. ಆಗ ಅಲ್ಲಿಗೆ ರಾವಣನ ತಮ್ಮ ವಿಭೀಷಣನು ರಾವಣನಿಂದ ಪರಿತ್ಯಕ್ತನಾಗಿ ಶ್ರೀರಾಮಚಂದ್ರದೇವರನ್ನು ನಂಬಿ ನೀವೇ ಗತಿಯೆಂದು ಶರಣಾಗತನಾದ. ಈ ಪ್ರಸಂಗದಲ್ಲಿ ಜಾಂಬವಂತ, ಸುಗ್ರೀವ, ನೀಲ,

೪. ಸಕಲ ದುರಿತನಿವಾರಣ ಸಂಧಿ (೨೨-೩)

ಮೈಂದ, ವಿವಿದ, ಅಂಗದ, ತಾರ ಮೊದಲಾದ ಎಲ್ಲ ಕಪಿಗಳು ''ಈ ವಿಭೀಷಣ ಶತ್ರುಗೃಹದಿಂದ ಬಂದವನು, ಶತ್ರುವಿನ ತಮ್ಮನಾದ್ದರಿಂದ ಇವನು ಸ್ವೀಕಾರಕ್ಕೆ ಅನರ್ಹನೆಂದು ಹೇಳಿದರು.''

ಆ ಕಾಲಕ್ಕೆ ವಾಯುದೇವರ ಅವತಾರರಾದ ಶ್ರೀ ಹನುಮಂತದೇವರು ''ಇವನು ಶ್ರೀಮದ್ರಾಮಚಂದ್ರದೇವರ ಭಕ್ತನಾಗಿದ್ದಾನೆ. ಶರಣಾಗತನಾಗಿ ಶ್ರೀರಾಮದೇವರನ್ನು ನಂಬಿಕೊಂಡು ಇಲ್ಲಿಗೆ ಬಂದಿದ್ದಾನೆ. ರಾವಣನು ನಾಶವಾಗಲಿರುವನೆಂದು ತಿಳಿದು ರಾಜ್ಯವನ್ನು ಅನುಭವಿಸಲು ಬಂದ ಇವನು ಸ್ವೀಕಾರಕ್ಕೆ ಅರ್ಹ'' ಎಂಬುದಾಗಿ ಹೇಳಿದರು.

ಶ್ರೀ ಹನುಮಂತದೇವರು ಹೀಗೆ ಹೇಳಿದಾಗ, ದೇವದೇವ ಶ್ರೀರಾಮಚಂದ್ರದೇವರು ಹಿಂದೆ ಸುಗ್ರೀವನ ವಿಷಯದಲ್ಲಿ ಹೇಗೋ ಹಾಗೆಯೇ ಈಗಲೂ ಸಹ ಹನುಮಂತದೇವರ ಮಾತನ್ನು ಒಪ್ಪಿ ''ನನ್ನನ್ನು ನಂಬಿ ಬಂದ ಶರಣಾಗತನಾದ ಈತನನ್ನು ನಿಶ್ಚಯವಾಗಿಯೂ ಸ್ವೀಕರಿಸುವೆನು'' ಎಂದರು.

ಶ್ರೀರಾಮಚಂದ್ರದೇವರು ಆ ವಿಭೀಷಣನನ್ನು ತಮ್ಮ ಭೃತ್ಯನನ್ನಾಗಿ ಸ್ವೀಕರಿಸಿ ''ಭಾವಿಲಂಕಾಧಿಪತಿ'' ಎಂಬುದಾಗಿ ರಾವಣನ ರಾಜ್ಯದಲ್ಲಿ ಅಭೀಷೇಕ ಮಾಡಿ ಅವನಿಗೆ ರಕ್ಷಣೆ ನೀಡಿದರು.

ಪ್ರಸನ್ನವೆಂಕಟರೂಪಿಯಾದ ಆ ಭಗವಂತನು ಎಲ್ಲರಿಗೂ ತಂದೆಯಾಗಿದ್ದಾನೆಂದು ಇಲ್ಲಿ ತಿಳಿಸಿದ್ದಾರೆ.

ಭಗವದ್ಗೀತೆಯಲ್ಲಿ ಅರ್ಜುನನು ಶ್ರೀಕೃಷ್ಣನನ್ನು ಕುರಿತು ಹೇಳುವ ಮಾತು ಇಲ್ಲಿ ಗಮನಾರ್ಹವಾಗಿದೆ.

ಪಿತಾಸಿ ಲೋಕಸ್ಯ ಚರಾಚರಸ್ಯ ॥[೫]

ಹಾಗೂ ಯೋ ನಃ ಪಿತಾ ಜನಿತಾ ಯೋ ವಿಧಾತಾ ॥[೬]

ಉಕ್ತಿಗಳಂತೆ ಆ ಭಗವಂತನ ಎಲ್ಲರಿಗೂ ''ತಂದೆ''ಯಾಗಿದ್ದಾನೆಂಬುದು ಖಚಿತವೇ ಆಗಿದೆ.

ಇಂಥ ಸಮಸ್ತ ಜಗತ್ತಿಗೂ ''ತಂದೆ''ಯಾದ ಪ್ರಸನ್ನವೆಂಕಟನ ಪಾದವನ್ನು ನಂಬು ಎಂಬುದಾಗಿ ಶ್ರೀದಾಸರು ತಿಳಿಸಿ ನಮಗೆಲ್ಲ ಮಹೋಪಕಾರ ಮಾಡಿದ್ದಾರೆ.

--*

೫. ಶ್ರೀ ಭಗವದ್ಗೀತಾ (೧೧-೪೩) ೬. ಶ್ರುತಿವಾಕ್ಯ-ಋಗ್ವೇದ

೯. ಭಕ್ತಜನರ ಸಂಜೀವಾ

ಭಕ್ತ ಜನರ ಸಂಜೀವಾ ।
ರಕ್ಷಿಸು ರಕ್ಷಿಸು ದೇವಾ ॥ ಪ ॥

ಜಾರಿದ ಶ್ರುತಿಯ ತಂದವನೆ ।
ಉದಾರಿ ವಿಕ್ರಮ ತಮಹರನೇ ।
ವಾರಿಧಿಯೊಳು ಉದಿಸಿದನೆ ।
ಮಂದರ ಗಿರಿಯನೆತ್ತಿದನೆ ॥ ೧ ॥

ಅಡವಿಪ್ರಾಣಿಗಳ ಆಳುವನೆ ।
ಹತ್ತು ಹೆಡಕಿನವನ ತಲೆಕೆಡಹಿದನೆ ।
ಮಡದಿಗೆ ಗಿಡವನು ಇತ್ತವನೇ ।
ಭೀಮ ಮಡದಿಯ ಲಜ್ಜೆ ಕಾಯ್ದವನೆ ॥ ೨ ॥

ಪದ್ಮಜಾಂಡವ ಒಡೆದವನೆ ।
ಬಲಿಸದ್ಮವ ಬಿಡದೆ ಕಾಯ್ದವನೆ ।
ಛದ್ಮಿಪಾರ್ಥಿವರ ಸಂಹರನೆ ।
ಕರ ಪದ್ಮದಿ ಪರಶು ಹಿಡಿದವನೆ ॥ ೩ ॥

ಮಿಥ್ಯೆಯ ಹೊಲಬು ಹೇಳಿದನೆ ।
ಖಳ ದೈತ್ಯರ ವಶವ ಮಾಡಿದನೆ ।
ಮತ್ತಕಾರಿಯ ವಪು ಹರನೆ ನನ್ನ ।
ಕರ್ತಾ ಪ್ರಸನ್ನ ವೆಂಕಟನೆ ॥ ೪ ॥

ಪ್ರಸ್ತುತ ಪದ್ಯದಲ್ಲಿ ಶ್ರೀದಾಸರು ಭಗವಂತನ ಮತ್ಸ್ಯಾದಿ ಅವತಾರಗಳ ವರ್ಣನೆಯಯನ್ನು ವಿಶಿಷ್ಟ ರೀತಿಯಲ್ಲಿ ಮಾಡಿದ್ದಾರೆ.

ಭಕ್ತ ಜನರ ಸಂಜೀವಾ । ರಕ್ಷಿಸು ರಕ್ಷಿಸು ದೇವಾ ॥ ಪ ॥

ಆ ಭಗವಂತನು ಭಕ್ತಜನರ ಸಂಜೀವನೆನಿಸಿದ್ದಾನೆ. ಅವನು ನಮ್ಮನ್ನು ರಕ್ಷಿಸಲಿ.

೧. ಭಕ್ತ ಜನರ ಸಂಜೀವ ಭಗವಂತನಾಗಿದ್ದಾನೆ. ಅಂದರೆ ಭಗವಂತನು ಭಕ್ತರಿಗೆ ಜ್ಞಾನಾದಿಗಳನ್ನು, ಜ್ಞಾನಿಗಳಿಗೆ ಮೋಕ್ಷವನ್ನು, ಮುಕ್ತರಿಗೆ ಆನಂದವನ್ನು ಕೊಟ್ಟು ರಕ್ಷಿಸುತ್ತಾನೆ.

ಅಜ್ಞಾನಾಂ ಜ್ಞಾನದೋ ವಿಷ್ಣುಃ ಜ್ಞಾನಿನಾಂ ಮೋಕ್ಷದಶ್ಚ ಸಃ ।
ಆನಂದದಶ್ಚ ಮುಕ್ತಾನಾಂ ಸ ಏವೈಕೋ ಜನಾರ್ದನಃ ॥[೧]

೨. ಭಕ್ತ ಜನರ ಸಂಜೀವ ಭಗವಂತನಾಗಿದ್ದಾನೆ. ಇದು ಈ ಕೆಳಗಿನ ಶ್ರೀ ಧ್ರುವರಾಜರ ಮಾತಿನಿಂದ ತಿಳಿದು ಬರುತ್ತದೆ.

ಯೋಽಂತಃ ಪ್ರವಿಶ್ಯಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಲಶಕ್ತಿಧರಃಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತ ಚರಣ ಶ್ರವಣತ್ವಗಾದೀನ್
ಪ್ರಾಣಾನ್ ನಮೋ ಭಗವತೇ ಪುರುಷಾಯ ತುಭ್ಯಮ್ ॥[೨]

ಭಗವಂತ ಜೀವರಲ್ಲಿದ್ದು ಪ್ರಸುಪ್ತವಾಗಿರುವ ಮಾತು ಮೊದಲಾದವುಗಳನ್ನು ಸಂಜೀವನಗೊಳಿಸುತ್ತಾನೆ ಅಂದರೆ ಉಜ್ಜೀವನಗೊಳಿಸುತ್ತಾನೆ. ಈ ಕಾರಣದಿಂದ ಭಗವಂತನಿಗೆ ಸಂಜೀವನೆಂದು ಶ್ರೀದಾಸರು ಕರೆದಿರುವುದು ಗಮನಾರ್ಹವಾಗಿದೆ.

ಇಂಥ ಭಗವಂತನು ನಮ್ಮನ್ನು ರಕ್ಷಿಸಲಿ ಎಂದಿದ್ದಾರೆ ಇದಕ್ಕೆ ಕಾರಣ ಹೀಗಿದೆ. ''ರಕ್ಷಕೋ ಮಮ ನಾನ್ಯೋಽಸ್ತಿ'' ಎಂಬುದಾಗಿ ಶ್ರೀ ಆದಿತ್ಯಪುರಾಣ ವೆಂಕಟೇಶ ಮಹಾತ್ಮೆಯಲ್ಲಿ ತಿಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಹಾಗೆಯೇ ''ಪಾಲಕೋ ಹಿ ಬಹೂನಾಂಚ ಭಕ್ತಾನಾಂ ಭಕ್ತವತ್ಸಲಃ'' ಮಾತನ್ನು ಕೂಡ ಸ್ಮರಣೆಯಲ್ಲಿಟ್ಟುಕೊಂಡು ''ರಕ್ಷಿಸು ರಕ್ಷಿಸು ದೇವಾ'' ಎಂದಿದ್ದಾರೆ ಶ್ರೀದಾಸರು.

ಚಾರಿದ ಶ್ರುತಿಯ ತಂದವನೆ ।
ಉದಾರಿ ವಿಕ್ರಮ ತಮಹರನೇ ॥

ಅಪಹರಿಸಲ್ಪಟ್ಟ ವೇದಗಳನ್ನು ತಂದು ಉತ್ಕೃಷ್ಟ ಪರಾಕ್ರಮವುಳ್ಳ ಭಗವಂತನು ಬ್ರಹ್ಮದೇವರಿಗೆ ಕೊಟ್ಟನು. ಅಂಥ ಶ್ರೀಹರಿಯೇ ನನ್ನನ್ನು ರಕ್ಷಿಸು.

ಚತುರಾನನಾಯ ಚತುರಃ ಪುರಾऽऽಗಮಾನ್
ಪ್ರದದಾವಸಾವನಿಮಿಷೇಶ್ವರಃ ಪ್ರಭುಃ ।
ವಿನಿಹತ್ಯ ಹಿ ಶ್ರುತಿಮುಷಂ ಪುರಾತನಂ
ವಪುಷೋದ್ಧೃತಂ ಹಯಮುಖೇನ ಸದ್ರಿಪುಮ್ ॥[೩]

೧. ಶ್ರೀವಿಷ್ಣುತತ್ವ ವಿನಿರ್ಣಯ
೨. ಶ್ರೀಮದ್ ಭಾಗವತ (೪-೯-೬೧)
೩. ಶ್ರೀಮತ್ ಸುಮಧ್ವವಿಜಯ (೮-೧೪)

ಆ ಭಗವಂತನು ಹಿಂದೆ ಮತ್ಸ್ಯರೂಪವನ್ನು ಧರಿಸಿ ಹಯಗ್ರೀವನೆಂಬ ಅಸುರನನ್ನು ಸಂಹರಿಸಿ, ಅವನು ಅಪಹರಿಸಿದ ವೇದಗಳನ್ನು ಚತುರ್ಮುಖ ಬ್ರಹ್ಮದೇವರಿಗೆ ತಂದುಕೊಟ್ಟನು.

ವಾರಿಧಿಯೊಳು ಉದಿಸಿದನೆ ।
ಮಂದರ ಗಿರಿಯನೆತ್ತಿದನೆ ॥

ಆ ಭಗವಂತ ಸಮುದ್ರದಲ್ಲಿ ಕೂರ್ಮರೂಪದಿಂದ ಉದಿಸಿ ಬಂದು ಮಂದರ ಪರ್ವತವನ್ನು ಎತ್ತಿ ಹಿಡಿದು ದೇವದಾನವರಿಗೆ ಸಮುದ್ರಮಥನ ಕಾರ್ಯವನ್ನು ಮಾಡಲು ಅನುಕೂಲ ಮಾಡಿಕೊಟ್ಟನು.

ಕ್ಷೀರೋ ದಧಾವಮರದಾನವ ಯೂಥಪಾನಾ
ಮುನ್ಮಥ್ನತಾಮಮೃತಲಬ್ಧಯ ಆದಿದೇವಃ ।
ಪೃಷ್ಠೇನ ಕಚ್ಛಪವಪುರ್ವಿಧಾರ ಗೋತ್ರಂ
ನಿದ್ರೇಕ್ಷಣೋऽದ್ರಿ ಪರಿವರ್ತಕಷಾಯ ಕಂಡೂಃ ॥[೪]

ಅಮೃತಕ್ಕಾಗಿ ದೇವತೆಗಳು ದಾನವರೂ ಸೇರಿ ಕ್ಷೀರಸಮುದ್ರವನ್ನು ಮಥನಮಾಡಿದರು. ಕಡೆಗೋಲಾಗಿದ್ದ ಮಂದರಪರ್ವತವು ಭಾರವಾದ್ದರಿಂದ ಮುಳುಗಿಹೋಯಿತು. ದೇವತೆಗಳಿಂದ ಪ್ರಾರ್ಥಿತನಾಗಿ ಶ್ರೀಹರಿಯು ಅರೆಮುಚ್ಚಿದ ಕಣ್ಣುಗಳುಳ್ಳ ಕೂರ್ಮರೂಪದಿಂದ ತನ್ನ ಬೆನ್ನಿನ ಮೇಲೆ ಆ ಪರ್ವತವನ್ನು ಧರಿಸಿದನು. ಪರ್ವತದ ತಿರುಗುವಿಕೆಯಿಂದ ಅವನ ಬೆನ್ನುನವೆಯನ್ನು ಹೋಗಲಾಡಿಸಲು ಕೆರೆದಂತಾಗುತ್ತಿತ್ತು. ಅಷ್ಟೇ ಅಲ್ಲ ದೇವತೆಗಳಲ್ಲಿಯೂ ಹಗ್ಗವಾದ ಹಾವಿನಲ್ಲಿಯೂ, ದಾನವರಲ್ಲಿಯೂ ಶ್ರೀಹರಿಯೇ ಒಳಗಿದ್ದು ಆ ಕಾರ್ಯವನ್ನು ಮುಗಿಸಿಕೊಟ್ಟನು.

ಅಡವಿ ಪ್ರಾಣಿಗಳ ಅಳುವನೆ । ಹತ್ತು ಹೆಡಕಿನವನ ತಲೆ ಕೆಡಹಿದನೆ ।

ಆ ಭಗವಂತನು ಅರಣ್ಯದಲ್ಲಿರುವ ಪ್ರಾಣಿಗಳನ್ನು ಅಳುವ ವರಾಹರೂಪವನ್ನು ಧರಿಸಿದವನು. ಹತ್ತು ಕುತ್ತಿಗೆಯುಳ್ಳ ರಾವಣನ ತಲೆಯನ್ನು, ಶ್ರೀರಾಮರೂಪವನ್ನು ಧರಿಸಿ ಸಂಹರಿಸಿದನು.

ಹತೋ ಹಿರಣ್ಯಾಕ್ಷ ಉದಾರ ವಿಕ್ರಮೋ
ದಿತೇಃ ಸುತೋ ಯೋऽವರಜಃ ಸುರಾರ್ಥೇ ।

೪. ಶ್ರೀಮದ್ ಭಾಗವತ (೨-೭-೧೩)

ಧಾತ್ರಾऽರ್ಥಿತೇನೈವ ವರಾಹರೂಪಿಣಾ
ಧರೋದ್ಧೃತೌ ಪೂರ್ವಹತೋऽಬ್ಜಜೋದ್ಭವಃ ॥[೫]

ದಿತಿದೇವಿಯ ಪುತ್ರರಾದ ಅವರಲ್ಲಿ ಕಿರಿಯವನಾದ ಉತ್ಕೃಷ್ಟ ಪರಾಕ್ರಮಿಯಾದ ಹಿರಣ್ಯಾಕ್ಷನು ದೇವತೆಗಳಿಗೋಸ್ಕರ ಬ್ರಹ್ಮದೇವರಿಂದ ಪ್ರಾರ್ಥಿತನಾಗಿ ವರಾಹರೂಪದಿಂದ ಸಂಹರಿಸಲ್ಪಟ್ಟನು.

ಇಮೌ ಚ ರಕ್ಷೋऽಧಿಪತೀ ವರೋದ್ಧತೌ
ಜಹಿ ಸ್ವವೀರ್ಯೇಣ ನೃಷು ಪ್ರಜಾತಃ ।
ಇತೀರಿತೇ ತೈರಖಿಲೈಃ ಸುರೇಶ್ವರೈ
ರ್ಬಭೂವ ರಾಮೋ ಜಗತೀಪತಿಃ ಪ್ರಭುಃ ॥[೬]

ವರಗಳಿಂದ ಉದ್ಧತರಾದ ಈ ಇಬ್ಬರು ರಾಕ್ಷಸ ಅಧಿಪತಿಗಳಾದ ರಾವಣ, ಕುಂಭಕರ್ಣರನ್ನು ನರರಲ್ಲಿ ಅವತರಿಸಿ ನಿನ್ನ ಸ್ವಸಾಮರ್ಥ್ಯದಿಂದ, ಪರಾಕ್ರಮದಿಂದ ಸಂಹರಿಸು ಎಂಬುದಾಗಿ ಸಕಲ ಸುರರಾಜರಿಂದ ಪ್ರಾರ್ಥಿತನಾದ ವಿಶ್ವಸ್ವಾಮಿಯೂ, ಸರ್ವಸಮರ್ಥನೂ ಆದ ಶ್ರೀಹರಿಯು ಶ್ರೀರಾಮರೂಪದಿಂದ ಅವತರಿಸಿ ಅವರನ್ನು ಸಂಹರಿಸಿದನು.

ಮಡದಿಗೆ ಗಿಡವನು ಇತ್ತವನೇ । ಭೀಮ
ಮಡದಿಯ ಲಜ್ಜೆ ಕಾಯ್ದವನೇ ॥ ೨ ॥

ಆ ಭಗವಂತನು ಶ್ರೀಕೃಷ್ಣರೂಪದಿಂದ ಅವತರಿಸಿದಾಗ – ತನ್ನ ಪತ್ನಿ ಶ್ರೀ ಸತ್ಯ ಭಾಮಾದೇವಿಗೆ ಇಂದ್ರನ ನಂದನವನದಲ್ಲಿದ್ದ ಪಾರಿಜಾತ ಗಿಡವನ್ನು ತಂದುಕೊಟ್ಟನು. ಶ್ರೀ ಭೀಮಸೇನದೇವರ ಪತ್ನಿಯಾದ ದ್ರೌಪದಿದೇವಿಯರ ಸೀರೆ ಸೆಳೆಯುವಾಗ ಅವರಿಗೆ ಅಕ್ಷಯ ವಸ್ತ್ರವನ್ನು ಇತ್ತು ಆ ಶ್ರೀಕೃಷ್ಣ ಪರಮಾತ್ಮನು ಅವರ ಲಜ್ಜೆಯನ್ನು ಕಾಯ್ದನು.

ಶ್ರೀಕೃಷ್ಣನು ತನ್ನ ಮಡದಿಯಾದ ಶ್ರೀ ಸತ್ಯಭಾಮಾದೇವಿಗೆ ಪಾರಿಜಾತ ಗಿಡವನ್ನು ತಂದುಕೊಟ್ಟ ವಿಷಯವು ಶ್ರೀಮದ್ ಭಾಗವತದಲ್ಲಿ ಉಕ್ತವಾಗಿದೆ.

ಶ್ರೀಕೃಷ್ಣನು ದೇವಲೋಕಕ್ಕೆ ಹೋಗಿ ಇಂದ್ರನಿಂದ ಪೂಜಿತನಾಗಿ ಅದಿತಿದೇವಿಗೆ ಓಲೆಗಳನ್ನು ಕೊಟ್ಟು ಸಂತೋಷಪಡಿಸಿದನು. ನಂತರ ಸತ್ಯಭಾಮಾದೇವಿಯ ಪ್ರೇರಣೆಯಿಂದ ಶ್ರೀಕೃಷ್ಣನು ನಂದನವನದಲ್ಲಿದ್ದ ಪಾರಿಜಾತ ವೃಕ್ಷವನ್ನು ಕಿತ್ತು ಗರುಡನ

೫. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೩-೩೯)
೬. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೩-೬೨)

ಮೇಲಿಟ್ಟು ಹೊರಟಾಗ ಇಂದ್ರಾದಿ ದೇವತೆಗಳು ಶ್ರೀಕೃಷ್ಣನನ್ನು ಎದುರಿಸಿ ಯುದ್ಧಕ್ಕೆ ಬಂದರು. ದೇವತೆಗಳು ಯುದ್ಧದಲ್ಲಿ ಸತ್ಯಭಾಮಾದೇವಿಯಿಂದ, ಶ್ರೀಕೃಷ್ಣನಿಂದ ಸೋತು ಹಿಂದೆ ಹೋದರು. ಇಂದ್ರನು ಬಂದು ಯುದ್ಧಮಾಡಿ ಶ್ರೀಕೃಷ್ಣನ ಮೇಲೆ ತನ್ನ ವಜ್ರಾಯುಧವನ್ನು ಪ್ರಯೋಗಿಸಿದನು. ಶ್ರೀಕೃಷ್ಣನು ಅದನ್ನು ಕೈಯಲ್ಲಿ ಹಿಡಿದು ''ನಿನ್ನ ಆಯುಧವು ಏನೂ ಮಾಡದೇ ನನ್ನ ಕೈಸೇರಿದೆ ನೋಡು'' ಎಂದು ನಕ್ಕನು. ಇಂದ್ರನು ನಿರಾಯುಧನಾದನು. ಇಂದ್ರನು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ''ಶ್ರೀಕೃಷ್ಣ! ''ಸಕಲ ವಸ್ತುಗಳು ನಿನ್ನ ಅಧೀನವೇ, ಆದರೆ ಇದನ್ನು ಭೂಲೋಕಕ್ಕೆ ತೆಗೆದುಕೊಂಡು ಹೋದರೆ ದೇವಲೋಕದ ಮಹತ್ವ ಕಡಿಮೆಯಾಗುತ್ತದೆ.'' ಎಂದನು. ಶ್ರೀಕೃಷ್ಣನು ''ಇಂದ್ರನೇ! ನೀನು ವಿಚಾರಿಸಬೇಡ. ನಾನು ಪರಂಧಾಮಕ್ಕೆ ತೆರಳುವಾಗ ಈ ವೃಕ್ಷವು ನಂದನವನಕ್ಕೆ ಬಂದು ಸೇರುತ್ತದೆ'' ಎಂದನು. ಶ್ರೀಕೃಷ್ಣನು ಅಲ್ಲಿಂದ ಹೊರಟು ದ್ವಾರಕೆಗೆ ಬಂದು ಪಾರಿಜಾತ ಗಿಡವನ್ನು ಸತ್ಯಭಾಮಾದೇವಿಯ ಅಂಗಳದಲ್ಲಿ ನೆಟ್ಟು ಸಂತೋಷಪಡಿಸಿದನು.

ಶ್ರೀಕೃಷ್ಣನು ಭೀಮಸೇನದೇವರ ಮಡದಿಯಾದ ದ್ರೌಪದೀದೇವಿಯರ ಲಜ್ಜೆಯನ್ನು ಕಾಯ್ದು ಅವರನ್ನು ರಕ್ಷಿಸಿದ ಪ್ರಸಂಗ ಹೀಗಿದೆ.

ಕೌರವನ ತುಂಬಿದ ಸಭೆಯಲ್ಲಿ ದುಃಶ್ಯಾಸನನು ದ್ರೌಪದೀದೇವಿಯರ ಸೀರೆಯನ್ನು ಸೆಳೆದು ಮಾನಭಂಗ ಮಾಡಲು ಪ್ರಯತ್ನಿಸಿದ. ಆಗ ದ್ರೌಪದೀ ದೇವಿಯರು ಪರಮಾತ್ಮ ಶ್ರೀಕೃಷ್ಣನಿಗೆ ರಕ್ಷಿಸಬೇಕೆಂದು ಮೊರೆಯಿಟ್ಟು ಸ್ತೋತ್ರ ಮಾಡುತ್ತಾರೆ.

ಗೋವಿಂದ ದ್ವಾರಕಾವಾಸಿನ್ ಕೃಷ್ಣಗೋಪೀ ಜನಪ್ರಿಯ ।
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ।
ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇऽವಸೀದತೀಮ್ ॥[೭]

''ಓ ಗೋವಿಂದ! ದ್ವಾರಕಾನಾಥ! ನನ್ನ ಮಾನವನ್ನು ಅಪಹರಿಸುವದಕ್ಕಾಗಿ ಈ ದುಷ್ಟಕೌರವರು ಯತ್ನಿಸುತ್ತಾ ಇದ್ದಾರೆ. ಇದು ನಿನಗೆ ತಿಳಿಯದೇ? ನಿನ್ನನ್ನೇ ಶರಣು ಹೊಂದಿದ ನನ್ನನ್ನು ಕಾಪಾಡು'' ಎಂಬುದಾಗಿ ಸ್ತೋತ್ರ ಮಾಡಿದರು.

ಹೀಗೆ ದ್ರೌಪದೀ ದೇವಿಯರು ಸ್ತೋತ್ರ ಮಾಡಿ ಪ್ರಾರ್ಥಿಸಲು ಶ್ರೀಕೃಷ್ಣನು ಅವರಿಗೆ ಅಕ್ಷಯಾಂಬರವನ್ನಿತ್ತು ಅವರ ಲಜ್ಜೆಯನ್ನು ಕಾಯ್ದು ಅನುಗ್ರಹಿಸಿದ.

೭. ಶ್ರೀಮನ್ ಮಹಾಭಾರತ

ಪದ್ಮಜಾಂಡವ ಒಡೆದವನೆ । ಬಲಿಸದ್ಮವ ಬಿಡದೆ ಕಾಯ್ದವನೇ ॥

ಹಿಂದೆ ವಾಮನ ದೇವರು ಬಲಿರಾಜನ ಯಜ್ಞವಾಟಕ್ಕೆ ಹೋಗಿ ಮೂರು ಪಾದ ಭೂಮಿಯನ್ನು ಬೇಡಿ ತಾನು ತ್ರಿವಿಕ್ರಮನಾಗಿ ಬೆಳೆದು ಪಾದವನ್ನು ಮೇಲಕ್ಕೆತ್ತಿದಾಗ ಅದು ಬ್ರಹ್ಮಾಂಡ ಕಟಾಹಕ್ಕೆ ಸ್ಪರ್ಶವಾಗಲು ಬ್ರಹ್ಮಾಂಡಕಟಾಹವು ಸೀಳಿ ಹೊರಗಿನ ಜಲತತ್ವವು ಒಳಗೆ ಬರಲು ಬ್ರಹ್ಮದೇವರು ತಮ್ಮ ಕಮಂಡಲಿನಲ್ಲಿ ಹಿಡಿದು ಭಗವಂತನ ಪಾದತೊಳೆದು ತಮ್ಮ ಶಿರಸ್ಸಿನಲ್ಲಿ ಧರಿಸಿದರು. ಮುಂದೆ ಬಲಿರಾಜನನ್ನು ಸುತಲ ಲೋಕಕ್ಕೆ ಕಳಿಸಿಕೊಟ್ಟನು. ತಾನು ಒಂದುರೂಪದಿಂದ ಬಲಿಯ ಮನೆಯ ಬಾಗಿಲು ಕಾಯಲು ನಿಂತು ಅನುಗ್ರಹಿಸಿದನು.

ಈ ಪ್ರಸಂಗವು ಶ್ರೀಮದ್‌ಭಾಗವತದಲ್ಲಿ ಉಕ್ತವಾಗಿದೆ –

ಶ್ರೀಹರಿಯ ಸಾಕ್ಷಾತ್ ಅವತಾರನಾದ ವಾಮನನು ಅದಿತಿ ದೇವಿಯರನ್ನು ನಿಮಿತ್ತಮಾಡಿ ಅವತರಿಸಿದನು. ನಂತರ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಬಂದು ಮೂರುಪಾದ ಭೂಮಿಯನ್ನು ದಾನವಾಗಿ ಬೇಡಿ ಮೂರು ಲೋಕಗಳನ್ನು ಅಳೆದು ತನ್ನ ತ್ರಿವಿಕ್ರಮ ರೂಪವನ್ನು ಹೊಂದಿ ಪರಾಕ್ರಮವನ್ನು ತೋರಿದನು. ಆಗ ಅವನು ಮೇಲಕ್ಕೆ ಎತ್ತಿದ ಎಡದ ಕಾಲಿನ ಹೆಬ್ಬೆರಳಿನ ಉಗುರು ಬ್ರಹ್ಮಾಂಡಕಟಾಹದ ಮೇಲ್ಭಾಗವನ್ನು ಭೇದಿಸಿತು. ಹೊರಗಿನ ಜಲತತ್ವದ ನೀರು ಒಳಗೆ ನುಗ್ಗಿತು. ಆ ನೀರನ್ನು ಬ್ರಹ್ಮದೇವರು ತಮ್ಮ ಕಮಂಡಲುವಿನಲ್ಲಿ ತೆಗೆದುಕೊಂಡು ಭಗವಂತನ ಪಾದಕಮಲಗಳನ್ನು ತೊಳೆದು ಆ ನೀರನ್ನು ತಮ್ಮ ತಲೆಯಲ್ಲಿ ಧರಿಸಿದರು. ಇದಕ್ಕೆ ''ವಿಷ್ಣುಪದಿ'' ಎಂದು ಕರೆಯುತ್ತಾರೆ.

ತತ್ರ ಭಗವತಃ ಸಾಕ್ಷಾತ್ ಯಜ್ಞಲಿಂಗಸ್ಯ ವಿಷ್ಣೋಃ ವಿಕ್ರಮತೋ
ವಾಮಪಾದಾಂಗುಷ್ಠನಖನಿರ್ಭಿನ್ನೋರ್ಧ್ವಾಂಡಕಟಾಹ ವಿವರೇಣಾಂತಃ
ಪ್ರವಿಷ್ಟಾಯಾ ಬಾಹ್ಯ ಜಲಧಾರಾ ತಚ್ಚರಣಪಂಕಜಾವನೇಜನಾರುಣ
ಕಿಂಜಲ್ಕೋಪರಂಜಿತಾಖಿಲಜಗದಘಮಲಾಪಹೋಸ್ಪರ್ಶನ ಅಮಲಾಸಾಕ್ಷಾತ್
ಭಗವತ್ಪದೀತ್ಯನುಪಲಕ್ಷಿತ ವಚೋಭಿರಭಿಧೀಯಮಾನಾಽತಿ ಮಹತಾ
ಕಾಲೇನ ಯುಗಸಹಸ್ರೋಪಲಕ್ಷಣೇನ ದಿವೋ ಮೂರ್ಧನ್ಯವತತಾರ
ಯತ್ತದ್ವಿಷ್ಣುಪದಮಾಹುಃ ॥[೯]

ನಂತರ ಶ್ರೀವಾಮನನು ಬಲಿರಾಜನನ್ನು ಬಂಧುಗಳ ಸಮೇತವಾಗಿ ಸುತಲ ಲೋಕಕ್ಕೆ ಕಳಿಸಿಕೊಟ್ಟನು. ತಾನು ಒಂದು ರೂಪದಿಂದ ಬಲಿರಾಜನ ಮನೆಯ ಬಾಗಿಲು ಕಾಯಲು ನಿಂತುಕೊಂಡು ಅನುಗ್ರಹಿಸಿದನು.

೯. ಶ್ರೀಮದ್ ಭಾಗವತ (೫-೧೭-೧)

ಭಧ್ಮಿಪಾರ್ಥಿವರ ಸಂಹರನೆ । ಕರ ಪದ್ಮದಿ ಪರಶು ಹಿಡಿದವನೆ ॥ ೩ ॥

ಆ ಭಗವಂತನು ತನ್ನ ಕರಕಮಲದಲ್ಲಿ ಪರಶು (ಕೊಡಲಿ)ಯನ್ನು ಹಿಡಿದು ಪರಶುರಾಮರೂಪದಿಂದ ದುಷ್ಟ ಕ್ಷತ್ರಿಯರನ್ನು ಸಂಹಾರ ಮಾಡಿದನು.

ಯುಧಿ ಸಹಸ್ರಕರೋರ್ಜಿತ ಬಾಣಹೃತ್
ಪರಶುರರ್ಜುನ ಸತ್ ಕ್ಷಿತಿದಾಯಕಃ ।
ಕುಭರ ಸಂಹರಣೋಗ್ರರಣಾಗ್ರಣೇ
ದ್ವಿಜಭವೋಽಜಭವೋನ್ನತಿದಾಯಕಃ ॥[೯]

ಭಗವಂತನು ಪರಶುರಾಮ ರೂಪವನ್ನುಧರಿಸಿ ಕೊಡಲಿಯಿಂದ ಕಾರ್ತವೀರ್ಯಾರ್ಜುನನ ಬಾಣಗಳನ್ನು ಕತ್ತರಿಸಿ ಅವನನ್ನು ಸಂಹರಿಸಿದನು. ಜಮದಗ್ನಿಮುನಿಗಳಿಗೆ ಮಗನಾಗಿ ಅವತರಿಸಿದ ಪರಶುರಾಮನು ೨೧ ಸಾರೆ ಭೂಮಂಡಲವನ್ನು ಸುತ್ತಿ ಎಲ್ಲ ದುಷ್ಟಕ್ಷತ್ರಿಯ ರಾಜರನ್ನು ನಾಮಾವಶೇಷ ಮಾಡಿದನು. ಬ್ರಹ್ಮರುದ್ರಾದಿ ದೇವತೆಗಳಿಗೆ ಉನ್ನತ ಸ್ಥಾನಗಳನ್ನು ಕೊಟ್ಟ ಪರಶುರಾಮ ರೂಪಿಯು ನಮ್ಮನ್ನು ರಕ್ಷಿಸಲಿ.

ಕಥಯಂತ್ಯಮುಂ ಪರಶುಭಾಸಮಾನಗೋ
ಹತಮರ್ತ್ಯದೇವತಮಸಂ ಮುಹುರ್ಮುಹುಃ ।
ಜಗತಾಂ ಹಿತಂ ಹರಿಮಿವಾ ಪರಂ ಹರಿಂ
ಗುರುಶಕ್ತಿತಾಪಸವರಾನ್ವಯೋದ್ಭವಮ್ ॥[೧೦]

ತನ್ನ ಶ್ರೇಷ್ಠವಾದ ಕೊಡಲಿಯ ಅಪ್ರತಿಮ ಕಾಂತಿಯಿಂದ ದುಷ್ಟಕ್ಷತ್ರಿಯರೆಂಬ ಕತ್ತಲೆಯನ್ನು ಮತ್ತೆ ಮತ್ತೆ ನಾಶಗೊಳಿಸಿದ, ಜಗತ್ತಿಗೆ ಹಿತಕಾರಕನು, ಉತ್ತಮವಾದ ತಪಃಶಕ್ತಿಯಿಂದ ಕೂಡಿದ ಜಮದಗ್ನಿಮುನಿಗಳ ವಂಶದಲ್ಲಿ ಅವತರಿಸಿದ ''ಪರಶು ರಾಮ'' ರೂಪಿಯಾದ ಆ ಭಗವಂತನನ್ನು ಮತ್ತೊಬ್ಬ ವಿಲಕ್ಷಣ ಸೂರ್ಯನೆಂದು ಜ್ಞಾನಿಗಳು ಹೇಳುತ್ತಾರೆ.

ಮಿಥ್ಯೆಯ ಹೊಲಬು ಹೇಳಿದನೆ । ಖಳ ದೈತ್ಯರ ವಶವ ಮಾಡಿದನೆ ।

ಬುದ್ಧರೂಪದಿಂದ ಆ ಭಗವಂತನು ಅಸುರಜನರಿಗೆ ಮಿಥ್ಯಾಜ್ಞಾನ ಬರುವಂತೆ ಮಾಡಿದನು. ಅನಧಿಕಾರಿಗಳಾದ ಬೌದ್ಧ-ದೈತ್ಯ ಸಮೂಹಕ್ಕೆ ವಿಪರೀತ ಜ್ಞಾನ ಬರುವಂತೆ ಉಪದೇಶಿಸಿದನು. ಕಲ್ಕಿರೂಪವನ್ನು ಧರಿಸಿ ಭೂಮಿಯಲ್ಲಿಯ ದುಷ್ಟರಾಜರನ್ನು ಸಂಹರಿಸಿದನು.

೯. ಶ್ರೀ ರುಕ್ಮಿಣೀಶವಿಜಯ ಮಹಾಕಾವ್ಯ (೧೭-೨೦)
೧೦. ಶ್ರೀ ಸುಮಧ್ವವಿಜಯ ಮಹಾಕಾವ್ಯ (೮-೧೮)

ಭುವಿ ತಥಾಗತ ಏಷ ಯಥಾಂಬರಂ
ಸ್ವವಿದಿತೋ ನವಮಾಕೃತಿರಾತ್ಮನಃ ।
ಸಕಲವಿತ್ ಖಿಲಸಂಚಯವಂಚಕಃ
ಸ್ವಮತಿದೋ ಮತಿದೋಷಹರೋಽಸ್ತುನಃ ॥[೧೦]

ಭಗವಂತನು ತನ್ನ ಒಂಭತ್ತನೇ ಅವತಾರದಲ್ಲಿ ಬುದ್ಧರೂಪವನ್ನು ಪ್ರಕಟಗೊಳಿಸಿದನು. ಸ್ವಪ್ರಕಾಶನೆನಿಸಿದ ಅವನು ಪ್ರಪಂಚದಲ್ಲಿ ಸರ್ವತ್ರ ವ್ಯಾಪ್ತನಾಗಿ ಸರ್ವಜ್ಞನಾಗಿ ತ್ರಿಪುರದ ದೈತ್ಯರನ್ನು ವಂಚಿಸಿದನು. ದುಷ್ಟರಿಗೆ ಮಿಥ್ಯಾಜ್ಞಾನ ಬರುವಂತೆ ಮಾಡಿದನು. ಇಂಥ ಬುದ್ಧರೂಪಿಯಾದ ಅವನು ನಮ್ಮ ಬುದ್ಧಿ ದೋಷಗಳೆನಿಸಿದ ಕಾಮಕ್ರೋಧಾದಿಗಳನ್ನು ನಿವಾರಿಸಲಿ.

ವಿತತವಿಷ್ಣುಯಶೋಜನನಾಂಜಸಾ
ಕೃತಯುಗೋನ್ನತಿದಾತೃಕರೋರ್ಜಿತ ।
ದ್ವಿಜ ಸುಹೃತ್ ಕಲಿಕಾನನ ದೈನ್ಯ ಹೇ
ತ್ವಸಿಧರಾಸಿ ಧರಾ ಭಯಕಾರಕಃ ॥[೧೨]

ಭಗವಂತನು ಕಲ್ಕಿರೂಪವನ್ನು ಧರಿಸಿ ವಿಷ್ಣುಯಶನೆಂಬ ಬ್ರಾಹ್ಮಣನಲ್ಲಿ ಅವತರಿಸಿದನು. ಮ್ಲೇಂಛರನ್ನು ಕೊಂದು ಕೃತಯುಗಧರ್ಮವನ್ನು ಸ್ಥಾಪಿಸಿದನು. ದುಷ್ಟರಾದ ದೈತ್ಯರನ್ನು ನಾಶಮಾಡಿ ಧರ್ಮೋನ್ನತಿಯನ್ನುಂಟುಮಾಡಿದನು. ಶ್ರೇಷ್ಠರಾದ ಬ್ರಾಹ್ಮಣರ ಹೃದಯದಲ್ಲಿ ಪ್ರವಿಷ್ಟನಾದ ಕಲಿಯೆಂಬ ಕಾನನವನ್ನು ಕತ್ತರಿಸಿ ಭೂದೇವಿಯ ಭಾರವನ್ನು ಹರಣಮಾಡಿ ಅಭಯವನ್ನಿತ್ತ ಕಲ್ಕಿ ರೂಪಿಯಾದ ಭಗವಂತನೇ ನೀನು ನಮಗೂ ಅಭಯಪ್ರದನಾಗು.

ಮತ್ತಕಾರಿಯ ವಪುಹರನೆ ನನ್ನ । ಕರ್ತಾ ಪ್ರಸನ್ನ ವೆಂಕಟನೆ ॥

ಮದಮತ್ತನಾದ ಹಿರಣ್ಯಕಶಿಪುವನ್ನು ನಾಶಮಾಡಿದ ನರಸಿಂಹನೇ! ನೀನು ನನ್ನ ಕರ್ತಾ ಆಗಿರುವಿ. ನೀನು ಪ್ರಸನ್ನವೆಂಕಟನಿಂದ ಅಭಿನ್ನನಾಗಿರುವಿ.

ತ್ರೈವಿಷ್ಟಪೋರುಭಯಹಾರಿ ನೃಸಿಂಹರೂಪಂ
ಕೃತ್ವಾ ಭ್ರಮದ್ಭ್ರುಕುಟಿದಂಷ್ಟ್ರಕರಾಳ ವಕ್ತ್ರಮ್ ।

೧೦. ಶ್ರೀ ರುಕ್ಮಿಣೀಶವಿಜಯ ಮಹಾಕಾವ್ಯ (೧೭-೨೩)
೧೨. ಶ್ರೀ ರುಕ್ಮಿಣೀಶವಿಜಯ ಮಹಾಕಾವ್ಯ (೧೭-೨೪)

ದೈತ್ಯೇಂದ್ರಮಾಶು ಗದಯಾऽಭಿಪತಂತಮಾರಾ
ದೂರೌ ನಿಪಾತ್ಯ ವಿದದಾರ ನಖೈಃ ಸ್ಫುರಂತಮ್ ॥[೧೩]

ಸ್ವರ್ಗದ ಇಂದ್ರಾದಿ ದೇವತೆಗಳಿಗೆ ಹಿರಣ್ಯಕಶಿಪುವಿನಿಂದ ಅತ್ಯಂತ ಭಯ ಬಂದೊದಗಿತು. ಅದನ್ನು ಹೋಗಲಾಡಿಸಲು ಶ್ರೀಹರಿಯು ನರಸಿಂಹರೂಪನಾಗಿ ಅವತರಿಸಿದನು. ಕೋಪದಿಂದ ಗಂಟಿಕ್ಕಿದ ಹುಬ್ಬುಗಳು ಚಲಿಸುತ್ತಿದ್ದವು. ಕೋರೆ ಹಲ್ಲುಗಳಿಂದ ಕೂಡಿದ ಮುಖವನ್ನು ನೋಡಿದರೆ ಎಲ್ಲರೂ ಭಯಭೀತರಾಗುತ್ತಿದ್ದರು. ಗದೆಯನ್ನು ಹಿಡಿದು ದೂರದಿಂದಲೇ ಮೇಲೆ ಬೀಳುತ್ತಿದ್ದ ಆ ದೈತ್ಯ ಹಿರಣ್ಯಕಶಿಪುವನ್ನು ನರಸಿಂಹರೂಪೀ ಶ್ರೀಹರಿಯು ವೇಗದಿಂದ ತೊಡೆಗಳಲ್ಲಿ ಹಾಕಿಕೊಂಡು ತನ್ನ ಉಗುರುಗಳಿಂದ ಸೀಳಿ ಸಂಹಾರ ಮಾಡಿದನು.

''ಸ್ವತಂತ್ರಃ ಕರ್ತಾ'' ಉಕ್ತಿಯಂತೆ ಸ್ವತಂತ್ರನಾದವನು ಮಾತ್ರ ಕರ್ತಾ ಎನಿಸಿಕೊಳ್ಳುತ್ತಾನೆ ಭಗವಂತನು ಸ್ವತಂತ್ರನಾಗಿದ್ದಾನೆ.

ಶ್ರೀಮದಾನಂದತೀರ್ಥ ಭಗವತ್ಪಾದರು ಭಗವಂತ ಸ್ವತಂತ್ರನೆಂಬುದಾಗಿ ತಿಳಿಸಿದ್ದಾರೆ.

ಸ್ವತಂತ್ರಂ ಅಸ್ವತಂತ್ರಂ ಚ ದ್ವಿವಿಧಂ ತತ್ವಮಿಷ್ಯತೇ ।
ಸ್ವತಂತ್ರೋ ಭಗವಾನ್ ವಿಷ್ಣುಃ ॥[೧೪]

ಅವರೇ ತಮ್ಮ ಇನ್ನೊಂದು ಗ್ರಂಥದಲ್ಲಿ ಹೀಗೆ ತಿಳಿಸಿದ್ದಾರೆ -

ಸರ್ವೋತ್ತಮೋ ಹರಿರಿದಂ ತು ತದಾಜ್ಞಯೈವ
ಚೇತುಂ ಕ್ಷಮಂ ಸ ತು ಹರಿಃ ಪರಮ ಸ್ವತಂತ್ರಃ ॥[೧೫]

ಆ ಶ್ರೀಹರಿಯು ಸರ್ವೋತ್ತಮ, ಈ ಸಕಲ ಜಗತ್ತು ಅವನ ಆಜ್ಞೆಯಿಂದಲೇ ಜ್ಞಾನವನ್ನು ಪಡೆಯಲು ಸಮರ್ಥವಾಗಿದೆ. ಅವನು ಸರ್ವಶ್ರೇಷ್ಠನೂ, ಸ್ವತಂತ್ರನೂ ಆಗಿದ್ದಾನೆ.

ಕರ್ತಾ ಕಾರಯಿತಾ ಪ್ರಭುಃ ।

ಉಕ್ತಿಯಂತೆ ಪ್ರಸನ್ನವೆಂಕಟರೂಪಿಯಾದ ಆ ಭಗವಂತನೇ ನನ್ನ ಕರ್ತಾ ಆಗಿದ್ದಾನೆ. ಅವನು ನನ್ನಲ್ಲಿ ನಿಂತು ಎಲ್ಲವನ್ನು ಮಾಡುತ್ತಾನೆ, ಮಾಡಿಸುತ್ತಾನೆ ಎಂಬ ಶ್ರೀದಾಸರ ಮಾತು ಮತ್ತೆ ಮತ್ತೆ ಮೆಲಕು ಹಾಕುವಂತಿದೆ.

⁂

೧೩. ಶ್ರೀಮದ್ ಭಾಗವತ (೨-೭-೧೪) ೧೪. ತತ್ವಸಂಖ್ಯಾನ
೧೫. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೧-೨೯)

೧೦. ವೇದಾಗಮಗಳಲ್ಲಿ ಭೇದ ಹುಡುಕಿ

ವೇದಾಗಮಗಳಲ್ಲಿ ಭೇದವ ಹುಡುಕಿ
ವಾದ ವಿವಾದಗಳೇತಕೋ ಬುಧರಲಿ ॥ ಪ ॥

ದ್ವೈತ ಅದ್ವೈತ ಶ್ರೀವೈಷ್ಣವ ಶೈವರಿಗೆ
ಪತಿತಪಾವನ ನಮ್ಮ ಶ್ರೀಪತಿ ಗತಿಯೆಂದು ।
ಸೂತ್ರಭಾಷ್ಯ ಚತುರ್ವೇದ ಸಾರುತಿರೆ
ಸ್ವೋತ್ತಮಮಹಾವಿಷ್ಣು ಏಕದೇವನಿರೆ ॥ ೧ ॥

ಶರಧಿ ಮಥನದಿ ಹರನು ಹರಿಯಾಜ್ಞದಿ ಧರಿಸಿ ಶಿರ
ಭರದಿ ವಿಷಸವಿದು ಕರಿಕೊರಳನೆನಿಸಲು ।
ತ್ವರದಿ ಹರಿಪದದಿಂದ ಹರಿದ ಸುರನದಿಯ
ಶಿರದೊಳಿಟ್ಟು ಹರ ಹರಿಮಹಿಮೆ ಸಾರಿರೇ ॥ ೨ ॥

ಜಗಕೆ ಹಿರಿಯ ನಾಲ್ಮೊಗನ ಪಿತನೆಂದು
ನಿಗಮಾಗಮಗಳೆಲ್ಲ ಪೊಗಳುತ್ತಲಿರಲು ।
ಖಗರಾಜಗಮನ ನಮ್ಮ ಸಿರಿಪ್ರಸನ್ನವೆಂಕಟನು
ನಿಗಮಾಗಮವು ಅವನೆ ಆಗಮಗಳೊಂದಿತನೆ ಹರಿ ಆತ ಏಕೋದೇವಾ ॥ ೩ ॥

ಪ್ರಸ್ತುತ ಪದ್ಯದಲ್ಲಿ ಎಲ್ಲ ವೇದಗಳು, ಆಗಮಗಳು ಭೇದವನ್ನೇ ಹೇಳುತ್ತವೆ ಈ ವಿಷಯದಲ್ಲಿ ವಾದವಿವಾದಗಳನ್ನು ಮಾಡುವ ಕಾರಣವಿಲ್ಲ. ಆ ಮಹಾವಿಷ್ಣುವೇ ಸರ್ವೋತ್ತಮದೇವತೆಯಾಗಿದ್ದಾನೆ. ಹಿಂದೆ ಸಮುದ್ರಮಥನ ಕಾಲದಲ್ಲಿ ಶ್ರೀಹರಿಯಾಜ್ಞೆಯನ್ನು ಶಿರಸಾವಹಿಸಿ ಶಿವನು ವಿಷವನ್ನು ಪಾನಮಾಡಿ ನೀಲಕಂಠನೆನಿಸಿದನು. ಶ್ರೀಹರಿಯ ಪಾದದಿಂದ ಉದ್ಭೂತಳಾದ ಗಂಗೆಯನ್ನು ಶಿರದಲ್ಲಿ ಧರಿಸಿ ಶ್ರೀಹರಿಯ ಮಹಿಮೆಯನ್ನು ಸಾರಿದ. ಈ ಜಗತ್ತಿನಲ್ಲಿ ಚತುರ್ಮುಖ ಬ್ರಹ್ಮದೇವರ ತಂದೆಯು ಶ್ರೀಹರಿಯೇ ಆಗಿರುವನೆಂದು ವೇದಗಳು ಸಾರುತ್ತಿವೆ. ಇಂಥ ಶ್ರೀಹರಿಯು ಸರ್ವ ವೇದಗಳಿಂದ ಪ್ರತಿಪಾದ್ಯನಾಗಿರುವನೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ವೇದಾಗಮಗಳಲ್ಲಿ ಭೇದವ ಹುಡುಕಿ
ವಾದ ವಿವಾದಗಳೇತಕೋ ಬುಧರಲಿ ॥ ಪ ॥

ವೇದಗಳು, ವೇದಾನುಸಾರಿಯಾದ ಇತಿಹಾಸ, ಪುರಾಣ, ಪಂಚರಾತ್ರಾದಿಗಳಲ್ಲಿ ಭೇದವನ್ನು ಹುಡುಕಿಕೊಂಡುಹೋಗಿ ಜ್ಞಾನಿಗಳಾದವರು ವಾದವಿವಾದವನ್ನು ಮಾಡುವ ಕಾರಣವಿಲ್ಲ. ಏಕೆಂದರೆ –

ಎಲ್ಲ ವೇದಗಳು ಭೇದವನ್ನೇ ಸಾರುತ್ತವೆ. ಅಭೇದವನ್ನು ಹೇಳುವ ಒಂದೂ ಆಗಮವಿಲ್ಲ, ವೇದವಿಲ್ಲ ಇದನ್ನು ಶ್ರೀಮದಾನಂದತೀರ್ಥಭಗವತ್ಪಾದರು ಹೀಗೆ ತಿಳಿಸಿದ್ದಾರೆ.

ನ ಚಾಭೇದೇ ಕಶ್ಚಿದಾಗಮಃ ।
ಸಂತಿ ಚ ಭೇದೇ ಸರ್ವಾಗಮಾಃ ॥[೧]

ದ್ವೈತ ಅದ್ವೈತ ಶ್ರೀವೈಷ್ಣವ ಶೈವರಿಗೆ
ಪತಿತ ಪಾವನ ನಮ್ಮ ಶ್ರೀಪತಿ ಗತಿಯೆಂದು ।
ಸೂತ್ರಭಾಷ್ಯ ಚತುರ್ವೇದ ಸಾರುತಿರೆ
ಸ್ವೋತ್ತಮಮಹಾವಿಷ್ಣು ಏಕದೇವನಿರೆ ॥ ೧ ॥

ದ್ವೈತ, ಅದ್ವೈತ, ಶ್ರೀವೈಷ್ಣವ, ಶೈವರಿಗೆ ಎಲ್ಲರಿಗೂ ಪತಿತಪಾವನನೆನಿಸಿದ ಶ್ರೀಪತಿಯಾದ ಶ್ರೀಹರಿಯು ಸರ್ವೋತ್ತಮ ಮಹಾವಿಷ್ಣುವಾಗಿದ್ದಾನೆ. ಅವನೇ ಗತಿಯಾಗಿದ್ದಾನೆ. ಒಬ್ಬನೇ ದೇವನಾಗಿದ್ದಾನೆಂದು ಸೂತ್ರಭಾಷ್ಯ, ವೇದಗಳು ಸಾರುತ್ತಿವೆ.

ದ್ವೈತ, ಅದ್ವೈತ, ಶ್ರೀವೈಷ್ಣವ, ಶೈವರಿಗೆ
ಪತಿತಪಾವನ ನಮ್ಮ ಶ್ರೀಪತಿ ಗತಿಯೆಂದು ॥

ದ್ವೈತ, ಅದ್ವೈತ, ವಿಶಿಷ್ಟಾದ್ವೈತ (ಶ್ರೀವೈಷ್ಣವ), ಶೈವರಿಗೆ ಪತಿತಪಾವನನಾದ ನಮ್ಮ ಶ್ರೀಪತಿಯೇ ಶ್ರೀನಿವಾಸನೇ ಗತಿಯಾಗಿದ್ದಾನೆ.

ಶ್ರೀಹರಿಕಥಾಮೃತಸಾರದಲ್ಲಿ ಜಗನ್ನಾಥದಾಸರು ಶ್ರೀಪತಿಯು ಪತಿತಪಾವನನೆಂದು ತಿಳಿಸಿದ್ದಾರೆ.

ದೇವದೇವೇಶನ ಮೂರ್ತಿ ಕ
ಳೇವರಗಳೊಳಗನವರತ ಸಂ
ಭಾವಿಸುತ ಪೂಜಿಸುತ ನೋಡುತ ಸುಖಿಸುತಿರು ಬಿಡದೆ ।

---

೧. ಶ್ರೀಮದ್ವಿಷ್ಣುತತ್ವವಿನಿರ್ಣಯ - ಪ್ರಥಮ ಪರಿಚ್ಛೇದ

ಶ್ರೀವರ ಜಗನ್ನಾಥವಿತ್ಠಲನು
ತಾ ಒಲಿದು ಕಾರುಣ್ಯದಲಿ ಭವ
ನೋವ ಪರಿಹರಿಸುವನು ಪ್ರವಿತತ ಪತಿತಪಾವನನು ॥ (೮-೩೨)

ಶ್ರೀಪತಿ ಶ್ರೀನಿವಾಸನೇ ಎಲ್ಲರಿಗೂ ಗತಿಯಾಗಿದ್ದಾನೆಂಬುದು ಈ ಪುರಾಣ ವಾಕ್ಯದಿಂದ ತಿಳಿದು ಬರುತ್ತದೆ.

ಶರಣಾಗತ ಸಂತ್ರಾಣಃ ಶ್ರೀನಿವಾಸಃ ಸತಾಂ ಗತಿಃ ॥[೨]

ಸೂತ್ರಭಾಷ್ಯ ಚತುರ್ವೇದ ಸಾರುತಿರೆ
ಸ್ವೋತ್ತಮ ಮಹಾವಿಷ್ಣು ಏಕದೇವನಿರೆ ॥

ಬ್ರಹ್ಮಸೂತ್ರಭಾಷ್ಯ, ನಾಲ್ಕುವೇದಗಳು ಆ ಮಹಾವಿಷ್ಣುವೇ ಸರ್ವೋತ್ತಮ ಎಂಬುದಾಗಿ ಸಾರುತ್ತಿವೆ.

ಶ್ರೀಮದಾನಂದತೀರ್ಥಭಗವತ್ಪಾದರು ತಮ್ಮ ಗ್ರಂಥದಲ್ಲಿ ತಿಳಿಸಿರುವ ಪರಿ ಹೀಗಿದೆ -

ವಿಷ್ಣೋಃ ಸರ್ವೋತ್ತಮತ್ವ ಏವ ಮಹಾತಾತ್ಪರ್ಯಂ ಸರ್ವಾಗಮಾನಾಂ ॥[೩]

ಸರ್ವೋತ್ತಮನಾದ ಮಹಾವಿಷ್ಣು ಒಬ್ಬನೇ ದೇವನಾಗಿದ್ದಾನೆ. ಈ ವಿಷಯವು ಉಪನಿಷತ್‌ನಲ್ಲಿ ಬಂದಿದೆ.

ಏಕೋ ದೇವಃ ಸರ್ವಭೂತೇಷುಗೂಢಃ
ಸರ್ವವ್ಯಾಪೀ ಸರ್ವಭೂತಾಂತರಾತ್ಮಾ ।
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥[೪]

ಶ್ರೀಮದಾನಂದತೀರ್ಥರೇ ಆ ಭಗವಂತನ ಸರ್ವೋತ್ತಮತ್ವವನ್ನು ಬಣ್ಣಿಸುವ ಪರಿ ಹೀಗಿದೆ.

ಸರ್ವೋತ್ತಮೋ ಹರಿರಿದಂ ತು ತದಾಜ್ಞಯೈವ
ಚೇತುಂ ಕ್ಷಮಂ ಸ ತು ಹರಿಃ ಪರಮಃ ಸ್ವತಂತ್ರಃ ।

೨. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೧-೨೯)
೩. ಶ್ರೀಮದ್ವಿಷ್ಣುತತ್ವವಿನಿರ್ಣಯ - ಪ್ರಥಮ ಪರಿಚ್ಛೇದ
೪. ಶ್ವೇತಾಶ್ವತರ ಉಪನಿಷತ್ತು

ಪೂರ್ಣಾವ್ಯಯಾಗಣಿತ ನಿತ್ಯ ಗುಣಾರ್ಣವೋಽಸಾ
ವಿತ್ಯೇವ ವೇದ ವಚನಾನಿ ಪರೋಕ್ತಯಶ್ಚ ॥[೫]

ಶ್ರೀಹರಿಯೇ ಸರ್ವೋತ್ತಮನು. ಈ ಸಕಲಜಗತ್ತು ಅವನ ಆಜ್ಞೆಯಿಂದ ಜ್ಞಾನವನ್ನು ಪಡೆಯಲು ಸಮರ್ಥವಾಗಿದೆ. ಅವನು ಸರ್ವಶ್ರೇಷ್ಠನೂ, ಸ್ವತಂತ್ರನೂ ಆಗಿದ್ದಾನೆ. ಪೂರ್ಣವೂ, ಹ್ರಾಸರಹಿತವೂ, ಅನಂತವೂ, ನಿತ್ಯವೂ ಆದ ಗುಣಗಳಿಂದ ಸಾಗರದಂತೆ ಇದ್ದಾನೆ. ಈ ರೀತಿಯಾಗಿ ವೇದವಚನಗಳೂ, ಭಗವದುಕ್ತಿಗಳೂ ಸಾರುತ್ತವೆ.

ಭಗವಂತನೊಬ್ಬನೇ ದೇವನು ಎಂಬುದಾಗಿ ವೈಶಂಪಾಯನರು ಜನಮೇಜಯರಾಯನ ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಗಮನಾರ್ಹವಾಗಿದೆ.

ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ಭವ ।
ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಮ್ ॥[೬]

ಶರಧಿಮಥನದಿ ಹರನು ಹರಿಯಾಜ್ಞದಿ ಧರಿಸಿ ಶಿರ
ಭರದಿ ವಿಷವವಿದು ಕರಿಕೊರಳನೆನಿಸಲು ।
ತ್ವರದಿ ಹರಿಪದದಿಂದ ಹರಿದ ಸುರನದಿಯ
ಶಿರದೊಳಿಟ್ಟು ಹರ ಹರಿಮಹಿಮೆ ಸಾರಿರೇ ॥ ೨ ॥

ಸಮುದ್ರಮಥನ ಕಾಲದಲ್ಲಿ ಬಂದ ಹಾಲಾಹಲವಿಷವನ್ನು ಶ್ರೀಹರಿಯಾಜ್ಞೆಯಿಂದ ಶಿವನು ಕುಡಿದು ನೀಲಕಂಠನೆನಿಸಿದನು. ಆಗ ವಿಷಬಾಧೆಯನ್ನು ಪರಿಹರಿಸಿಕೊಳ್ಳಲು ಶಿವನು ಶ್ರೀಹರಿಯ ಪಾದದಿಂದ ಹುಟ್ಟಿಬಂದ ಗಂಗಾನದಿಯನ್ನು ತನ್ನ ಶಿರದಲ್ಲಿ ಧರಿಸಿ ಶ್ರೀಹರಿಯ ಮಹಿಮೆಯನ್ನು ಜಗತ್ತಿಗೆ ಸಾರಿ ಹೇಳಿದನು.

ಶರದಿಮಥನದಿ ಹರನು ಹರಿಯಾಜ್ಞದಿ ಧರಿಸಿ ಶಿರ
ಭರದಿ ವಿಷವವಿದು ಕರಿಕೊರಳನೆನಿಸಲು ।

ಸಮುದ್ರ ಮಥನಕಾಲದಲ್ಲಿ ಬಂದ ಹಾಲಾಹಲವಿಷವನ್ನು ಶ್ರೀಹರಿಯಾಜ್ಞೆಯಿಂದ ರುದ್ರದೇವರು ಕುಡಿದು ನೀಲಕಂಠರೆನಿಸಿದರು.

ಇಲ್ಲಿ ತಿಳಿಸಿದಂತೆ ರುದ್ರದೇವರೇ ಎಲ್ಲ ವಿಷವನ್ನು ಕುಡಿದರು ಎಂಬುದಾಗಿ ಹೇಳಿದರೆ ಶ್ರುತಿ ವಿರೋಧ ಬರುತ್ತದೆ. ಕಾರಣ ಅದನ್ನು ಹೀಗೆ ತಿಳಿಯಬೇಕು.

೫. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೧-೨೯)
೬. ಶ್ರೀಮನ್ ಮಹಾಭಾರತ

ವಾಯುರಸ್ಮಾ ಉಪಾಮಂಥತ್ ಪಿನಷ್ಟಿಸ್ಮಾಕುನನ್ನಮಾ ।
ಕೇಶೀ ವಿಷಸ್ಯ ಪಾತ್ರೇಣ ಯದ್ರುದ್ರೇಣಾಪಿಬತ್ ಸಹ ॥[೭]

ಪ್ರಶಸ್ತವಾದ ಕೇಶವುಳ್ಳ, ಸುಖರೂಪನಾದ ನಾರಾಯಣನೆಂಬ ಸ್ವಾಮಿಯುಳ್ಳ, ಕುತ್ಸಿತರಾದ ಕಲ್ಯಾದಿ ದೈತ್ಯರನ್ನು ವಿಶೇಷವಾಗಿ ಅಂಧಂತಮಸ್ಸಿನಲ್ಲಿ ಮುಳುಗಿಸುವವರಾದ್ದರಿಂದ ಕುನನ್ನಮಾ ಎಂದು ಕರೆಯಲ್ಪಡುವ ಪ್ರಧಾನ ವಾಯುದೇವರು ಹಾಲಾಹಲವೆಂಬ ಕಾಲಕೂಟ ವಿಷತುಂಬಿದ ಸುವರ್ಣ ಪಾತ್ರೆಯಿಂದ ಅದನ್ನು ರುದ್ರನೊಡನೆ ಕುಡಿದರು. ಕುಡಿದುಳಿದ ಭಾಗವನ್ನುರುದ್ರನಿಗಾಗಿ ಚೆನ್ನಾಗಿ ಮಥನಮಾಡಿ ಅದರ ತೀಕ್ಷ್ಣತೆಯನ್ನು ಕಡಿಮೆಮಾಡಿ ಅವಶಿಷ್ಟಭಾಗವನ್ನು ರುದ್ರದೇವರಿಗೆ ಕೊಟ್ಟರು. ಅದನ್ನು ಕುಡಿದ ಕೂಡಲೇ ರುದ್ರದೇವರು ಮೂರ್ಛಿತ ರಾಗಿಬಿದ್ದರು. ಶ್ರೀಹರಿಯು ಸ್ಪರ್ಶಮಾಡಿದ ಕೂಡಲೇ ಎಚ್ಚತ್ತರು. ವಿಷವು ಕುತ್ತಿಗೆಯಲ್ಲಿ ನಿಂತು ಬಿಟ್ಟಿತು. ಇದರಿಂದ ಅವರು ನೀಲಕಂಠರಾದರು.

ಈ ವಿಷಯವನ್ನು ಶ್ರೀಮದಾನಂದತೀರ್ಥಭಗವತ್ಪಾದರು ಹೀಗೆ ತಿಳಿಸಿದ್ದಾರೆ.

ತದಾ ಜಗದ್ಭಾಸಿ ವಿಷಂ ಸಮುತ್ಥಿತಂ ತ್ವದಾಜ್ಞಯಾ ವಾಯುರಧಾತ್ಕರೇನಿಜೇ ।
ಕಲೇಃ ಸ್ವರೂಪಂ ತದತೀವ ದುಃಸಹಂ ವರಾದ್ವಿಧಾತುಃ ಸಕಲೈಶ್ಚ ದುಸ್ಪೃಶಮ್ ॥[೮]

ಕರೇ ವಿಮಥ್ಯಾಸ್ತಬಲಂ ವಿಧಾಯ ದದೌ ಸಕಿಂಚಿದ್ಗಿರಿಶಾಯ ವಾಯುಃ ।
ಸ ತತ್ಪಿಬನ್ ಕಂಠಗತೇನ ತೇನ ನಿಪಾತಿತೋ ಮೂರ್ಛಿತ ಆಶು ರುದ್ರಃ ।
ಹರೇಃ ಕರಸ್ಪರ್ಶ ಬಲಾತ್ ಸಸಂಜ್ಞಾಂ ಅವಾಪ ನೀಲೋಽಸ್ಯ ಗಲಸ್ತದಾಸೀತ್ ॥

ಅಥ ತ್ವದಾಜ್ಞಾಂ ಪುರತೋ ನಿಧಾಯ ನಿಧಾಯ ಪಾತ್ರೇ ತಪನೀಯ ರೂಪೇ ।
ಸ್ವಯಂ ತ್ವನಿರ್ಮಥ್ಯ ಬಲೋಪಪನ್ನಂ ಪಪೌ ಸ ವಾಯುಸ್ತದುತಾಸ್ಯ ಜೀರ್ಣತಾಮ್ ॥

ಅಮೃತಕ್ಕಾಗಿ ಸಮುದ್ರವನ್ನು ಕಡೆದಾಗ ಜಗತ್ತನ್ನೇ ನಾಶಮಾಡಬಲ್ಲ ಹಾಲಾಹಲ ವಿಷಬಂದಿತು. ನಿನ್ನಾಜ್ಞೆ (ಹರಿಯಾಜ್ಞೆ)ಯಿಂದ ವಾಯುದೇವರು ಅದನ್ನು ತೆಗೆದುಕೊಂಡು, ಕಲಿಯಿಂದ ಅಭಿಮನ್ಯಮಾನವಾದ ಅದನ್ನು ಸ್ವಲ್ಪವೇ ತೆಗೆದುಕೊಂಡು ಹಿಂಡಿ ನಿರ್ವೀರ್ಯಮಾಡಿ ಶಿವನಿಗೆ ಕೊಟ್ಟರು. ಶಿವನು ಕುಡಿದಾಗ ಅದು ಅವನ ಕಂಠದಲ್ಲಿ ನಿಂತು ಮೂರ್ಛೆಬಂದಿತು. ಶ್ರೀಹರಿಯ ಕರಸ್ಪರ್ಶದಿಂದ ಎಚ್ಚೆತ್ತ ಶಿವ ನೀಲಕಂಠನೆನಿಸಿದ. ಬಳಿಕ ಶ್ರೀಹರಿಯ ಆಜ್ಞೆಯನ್ನು ಪುರಸ್ಕರಿಸಿ ವಾಯುದೇವರು ಚಿನ್ನದ ಪಾತ್ರೆಯಲ್ಲಿದ್ದ ಎಲ್ಲ ವಿಷವನ್ನು ಕುಡಿದುಬಿಟ್ಟರು. ಅದು ಅವರಿಗೆ ಜೀರ್ಣವಾಯಿತು.

೭. ಋಗ್ವೇದ ೮-೭-೨೪
೮. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೧೦-೧೪,೧೫,೧೬)

ಶ್ರೀವಾಯುದೇವರೇ ಎಲ್ಲ ಕುಡಿದರೆಂದಿರುವಾಗ ಶಿವನು ಕುಡಿದನೆಂದು ದಾಸರೇಕೆ ಹೇಳಿದರು? ಎಂಬ ಪ್ರಶ್ನೆ ಸಹಜ. ಇದನ್ನು ಸ್ಪಷ್ಟವಾಗಿ ಹೇಳದಿರುವುದಕ್ಕೆ ಕಾರಣ ಅಯೋಗ್ಯಜನರ ಮೋಹನಾರ್ಥವಾಗಿ ಎಂದು ತಿಳಿಯಬೇಕು.

ಅಲ್ಲದೇ ಶ್ರುತಿಯಲ್ಲಿ ''ಅಪಿಬತ್ ಸಹ'' ಎಂದಿದ್ದಾರೆ. ''ಸಹ ಯುಕ್ತೇ ಅಪ್ರಧಾನೇ'' ಎಂಬ ವ್ಯಾಕರಣ ಸೂತ್ರದಿಂದ ಪ್ರಧಾನವಾಗಿ ಕುಡಿದವರು ವಾಯು ದೇವರು, ಅಪ್ರಧಾನವಾಗಿ ಕುಡಿದವರು ರುದ್ರದೇವರು ಎಂದು ಅರ್ಥವಾಗುತ್ತದೆ.

ಕಿಂಚಿತ್ ವಿಷಕುಡಿದ ನಂತರ ರುದ್ರದೇವರು ನೀಲಕಂಠರಾಗಿ ಕೂಡಲೇ ಶ್ರೀಹರಿಯಪಾದದಿಂದ ಜನಿಸಿದ ಗಂಗೆಯನ್ನು ತಮ್ಮ ಶಿರದಲ್ಲಿ ಧಾರಣ ಮಾಡಿ ಶ್ರೀಹರಿಯ ಮಹಿಮೆಯನ್ನು ಜಗತ್ತಿಗೆ ಸಾರಿದರು.

ಜಗಕೆ ಹಿರಿಯ ನಾಲ್ಮೊಗನ ಪಿತನೆಂದು
ನಿಗಮಾಗಮಗಳೆಲ್ಲ ಪೊಗಳುತ್ತಲಿರಲು ।
ಖಗರಾಜಗಮನ ನಮ್ಮ ಸಿರಿಪ್ರಸನ್ವೆಂಕಟನು
ನಿಗಮಾಗಮವು ಅವನೆ ಆಗಮಗಳೊಂದಿತನೆ ಹರಿ ಆತ ಏಕೋದೇವಾ ॥ ೩ ॥

ಈ ಜಗತ್ತಿಗೆ ಹಿರಿಯನಾದ ಚತುರ್ಮುಖನ ತಂದೆಯೆಂದು ಶ್ರೀಹರಿಯನ್ನು ವೇದಾದಿಗಳೆಲ್ಲವು ಹೊಗಳುತ್ತಲಿವೆ. ಗರುಡಗಮನನಾದ ನಮ್ಮ ಶ್ರೀಪ್ರಸನ್ನ ವೆಂಕಟನೆಂಬ ಶ್ರೀಹರಿಯು ಸರ್ವೋತ್ತಮನಾದ ಒಬ್ಬನೇ ದೇವತೆ. ಅವನು ಆಗಮಗಳಿಂದ ಪ್ರತಿಪಾದ್ಯನಾಗಿದ್ದಾನೆ.

ಶ್ರೀಬ್ರಹ್ಮದೇವರು ಭಗವಂತನನ್ನು ಕುರಿತು ಸ್ತೋತ್ರ ಮಾಡಿದ್ದಾರೆ.

ಪಿತಾ ಮಾತಾ ಸುಹೃದ್ ಬಂಧುಃ ಭ್ರಾತಾ ಪುತ್ರಸ್ತ್ವಮೇವ ಮೇ ॥[೯]

ಭಗವಂತನೇ ನೀನೆ ನನಗೆ ತಂದೆ, ತಾಯಿ ಇತ್ಯಾದಿ ಎಲ್ಲವೂ ಆಗಿದ್ದೀ.

ಶ್ರೀ ದೇವಶರ್ಮಾ ಬ್ರಾಹ್ಮಣರು ಭಗವಂತನನ್ನು ಹೀಗೆ ಹಾಡಿ ಹೊಗಳಿದ್ದಾರೆ.

ಶ್ರೀವೆಂಕಟೇಶಂ ಲಕ್ಷ್ಮೀಶಮನಿಷ್ಟಘ್ನಮಭೀಷ್ಟದಮ್ ।
ಚತುರ್ಮುಖೇರತನಯಂ ಶ್ರೀನಿವಾಸಂ ಭಜೇಽನಿಶಮ್ ॥[೧೦]

೯. ಶ್ರೀ ಪಂಚರಾತ್ರಾಗಮ - ಜಿತಂತೇ ಸ್ತೋತ್ರ
೧೦. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೭)

ಶ್ರೀಲಕ್ಷ್ಮೀಪತಿಯಾದ, ಅನಿಷ್ಟಗಳನ್ನು ನಾಶಮಾಡುವ, ಅಭೀಷ್ಟಗಳನ್ನು ಕೊಡುವ, ಚತುರ್ಮುಖ ಬ್ರಹ್ಮ ಹಾಗೂ ವಾಯುದೇವರನ್ನು ಮಕ್ಕಳಾಗಿ ಪಡೆದ ಶ್ರೀನಿವಾಸನನ್ನು ಭಜಿಸುತ್ತೇನೆ. ಇದರಿಂದ ಶ್ರೀಹರಿಯು ಚತುರ್ಮುಖನಿಗೆ ತಂದೆಯಾಗಿದ್ದಾನೆಂಬುದು ವಿದಿತವಾಗುತ್ತದೆ.

ಶ್ರೀಮದಾನಂದತೀರ್ಥರು, ಬ್ರಹ್ಮದೇವರಿಗೆ ಶ್ರೀಹರಿಯು ತಂದೆಯಾಗಿದ್ದಾನೆಂದು ತಿಳಿಸುವ ಪರಿ ಹೀಗಿದೆ –

ಬ್ರಹ್ಮಣಃ ಪಿತರಂ ವಂದೇ ಶಂಕರಸ್ಯ ಪಿತಾಮಹಂ ।
ಶ್ರಿಯಃ ಪತಿಮಜಂ ನಿತ್ಯಂ ಇಂದ್ರಾದಿ ಪ್ರಪಿತಾಮಹಮ್ ॥

ಆ ಶ್ರಿಯಃಪತಿಯಾದ ಶ್ರೀಹರಿಯು ಚತುರ್ಮುಖ ಬ್ರಹ್ಮದೇವರಿಗೆ ತಂದೆಯೂ, ರುದ್ರದೇವರಿಗೆ ಪಿತಾಮಹನೂ, ಇಂದ್ರಾದಿಗಳಿಗೆ ಪ್ರಪಿತಾಮಹನೂ ಆಗಿದ್ದಾನೆ. ಅಂಥ ಶ್ರೀಹರಿಗೆ ನಮಸ್ಕರಿಸುತ್ತೇನೆ.

ಖಗರಾಜಗಮನ ನಮ್ಮ ಸಿರಿ ಪ್ರಸನ್ವೆಂಕಟನು
ನಿಗಮಾಗಮವು ಅವನೆ ಆಗಮಗಳೊಂದಿತನೆ ಹರಿ ಆತ ಏಕೋದೇವಾ ॥

ನಮ್ಮ ಸಿರಿಪ್ರಸನ್ನವೆಂಕಟನು ಖಗರಾಜಗಮನ ಅಂದರೆ ಗರುಡಗಮನನಾಗಿದ್ದಾನೆ.

ಶ್ರೀವಾದಿರಾಜ ಪೂಜ್ಯ ಚರಣರು ಭಗವಂತನನ್ನು ಹೀಗೆ ಬಣ್ಣಿಸಿದ್ದಾರೆ –

ಆರೂಢಗರುಡಸ್ಕಂಧಂ ಆಲಿಂಗಿತರಮಾಧರಂ ।
ಆನಮಜ್ಜನಸರ್ವಸ್ವಂ ಆಶ್ರಯೇ ವೆಂಕಟೇಶ್ವರಮ್ ॥[೧೦]

ಇಲ್ಲಿ ಭಗವಂತನು ಗರುಡವಾಹನನೆಂಬ ವಿಷಯವನ್ನು ಚೆನ್ನಾಗಿ ತಿಳಿಸಿದ್ದಾರೆ.

ಕೋಶವೂ ಹೀಗೆ ಹೇಳುತ್ತದೆ –

ನಾಗಾಂತಕೋ ವಿಷ್ಣುರಥಃ ಸುಪರ್ಣಃ ಪನ್ನಗಾಶನಃ ॥[೧೨]

ಗರುಡನು ವಿಷ್ಣುವಿಗೆ ವಾಹನನಾಗಿರುವುದನ್ನು ಶ್ರೀಮಧ್ವಾಚಾರ್ಯರು ತಿಳಿಸುತ್ತಾರೆ.

ನಾಗಾರಿರುಗ್ರ ಬಲಪೌರುಷ ಆಪ ವಿಷ್ಣೋಃ ವಾಹತ್ವಮುತ್ತಮಜವಃ ॥[೧೩]

೧೧. ತೀರ್ಥಪ್ರಬಂಧ
೧೨. ಅಮರಕೋಶ - ಪ್ರಥಮಕಾಂಡ
೧೩. ದ್ವಾದಶಸ್ತೋತ್ರ (೭-೮)

ಇನ್ನು ಆ ಭಗವಂತನು ಆಗಮಗಳಿಂದ ಸ್ತುತ್ಯನಾಗಿದ್ದಾನೆ. ಅವನು ಒಬ್ಬನೇ ದೇವನೆನಿಸಿದ್ದಾನೆ.

ಜಯ ಜಯ ಜಹ್ಯಜಾಂ ಅಜಿತ ದೋಷ ಗೃಹೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧ ಸಮಸ್ತಭಗಃ ।
ಅಜ ಜಗದೋಕಸಾಂ ಅಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾಽತ್ಮನಾಽನುಚರತೋಽನುಚರೇನ್ನಿಗಮಃ ॥[೧೪]

ಹೇ ಅಜಿತ! ಎಂದೂ ಯಾವ ವಿಷಯದಲ್ಲೂ ಪರಾಭವರಹಿತನೇ! ನಿನ್ನ ಸಾರ್ವಕಾಲಿಕ ಜಯಶೀಲತೆಯನ್ನು ನಮಗೆ ಪ್ರಕಾಶಿಸು. ಜನ್ಮರಹಿತನೇ! ಜಗತ್ತಿಗೆ ಆಶ್ರಯರಾದ ಲಕ್ಷ್ಮೀ ಬ್ರಹ್ಮಾದಿ ದೇವತೆಗಳ ಸರ್ವವಿಧ ಶಕ್ತಿಗಳನ್ನು ಪ್ರಕಾಶಪಡಿಸುವವನು ನೀನು. ನಿನ್ನ ಸ್ವಾಭಾವಿಕವಾದ ಸ್ವತಂತ್ರವಾದ ಶಕ್ತಿಯಿಂದ ಸಮಸ್ತ ಐಶ್ವರ್ಯಪೂರ್ಣನು. ಸೃಷ್ಟಿಕಾಲದಲ್ಲಿ ಮಾತ್ರ ಜೀವ ಪ್ರಕೃತಿಗಳನ್ನು ಕುರಿತು ಬೋಧಿಸುವ ವೇದಗಳು ಆಗ ವಿಧಿನಿಷೇಧಗಳನ್ನು ಬೋಧಿಸುತ್ತವೆ. ಆದರೆ ಪ್ರಲಯಕಾಲದಲ್ಲಿ ವಿಧಿ ನಿಷೇಧಗಳಿಗೆ ವಿಷಯರಾದ ಜೀವರು ಇಲ್ಲದಿರುವುದರಿಂದ ನಿನ್ನ ಉದರದಲ್ಲಿರುವುದರಿಂದ ಆ ವೇದಗಳು ನಿನಗೆ ಸ್ತುತಿರೂಪಗಳಾಗಿರುತ್ತವೆ. ಜೀವರ ಸ್ವರೂಪವನ್ನು ಆವರಿಸಿ ಜೀವರ ಸ್ವರೂಪಜ್ಞಾನ - ಭಗವದ್ವಿಷಯಕ ಜ್ಞಾನಕ್ಕೆ ಆವರಕವಾಗಿ ಪ್ರತಿಬಂಧಕವಾದ ಪ್ರಕೃತಿ ಬಂಧಗಳಲ್ಲಿ ಸ್ವಗುಣಾಚ್ಛಾದಿಕ ಆವರಣವನ್ನು ನಾಶಮಾಡಿ, ಪರಮಾಚ್ಛಾದಿಕ ಆವರಣವನ್ನು ಸರಿಸಿ ಅನುಗ್ರಹ ಮಾಡು.

ವೇದಗಳಿಂದ ಸ್ತುತ್ಯನಾದ ಇಂಥ ಭಗವಂತನು ಒಬ್ಬನೇ. ಅವನೇ ಸ್ವಾಮಿ,

ಸರ್ವೇಶೋ ವಿಷ್ಣುರೇವೈಕೋ ನಾನ್ಯೋಽಸ್ತಿ ಜಗತಃ ಪತಿಃ ॥[೧೫]

ಈ ಸಮಸ್ತ ಪ್ರಪಂಚಕ್ಕೆ ಸರ್ವೇಶನಾದ ವಿಷ್ಣುವು ಒಬ್ಬನೇ. ಅವನೇ ಜಗತ್ತಿಗೆ ಸ್ವಾಮಿಯು ಆಗಿದ್ದಾನೆ.

✳✳✳

೧೪. ಶ್ರುತಿಗೀತೆ - ಶ್ರೀಮದ್ ಭಾಗವತ
೧೫. ಬ್ರಹ್ಮಸೂತ್ರಭಾಷ್ಯದಲ್ಲಿ ಸ್ಕಾಂದವಚನ

೧೧. ಚಂಚಲಿಸದಿರು ಚತುರನಾಗೋ ಮನವೆ

ಚಂಚಲಿಸದಿರು ಚತುರನಾಗೋ ಮನವೆ
ವಂಚನಿಲ್ಲದೇ ಹರಿಗೆ ಅರ್ಪಿಸೋ ಮನವೆ ॥ ಪ ॥

ಆರು ನಿನ್ನವರೆಂಬಿ ಅವರಗಲುವರೋ ಮುನ್ನ
ಭೂರಿ ಸಂಚಿತ ಸಂಪದೆರವಾಗ್ವದ್ದೋ ।
ಜಾರುತಿದೆ ಆಯುಷ್ಯಕ್ಷಣಲವ ಎನಗೊಡದೇ
ನಾರಸಿಂಹನ ನಂಬೋ ನಿಷ್ಠೆಯಲಿ ಮನವೆ ॥ ೧ ॥

ಅಲ್ಪಸುಖಕಾಗಿ ನೀ ಅನೇಕ ಸುಖ ಮರೆವರೇ
ಕಲ್ಪಕಲ್ಪಕೆ ನಿರಯನುಣಿಸಬಹುದೋ ।
ಅಲ್ಪರುಪದೇಶದಲಿ ಭ್ರಾಂತನಾಗದೇ ಶೇಷ
ತಲ್ಪನ್ನ ಮೊರೆಹೋಗೋ ಮರೆಯದಲೇ ಮನವೆ ॥ ೨ ॥

ನಿನ್ನಿಂದ ಭವಬಂಧನ ನಿನ್ನಿಂದ ಮೋಚನ
ನಿನ್ನಿಂದ ಪ್ರಸನ್ವೆಂಕಟೇಶನೊಲುಮೆ ।
ಎನ್ನ ದಣಿಸದರಿಂದು ಇದರಿಂದ ತಪ್ಪಿದರೆ
ಘನ್ನ ಗುರು ಮಧ್ವೇಶನಾಣೆ ನಿನಗಿಹುದು ॥ ೩ ॥

ಶ್ರೀಮದ್ ಭಾಗವತದಲ್ಲಿ (ಅಷ್ಟಮಸ್ಕಂಧ) ಮನುಕುಲದ ತಂದೆಯಾದ ಸ್ವಾಯಂಭುವ ಮನುವು ಹೇಳುತ್ತಾನೆ. ಹೇ ಖೋಡಿ ಮನಸ್ಸೇ! ಈ ಜಗತ್ತು ಆ ಭಗವಂತನ ಮನೆ. ಇಲ್ಲಿ ಆ ಭಗವಂತ ಕೊಟ್ಟದ್ದನ್ನು ಸ್ವೀಕರಿಸು. ಇನ್ನೊಬ್ಬರ ಸಂಪತ್ತನ್ನು ನೀನು ಅಪೇಕ್ಷೆ ಪಡಬೇಡ. ಈ ಸಂಪತ್ತು ಶಾಶ್ವತವಲ್ಲ. ಭಗವಂತ ಕೊಟ್ಟದ್ದನ್ನು ಅವನಿಗೆ ಅರ್ಪಿಸು. ಇದು ನಿನ್ನ ಕರ್ತವ್ಯವೆಂದು ತಿಳಿ.

ಪ್ರಸ್ತುತ ಪದ್ಯದಲ್ಲಿ ಮೇಲೆ ತಿಳಿಸಿದ ವಿಷಯವನ್ನೇ ಹೇಳುತ್ತಾರೆ. ಶ್ರೀದಾಸರು. ಮನಸ್ಸು ಚಂಚಲವಾದದ್ದು. ಈ ಮನಸ್ಸು ಬಂಧ, ಮೋಕ್ಷಗಳಿಗೆ ಕಾರಣವಾಗಿದೆ. ಹೇಗೆಂದರೆ - ಸಂಸಾರದಲ್ಲಿಯೇ ಮನಸ್ಸಿಟ್ಟು ಜೀವನ ನಡೆಸುವ ಮಾನವರಿಗೆ ಇದು ಬಂಧಕ್ಕೆ ಕಾರಣವಾಗುತ್ತದೆ. ಅದೇ ಮನಸ್ಸನ್ನು ಶ್ರೀಹರಿಯಲ್ಲಿ ಇಟ್ಟದ್ದಾದರೆ, ಅವನಿಗೆ ಅರ್ಪಿತವಾದರೆ ಮೋಕ್ಷಕ್ಕೆ ಕಾರಣವಾಗುತ್ತದೆ, ಎಂಬ ತತ್ವವನ್ನು ತಿಳಿಸಿಕೊಟ್ಟಿದ್ದಾರೆ.

ಚಂಚಲಿಸದಿರು ಚತುರನಾಗು ಮನವೆ ।

ಮನಸ್ಸು ಸ್ವಭಾವತಃ ಅತಿ ಚಂಚಲವಾದದ್ದು. ವೇಗವಾಗಿ ಓಡುವಂತಹದು. "Mind is fleeter than wind" ಇಂಗ್ಲಿಷ ಗಾದೆಯು ಇದನ್ನೇ ತಿಳಿಸುತ್ತದೆ. ಮಾನವನ ಮನಸ್ಸು ಯಾವಾಗಲೂ ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ನೆಗೆಯುತ್ತಲೇ ಇರುತ್ತದೆ. ಇದು ಎಲ್ಲರ ಅನುಭವ ಕೂಡ.

ಶ್ರೀಕೃಷ್ಣನಿಗೆ ಅರ್ಜುನನು ಹೇಳುವ ಮಾತು ಇಲ್ಲಿ ಮನನೀಯ -

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ ।
ತಸ್ಯಾಹಂ ನಿಗ್ರಹಂ ಮನ್ಯೆ ವಾಯೋರಿವ ಸುದುಷ್ಕರಂ ॥[೧]

ಶ್ರೀಕೃಷ್ಣ! ಮನಸ್ಸು ಅತಿ ಚಂಚಲವಾದುದು. ದೇಹೀಂದ್ರಿಯಗಳಿಗೆ ಕ್ಷೋಭೆಯನ್ನುಂಟು ಮಾಡುತ್ತದೆ. ಜಯಿಸುವುದಕ್ಕೆ ಅಶಕ್ಯವಾಗಿದೆ. ಈ ಮನಸ್ಸಿನ ನಿಗ್ರಹವು ಗಾಳಿಯ ನಿಗ್ರಹದಂತೆ ಕಠಿಣವಾದುದು.

ಆಹಾರ ಪ್ರಭವಾಃ ಪ್ರಾಣಾ ಮನೋದುರ್ನಿಗ್ರಹಂ ಚಲಮ್ ॥

ಎಂಬ ಶ್ರೀಮನ್ ಮಹಾಭಾರತದ ವನಪರ್ವದಲ್ಲಿ ತಿಳಿಸಿರುವುದನ್ನು ಇಲ್ಲಿ ಸ್ಮರಿಸಬಹುದು.

ಈ ಮನಸ್ಸು ಚಂಚಲವೆಂಬ ವಿಷಯವನ್ನು ಉಪನಿಷತ್ತುಗಳಲ್ಲಿ ಕೂಡ ತಿಳಿಸಿದ್ದಾರೆ.

೧. ಮನಶ್ಚೈವಾತಿ ಚಂಚಲಮ್ । ಅಮೃತನಾದೋಪನಿಷತ್
೨. ಮನಶ್ಚಂಚಲಮಸ್ಥಿರಮ್ । ಶ್ರೀಭಗವದ್ಗೀತಾ (೬-೨೬)

ಮನಸ್ಸಿನ ವಾಸ್ತವಿಕ ಸ್ವರೂಪವನ್ನು ಕಠೋಪನಿಷತ್ತು ಚೆನ್ನಾಗಿ ತಿಳಿಸಿ ಕೊಡುತ್ತದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು ।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ ।
ಇಂದ್ರಿಯಾಣಿ ಹಯಾನಾಹುಃ ವಿಷಯಾಂಸ್ತೇಷು ಗೋಚರಾನ್ ॥(೩-೩)

ಆತ್ಮನು ರಥಿಕನೆಂದು, ಶರೀರವನ್ನು ರಥವೆಂದು, ಬುದ್ಧಿಯನ್ನು ಸಾರಥಿಯೆಂದು, ಮನಸ್ಸೇ (ಕಡಿವಾಣ) ಲಗಾಮುವೆಂದು, ಇಂದ್ರಿಯಗಳೇ ಕುದುರೆಗಳೆಂದು ಹಾಗೂ ವಿಷಯ ಪ್ರಪಂಚವೇ ಅವು ತಿರುಗಾಡುವ ಸ್ಥಾನಗಳೆಂದು ತಿಳಿಯಬೇಕು.

---

೧. ಶ್ರೀ ಭಗವದ್ಗೀತಾ (೬-೩೪)

ಇದನ್ನೇ ಶ್ರೀಮನ್ ಮಹಾಭಾರತದಲ್ಲಿ-

ರಥಂ ಶರೀರಂ ಪುರುಷಸ್ಯ ದೃಷ್ಟ
ಮಾತ್ಮಾ ನಿಯಂತೇಂದ್ರಿಯಾಣ್ಯಾಹುರಶ್ವಾನ್ ।
ತೈರಪ್ರಮತ್ತಃ ಕುಶಲೀ ಸದಶ್ವೈ
ರ್ದಾಂತೈಃ ಸುಖಂ ಯಾತಿ ರಥೀವ ಧೀರಃ ॥ ವನಪರ್ವ

ಮತ್ತು

ಇಂದ್ರಿಯಾಣಾಂ ವಿಚರತಾಂ ಯನ್ಮನೋಽನುವಿಧೀಯತೇ ।
ತದಸ್ಯ ಹರತೇ ಬುದ್ಧಿಂ ನಾವಂ ವಾಯುರಿವಾಂಭಸಿ ॥

ಈ ಶ್ಲೋಕದ್ವಯಗಳಿಂದ ತಿಳಿಸಿಕೊಟ್ಟಿದ್ದಾರೆ.

ಮನಸ್ಸು ಐದು ಇಂದ್ರಿಯಗಳಿಗಿಂತಲೂ ಮೇಲಿನದು. ಚಂಚಲತೆಯು ಇಂದ್ರಿಯಗಳ ಸ್ವಭಾವ. ಆಯಾ ಇಂದ್ರಿಯಗಳು ತಮಗೆ ಬೇಕಾದ ವಿಷಯಗಳನ್ನು ಪ್ರತಿಕ್ಷಣದಲ್ಲಿ ಅಪೇಕ್ಷಿಸುತ್ತವೆ. ಅಪೇಕ್ಷಿತವಾದ ವಸ್ತುಗಳನ್ನು ಪಡೆಯಲು ಇಂದ್ರಿಯಗಳು ಮನಸ್ಸನ್ನು ಪ್ರೇರೇಪಿಸುತ್ತವೆ. ಈ ಸಂದರ್ಭದಲ್ಲಿ ಮನಸ್ಸು ಇಂದ್ರಿಯಗಳ ಪ್ರೇರಣೆಗೆ ಒಲಿದು ಇಂದ್ರಿಯಗಳಿಗೆ ಅಧೀನವಾಗಿ ಕಾರ್ಯಪ್ರವೃತ್ತವಾಗುತ್ತದೆ. ಬುದ್ಧಿಯು ಸಹ ಮನಸ್ಸಿನೊಡನೆ ಸೇರಿ ಹೋಗುತ್ತದೆ. ಅರ್ಥಾತ್ ಮನಸ್ಸು ಬುದ್ಧಿಯ ಕಾರ್ಯವಾದ ವಿವೇಚನೆಯನ್ನು ಮಾಡದಂತೆ ತಡೆಯುತ್ತದೆ. ಬಿರುಗಾಳಿಯು ಸಮುದ್ರದಲ್ಲಿರುವ ನಾವೆಯನ್ನು ಅಸ್ಥಿರಗೊಳಿಸುವಂತೆ ಮನಸ್ಸು ಬುದ್ಧಿಯನ್ನು ಅಸ್ಥಿರಗೊಳಿಸುತ್ತದೆ. ಅದೇ ಮನಸ್ಸು ಇಂದ್ರಿಯಗಳ ವಶವಾಗದಿದ್ದಲ್ಲಿ ಬುದ್ಧಿಯೊಡನೆ ಸೇರಿ ಜೀವನನ್ನು ಪರಮಪದಕ್ಕೊಯ್ಯಲು ಸಮರ್ಥವಾಗುತ್ತದೆ.

ಇದನ್ನೇ ಶ್ರೀಮದ್ ಭಾಗವತದಲ್ಲಿ -

ಆಹುಃ ಶರೀರಂ ರಥಮಿಂದ್ರಿಯಾಣಿ
ಹಯಾನಭೀಷುಂ ಮನ ಇಂದ್ರಿಯೇಶಮ್ ॥ (೭-೧೫-೪೧)

ಈ ಶ್ಲೋಕಭಾಗದಿಂದ ತಿಳಿಸಿದ್ದಾರೆ.

ಇಂಥ ಚಂಚಲವಾದ ಮನಸ್ಸನ್ನು ಗೆಲ್ಲುವದು ಅವಶ್ಯವೇ ಆಗಿದೆ. ''ಮನವನ್ನು ಗೆದ್ದವನು ಮಹಿಯನ್ನು ಗೆದ್ದಾನು'' ಎಂಬ ಗಾದೆಯ ಮಾತು ಮನಸ್ಸನ್ನು ಜಯಿಸಿದರೆ ಈ ಭೂಮಿಯನ್ನೇ ಗೆಲ್ಲಬಹುದು ಎಂದು ತಿಳಿಸುತ್ತದೆ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ -

ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ (೬-೩೫)

ಕ್ರಮ ಕ್ರಮವಾಗಿ ಮನಸ್ಸನ್ನು ನಿಯಂತ್ರಿಸುವ ಅಭ್ಯಾಸ ಮಾಡುವದರಿಂದ ಮತ್ತು ವಿಷಯ ಪದಾರ್ಥಗಳಲ್ಲಿ ಸ್ನೇಹವನ್ನು ಬಿಡುವದರಿಂದ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳಬಹುದಾಗಿದೆ.

ಶ್ರೀಮದ್ ಭಾಗವತದಲ್ಲಿ -

ಯಶ್ಚಿತ್ತ ವಿಜಯೇಚ್ಛುಃ ಸ್ಯಾನ್ನಿಸ್ಸಂಗೋ ನಿಷ್ಪರಿಗ್ರಹಃ ।

ಶ್ಲೋಕದಿಂದ ದುರ್ವಿಷಯಗಳಲ್ಲಿ ಸ್ನೇಹಮಾಡದೇ ಇರುವವನು ಮನಸ್ಸಿನ ಮೇಲೆ ವಿಜಯ ಸಾಧಿಸಬಹುದೆಂದು ತಿಳಿಸಿದ್ದಾರೆ.

ಈ ಮನಸ್ಸು ಚಾಂಚಲ್ಯರಹಿತವಾಗಿರಬೇಕು ಅಷ್ಟೇ ಅಲ್ಲ ಚತುರವಾಗಿರಬೇಕು. ಮನಸ್ಸು ಚತುರವಾಗಿರುವುದೆಂದರೆ ವಿಷಯ ಪದಾರ್ಥಗಳಲ್ಲಿ ಹರಿದಾಡದೇ ಭಗವಂತನ ಧ್ಯಾನದಲ್ಲಿ ಸರ್ವದಾ ನೆಲೆಸಿರುವುದಾಗಿದೆಯೆಂದು ಹೇಳಬಹುದು.

ಇನ್ನು ''ವಂಚನಿಲ್ಲದೇ ಹರಿಗೆ ಅರ್ಪಿಸೋ ಮನವೇ'' ಎಂಬಲ್ಲಿ ಶ್ರೀದಾಸರು ಮನಸ್ಸನ್ನು ಶ್ರೀಹರಿಯ ಪಾದಾರವಿಂದಗಳಲ್ಲಿ ನಿರ್ವಂಚನೆಯಿಂದ ಅರ್ಪಿಸಬೇಕು ಎಂಬುದಾಗಿ ತಿಳಿಸುತ್ತಾರೆ.

''ಮನವನಿತ್ತರೆ ತನ್ನನೀವನು'' ಎಂಬ ಶ್ರೀಹರಿಕಥಾಮೃತಸಾರದ ಉಕ್ತಿಯಂತೆ ಮನಸ್ಸನ್ನು ಶ್ರೀಹರಿಗೆ ಅರ್ಪಿಸಿದ್ದಾದರೆ ಭಗವಂತನು ತನ್ನ ಭಕ್ತರಿಗೆ ಮೋಕ್ಷಾದಿ ಪುರುಷಾರ್ಥಗಳನ್ನು ಕೊಡುತ್ತಾನೆ ನಿಶ್ಚಿತ.

ಶ್ರೀಹರಿಗೆ ಮನಸ್ಸನ್ನು ವಂಚನೆ ಇಲ್ಲದೇ ಅರ್ಪಿಸು ಎನ್ನುವಲ್ಲಿ ದಾಸರ ಮನೋಭಾವ ಇಂತಿದೆ.

ಶ್ರೀಕೃಷ್ಣ ಹೇಳುತ್ತಾನೆ -

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥[೨]

೨. ಶ್ರೀ ಭಗವದ್ಗೀತಾ (೯-೨೭)

ನಾವು ಮಾಡುವ ಕಾರ್ಯಗಳನ್ನು ''ನಾಹಂ ಕರ್ತಾ ಹರಿಃ ಕರ್ತಾ ತತ್ಪೂಜಾ ಕರ್ಮಚಾಖಿಳಂ'' ಎಂಬ ಅನುಸಂಧಾನದಿಂದ ಮಾಡಿ ಭಗವಂತನಿಗೆ ಅರ್ಪಿಸಬೇಕು.

ಈ ಮೇಲಿನ ಶ್ಲೋಕದಲ್ಲಿ ಯಾವ ವಿಹಿತ ಕರ್ಮ ಮಾಡುವಿಯೋ, ಯಾವ ವಿಹಿತ ಅನ್ನವನ್ನು ಉಣ್ಣುವಿಯೋ, ಸತ್ಪಾತ್ರರಿಗೆ ಯಾವ ವಿಹಿತದಾನ ಮಾಡುವಿಯೋ, ಯಾವ ವಿಹಿತ ತಪಸ್ಸನ್ನು ಮಾಡುವಿಯೋ ಅದೆಲ್ಲವನ್ನೂ ನನಗೆ ಅರ್ಪಿಸು.

ಎಲ್ಲ ನಿತ್ಯದ ಕರ್ಮಗಳನ್ನು ಮೇಲೆ ತಿಳಿಸಿದಂತೆ ಮಾಡಿದರೆ ವಂಚನೆಯಿಲ್ಲದೇ ಅರ್ಪಿಸಿದಂತೆ ಆಗುತ್ತದೆ.

ಈ ಮನಸ್ಸನ್ನು ಶ್ರೀಹರಿಗೆ ಅರ್ಪಿಸುವುದರ ಔಚಿತ್ಯ ಹೀಗಿದೆ.

ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋಃ
ಆವಿಷ್ಟ ಚಿತ್ತೋ ನ ಭವಾಯ ಕಲ್ಪತೇ ॥[೩]

ನಿತ್ಯದಲ್ಲಿ ಕರ್ಮಗಳನ್ನು ಮಾಡುವಲ್ಲಿ ಯಾರು ಪರಮಾತ್ಮನ ಪಾದಾರವಿಂದಗಳಲ್ಲಿ ಇಡಲ್ಪಟ್ಟ ಮನಸ್ಸುಳ್ಳವರೋ, ಅವರು ಸಂಸಾರ ಬಂಧನಕ್ಕೆ ಒಳಗಾಗುವದಿಲ್ಲ. ಅಂದರೆ ಮೋಕ್ಷ ಮಾರ್ಗವನ್ನೇ ಹೊಂದುತ್ತಾರೆ.

ಶ್ರೀಕೃಷ್ಣನು ಕೂಡ ಹೀಗೆ ತಿಳಿಸಿದ್ದಾನೆ –

ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ॥[೪]

''ನನ್ನಲ್ಲಿಯೇ ಮನಸ್ಸನ್ನು ಇಡು'' ಎಂಬುದಾಗಿ ತಿಳಿಸಿದ ಪ್ರಯುಕ್ತ ಶ್ರೀಹರಿಗೆ ಮನಸ್ಸನ್ನು ಅರ್ಪಿಸುವದು ಯೋಗ್ಯವೆಂದು ಸಿದ್ಧವಾಗುತ್ತದೆ.

ಆರು ನಿನ್ನವರೆಂಬಿ ಅವರಗಲುವರೋ ಮುನ್ನ
ಭೂರಿ ಸಂಚಿತ ಸಂಪದೆರವಾಗ್ವದೋ ।
ಜಾರುತಿದೆ ಆಯುಷ್ಯ ಕ್ಷಣಲವ ಎನಗೊಡದೇ
ನಾರಸಿಂಹನ ನಂಬೋ ನಿಷ್ಠೆಯಲಿ ಮನವೇ ॥ ೧ ॥

ಈ ಪ್ರಪಂಚದಲ್ಲಿ ಇವರು ಮೊದಲು ಇವರು ನಂತರ ಮರಣ ಹೊಂದುವರೆಂದು ಹೇಳಲು ಸಾಧ್ಯವಿಲ್ಲ. ಯಾರು ನಮ್ಮವರೆಂಬುದಾಗಿ ಭಾವಿಸುವೆವೋ ಅವರು ಮೊದಲು ಮರಣ ಹೊಂದುತ್ತಾರೆ. ಕೂಡಿಟ್ಟ ಹಣವು, ಸಂಪತ್ತು ಒಂದು ದಿನ

೩. ಶ್ರೀಮದ್ ಭಾಗವತ (೧೦-೩-೩೮)
೪. ಶ್ರೀ ಭಗವದ್ಗೀತಾ (೧೨-೮)

ನಾಶವಾಗುತ್ತದೆ. ಆಯುಷ್ಯವು ಕೂಡ ಕ್ಷಣ ಕ್ಷಣಕ್ಕೆ ಕ್ಷೀಣವಾಗುತ್ತ ಹೋಗುತ್ತದೆ. ಹೀಗಿರುವುದರಿಂದ ಆ ಲಕ್ಷ್ಮೀನರಸಿಂಹನನ್ನು ನಿಷ್ಠೆಯಿಂದ ನಂಬಿ ಭಜಿಸುವದು ಅವಶ್ಯವೆಂಬುದಾಗಿ ಇಲ್ಲಿ ಶ್ರೀದಾಸರು ತಿಳಿಸಿದ್ದಾರೆ.

ಮೊದಲನೆಯದಾಗಿ –

ಆರು ನಿನ್ನವರೆಂಬಿ ಅವರಗಲುವರೋ ಮುನ್ನ – ಎಂದಿದ್ದಾರೆ.

ಇಲ್ಲಿ ಯಾರು ನಮ್ಮವರೆಂದು ಭಾವಿಸುತ್ತೇವೆಯೋ ಅವರು ಮೊದಲು ಮರಣ ಹೊಂದುತ್ತಾರೆ. ಇದಕ್ಕೆ ಕಾರಣ ಹೀಗಿದೆ –

ನ ಹಿ ಕ್ರಮಶ್ಚೇದಿಹ ಮೃತ್ಯುಜನ್ಮನೋ
ಶರೀರಿಣಾಮಸ್ತು ತದಾತ್ಮಕರ್ಮಭಿಃ ॥[೫]

ಶರೀರಧಾರಿಗಳಾದ ಜೀವರಿಗೆ, ಈ ಲೋಕದಲ್ಲಿ ಜನನ ಮರಣಗಳ ವಿಷಯದಲ್ಲಿ ಬಂದ ಕ್ರಮವೇ ಆಗಬೇಕೆಂಬುದಿಲ್ಲ. ತಮ್ಮ ತಮ್ಮ ಪಾಪಗಳ ನಿಮಿತ್ತದಿಂದ ಸೃಷ್ಟಿಯ ವಿಪರೀತ ಕ್ರಮದಿಂದ ಮರಣವು ಬರುತ್ತದೆ.

ಯಾರು ನಮಗೆ ಪ್ರಿಯರಾದವರೋ ಅವರ ವಿಯೋಗ ಉಂಟಾಗುತ್ತದೆ. ಯಾರು ಅಪ್ರಿಯರೋ ಅವರ ಸಂಯೋಗವು ಆಗುತ್ತದೆ. ಇದೆಲ್ಲವೂ ಆ ಭಗವಂತನ ಇಚ್ಛೆಯಿಂದಲೇ ನಡೆಯುತ್ತದೆ. ಈ ದುಃಖದ ನಿವಾರಣೆಗೆ ಶ್ರೀನರಸಿಂಹ ದೇವರನ್ನೇ ನಂಬಿ ನಿಷ್ಠೆಯಿಂದ ಮೊರೆ ಹೋಗಬೇಕು.

ಶ್ರೀ ಪ್ರಹ್ಲಾದರಾಜರು ಶ್ರೀನರಸಿಂಹ ದೇವರನ್ನು ಕುರಿತು ಪ್ರಾರ್ಥನೆ ಸಲ್ಲಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಯಸ್ಮಾತ್ ಪ್ರಿಯಾ ಪ್ರಿಯ ವಿಯೋಗ ಸುಯೋಗ
ಜನ್ಮ ಶೋಕಾಗ್ನಿನಾ ಸಕಲ ಯೋನಿಷು ದಹ್ಯಮಾನಃ ।
ದುಃಖೌಷಧಂ ತದಪಿ ದುಃಖಮತದ್ಧಿಯಾಹಂ
ಭೂಮನ್ ಭ್ರಮಾಮಿ ವದಮೇ ತವ ದಾಸ್ಯಯೋಗಮ್ ॥[೬]

ಭಗವಂತ! ಶ್ರೀನರಸಿಂಹ! ನಾನು ಯಾವುದೇ ಯೋನಿಯಲ್ಲಿ ಹುಟ್ಟಿದರೂ ಪ್ರಿಯವಿಯೋಗ, ಅಪ್ರಿಯ ಸಂಯೋಗಗಳು ಆಗುತ್ತವೆ. ಇದು ದುಃಖಕ್ಕೆ

೫. ಶ್ರೀಮದ್ ಭಾಗವತ (೬-೪-೫೪)
೬. ಶ್ರೀಮದ್ ಭಾಗವತ (೭-೦೯-೦೭)

ಕಾರಣವಾಗಿದೆ. ದುಃಖಾಗ್ನಿಯಿಂದ ನಾನು ಬೆಂದು ಹೋಗಿದ್ದೇನೆ. ಭಗವಂತನ ಚಿಂತನೆಯೇ ಪರಮೌಷಧವೆಂಬುದನ್ನು ಮರೆತು ಬೇರೆ ಔಷಧಿಗಳು ದುಃಖ ಪರಿಹಾರಕವೆಂದು ಭ್ರಮಿಸಿದ್ದೇನೆ. ಇದರಿಂದಾಗಿ ನಾನಾ ಸಂಸಾರದಲ್ಲಿ ಸುತ್ತುತ್ತಿದ್ದೇನೆ. ಹೇ ಸುಖಪೂರ್ಣನಾದ ನೃಸಿಂಹ! ನಿನ್ನ ಪಾದಾರವಿಂದಗಳಲ್ಲಿ ದಾಸ್ಯವನ್ನು ಕರುಣಿಸಿ ಕಾಪಾಡು.

ಇನ್ನು ''ಭೂರಿಸಂಚಿತ ಸಂಪದೆರವಾಗ್ವದೋ'' ಎಂಬಲ್ಲಿ ಕೂಡಿಟ್ಟ ಹಣವು ಒಂದಿಲ್ಲೊಂದು ದಿನ ನಾಶವಾಗುವದು ನಿಶ್ಚಿತ ಎಂದಾಗಿ ತಿಳಿಸಿದ್ದಾರೆ. ಈ ಹಣವನ್ನು

ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯಚ ॥[೭]

ಉಕ್ತಿಯಂತೆ ಧರ್ಮ, ಯಶಸ್ಸು, ಅರ್ಥ, ಕಾಮ, ಸ್ವಜನರು ಇವರಲ್ಲಿ ಸದ್ವಿನಿಯೋಗ ಮಾಡಬೇಕಾದುದು ಅವಶ್ಯವಾಗಿದೆ.

ಹಣವನ್ನು ಸಂಗ್ರಹಿಸಿಡುವದು ಅಪಾಯಕಾರಿಯೆಂಬ ವಿಷಯವು ಹೀಗೆ ತಿಳಿದು ಬರುತ್ತದೆ.

ದಾತವ್ಯಂ ಭೋಕ್ತವ್ಯಂ ವಿಭವೇ ಸತಿ ಸಂಚಯೋ ನ ಕರ್ತವ್ಯಃ ।
ಪಶ್ಯೇಹ ಮಧುಕರೀಣಾಂ ಸಂಚಿತಮರ್ಥಂ ಹರಂತ್ಯನ್ಯೇ ॥

ಸುಭಾಷಿತ ಸುಧಾನಿಧಿ

ಐಶ್ವರ್ಯ ಸಂಪತ್ತುಗಳಿದ್ದಾಗ ದಾನ, ಭೋಗಾದಿಗಳನ್ನು ಮಾಡಬೇಕು. ಸಂಗ್ರಹಿಸ ಬಾರದು. ಜೇನ್ನೊಣಗಳು ಸಂಗ್ರಹಿಸಿಟ್ಟ ಜೇನನ್ನು ಇತರರು ಅಪಹರಿಸಿಬಿಡುವರು.

ಈ ವಿಷಯವನ್ನು ತಿಳಿಸುವ ಇನ್ನೊಂದು ಸುಭಾಷಿತ ಹೀಗಿದೆ.

ದಾನಂ ಭೋಗೋ ನಾಶಃ ತಿಸ್ರೋ ಗತಯೋ ಭವಂತಿ ವಿತ್ತಸ್ಯ ।
ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯಾ ಗತಿರ್ಭವತಿ ॥

ಭರ್ತೃಹರಿಯನೀತಿಶತಕ

ಸಂಪತ್ತಿನ ಗತಿಯು ಮೂರು ವಿಧವಾಗಿದೆ. ಒಂದನೆಯ ಗತಿಯು ದಾನ. ಎರಡನೆಯ ಗತಿಯು ಉಪಭೋಗ. ಮೂರನೆಯದು ನಾಶ. ಯಾರು ದಾನಕೊಡುವದಿಲ್ಲವೋ, ಸ್ವತಃ ಉಪಭೋಗ ಮಾಡುವದಿಲ್ಲವೋ ಅವರ ಸಂಪತ್ತು ನಾಶವಾಗುವದು ಖಂಡಿತ.

೭. ಶ್ರೀಮದ್ ಭಾಗವತ (೮-೧೯-೩೭)

ಜಾರುತಿದೆ ಆಯುಷ್ಯ ಕ್ಷಣಲವ ಎನಗೊಡದೇ - ಎಂಬಲ್ಲಿ ಮನುಷ್ಯನ ಆಯುಷ್ಯವು ಕ್ಷಣಕ್ಷಣಕ್ಕೂ ಕಡಿಮೆಯಾಗುತ್ತ ಹೋಗುವದೆಂದು ತಿಳಿಸಿದ್ದಾರೆ.

''ಕ್ಷಿಪ್ರಂ ಹಿ ಆಯುಃ ಭ್ರಶ್ಯತೇ ಮಾನವಾನಾಮ್''

ಈ ಶ್ರೀಮನ್ ಮಹಾಭಾರತದ ಉಕ್ತಿಯಂತೆ ಮನುಷ್ಯರ ಆಯುಷ್ಯವು ಶೀಘ್ರಗತಿ ಯಿಂದ ನಾಶವಾಗುತ್ತಲೇ ಇರುತ್ತದೆ.

ಮಾನವನ ಆಯುಷ್ಯವು ಕಳೆದು ಹೋಗುವ ಬಗೆಯನ್ನು ಶ್ರೀವೇದವ್ಯಾಸರು ಮಾರ್ಮಿಕವಾಗಿ ವಿವರಿಸಿದ್ದಾರೆ -

ಪುಂಸೋ ವರ್ಷಶತಂ ಹ್ಯಾಯುಃ ತದರ್ಧಂ ಚಾಜಿತಾತ್ಮನಃ ।
ನಿಷ್ಫಲಂ ಯದಸೌ ರಾತ್ರ್ಯಾಃ ಶೇತೇಽಂಧಂ ಪ್ರಾಪಿತಸ್ತಮಃ ॥

ಮುಗ್ಧಸ್ಯ ಬಾಲ್ಯ ಕೌಮಾರೈಃ ಕ್ರೀಡತೋ ಯಾತಿ ವಿಂಶತಿಃ ।
ಜರಯಾಗ್ರಸ್ತದೇಹಸ್ಯ ಯಾತ್ಯಕಲ್ಪಸ್ಯ ವಿಂಶತಿಃ ॥

ದೂರಾಪೂರೇಣ ಕಾಮೇಣ ಮೋಹೇನ ಚ ಬಲೀಯಸಾ ।
ಶೇಷಂ ಗೃಹೇಷು ಸಕ್ತಸ್ಯ ಪ್ರಮತ್ತಸ್ಯ ಅಪಯಾತಿ ಹಿ ॥[೮]

''ಶತಾಯುಃ ಪುರುಷಃ'' ಎಂಬಂತೆ ಮನುಷ್ಯನ ಆಯುಷ್ಯ ಪ್ರಮಾಣ ನೂರು ವರ್ಷಗಳು. ಜಿತೇಂದ್ರಿಯನಲ್ಲದವನ ಆಯುಷ್ಯ ೫೦ ವರ್ಷಗಳು ಮಾತ್ರ. (ಇವನು ಕುರುಡಾಗಿಸುವ ಕತ್ತಲೆಯನ್ನು ಹೊಂದಿ ರಾತ್ರಿಯಲ್ಲಿ ಮಲಗುವನಾದ್ದರಿಂದ ಅರ್ಧ ಆಯುಷ್ಯ ನಿಷ್ಫಲಯೋಜಕವೇ.) ನಂತರ ಕೌಮಾರ ಅವಸ್ಥೆಯಲ್ಲಿ ಪ್ರಯೋಜನ ಜ್ಞಾನವಿಲ್ಲದೇ ಕ್ರೀಡಾಸಕ್ತನಾದ ಇವನ ೨೦ ವರ್ಷಗಳು ವ್ಯರ್ಥವಾಗುತ್ತವೆ. ಆ ಮೇಲೆ ಮುಪ್ಪಿನಿಂದ ಅಮೃತವಾದ ದೇಹದಿಂದ ಅಸಮರ್ಥನಾದ ಇವನ ೨೦ ವರ್ಷಗಳು ವ್ಯರ್ಥವಾಗುತ್ತವೆ. ಪೂರೈಸಲು ಸಾಧ್ಯವಿಲ್ಲದ ವಿಷಯಾಭಿಲಾಷೆಯಿಂದ ಅತ್ಯಂತ ಬಲಿಷ್ಠವಾದ ಮೋಹದಿಂದ ಹೆಂಡತಿ, ಮಕ್ಕಳು, ಮನೆ ಮುಂತಾದ ವಿಷಯಗಳಲ್ಲಿ ಆಸಕ್ತನಾಗಿ ಮಹಾಪುರುಷಾರ್ಥಸಾಧನೆಯಿಂದ ದೂರವಾದ ಮನಸ್ಸುಳ್ಳ ಇವನ ಉಳಿದ ಕೆಲವು ವರ್ಷಗಳು ವ್ಯರ್ಥವೆನಿಸುತ್ತವೆ. ಈ ಕಾರಣದಿಂದ ''ಕೌಮಾರ ಆಚರೇತ್ ಪ್ರಾಜ್ಞೋಧರ್ಮಾನ್ ಭಾಗವತಾನಿಹ'' ಉಕ್ತಿಯಂತೆ ಕೌಮಾರಾವಸ್ಥೆಯಿಂದಲೇ ಶ್ರೀಹರಿಯಲ್ಲಿ ಭಕ್ತಿ ಮಾಡಿ ಭಾಗವತ ಧರ್ಮಗಳನ್ನು ಆಚರಿಸುತ್ತ ಶ್ರೇಯಸ್ಸಾಧನೆಯ ಮಾರ್ಗವನ್ನು ಹೊಂದಬೇಕು.

೮. ಶ್ರೀಮದ್ ಭಾಗವತ (೭-೬-೫,೬,೭)

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥[೯]

ಈ ವಾಕ್ಯದಂತೆ ಎಲ್ಲ ವಿಷಯಗಳು ಭಗವಂತನ ಅಧೀನವಾದ್ದರಿಂದ ಆ ನರಸಿಂಹರೂಪೀ ಶ್ರೀಹರಿಯನ್ನು ನಿಷ್ಠೆಯಿಂದ ಭಕ್ತಿಯಿಂದ ಭಜಿಸಿದ್ದಾದರೆ ಮೋಕ್ಷದೊರಕುವದರಲ್ಲಿ ಸಂದೇಹವಿಲ್ಲ.

ಅಲ್ಪಸುಖಕಾಗಿ ನೀ ಅನೇಕ ಸುಖ ಮರೆವರೇ
ಕಲ್ಪಕಲ್ಪಕೆ ನಿರಯನುಣಿಸಬಹುದೋ ।
ಅಲ್ಪರುಪದೇಶದಲಿ ಭ್ರಾಂತನಾಗದೇ ಶೇಷ
ತಲ್ಪನ್ನ ಮೊರೆ ಹೋಗೋ ಮರೆಯದಲೇ ಮನವೇ ॥ ೨ ॥

ಅಲ್ಪವಾದ ತುಚ್ಛವಾದ ವಿಷಯ ಸುಖಗಳನ್ನು ಬಯಸಿ, ಮೋಕ್ಷಸುಖವನ್ನು, ಶಾಶ್ವತಸುಖವನ್ನು ಎಂದಿಗೂ ಮರೆಯಕೂಡದು. ಅಲ್ಪವಾದ, ಕ್ಷಣಿಕವಾದ ವಿಷಯ ಸುಖಗಳು ನರಕಾದಿಗಳನ್ನು ತಂದು ಕೊಡುತ್ತವೆ. ಅಲ್ಪರಾದ ಜನರ ಉಪದೇಶವನ್ನು ಹೊಂದಿ ಭ್ರಾಂತನಾಗಕೂಡದು. ಶೇಷಶಾಯಿಯಾದ ಶ್ರೀನಾರಾಯಣನನ್ನು ಮರೆಯದೇ ಅವನನ್ನೇ ಮೊರೆ ಹೋಗಬೇಕು. ಅವನು ನಮ್ಮನ್ನು ಈ ಸಂಸಾರ ಸಾಗರದಿಂದ ಉದ್ಧರಿಸುತ್ತಾನೆಂದು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಮೊದಲನೆಯದಾಗಿ ಬ್ರಾಹ್ಮಣ ಜನ್ಮವು ಶ್ರೇಷ್ಠವಾದುದು –

ಬ್ರಾಹ್ಮಣಸ್ಯ ಚ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇಚ್ಛೈವ ಪ್ರೇತ್ಯಾನಂತ ಸುಖಾಯ ಚ ॥[೧೦]

ಬ್ರಾಹ್ಮಣ ಜನ್ಮವು ಕ್ಷುದ್ರವಾದ, ತುಚ್ಛವಾದ ವಿಷಯಸುಖಗಳನ್ನು ಬಯಸಲು ಇರುವದಿಲ್ಲ. ಅನಂತ ಸುಖ(ಮೋಕ್ಷ)ವನ್ನು ಪಡೆಯುವದಕ್ಕಾಗಿ ಇದೆ. ಕಾರಣ ಅಲ್ಪವಾದ ಸ್ವರ್ಗಾದಿ ಸುಖಗಳನ್ನು ಮಾತ್ರ ಬಯಸಿ ಮೋಕ್ಷ ಸುಖವನ್ನು ಮರೆಯ ಬಾರದು.

ಶುಭೇನ ಕರ್ಮಣಾ ಸ್ವರ್ಗಂ ನಿರಯಂ ಚ ವಿಕರ್ಮಣಾ ॥[೧೧]

ಎಂಬುದಾಗಿ ಶ್ರೀಮದಾಚಾರ್ಯರು ಅಪ್ಪಣೆ ಕೊಡಿಸಿದ್ದಾರೆ.

೯. ಶ್ರೀಮದ್ ಭಾಗವತ (೨-೧೦-೧೨)
೧೦. ಶ್ರೀಮದ್ ಭಾಗವತ (೧೧-೧೭-೪೨)
೧೧. ಅಣುಭಾಷ್ಯ - ೩ನೆಯ ಅಧ್ಯಾಯ

ಶುಭಕರ್ಮಗಳನ್ನು ಮಾಡಿದ ಜೀವನು ಸ್ವರ್ಗಕ್ಕೆ ಹೋಗುತ್ತಾನೆ. ಸ್ವರ್ಗ ಸುಖವು ಅಲ್ಪಕಾಲಿಕವಾದದ್ದು.

''ತತಃ ಶೇಷೇಣ ಇಮಂ ಲೋಕಮಾಯಾತಿ''

ಶ್ರುತಿವಾಕ್ಯದಂತೆ ಸ್ವರ್ಗಾದಿಗಳಲ್ಲಿ ಜೀವರು ಕರ್ಮಫಲಭೋಗವನ್ನು ಮಾಡಿದ ಮೇಲೆ ಕರ್ಮಶೇಷಯುಕ್ತರಾಗಿ ಕಾಮ್ಯವಾದ ಶುಭಕರ್ಮಗಳಲ್ಲಿ ವೈರಾಗ್ಯತಾಳಿ ಅಂದರೆ ನಿಷ್ಕಾಮಕರ್ಮಗಳನ್ನು ಮಾಡುವುದರಿಂದ ಜ್ಞಾನವನ್ನು ಹೊಂದಿ (ಕರ್ಮಣಾ ಜ್ಞಾನಮಾತನೋತಿ ಎಂಬಂತೆ) ಅನಂತಸುಖ ಮೋಕ್ಷವನ್ನು ಹೊಂದುತ್ತಾನೆ. (ಜ್ಞಾನೇನೈವ ಪರಂ ಪದಂ)

ಇನ್ನು ಸ್ವೋಚಿತ ಕರ್ಮಗಳನ್ನು ಆಚರಿಸದೇ ವಿರುದ್ಧಕರ್ಮಗಳನ್ನು ಆಚರಿಸುವುದ ರಿಂದ ನಿರಯ ಅಂದರೆ ನರಕವನ್ನು ಹೊಂದುತ್ತಾನೆ.

ಆಯಾನ್ನಿರ್ಗತೋ ಹಿ ನಿರಯಃ ಅಥವಾ ನೀಚೈರಯನಂ ವಾ ನಿರಯಃ ಎಂಬಂತೆ ನಿರಯವೆಂದರೆ ಅಧೋಗತಿ ಅಥವಾ ನರಕವೆಂದು ಅರ್ಥವಾಗುತ್ತದೆ.

ಓಂ ಸಂಯಮನೇ ತ್ವನುಭೂಯೇ ತರೇಷಾಮಾ-
ರೋಹಾವರೋಹೌ ತದ್ಗತಿದರ್ಶನಾತ್ ಓಂ[೧೨]

ಈ ಸೂತ್ರದಲ್ಲಿ ಸೂತ್ರಕಾರರು ಜೀವನು ತನ್ನ ಅಶುಭಕರ್ಮಗಳಿಂದ ನಿತ್ಯನರಕವನ್ನು ಹೊಂದುವನೆಂದು ತಿಳಿಸಿದ್ದಾನೆ.

ಸರ್ವೇವಾ ಏತೇಽಶುಭಕೃತಃ ಸಂಯಮನೇ ಪ್ರಪತಂತಿ ॥[೧೩]

ಶ್ರುತಿಯು ಮೇಲಿನ ವಿಷಯವನ್ನು ದೃಢೀಕರಿಸುತ್ತದೆ.

ನಂತರ ಅಲ್ಪರಾದವರ ಉಪದೇಶವನ್ನು ಹೊಂದಿ ಭ್ರಾಂತರಾಗಕೂಡದು ಎಂಬುದಾಗಿ ತಿಳಿಸುತ್ತಾರೆ ಶ್ರೀದಾಸರು.

ಚಾರ್ವಾಕರೇ ಮುಂತಾದ ಇತರ ಮತೀಯರ ಉಪದೇಶವನ್ನು ಹೊಂದಿದಲ್ಲಿ ಮನುಷ್ಯನು ಭ್ರಾಂತನಾಗುವುದರಲ್ಲಿ ಸಂದೇಹವಿಲ್ಲ.

ಕಾರಣವೆಂದರೆ ಚಾರ್ವಾಕರು ಹೇಳುತ್ತಾರೆ –

೧೨. ಶ್ರೀ ಬ್ರಹ್ಮಸೂತ್ರ (೩-೧-೧೪)
೧೩. ಕೌಂಡರವ್ಯ ಶ್ರುತಿ

ನ ಸ್ವರ್ಗೋ ನಾಪವರ್ಗೋ ವಾ ನೈವಾತ್ಮಾ ಪಾರಲೌಕಿಕಃ ।
ನೈವ ವರ್ಣಾಶ್ರಮಾದೀನಾಂ ಕ್ರಿಯಾಶ್ಚ ಫಲದಾಯಕಾಃ ॥

ಯಾವಜ್ಜೀವಂ ಸುಖಂ ಜೀವೇನ್ನಾಸ್ತಿ ಮೃತ್ಯುರಗೋಚರಃ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ॥

ದೇಹಸ್ಯ ನಾಶೋ ಮುಕ್ತಿಸ್ತು ನ ಜ್ಞಾನಾನ್ಮುಕ್ತಿರಿಷ್ಯತೇ ।
ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ॥[೧೪]

ಸ್ವರ್ಗ, ಮೋಕ್ಷ, ಪರಲೋಕ, ಆತ್ಮ ಯಾವವೂ ಇಲ್ಲ. ವರ್ಣಾಶ್ರಮ ವಿಹಿತವಾದ ಕರ್ಮಗಳು ಯಾವ ಫಲವನ್ನೂ ಕೊಡುವದಿಲ್ಲ. ಜೀವಿಸಿರುವವರೆಗೆ ಸುಖದಿಂದ ಇರಬೇಕು. ಮರಣಕ್ಕೊಳಗಾಗದ ಮಾನವರು ಯಾರೂ ಇಲ್ಲ. ಶರೀರವು ಒಂದು ಬಾರಿ ಬೂದಿಯಾದ ಮೇಲೆ ಮತ್ತೆ ಹಿಂದಿರುಗಿ ಬರುವುದು ಹೇಗೆ? ದೇಹನಾಶವೇ ಮೋಕ್ಷ. ಜ್ಞಾನದಿಂದ ಮೋಕ್ಷವು ದೊರೆಯುವದಿಲ್ಲ. ಬದುಕಿರುವವರೆಗೆ ಸುಖದಿಂದ ಬಾಳಬೇಕು. ಸಾಲ ಮಾಡಿಯಾದರೂ ತುಪ್ಪ ಕುಡಿಯಬೇಕು.

ಈ ರೀತಿಯಾಗಿ ಹೇಳುವವರ ಉಪದೇಶವನ್ನು ಕೇಳಿ ತಪ್ಪು ದಾರಿ ಹಿಡಿಯದೇ ಶೇಷತಲ್ಪನ್ನ ಅಂದರೆ ಶೇಷಶಾಯಿಯಾದ ಆ ಭಗವಂತನ ಆಜ್ಞೆಯನ್ನು ಶಿರಸಾವಹಿಸಿ ಅದರಂತೆ ನಡೆದರೆ ಮೋಕ್ಷವು ನಿಶ್ಚಯವಾಗಿ ದೊರಕುತ್ತದೆ.

ಭಗವಂತನು ಶೇಷಶಾಯಿಯಾಗಿದ್ದಾನೆಂಬುದು ಕೆಳಗಿನ ವಾಕ್ಯದಿಂದ ತಿಳಿದುಬರುತ್ತದೆ.

ಶೇಷ ಸ್ತಯೋರೇವ ಹಿ ಜೀವನಾಮಾ
ಕಾಲಾತ್ಮಕಃ ಸೋಽಥ ಸುಪರ್ಣ ಆಸೀತ್ ।
ತೌವಾಹನಂ ಶಯನಂ ಚೈವ ವಿಷ್ಣೋಃ
ಕಾಲಾಜಯಾದ್ಯಾಶ್ಚ ತತಃ ಪ್ರಸೂತಾಃ ॥[೧೫]

ಶೇಷನಿಗೆ 'ಜೀವ' ಎಂದು ಹೆಸರಿದೆ. ಗರುಡನಿಗೆ 'ಕಾಲ' ಎಂದು ಹೆಸರಿದೆ. ಗರುಡನು ವಿಷ್ಣುವಿನ ವಾಹನನಾದ, ಶೇಷನು ವಿಷ್ಣುವಿನ ಹಾಸಿಗೆಯಾದ.

ನಿನ್ನಿಂದ ಭವಬಂಧನ ನಿನ್ನಿಂದ ಮೋಚನ
ನಿನ್ನಿಂದ ಪ್ರಸನ್ವೆಂಕಟೇಶನೊಲುಮೆ ।

೧೪. ಸರ್ವದರ್ಶನ ಸಂಗ್ರಹ - ಚಾರ್ವಾಕದರ್ಶನ
೧೫. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೩-೧೩)

ಎನ್ನ ದಣಿಸದರಿಂದು ಇದರಿಂದ ತಪ್ಪಿದರೆ
ಘನ್ನ ಗುರು ಮಧ್ವೇಶನಾಣೆ ನಿನಗಿಹುದೋ ॥ ೩ ॥

ಇಲ್ಲಿ ಶ್ರೀದಾಸರು ಮನಸ್ಸೇ ಈ ಸಂಸಾರ ಬಂಧನಕ್ಕೂ ಹಾಗೂ ಬಿಡುಗಡೆಗೂ ಕಾರಣವಾಗಿದೆ, ಭಗವಂತನ ಒಲುಮೆ ಅಂದರೆ ಪ್ರೀತಿಯನ್ನು ಸಂಪಾದಿಸಲು ಕಾರಣವೆಂಬುದಾಗಿ ತಿಳಿಸಿದ್ದಾರೆ.

ಬೇರೆ ಬೇರೆ ಗ್ರಂಥಗಳಲ್ಲಿ ಈ ವಿಷಯವು ನಿರೂಪಿತವಾಗಿದೆ.

ಮನ ಏವ ಹಿ ಸರ್ವೇಷಾಂ ಬಂಧನಂ ಮೋಕ್ಷಕಂ ತಥಾ ।
ವಿಷಯಾಸಂಗಿ ಬಂಧಾಯ ತದ್ವಿರಕ್ತಂ ವಿಮುಕ್ತಯೇ ॥[೧೬]

ಚೇತಃ ಖಿಲ್ವಸ್ಯ ಬಂಧಾಯ ಮುಕ್ತಯೇ ಚಾತ್ಮನೋ ಮತಮ್ ॥[೧೭]

ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ ॥[೧೮]

ಮನಸ್ಸು ವಿಷಯ ಪದಾರ್ಥಗಳಲ್ಲಿ ಹರಿದಾಡುತ್ತಿದ್ದರೆ ಅದು ಸಂಸಾರದ ಬಂಧನಕ್ಕೆ ಕಾರಣವಾಗುತ್ತದೆ. ಅದೇ ಮನಸ್ಸು ವಿಷಯ ವಿಮುಖವಾಗಿ ಭಗವಂತನಲ್ಲಿ ಸ್ಥಿರವಾಗಿ ಇರುವುದಾದರೆ ಸಂಸಾರದಿಂದ ನಿವೃತ್ತಿಯನ್ನು ತಂದುಕೊಟ್ಟು ಮೋಕ್ಷಕ್ಕೆ ಕಾರಣೀಭೂತವಾಗುತ್ತದೆಂಬುದು ಮೇಲಿನ ಪ್ರಮಾಣಗಳ ಒಟ್ಟು ಆಶಯವಾಗಿದೆ.

ಶ್ರೀಕೃಷ್ಣ ಹೇಳಿರುವ ಮಾತನ್ನು ಇಲ್ಲಿ ಸ್ಮರಿಸುವದು ಅವಶ್ಯ -

ಮಯ್ಯಾವೇಶ್ಯ ಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ ।
ಶ್ರದ್ಧಯಾ ಪರಯೋಪೇತಾಸ್ತೇಮೇ ಯುಕ್ತತಮಾ ಮತಾಃ ॥[೧೯]

ಯಾರು ಭಗವಂತನಲ್ಲಿ ಮನಸ್ಸಿಟ್ಟು ನಿರಂತರ ಧ್ಯಾನಯೋಗದಿಂದ ಉತ್ತಮವಾದ ಆಸ್ತಿಕ್ಯ ಬುದ್ಧಿಯಿಂದ, ಶ್ರದ್ಧೆಯಿಂದ ಕೂಡಿದವರಾಗಿ ಭಗವಂತನನ್ನು ಉಪಾಸಿಸುವರೋ ಅವರೇ ಮೋಕ್ಷೋಪಾಯವನ್ನು ತಿಳಿದವರು, ಅವರೇ ಭಗವಂತನಿಗೆ ಸಮ್ಮತರಾದವರು.

ಹೀಗೆ ಭಗವಂತನನ್ನು ಧ್ಯಾನಿಸಿ ಕೊನೆಗೆ ಮೋಕ್ಷವನ್ನು ತಂದು ಕೊಡುವಲ್ಲಿ ಮನಸ್ಸು ಪ್ರಮುಖ ಪಾತ್ರವಹಿಸಿದೆ. ಈ ರೀತಿ ಮಾಡಬೇಕಾದುದು ಮನಸ್ಸಿನ ಕರ್ತವ್ಯವೂ

೧೬. ಶ್ರೀ ವಿಷ್ಣುರಹಸ್ಯ (೨೦-೧೭)
೧೭. ಶ್ರೀಮದ್ ಭಾಗವತ (೩-೨೫-೧೫)
೧೮. ಮೈತ್ರಾಯಣಿ ಉಪನಿಷತ್
೧೯. ಶ್ರೀ ಭಗವದ್ಗೀತಾ (೧೨-೨)

ಆಗಿದೆ. ಇಂಥ ಕರ್ತವ್ಯದಲ್ಲಿ ಚ್ಯುತಿ ಹೊಂದಿದರೆ ನಿನಗೆ ಗುರುಮಧ್ವೇಶನ ಆಣೆ ಇದೆ ಎನ್ನುತ್ತಾರೆ ಶ್ರೀದಾಸರು.

ಅಂದರೆ ಯಾವುದೇ ಪ್ರಸಂಗದಲ್ಲಿಯೂ ಮನಸ್ಸು ಭಗವಂತನಿಗೆ ವಿಮುಖವಾಗಿ ವರ್ತಿಸಕೂಡದು ಎಂಬ ಕಳಕಳಿಯ ಧ್ವನಿ ಇಲ್ಲಿದೆ.

ಪವನ ತನಯರಾದ ಶ್ರೀಗುರುಮಧ್ವರು ಭಗವಂತನಿಗೆ ಅತ್ಯಂತ ಪ್ರೀತಿಪಾತ್ರ ರಾಗಿದ್ದಾರೆ.

ದೇಹೇಽಪಿ ಯತ್ರ ಪವನೋಽತ್ರ ಹರಿರ್ಯತೋಽಸೌ
ತತ್ರೈವ ವಾಯುರಿತಿ ವೇದ ವಚಃ ಪ್ರಸಿದ್ಧಮ್ ॥[೨೦]

ಉಕ್ತಿಯಂತೆ ಶ್ರೀವಾಯುದೇವರ ಅಂತರ್ಯಾಮಿಯಾಗಿ ಶ್ರೀಹರಿಯು ಸರ್ವದಾ, ಸರ್ವತ್ರ ನೆಲೆಸಿರುತ್ತಾನೆ.

ವಾಯುದೇವರ ಮೂರನೆ ಅವತಾರವು ಮಧ್ವಾವತಾರವು. ಇದನ್ನು

ಮಧ್ವೋ ಯತ್ತು ತೃತೀಯ ಮೇತದಮುನಾ ಗ್ರಂಥಃ ಕೃತಃ ಕೇಶವೇ ॥

ಎಂಬುದಾಗಿ ಶ್ರೀ ಮಧ್ವರೇ ತಮ್ಮ ಗ್ರಂಥಗಳಲ್ಲಿ ತಿಳಿಸಿದ್ದಾರೆ.

ಕಾರಣ ಶ್ರೀದಾಸರು ಈ ಗುರುಮಧ್ವರಿಗೆ ಈಶನಾದ ಸ್ವಾಮಿಯಾದ ಶ್ರೀಹರಿಯ ಆಣೆ ಇದೆ ಎಂದಿರುತ್ತಾರೆ.

ಒಟ್ಟಿನಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಮನಸ್ಸಿನ ಬಗ್ಗೆ ಪ್ರತಿಯೊಬ್ಬರೂ ಎಚ್ಚರಿಕೆ ವಹಿಸಿ, ವಿಷಯ ಪದಾರ್ಥಗಳಲ್ಲಿ ವೈರಾಗ್ಯ ಹೊಂದಿ, ಮನಸ್ಸನ್ನು ಭಗವಂತನಲ್ಲಿ ಕೇಂದ್ರೀಕರಿಸಿ ಅವನ ಅನುಗ್ರಹಕ್ಕೆ ಪಾತ್ರರಾಗಬೇಕೆಂಬುದಾಗಿ ಅಪ್ಪಣೆ ಕೊಡಿಸಿದ್ದಾರೆ.

--*

೨೦. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೫-೪೬)

೧೨. ಎಲೆ ಮಾನವ ಹರಿಯ ಸ್ಮರಿಸು

ಎಲೆ ಮಾನವ ಹರಿಯ ಸ್ಮರಿಸು
ಸಲೆ ಕಾವನು ಖರಿಯ **॥ ಪ ॥**

ಶಂಖಾರಿ ಸಂಧೃತನ ಮತ್ತಾ
ಶಂಖಿಜನ ಬಲಹೃತನ ।
ಶಂಕರ ವಿಧಿನುತ ಚರಣನುದಾರಾ
ಶಂಕಾವಾರಣ ವಾರಣೋದ್ಧರನ **॥ ೧ ॥**

ಕಮನೀಯ ಗಾತ್ರನ ಅರುಣ
ಕಮಲಾಯತ ನೇತ್ರನ ।
ಕಮಲಾವ್ಯಯ ಪೂತಮುಖ ಚಾರುವಿಲಸಿತ
ಕುಮುದಾಸಿತ ಶರಣ ಕರುಣಾಕರನ **॥ ೨ ॥**

ಅಗಣಿತಗುಣಗಣ್ಯನಾನಂತ ಆಗಮ
ನಿಗಮಾದಿ ಪೂರ್ಣನ ।
ಅಗಧರ ಮಹಿವರ ಪ್ರಸನ್ನೆಂಕಟವರ
ಅಗನಂದನಿಲಯ ಕಲಿಯಕೋಲಾಹಲನ **॥ ೩ ॥**

ಪ್ರಸ್ತುತ ಪದ್ಯದಲ್ಲಿ ಶ್ರೀ ಪ್ರಸನ್ನವೆಂಕಟದಾಸರು ಹೇ ಮಾನವ! ಶ್ರೀಹರಿಯನ್ನು ಸ್ಮರಿಸು. ಅವನು ತನ್ನ ಭಕ್ತರನ್ನು ಚೆನ್ನಾಗಿ ರಕ್ಷಿಸುತ್ತಾನೆ ನಿಶ್ಚಿತ. ಅವನು ಅನಂತ ಕಲ್ಯಾಣಗುಣಪೂರ್ಣನಾಗಿದ್ದಾನೆ ಇತ್ಯಾದಿ ವಿಷಯಗಳನ್ನು ತಿಳಿಸಿಕೊಟ್ಟಿದ್ದಾರೆ.

ಎಲೆ ಮಾನವ ಹರಿಯ ಸ್ಮರಿಸು
ಸಲೆ ಕಾವನು ಖರಿಯ ॥ ಪ ॥

ಎಲೈ ಮಾನವನೇ! ನೀನು ಶ್ರೀಹರಿಯನ್ನು ಸ್ಮರಿಸು. ನೀನು ಅವನ ಸ್ಮರಣೆ ಮಾಡಿದ್ದಾದರೆ ಅವನು ನಿನ್ನನ್ನು ಚೆನ್ನಾಗಿ ರಕ್ಷಿಸುತ್ತಾನೆ, ಇದು ನಿಜ.

ಶ್ರೀಮದ್ ಭಾಗವತಕಾರರು ಹರಿಸ್ಮರಣೆ ಅವಶ್ಯ ಏಕೆ? ಎಂಬುದನ್ನು ತಿಳಿಸಿದ್ದಾರೆ.

ಹರಿಸ್ಮೃತಿಃ ಸರ್ವ ವಿಪದ್ವಿಮೋಕ್ಷಿಣೀ ॥ (೮-೧೦-೫೫)

ಶ್ರೀಹರಿಯ ಸ್ಮರಣೆಯು ನಮ್ಮ ಎಲ್ಲ ವಿಪತ್ತುಗಳನ್ನು ನಾಶಮಾಡುತ್ತದೆ.

ಶ್ರೀಹರಿಯನಾಮದ ವೈಶಿಷ್ಟ್ಯವನ್ನು ಶ್ರೀಮನ್ ಮಧ್ವಾಚಾರ್ಯರು ಹೀಗೆ ತಿಳಿಸಿದ್ದಾರೆ.

ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಮ್ ।
ಬದ್ಧಃ ಪರಿಕರಸ್ತೇನ ಮೋಕ್ಷಾಯಗಮನಂ ಪ್ರತಿ ॥[೧]

ಯಾವನು ಎರಡು ಅಕ್ಷರಗಳಿಂದ ಕೂಡಿದ ''ಹರಿ'' ಎಂಬ ನಾಮವನ್ನು ಒಮ್ಮೆಯಾದರೂ ಭಕ್ತಿಪೂರ್ವಕವಾಗಿ ಉಚ್ಚರಿಸುವನೋ, ಅವನಿಗೆ ಮೋಕ್ಷಮಾರ್ಗಕ್ಕೆ ಅವಶ್ಯಕವಾದ ಸಾಧನಗಳು ಸಿದ್ಧವಾದಂತೆಯೇ ಸರಿ.

ನಾಮ್ನೋಽಸ್ತಿ ಯಾವತೀಶಕ್ತಿಃ ಪಾಪನಿರ್ಹರಣೇ ಹರೇಃ ।
ತಾವತ್ಕರ್ತುಂ ನ ಶಕ್ನೋತಿ ಪಾತಕಂ ಪಾತಕೀ ಜನಃ ॥[೨]

ಹರಿ ಎಂದು ಭಕ್ತಿಯಿಂದ ಕರೆದಾಗ ಮಾನವನ ಅದೆಷ್ಟು ಪಾಪಗಳು ನಾಶವಾಗುವವೋ ಅಷ್ಟು ಪಾಪಗಳನ್ನು ಪಾಪಿಯಾದವನು ಮಾಡಲು ಸಾಧ್ಯವಿಲ್ಲ.

ಹೇ ಜಿಹ್ವೇ ಮಮ ನಿಃಸ್ನೇಹೇ ಹರಿಂ ಕಿಂ ನಾನುಭಾಷಸೇ ।
ಹರಿಂ ವದಸ್ವ ಕಲ್ಯಾಣಿ ಸಂಸಾರೋದಧಿನೌರ್ಹರಿಃ ॥[೩]

ನನ್ನಲ್ಲಿ ಪ್ರೀತಿಯಿಲ್ಲದ ನಾಲಿಗೆಯೇ! ನೀನು ಹರಿಯನ್ನೇಕೆ ಕೀರ್ತನೆ ಮಾಡುತ್ತಿಲ್ಲ? ಎಲೈ ಮಂಗಳ ಸ್ವರೂಪಿಯೇ! ಸಂಸಾರವನ್ನು ದಾಟಲು ನೌಕೆಯಂತಿರುವ ಶ್ರೀಹರಿನಾಮವನ್ನು ಇನ್ನು ಮೇಲಾದರೂ ಉಚ್ಚರಿಸು.

ಕೃತೇ ಪಾಪೇಽನುತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ ।
ಪ್ರಾಯಶ್ಚಿತ್ತಂ ತು ತಸ್ಯೋಕ್ತಂ ಹರಿಸಂಸ್ಮರಣಂ ಪರಮ್ ॥[೪]

ತಿಳಿಯದೇ ಪಾಪಗಳನ್ನು ಮಾಡಿ ನಂತರ ಪಶ್ಚಾತ್ತಾಪ ಪಡುವ ಮಾನವನಿಗೆ ಉತ್ತಮವಾದ ಪ್ರಾಯಶ್ಚಿತ್ತವೆಂದರೆ ಶ್ರೀಹರಿಯ ಸ್ಮರಣೆಯೇ ಆಗಿದೆಯೆಂದು ತಿಳಿಯಬೇಕು.

ತದೈವ ಪುರುಷೋ ಮುಕ್ತೋ ಜನ್ಮದುಃಖಜರಾದಿಭಿಃ ।
ಜಿತೇಂದ್ರಿಯೋ ವಿಶುದ್ಧಾತ್ಮಾ ಯದೈವ ಸ್ಮರತೇ ಹರಿಮ್ ॥[೫]

---

೧. ಶ್ರೀ ಕೃಷ್ಣಾಮೃತ ಮಹಾರ್ಣವ - ೨೦೨ನೆಯ ಶ್ಲೋಕ
೨. ಶ್ರೀ ಕೃಷ್ಣಾಮೃತ ಮಹಾರ್ಣವ - ೩೭ನೆಯ ಶ್ಲೋಕ
೩. ಶ್ರೀ ಕೃಷ್ಣಾಮೃತ ಮಹಾರ್ಣವ - ೭೧ನೆಯ ಶ್ಲೋಕ
೪. ಶ್ರೀ ಕೃಷ್ಣಾಮೃತ ಮಹಾರ್ಣವ - ೩೬ನೆಯ ಶ್ಲೋಕ
೫. ಶ್ರೀ ಕೃಷ್ಣಾಮೃತ ಮಹಾರ್ಣವ - ೩೯ನೆಯ ಶ್ಲೋಕ

ಸರ್ವೇಂದ್ರಿಯಗಳನ್ನು ಜಯಿಸಿದವನಾಗಿ, ನಿರ್ಮಲ ಮನಸ್ಸುಳ್ಳವನಾಗಿ ಶ್ರೀಹರಿಯನ್ನು ಸ್ಮರಿಸಿದಾಗಲೇ ಪುರುಷನು ಜನ್ಮ, ದುಃಖ, ಮುಪ್ಪು ಮೊದಲಾದವುಗಳಿಂದ ಬಿಡುಗಡೆ ಹೊಂದುತ್ತಾನೆ.

ಬುದ್ಧ್ಯಾ ಬುದ್ಧ್ವಾಽಭ್ಯಸೇದೇತತ್ ಹರಿರಿತ್ಯಕ್ಷರದ್ವಯಮ್ ।
ಸ್ಮರಣಾತ್ಕೀರ್ತನಾದ್ಯಸ್ಯ ನ ಪುನರ್ಜಾಯತೇ ಭುವಿ ॥[೬]

ಯಾರ ಸ್ಮರಣೆ ಹಾಗೂ ಕೀರ್ತನೆಗಳಿಂದ ಭೂಲೋಕದಲ್ಲಿ ಮತ್ತೊಮ್ಮೆ ಜನ್ಮವಿರುವದಿಲ್ಲವೋ ಆ ಭಗವಂತನನ್ನು ಮನಸ್ಸಿನಿಂದ ಅರಿತು ''ಹರಿ'' ಎಂಬ ಎರಡು ಅಕ್ಷರಗಳನ್ನು ಸ್ಮರಿಸುತ್ತಿರು.

ಶ್ರೀಹರಿಸ್ಮರಣೆಯ ವೈಶಿಷ್ಟ್ಯವನ್ನು ಶ್ರೀಜಗನ್ನಾಥದಾಸರು ಹೀಗೆ ತಿಳಿಸಿದ್ದಾರೆ.

ಸರಿತು ಪ್ರವಹಗಳಲಿ ದಿವ್ಯಾಂ
ಬರದಿ ಪತ್ರಾದಿಯಲಿ ಹರ್ಷಾ
ಮರುಷ ವಿಸ್ಮೃತಿಯಿಂದಾಗಲಿ ಒಮ್ಮೆ ಬಾಯ್ದೆರೆದು ।
ಹರಿ ಹರೀ ಹರಿ ಎಂಬ ಎರಡ
ಕ್ಷರ ನುಡಿದ ಮಾತ್ರದಲಿ ದುರಿತಗ
ಳಿರದೆ ಪೋಪವು ತೂಲರಾಶಿಯೊಳನಲ ಪೊಕ್ಕಂತೆ ॥[೭]

ಹೀಗೆ ಶ್ರೀಹರಿಯನ್ನು ಸ್ಮರಿಸಿದ್ದಾದರೆ ಆ ಶ್ರೀಹರಿಯು ಮಾನವರನ್ನು ಚೆನ್ನಾಗಿ ರಕ್ಷಿಸುತ್ತಾನೆ ಇದು ನಿಜವೇ.

ಶ್ರೀಹರಿಯ ನಾಮ ನಿರ್ವಚನವನ್ನು ನೋಡಿದಾಗ ಶ್ರೀಹರಿಯು ರಕ್ಷಿಸುತ್ತಾನೆಂಬುದು ವಿದಿತವಾಗುತ್ತದೆ.

ಸ್ವಸ್ಮರಣಾದೇವ ಭಕ್ತಾನಾಮ್ ಅನೇಕ
ಜನ್ಮಾರ್ಜಿತ ಪಾಪ ಸಂಚಯಂ ಹರತೀತಿ ಹರಿಃ ॥

ಭಗವಂತನು ತನ್ನ ಸ್ಮರಣೆಮಾಡುವ ಭಕ್ತರ ಅನೇಕ ಜನ್ಮಾರ್ಜಿತವಾದ ಪಾಪ ಸಮೂಹವನ್ನು ನಾಶಮಾಡುತ್ತಾನೆ.

ಇದು ಈ ಪ್ರಮಾಣ ವಚನದಿಂದ ಸ್ಪಷ್ಟವಾಗುತ್ತದೆ.

---

೬. ಶ್ರೀ ಕೃಷ್ಣಾಮೃತ ಮಹಾರ್ಣವ - ೭೦ನೆಯ ಶ್ಲೋಕ
೭. ಶ್ರೀ ಹರಿಕಥಾಮೃತಸಾರ (೧೩-೨)

ನಾರಾಯಣೋ ನಾಮ ನರೋ ನರಾಣಾಂ
ಪ್ರಸಿದ್ಧ ಚೋರಃ ಕಥಿತಃ ಪೃಥಿವ್ಯಾಮ್ ।
ಅನೇಕ ಜನ್ಮಾರ್ಜಿತ ಪಾಪ ಸಂಚಯಂ
ಹರತ್ಯಶೇಷಂ ಸ್ಮೃತಮಾತ್ರ ಏವ ॥[೮]

ಭಗವಂತನ ''ಹರಿ'' ನಾಮವನ್ನು ಯಾವಾಗಲೂ ಸ್ಮರಿಸುತ್ತಿರಬೇಕು. ಹೀಗೆ ಸ್ಮರಿಸುವುದರಿಂದ ಶ್ರೀಹರಿಯು ಮಾನವರನ್ನು ಕಲಿ ಬಾಧೆಯಿಂದ ರಕ್ಷಿಸುತ್ತಾನೆ.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥[೯]

ಶಂಖಾರಿ ಸಂಧೃತನ ಮತ್ತಾ
ಶಂಖಿಜನ ಬಲಹೃತನ ।
ಶಂಕರ ವಿಧಿನುತ ಚರಣನುದಾರಾ
ಶಂಕಾವಾರಣ ವಾರಣೋದ್ಧರನ ॥ ೧ ॥

ಶಂಖಚಕ್ರಗಳನ್ನು ಧರಿಸಿದ ಮತ್ತೆ ಶಂಖಿಜನನೆಂಬ ರಾಕ್ಷಸನ ಸಂಹಾರ ಮಾಡಿದ ಬ್ರಹ್ಮ, ರುದ್ರ, ದೇವತೆಗಳಿಂದ ವಂದಿತ ಉತ್ಕೃಷ್ಟ ಪಾದಗಳುಳ್ಳವನ, ಶಂಕೆಯಿಲ್ಲದೇ ಗಜೇಂದ್ರನನ್ನು ಉದ್ಧಾರ ಮಾಡಿದ ಶ್ರೀಹರಿಯನ್ನು ಸ್ಮರಿಸು ಎಂಬುದಾಗಿ ಮಾನವರಿಗೆ ತಿಳಿಸಿದ್ದಾರೆ.

ಶಂಖಾರಿ ಸಂಧೃತನ -

ಆ ಹರಿಯು ಶಂಖ ಚಕ್ರಗಳನ್ನು ಧರಿಸಿದ್ದಾನೆ -

ಆದಿತ್ಯ ಪುರಾಣ ವೆಂಕಟೇಶ ಮಹಾತ್ಮೆಯಲ್ಲಿ ಹೀಗೆ ಬಣ್ಣಿಸಿದ್ದಾರೆ -

ಶಂಖಚಕ್ರಾಭಯವರಂ ಶ್ರೀನಿವಾಸಂ ಭಜೇಽನಿಶಮ್ ॥(೩-೧೪)

ಶಂಖ, ಚಕ್ರ, ಅಭಯ, ವರಮುದ್ರೆ ಧರಿಸಿದ ಶ್ರೀನಿವಾಸನನ್ನು ಯಾವಾಗಲೂ ಸೇವಿಸುತ್ತೇನೆ.

ಶಂಖಚಕ್ರಗದಾಪದ್ಮಧರಾಶ್ಚಿಂತ್ಯಾ ಹರೇರ್ಭುಜಾಃ ॥[೧೦]

೮. ಶ್ರೀ ಕೃಷ್ಣಾಮೃತ ಮಹಾರ್ಣವ - ೪೮ನೆಯ ಶ್ಲೋಕ
೯. ಕಲಿಸಂತರಣೋಪನಿಷತ್ ॥
೧೦. ಶ್ರೀಮದ್ ದ್ವಾದಶ ಸ್ತೋತ್ರ (೧-೯)

ಎಂಬುದಾಗಿ ಶ್ರೀಮಧ್ವಾಚಾರ್ಯರು ವರ್ಣಿಸಿದ್ದಾರೆ -

ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿದ ಶ್ರೀಹರಿಯ ಭುಜಗಳನ್ನು ಸ್ಮರಿಸಬೇಕು. ಇನ್ನೊಂದೆಡೆಗೆ ಶ್ರೀಮಧ್ವಾಚಾರ್ಯರು ಶ್ರೀಹರಿಯನ್ನು ಹೀಗೆ ಸ್ತುತಿಸಿದ್ದಾರೆ -

ಯೇ ಸ್ಮರಂತಿ ಸದಾ ವಿಷ್ಣುಂ ಶಂಖಚಕ್ರಗದಾಧರಂ ।
ಸರ್ವ ಪಾಪವಿನಿರ್ಮುಕ್ತಾಃ ಪರಂ ಬ್ರಹ್ಮ ವಿಶಂತಿ ತೇ ॥[೧೧]

ಶಂಖ, ಚಕ್ರ ಹಾಗೂ ಗದೆಯನ್ನು ಧರಿಸಿದ ಶ್ರೀವಿಷ್ಣುವನ್ನು ಯಾರು ಸ್ಮರಿಸುವರೋ ಅವರು ಎಲ್ಲ ಪಾಪಗಳನ್ನು ಕಳೆದುಕೊಂಡು ಸರ್ವೋತ್ತಮನಾದ, ಸಕಲ ಗುಣಪರಿಪೂರ್ಣನಾದ ಶ್ರೀಹರಿಯನ್ನು ಪ್ರವೇಶಿಸುತ್ತಾರೆ.

ಈ ಕಾರಣದಿಂದ ಎಲೆ ಮಾನವ ಶ್ರೀಹರಿಯನ್ನು ಸ್ಮರಿಸು ಎಂಬುದಾಗಿ ಶ್ರೀದಾಸರು ತಿಳಿಸಿದ್ದಾರೆ.

ಮತ್ತಾ ಶಂಖಿಜನ ಬಲಹೃತನ -

ಮತ್ತೆ ಶಂಖಿಜನ ಎಂಬ ರಾಕ್ಷಸನನ್ನು ಸಂಹಾರಮಾಡಿದ ಶ್ರೀಹರಿಯನ್ನು ಸ್ಮರಿಸು ಎಂಬುದಾಗಿ ಇಲ್ಲಿ ತಿಳಿಸಿದ್ದಾರೆ.

ಶಂಕರವಿಧಿನುತ ಚರಣನುದಾರಾ ।

ಆ ಶ್ರೀಹರಿಯು ಬ್ರಹ್ಮ, ರುದ್ರ ಮೊದಲಾದ ದೇವತೆಗಳಿಂದ ವಂದ್ಯವಾದ ಉತ್ಕೃಷ್ಟ ಪಾದವುಳ್ಳವನಾಗಿದ್ದಾನೆ.

ಶ್ರೀಮದಾನಂದತೀರ್ಥಭಗವತ್ಪಾದರು ಶ್ರೀಹರಿಯನ್ನು ಸ್ತೋತ್ರ ಮಾಡಿರುವ ಪರಿ ಹೀಗಿದೆ -

ಉದೀರ್ಣಮಜರಂ ದಿವ್ಯಮಮೃತಸ್ಯಂದ್ಯಧೀಶಿತುಃ ।
ಆನಂದಸ್ಯ ಪದಂ ವಂದೇ ಬ್ರಹ್ಮೇಂದ್ರಾದ್ಯಭಿವಂದಿತಂ ॥[೧೨]

ಆ ಶ್ರೀಹರಿಯು ಉತ್ಕೃಷ್ಟನು, ಮುಪ್ಪಿರದವನು, ಅಲೌಕಿಕನು, ಅಮೃತವನ್ನು ಸುರಿಸುವವನು, ಜಗದಧೀಶ್ವರನು, ಬ್ರಹ್ಮಾದಿ ದೇವತೆಗಳಿಂದ ಭಕ್ತಿಪೂರ್ವಕವಾಗಿ ನಮಸ್ಕೃತನಾಗಿದ್ದಾನೆ.

ಇನ್ನೊಂದೆಡೆಗೆ ಹೀಗೆ ತಿಳಿಸಿದ್ದಾರೆ -

೧೧. ಶ್ರೀ ಕೃಷ್ಣಾಮೃತ ಮಹಾರ್ಣವ - ೩೦ನೆಯ ಶ್ಲೋಕ
೧೨. ಶ್ರೀಮದ್ ದ್ವಾದಶ ಸ್ತೋತ್ರ (೧೧-೧)

ಅಜಾದಿಪೂಜ್ಯ ಪಾದಾಯ ನಮಸ್ತೇ ಗರುಡಧ್ವಜ ॥[೧೩]

ಆ ಗರುಡಧ್ವಜನಾದ ಶ್ರೀಹರಿಯು ಬ್ರಹ್ಮಾದಿದೇವತೆಗಳಿಂದ ನಮಸ್ಕೃತವಾದ ಪೂಜ್ಯಪಾದನಾಗಿದ್ದಾನೆ.

ಬ್ರಹ್ಮರುದ್ರಾದಿ ವಂದ್ಯಾಯ ಬ್ರಹ್ಮಣೇಽನಂತ ಶಕ್ತಯೇ ।
ನಾರಾಯಣಗಿರೀಶಾಯ ನಮೋ ನಾರಾಯಣಾಯ ತೇ ॥[೧೪]

ಬ್ರಹ್ಮರುದ್ರಾದಿ ದೇವತೆಗಳಿಂದ ವಂದ್ಯನಾದ, ಅನಂತ ಶಕ್ತಿಯಿಂದ ಕೂಡಿದ, ಗುಣಪೂರ್ಣನಾದ, ನಾರಾಯಣ ಗಿರಿಯೊಡೆಯನಾದ, ನಾರಾಯಣನೇ ನಿನಗೆ ನಮಸ್ಕಾರವು.

ಇನ್ನೊಂದೆಡೆ ಶ್ರೀಹರಿಯನ್ನು ಸ್ತೋತ್ರಮಾಡಿರುವ ರೀತಿ ಹೀಗಿದೆ –

ಬ್ರಹ್ಮರುದ್ರಾದಿವಂದ್ಯಂ ತ್ವಾಂ ಭಜೇ ವೆಂಕಟನಾಯಕಂ ।
ನಿವಾರಯಾಶ್ವನಿಷ್ಟಾನಿ ಸಾಧಯೇಷ್ಟಾನಿ ಮಾಧವ ॥[೧೫]

ಬ್ರಹ್ಮ, ರುದ್ರ, ಮೊದಲಾದ ದೇವತೆಗಳಿಂದ ವಂದ್ಯನಾದ, ವೆಂಕಟಪರ್ವತಕ್ಕೆ ಸ್ವಾಮಿಯಾದ, ಭಗವಂತನೇ! ನೀನು ನಮ್ಮ ಅನಿಷ್ಟಗಳನ್ನು ನಾಶಮಾಡಿ ಇಷ್ಟಗಳನ್ನು ಪೂರೈಸು.

ಶಂಕಾವಾರಣ ವಾರಣೋದ್ಧರನ ।

ಶಂಕೆ ಇಲ್ಲದೇ ಭಕ್ತನಾದ ಗಜೇಂದ್ರನನ್ನು ಉದ್ಧರಿಸಿದ ಶ್ರೀಹರಿಯನ್ನು ಮಾನವನೇ ಸ್ಮರಿಸು.

ಹಿಂದೆ ತಾಪಸ ಮನ್ವಂತರದಲ್ಲಿ ಶ್ರೀಹರಿಯು ಗಜೇಂದ್ರನನ್ನು ಮೊಸಳೆಯ ಬಾಯಿಂದ ರಕ್ಷಿಸಿದ ವಿಷಯವು ಹೀಗೆ ಉಕ್ತವಾಗಿದೆ.

ಸೋಽಂತಃ ಸರಸ್ಯುರುಬಲೇನ ಗೃಹೀತ ಆರ್ತೋ
ದೃಷ್ಟ್ವಾ ಗರುತ್ಮತಿ ಹರಿಂ ಖ ಉಪಾತ್ತಚಕ್ರಮ್ ।
ಉತ್ಕ್ಷಿಪ್ಯ ಸಾಂಬುಜಕರಂ ಗಿರಮಾಹಕೃಚ್ಛ್ರಾತ್
ನಾರಾಯಣಾಖಿಲಗುರೋ ಭಗವನ್ನಮಸ್ತೇ ॥

೧೩. ಶ್ರೀಮದ್ ದ್ವಾದಶ ಸ್ತೋತ್ರ (೨-೮)
೧೪. ಶ್ರೀ ಮಾರ್ಕಂಡೇಯ ಪುರಾಣ
೧೫. ಶ್ರೀ ವೆಂಕಟೇಶ ಮಹಾತ್ಮೆ (೧-೧)

ತಂ ವೀಕ್ಷ್ಯ ಪೀಡಿತಮಜಃ ಸಹಸಾವತೀರ್ಯ
ಸ ಗ್ರಾಹಮಾಶು ಸರಸಃ ಕೃಪಯೋಜ್ಜಹಾರ ।
ಗ್ರಾಹಾದ್ವಿಪಾಟಿತಮುಖಾದರಿಣಾ ಗಜೇಂದ್ರಂ
ಸಂಪಶ್ಯತಾಂ ಹರಿರಮೂಮುಚದುಸ್ರಿಯಾಣಾಂ ॥[೧೬]

ಶ್ರೀ ಹರಿಯು ಗಜೇಂದ್ರನನ್ನು ರಕ್ಷಿಸಿದ ಪ್ರಸಂಗ ಹೀಗಿದೆ –

ಬಿಸಿಲಿನ ತಾಪದಿಂದ ಬಳಲಿದ ಗಜೇಂದ್ರನು ತನ್ನ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ''ಋತುಮತ್'' ಎಂಬ ಹೆಸರಿನ ಉದ್ಯಾನದಲ್ಲಿರುವ ಸರೋವರಕ್ಕೆ ಬರುತ್ತಾನೆ. ಸರೋವರದಲ್ಲಿ ಸ್ನಾನಮಾಡಿ ತೃಪ್ತಿಯಾಗುವಷ್ಟು ನೀರನ್ನು ಕುಡಿದು ಮೇಲೆ ಬರುವಷ್ಟರಲ್ಲಿ ಮೊಸಳೆಯೊಂದು ಗಜೇಂದ್ರನ ಕಾಲನ್ನು ಹಿಡಿದುಬಿಡುತ್ತದೆ. ಗಜೇಂದ್ರನನ್ನು ಮೊಸಳೆಯ ಬಾಯಿಂದ ಬಿಡಿಸಲು ಬಂಧುಗಳೆಲ್ಲರೂ ಮಾಡಿದ ಪ್ರಯತ್ನ ವಿಫಲವಾಗುತ್ತದೆ. ಆಗ ಗಜೇಂದ್ರನು ಮುಕ್ತಾಶ್ರಯನಾದ ಸರ್ವೋತ್ತಮನಾದ ಭಗವಂತನನ್ನು ಶರಣು ಹೋಗುತ್ತಾನೆ.

''ತಂ ಯಾಮಿ ಪರಂ ಪರಾಯಣಮ್'' ಎಂಬಂತೆ ಗಜೇಂದ್ರನು ಆಕಾಶದಲ್ಲಿ ಚಕ್ರವನ್ನು ಧರಿಸಿದ, ಗರುಡಾರೂಢನಾದ ಶ್ರೀಹರಿಯನ್ನು ನೋಡಿ, ಕಮಲಪುಷ್ಪವನ್ನು ಹಿಡಿದಿದ್ದ ಸೊಂಡಿಲನ್ನು ಮೇಲಕ್ಕೆತ್ತಿ ಗುಣಪೂರ್ಣನಾದ, ಸಮಗ್ರ ಐಶ್ವರ್ಯ ಸಂಪನ್ನನಾದ, ಸಮಸ್ತರಿಗೂ ಗುರುವಾದ ಶ್ರೀಹರಿಯೇ ನಿನಗೆ ನಮಸ್ಕಾರವು (ನಾರಾಯಣಾಖಿಲಗುರೋ ಭಗವನ್ನಮಸ್ತೇ) ಎಂಬುದಾಗಿ ಪ್ರಯಾಸದಿಂದ ನುಡಿಯುತ್ತಾನೆ. ಆಗ ಉತ್ಪತ್ತಿ ರಹಿತನಾದ, ದೋಷರಹಿತನಾದ, ಶ್ರಿಹರಿಯು ಸೊಂಡಿಲಿನಲ್ಲಿ ಪುಷ್ಪವನ್ನು ಹಿಡಿದು ನಮಸ್ಕರಿಸಿದ ಗಜೇಂದ್ರನನ್ನು ನೋಡಿ ಕೂಡಲೇ ಗರುಡನಿಂದಿಳಿದು ಕರುಣೆಯಿಂದ ಮೊಸಳೆ ಹಾಗೂ ಆನೆಯನ್ನು ಸರೋವರದಿಂದ ಎತ್ತಿ, ದೇವತೆಗಳು ನೋಡುತ್ತಿರುವಂತೆಯೇ ಚಕ್ರದಿಂದ ಮೊಸಳೆಯ ಬಾಯಿಯನ್ನು ಸೀಳಿ ಗಜೇಂದ್ರನನ್ನು ಮುಕ್ತನನ್ನಾಗಿ ಮಾಡುತ್ತಾನೆ.

ಕಮನೀಯತರ ಗಾತ್ರನ ಅರುಣ
ಕಮಲಾಯತ ನೇತ್ರನ
ಕಮಲಾವ್ಯಯ ಪೂತ ಮುಖ ಚಾರುವಿಲಸಿತ
ಕುಮುದಾಸಿತ ಚರಣ ಕರುಣಾಕರನ ॥ ೨ ॥

೧೬. ಶ್ರೀಮದ್ ಭಾಗವತ ಅಷ್ಟಮ ಸ್ಕಂಧ (೩-೩೦), (೩-೩೧)

ಆ ಭಗವಂತನು ಮನೋಹರವಾದ ಶರೀರವುಳ್ಳವನು, ಕೆಂಪು ಕಮಲದಂತೆ – ವಿಶಾಲವಾದ ನೇತ್ರಗಳುಳ್ಳವನು, ನಾಶರಹಿತ, ಲಕ್ಷ್ಮೀದೇವಿಯರ ಜೊತೆಗಿದ್ದು ಪವಿತ್ರ ಮುಖದಿಂದ ಶೋಭಿಸುವವನು, ಮನೋಹರವಾಗಿ ಅರಳಿದ ಕಪ್ಪು ನೈದಿಲೆಯಂತೆ ಪಾದವುಳ್ಳವನು, ಭಕ್ತರಲ್ಲಿ ಕರುಣೆತೋರುವವನಾಗಿದ್ದಾನೆ, ಕರುಣಾ ಸಮುದ್ರನಾಗಿದ್ದಾನೆ.

ಕಮನೀಯತರ ಗಾತ್ರನ, ಶ್ರೀಹರಿಯು ಮನೋಹರವಾದ ಶರೀರವುಳ್ಳವನು–

ಶ್ರೀಮನ್ ಮಧ್ವಾಚಾರ್ಯರು ಶ್ರೀಹರಿಯನ್ನು ಕುರಿತು ಹೀಗೆ ಸ್ತೋತ್ರ ಮಾಡಿದ್ದಾರೆ.

ಸುಲಲಿತ ತನುವರ ವರದ ಮಹಾಬಲ
ಯದುವರ ಪಾರ್ಥಪ ಭವ ಮಮ ಶರಣಮ್ ॥[೧೭]

ಮನೋಹರವಾದ ಶರೀರವುಳ್ಳವನೇ! ಅಕ್ರೂರಾದಿಗಳಿಗೆ ವರವಿತ್ತವನೇ! ಮಹಾಬಲರೂಪನೇ! ಪಾಂಡವರನ್ನು ಪಾಲಿಪನೇ! ಯದುವಂಶದಲ್ಲಿ ಅವತರಿಸಿದವನೇ! ಶ್ರೀಕೃಷ್ಣ! ನೀನೇ ನನಗೆ ರಕ್ಷಕ.

ಅರುಣ ಕಮಲಾಯತ ನೇತ್ರನ –

ಶ್ರೀಹರಿಯು ಕೆಂದಾವರೆಯಂತೆ ವಿಶಾಲವಾದ ಕಣ್ಣುಳ್ಳವನಾಗಿದ್ದಾನೆ.

ಶ್ರೀ ಶುಕಾಚಾರ್ಯರು ಶ್ರೀಹರಿಯನ್ನು ಕುರಿತು ಸ್ತೋತ್ರ ಮಾಡಿರುವ ಪರಿ ಹೀಗಿದೆ –

ಉನ್ನಿದ್ರಪಂಕೇರುಹ ಚಾರುನೇತ್ರಂ ಪವಿತ್ರಪಾಣಿಂ ಶರಣಂ ಪ್ರಪದ್ಯೇ ॥[೧೮]

ಶ್ರೀಮಧ್ವಾಚಾರ್ಯರು ಶ್ರೀಹರಿಯನ್ನು ಕುರಿತು ಸ್ತೋತ್ರ ಮಾಡಿದ್ದಾರೆ –

ಆನಂದಮುಕುಂದ ಅರವಿಂದನಯನ ।
ಆನಂದತೀರ್ಥ ಪರಾನಂದವರದ ॥[೧೯]

ಕಮಲಾವ್ಯಯ ಪೂತಮುಖ –

೧೭. ದ್ವಾದಶ ಸ್ತೋತ್ರ (೯-೧೨)
೧೮. ಶ್ರೀ ಪದ್ಮಮಹಾಪುರಾಣ
೧೯. ದ್ವಾದಶ ಸ್ತೋತ್ರ (೧೨-೧)

ನಾಶರಹಿತ ಲಕ್ಷ್ಮೀದೇವಿಯರ ಜೊತೆಗಿದ್ದು ಪವಿತ್ರ ಮುಖದಿಂದ ಶೋಭಿಸುವವನು – ಶ್ರೀಹರಿ.

ಚಾರುವಿಲಸಿತ ಕುಮುದಾಸಿತ ಚರಣ –

ಆ ಶ್ರೀಹರಿಯು ಮನೋಹರವಾಗಿ ಅರಳಿದ ಕಪ್ಪುನೈದಿಲೆಯಂತೆ ಪಾದವುಳ್ಳವನಾಗಿದ್ದಾನೆ.

ಕರುಣಾಕರನ – ಎಲೆ ಮಾನವ ಸ್ಮರಿಸು –

ಕರುಣಾ ಸಮುದ್ರನಾದ ಶ್ರೀಹರಿಯನ್ನು ಮಾನವನೇ ಸ್ಮರಿಸು –

ದೇವಶರ್ಮ ಬ್ರಾಹ್ಮಣನು ಶ್ರೀವೆಂಕಟೇಶನನ್ನು ಕುರಿತು ಮಾಡಿದ ಸ್ತೋತ್ರ ಇಲ್ಲಿ ಗಮನಾರ್ಹ.

ದಯಾನಿಧೇ ದಯಾನಿಧೇ ದಯಾನಿಧೇ ದಯಾನಿಧೇ ।
ನಮೋ ನಮೋ ನಮೋ ನಮೋ ನಮೋ ನಮೋ ನಮೋ ನಮಃ ॥[೨೦]

ಶ್ರೀ ವೆಂಕಟೇಶನೇ! ನೀನು ಕರುಣಾನಿಧಿಯಾಗಿರುವಿ. ಪಾಪಿಗಳನ್ನು ನಾಶಪಡಿಸಿ ಅವರನ್ನು ಅಂಧಂತಮಸ್ಸಿಗೆ ಹಾಕುವ ದಯಾನಿಧಿಯಾಗಿರುವಿ. ಭಕ್ತರ ಆಗಾಮಿ, ಸಂಚಿತ ಪಾಪಗಳನ್ನು ನಾಶಮಾಡಿ ಮೋಕ್ಷವನ್ನು ಕೊಡುವ ದಯಾನಿಧಿಯಾಗಿರುವಿ. ಭಕ್ತರಿಗೆ ಅಭೀಷ್ಟಕೊಡುವ, ಭಕ್ತರನ್ನು ನಿನ್ನ ಪಾದಕ್ಕೆ ಸೇರಿಸಿಕೊಳ್ಳುವ ದಯಾನಿಧಿಯಾಗಿರುವಿ. ಇಂಥ ನಿನಗೆ ನಮಸ್ಕಾರವು ನಮಸ್ಕಾರವು.

ಇನ್ನೊಂದೆಡೆಗೆ ದೇವಶರ್ಮ ಬ್ರಾಹ್ಮಣನು ಹೀಗೆ ಸ್ತೋತ್ರ ಮಾಡಿದ್ದಾನೆ –

ಅನಂತ ವೇದಸಂವೇದ್ಯ ಲಕ್ಷ್ಮೀನಾಥಾಂಡ ಕಾರಣ ।
ಜ್ಞಾನಾನಂದೈಶ್ವರ್ಯ ಪೂರ್ಣ ನಮಸ್ತೇ ಕರುಣಾಕರ ॥[೨೧]

ಶ್ರೀಹರಿ! ನೀನು ಅನಂತವೇದ ಪ್ರತಿಪಾದ್ಯನು. ಲಕ್ಷ್ಮೀಪತಿಯಾಗಿರುವಿ, ಬ್ರಹ್ಮಾಂಡ ಕಾರಣನಾಗಿರುವಿ, ಜ್ಞಾನ, ಆನಂದ, ಐಶ್ವರ್ಯ ಪೂರ್ಣನಾಗಿರುವಿ, ಕರುಣಾಕರನಾಗಿರುವಿ ನಿನಗೆ ನಮಸ್ಕಾರವು.

ಇಂಥ ಶ್ರೀಹರಿಯನ್ನು ಎಲೆ ಮಾನವ ಸ್ಮರಿಸು ಎಂಬುದಾಗಿ ತಿಳಿಸುತ್ತಿದ್ದಾರೆ.

೨೦. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೧-೪೪)
೨೧. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೧)

ಅಗಣಿತಗುಣಗಣ್ಯನಾನಂತ ಆಗಮ
ನಿಗಮಾದಿ ಪೂರ್ಣನ
ಅಗಧರ ಮಹಿವರ - ಪ್ರಸನ್ನವೆಂಕಟವರ
ಅಗನಂದನಿಲಯ ಕಲಿಯಕೋಲಾಹಲನ ॥ ೩ ॥

ಆ ಶ್ರೀಹರಿಯು ಅನಂತ ಗುಣಗಳಿಂದ ಕೂಡಿದವನು, ಅನಂತ ವೇದಗಳಿಂದ ಪೂರ್ಣನೆಂದು ಪ್ರತಿಪಾದ್ಯನು. ಗೋವರ್ಧನ ಪರ್ವತವನ್ನು ಧರಿಸಿದವನು, ಈ ಭೂಮಿಯಲ್ಲಿ (ಪೃಥ್ವಿಯಲ್ಲಿ) ಶ್ರೇಷ್ಠ ಪ್ರಸನ್ನವೆಂಕಟ ಎಂಬ ನಾಮವುಳ್ಳವನು,

ಅಗಣಿತ ಗುಣಗಣ್ಯನ -

ಶ್ರೀಹರಿಯು ಅಗಣಿತ ಗುಣ ಎಂದರೆ ಅನಂತ ಗುಣಗಳಿಂದ ಕೂಡಿದವನಾಗಿದ್ದಾನೆ.

ಗುಣೈಃ ಸಮಂತಾತ್ ಶುಭದೈರನಂತೈಃ
ಪ್ರತ್ಯೇಕಶಃ ಕಿರಣಾನೀವ ಪೂಷ್ಣಃ ।
ವಿದಿಕ್ಷು ದಿಕ್ಷೂರ್ಧ್ವಮಧಶ್ಚ ವೇದಾಃ
ದೃಷ್ಟ್ವಾಗುಣಾನದ್ಭುತಾನಿತ್ಯವೋಚನ್ ॥[೨೨]

ಸೂರ್ಯನ ಕಿರಣಗಳು ಎಲ್ಲೆಡೆ ವ್ಯಾಪಿಸುವಂತೆ ಶ್ರೀಹರಿಯ ಶುಭಪ್ರದಗಳಾದ ಅನಂತ ಗುಣಗಳು ಒಂದೊಂದು ದಿಕ್ಕು ವಿದಿಕ್ಕು, ಎಲ್ಲೆಡೆ ವ್ಯಾಪಿಸಿವೆ. ಅಂತಹ ಅದ್ಭುತ ಗುಣಗಳನ್ನು ಕಂಡು ಬೆರಗಾಗಿ ವೇದಾಭಿಮಾನಿ ದೇವತೆಗಳು ಸಮಗ್ರವಾಗಿ ತಿಳಿಯಲು ಸಾಧ್ಯವಿಲ್ಲವೆಂದು ನುಡಿದರು.

ಇನ್ನೊಂದೆಡೆ ಹೀಗೆ ಬಣ್ಣಿಸಿರುವುದು ಕಂಡುಬರುತ್ತದೆ.

ಸರ್ವೇಷಾಂ ಪ್ರೇರಕಸ್ತ್ವಂ ಹಿ ಮುಕ್ತಾ ಮುಕ್ತನಿಯಾಮಕಃ ।
ಅಘಟ್ಯಘಟನೇ ಶಕ್ತೋ ಹ್ಯಗಣ್ಯಗುಣ ಮಂಡಿತಃ ॥[೨೩]

ಶ್ರೀಹರಿಯು ರಮಾಬ್ರಹ್ಮಾದಿ ಸಕಲರಿಗೂ ಪ್ರೇರಕನು. ಮುಕ್ತಾ ಮುಕ್ತ ಪ್ರಪಂಚಕ್ಕೆ ನಿಯಾಮಕನು. ಇತರರಿಂದ ಸಾಧ್ಯವಾಗದಿರುವುದನ್ನು ಸಾಧಿಸುವುದರಲ್ಲಿ ಸಮರ್ಥನು.

೨೨. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೧-೫೮)
೨೩. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೨-೭೪)

ಎಣಿಸಲು ಅಸಾಧ್ಯವಾದ ಗುಣಗಳಿಂದ ಭೂಷಿತನು. ಹೀಗೆ ಶ್ರುತಿ ಸ್ಮೃತಿಗಳಲ್ಲಿ ಪ್ರಸಿದ್ಧನಾಗಿದ್ದಾನೆ.

ಶ್ರೀಮದಾನಂದತೀರ್ಥಭಗವತ್ಪಾದರು ಭಗವಂತನ ಗುಣಗಳು ಅನಂತ ಎಂಬುದನ್ನು ತಿಳಿಸಿದ್ದಾರೆ.

ಏತೈಃ ಸುರಾದಿಭಿರತಿ ಪ್ರತಿಭಾತಿಯುಕ್ತೈಃ
ರ್ಯುಕ್ತೈಃ ಸಹೈವ ಸತತಂ ಪ್ರವಿಚಿಂತಯದ್ಭಿಃ ।
ಪೂರ್ತೇರಚಿಂತ್ಯಮಹಿಮಃ ಪರಮಃ ಪರಾತ್ಮಾ
ನಾರಾಯಣೋಽಸ್ಯ ಗುಣವಿಸ್ಮೃತಿರನ್ಯಗಾಕ್ಷ ॥[೨೪]

ಅತ್ಯಂತ ಪ್ರತಿಭಾಶಾಲಿಗಳಾದ ದೇವತೆಗಳು ಎಲ್ಲರೂ ಕೂಡಿ ಬಹುಪ್ರಯತ್ನ ಮಾಡಿ ಸತತವಾಗಿ ವಿಚಾರಮಾಡಿದರೂ ಶ್ರೀಹರಿಯ ಗುಣಗಳು ಅನಂತವಾದ್ದರಿಂದ ಅವನ ಮಹಿಮೆ ಪೂರ್ತಿಯಾಗಿ ವಿಚಾರಕ್ಕೆ ನಿಲುಕದು. ಎಂದಮೇಲೆ ಸರ್ವಸ್ವಾಮಿಯಾದ, ಸರ್ವೋತ್ತಮನಾದ ಅವನ ಗುಣಸಮೃದ್ಧಿ ಬೇರೆಯವರಲ್ಲಿ ಎಲ್ಲಿ ಇರಲು ಸಾಧ್ಯ? ಇಲ್ಲವೇ ಇಲ್ಲ.

ಶ್ರೀಮದ್ ಭಾಗವತದಲ್ಲಿ -

ನಾಂತಂ ಗುಣಾನಾಮಗುಣಸ್ಯ ಜಗ್ಮುರ್ಯೋಗೇಶ್ವರಾ
ಯೇ ಭವಪಾದ್ಮ ಮುಖ್ಯಾಃ ॥

- ಎಂಬುದಾಗಿ ತಿಳಿಸಿರುವುದು ಇಲ್ಲಿ ಗಮನಾರ್ಹವಾಗಿದೆ.

ಅನಂತ ಆಗಮ ನಿಗಮಾದಿ ಪೂರ್ಣನ ।

ಆ ಶ್ರೀಹರಿಯು ಅನಂತವೇದಗಳಿಂದ ಪೂರ್ಣನೆಂದು ಪ್ರತಿಪಾದ್ಯನು.

ಅನಂತವೇದಸಂವೇದ್ಯಂ ನಿರ್ದೋಷಂ ಗುಣಸಾಗರಮ್ ।
ಅತೀಂದ್ರಿಯಂ ನಿತ್ಯಮುಕ್ತಂ ಶ್ರೀನಿವಾಸಂ ಭಜೇಽನಿಶಮ್ ॥[೨೫]

ಶ್ರೀಹರಿಯು ಅನಂತ ವೇದಗಳಿಂದ ವಿಜ್ಞೇಯನು, ದೋಷದೂರನು, ಗುಣಸಾಗರನು, ಇಂದ್ರಿಯಗಳಿಗೆ ಅತೀತನು, ನಿತ್ಯಮುಕ್ತನು ಆದ ಶ್ರೀನಿವಾಸನನ್ನು ಯಾವಾಗಲೂ ಸೇವಿಸುತ್ತೇನೆ.

೨೪. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ (೧-೨೦)
೨೫. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೯)

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ ॥[೨೬]

ಅಗಧರ ಮಹಿವರ ಪ್ರಸನ್ವೆಂಕಟ -

ಪ್ರಸನ್ನವೆಂಕಟನೆಂಬ ಶ್ರೀಹರಿಯು ಕೃಷ್ಣಾವತಾರದಲ್ಲಿ ಗೋವರ್ಧನ ಪರ್ವತವನ್ನು ಧರಿಸಿದ್ದಾನೆ.

ಗೋವರ್ಧನೋದ್ಧರಂ ಬಾಲಂ ವಾಸುದೇವಂ ಯದೂತ್ತಮಮ್ ।
ದೇವಕೀತನಯಂ ಕೃಷ್ಣಂ ಶ್ರೀನಿವಾಸಂ ಭಜೇಽನಿಶಮ್ ॥[೨೭]

ಯದುಕುಲ ಲಲಾಮನಾಗಿ ವಸುದೇವ ದೇವಕಿಯರ ನಂದನನಾಗಿ ಅವತರಿಸಿ ಬಾಲಕನಾಗಿರುವಾಗ ಗೋವರ್ಧನ ಪರ್ವತವನ್ನು ಎತ್ತಿ ಧರಿಸಿದ ಶ್ರೀಕೃಷ್ಣರೂಪೀ ಶ್ರೀಹರಿಯನ್ನು ಯಾವಾಗಲೂ ಸೇವಿಸುತ್ತೇನೆ.

ಶ್ರೀವೆಂಕಟೇಶ ಸಹಸ್ರನಾಮಸ್ತೋತ್ರದಲ್ಲಿ - ಶ್ರೀಹರಿಯನ್ನು -

''**ಗೋವರ್ಧನಾದ್ರಿಸಂಧರ್ತಾ**'' ಎಂಬುದಾಗಿ ಸಂಬೋಧಿಸಿರುವುದನ್ನು ಕಾಣಬಹುದು.[೨೮]

ಇನ್ನು ಆ ಶ್ರೀಹರಿಯು ''ಅಗನಂದನಿಲಯ'' ನಾಗಿದ್ದಾನೆ. ಅಂದರೆ ''ವೆಂಕಟಾಚಲನಿಲಯ'' ನಾಗಿದ್ದಾನೆ.

ಆನಂದಜ್ಞಾನದಂ ವಿಷ್ಣುಂ ಆನಂದಮಯನಾಮಕಮ್ ।
ಆನಂದೇನ ದದರ್ಶಾಯಮಾನಂದನಿಲಯಾಲಯೇ ॥[೨೯]

ದೇವಶರ್ಮ ಬ್ರಾಹ್ಮಣನು ವೆಂಕಟಾದ್ರಿಯಲ್ಲಿ ಶ್ರೀವೆಂಕಟೇಶನನ್ನು ಕಾಣಲು ಆದರವುಳ್ಳವನಾಗಿ ಬಂದು ಆನಂದ, ಜ್ಞಾನವನ್ನು ಕೊಡುವ, ಆನಂದಮಯನೆಂಬ ಹೆಸರುಳ್ಳ, ಆ ಶ್ರೀಹರಿಯನ್ನು ''ಆನಂದನಿಲಯ''ದಲ್ಲಿ ಆನಂದದಿಂದ ನೋಡಿದನು.

---

೨೬. ಶ್ರುತಿ

೨೭. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೨೫)

೨೮. ಬ್ರಹ್ಮಾಂಡಪುರಾಣ

೨೯. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೧-೪೨)

''**ಕಲಿಯ ಕೋಲಾಹಲನ**'' ಎಂಬುದಾಗಿ ಶ್ರೀಹರಿಯನ್ನು ಸಂಬೋಧಿಸಿದ್ದಾರೆ ಶ್ರೀದಾಸರು. ಆ ಶ್ರೀಹರಿಯು ಕಲ್ಕಿ ಅವತಾರವನ್ನು ಮಾಡಿ ''ಕಲಿ''ಯನ್ನು ಸಂಹರಿಸುವನು.

ಕಲ್ಕಿನಂ ತುರಗಾರೂಢಂ ಕಲಿಕಲ್ಮಷನಾಶನಮ್ ।
ಕಲ್ಯಾಣದಂ ಕಲಿಘ್ನಂ ಚ ಶ್ರೀನಿವಾಸಂ ಭಜೇಽನಿಶಮ್ ॥[೩೦]

ಶ್ರೀಹರಿಯು ಅಶ್ವಾರೂಢನು, ಕಲಿಕಲ್ಮಷವನ್ನು ನಾಶಮಾಡುವವನು, ಮಂಗಲಪ್ರದನು, ಕಲಿಸಂಹಾರಕನು ಆಗಿದ್ದಾನೆ. ಇಂಥ ಶ್ರೀನಿವಾಸನನ್ನು ಸರ್ವದಾ ಸೇವಿಸುತ್ತೇನೆ.

ಕಲ ಹಿಂಸಾಯಾಂ ಧಾತುವಿನಿಂದ ''ಕಲ್ಕಿ'' ಶಬ್ದ ಉತ್ಪನ್ನವಾಗಿದೆ -

ಕಲ ಏವ ಕಲ್ಕಮ್, ಕಲ್ಕಂ ಅಸ್ಯ ಅಸ್ತೀತಿ ಕಲ್ಕೀ ॥

ಕಲಿನಾಮಕ ಅಸುರನನ್ನು ಕೊಂದವನಾದ್ದರಿಂದ ಶ್ರೀಹರಿಯು ಕಲ್ಕಿನಾಮಕನಾಗಿದ್ದಾನೆ. ಈ ವಿಷಯವನ್ನು ಮನಸ್ಸಿನಲ್ಲಿಟ್ಟು ಶ್ರೀಹರಿಯನ್ನು ''ಕಲಿಕೋಲಾಹಲನ'' ಎಂಬುದಾಗಿ ಸಂಬೋಧಿಸಿರುವುದು ಗಮನಾರ್ಹವಾಗಿದೆ.

⁂

---

೩೦. ಆದಿತ್ಯಪುರಾಣ ವೆಂಕಟೇಶ ಮಹಾತ್ಮೆ (೩-೩೩)

೧೩. ಹರಿಯೆನ್ನಬಾರದೇ ಜಿಹ್ವೆವಾರಂ ವಾರಂ

ಹರಿಯೆನ್ನಬಾರದೆ ಜಿಹ್ವೆ ವಾರಂ ವಾರಂ ॥ ಪ ॥

ಪರಗತಿಮಾರ್ಗವು ದುರಿತವನಾಗ್ನಿಯು
ಪರಿ ಪರಿ ಭವರೋಗಕೌಷಧ ॥ ಅ. ಪ ॥

ಉರಿವ ಕಾಳಕೂಟ ಕಂಠದಿ ದಹಿಸಲು
ಹರಿನಾಮ ಹರನ ಕಾಯ್ತು
ಕರಿ ಉರಗ ವಿಷಾಗ್ನಿ ಶಸ್ತ್ರ ಭಯದಲಿ
ಹರಿನಾಮ ಶಿಶುವಕಾಯ್ತು
ಶರಧಿಲಿ ನಕ್ಕರ ಚರಣವ ಕಚ್ಚಿಬರೆ
ಹರಿನಾಮ ಕರಿಯ ಕಾಯ್ತು
ನಿರಯ ನಿವಾಸರ ಸುರಋಷಿ ಮುಖದಿಂದ
ಹರಿನಾಮ ಎಲ್ಲರ ಕಾಯ್ತು ॥ ೧ ॥

ಹಿರಿಯರ ನಿಕ್ಕರ ನುಡಿಯಿಂದಡವಿಲಿರೆ
ಹರಿನಾಮ ಧ್ರುವನ ಕಾಯ್ತು
ಕುರುಕಂಟಕರು ಅಭಿಮಾನವ ಕೊಳುತಿರೆ
ಹರಿನಾಮ ಸತಿಯ ಕಾಯ್ತು
ಮರಳೊಮ್ಮೆ ದುರ್ವಾಸ ದ್ರೌಪದಿಗುಣಬೇಡೆ
ಹರಿನಾಮ ಇರುಳೆ ಕಾಯ್ತು
ಗುರುಪುತ್ರನುರಿಬಾಣದುರವಣಿಗಡ್ಡಾಂತು
ಹರಿನಾಮ ಭ್ರೂಣವಕಾಯ್ತು ॥ ೨ ॥

ವರಬಲದಿಂದಲ್ಲಿ ಅಸುರರು ನೋಯಿಸಲು
ಹರಿನಾಮ ಸುರರ ಕಾಯ್ತು
ಚಿರಪಾಪ ಭವಯಾತ್ರೆ ಘಟಿಸಲು ತುದಿಯಲಿ
ಹರಿನಾಮ ಭಟರ ಕಾಯ್ತು
ಶರಣರ ಮಹಿಮೆಯಂತಿರಲಿ ಅಪಮರಣದಿ
ಹರಿನಾಮ ನನ್ನ ಕಾಯ್ತು
ಗುರುಮಧ್ವವರದ ಪ್ರಸನ್ನ ವೆಂಕಟೇಶ ಶ್ರೀ
ಹರಿನಾಮ ಗತಿ ಎನ್ನ ಕಾಯ್ತು ॥ ೩ ॥

ಪ್ರಸ್ತುತ ಪದ್ಯದಲ್ಲಿ ಶ್ರೀ ಪ್ರಸನ್ನವೆಂಕಟದಾಸರು ನಮ್ಮ ನಾಲಿಗೆ ಮತ್ತೆ ಮತ್ತೆ ಶ್ರೀಹರಿ ಎನ್ನುತ್ತಿರಬೇಕು. ಆ ಶ್ರೀಹರಿಯನಾಮ ನಮ್ಮ ಪಾಪರಾಶಿಗೆ ಅಗ್ನಿಯಂತೆ ಇದೆ ಅಷ್ಟೇ ಅಲ್ಲ ಈ ಸಂಸಾರವೆಂಬ ರೋಗಕ್ಕೆ ಔಷಧಿಯೂ ಆಗಿದೆ. ಆ ಶ್ರೀಹರಿಯನಾಮ ಅನೇಕ ಭಕ್ತರನ್ನು ಕಾಪಾಡಿದ ವಿಷಯವನ್ನು ಸೋದಾಹರಣ ಪೂರ್ವಕವಾಗಿ ತಿಳಿಸಿಕೊಟ್ಟಿದ್ದಾರೆ.

ಹರಿಯೆನ್ನಬಾರದೆ ಜಿಹ್ವೆ ವಾರಂ ವಾರಂ ॥ ಪ ॥

ಪರಗತಿ ಮಾರ್ಗವು ದುರಿತವನಾಗ್ನಿಯು
ಪರಿಪರಿ ಭವರೋಗಕೌಷಧ ॥ ಅ. ಪ ॥

ಇಲ್ಲಿ ಮೊದಲು ನಮ್ಮ ನಾಲಿಗೆ ಮತ್ತೆ ಮತ್ತೆ ''ಹರಿ''ಯೆನ್ನುತ್ತಿರಬೇಕು ಎನ್ನುತ್ತಾರೆ. ಇದಕ್ಕೆ ಕಾರಣ ಹೀಗಿದೆ –

''ಸಾ ಜಿಹ್ವಾ ಯಾ ಹರಿಂ ಸ್ತೌತಿ'' ಉಕ್ತಿಯಂತೆ ಆ ಭಗವಂತನ ಸ್ತೋತ್ರ ಮಾಡುವ, ನಾಮಗಳನ್ನು ಸ್ಮರಣೆ ಮಾಡುವ ನಾಲಿಗೆಯೇ ನಿಜಕ್ಕೂ ಶ್ಲಾಘನೀಯವಾದುದು.

ಹೇ ಜಿಹ್ವೇ ರಸಸಾರಜ್ಞೇ ಸರ್ವದಾ ಮಧುರಪ್ರಿಯೇ ।
ನಾರಾಯಣಾಖ್ಯ ಪೀಯೂಷಂ ಪಿಬ ತೃಪ್ತ್ಯೈ ನಿರಂತರಮ್ ॥[೧]

ರಸಸಾರವನ್ನು ತಿಳಿಯುವ ಹೇ ನಾಲಿಗೆಯೇ, ಯಾವಾಗಲೂ ಮಧುರಪ್ರಿಯವಾದ ನೀನು ನಾರಾಯಣಾಭಿನ್ನನಾದ ಶ್ರೀಹರಿಯೆಂಬ ಅಮೃತವನ್ನು ನಿರಂತರ ತೃಪ್ತಿಗೋಸ್ಕರವಾಗಿ ಸೇವಿಸುತ್ತಿರು.

ಹರಿಃ ಸ್ಮೃತಿಃ ಸರ್ವವಿಪದ್ವಿಮೋಕ್ಷಿಣೀ ॥[೨]

ಶ್ರೀ ಹರಿಸ್ಮರಣೆಯು ನಮ್ಮನ್ನು ಎಲ್ಲ ವಿಪತ್ತುಗಳಿಂದ ಪಾರು ಮಾಡುತ್ತದೆ.

ಶ್ರೀಹರಿಯನ್ನು ಮತ್ತೆ ಮತ್ತೆ ನೆನೆಸುವುದೇಕೆ? ಉತ್ತರ ಇಲ್ಲಿದೆ –

ಪ್ರಾಣ ಪ್ರಯಾಣ ಪಾಥೇಯಂ ಸಂಸಾರ ವ್ಯಾಧಿ ಭೇಷಜಮ್ ।
ದುಃಖಶೋಕ ಪರಿತ್ರಾಣಂ ''ಹರಿ'' ರಿತ್ಯಕ್ಷರದ್ವಯಮ್ ॥[೩]

---

೧. ಶ್ರೀ ಪಾಂಡವಗೀತಾ - ೭೦ನೆಯ ಶ್ಲೋಕ
೨. ಶ್ರೀಮದ್ ಭಾಗವತ (೮-೧೦-೫೫)
೩. ಶ್ರೀಮನ್ ಮಹಾಭಾರತ ಶಾಂತಿಪರ್ವ

''ಹರಿ''ಯೆಂಬ ಎರಡು ಅಕ್ಷರಗಳು ಪ್ರಾಣಹೋಗುವ ಸಮಯದಲ್ಲಿ ದಾರಿಬುತ್ತಿಯಂತೆ ಇವೆ. ಸಂಸಾರವೆಂಬ ರೋಗಕ್ಕೆ ಔಷಧಿ ಇದ್ದಂತೆ ಅಷ್ಟೇ ಅಲ್ಲ ದುಃಖ ಶೋಕಾದಿಗಳನ್ನು ದೂರೀಕರಿಸಿ ರಕ್ಷಣೆ ನೀಡುತ್ತವೆ.

ಶ್ರೀಮದಾನಂದತೀರ್ಥ ಭಗವತ್ಪಾದರು ತಮ್ಮ ಗ್ರಂಥದಲ್ಲಿ ಹೀಗೆ ತಿಳಿಸಿಕೊಟ್ಟಿದ್ದಾರೆ.

ಸಕೃದುಚ್ಚಾರಿತಂ ಯೇನ ಹರಿರಿತ್ಯಕ್ಷರದ್ವಯಮ್ ।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥[೪]

ಯಾವನು ಎರಡು ಅಕ್ಷರಗಳಿಂದ ಕೂಡಿದ ''ಹರಿ'' ಎಂಬ ನಾಮವನ್ನು ಒಮ್ಮೆ ಭಕ್ತಿ ಪೂರ್ವಕವಾಗಿ ಉಚ್ಚರಿಸುವನೋ, ಅವನು ಪ್ರಯಾಣ ಮಾಡುವವರ ಮಾರ್ಗ ಸಾಧನಗಳಂತೆ ಮೋಕ್ಷ ಮಾರ್ಗದ ಸಾಧನವನ್ನು ಹೊಂದುತ್ತಾನೆ.

ಇನ್ನು ಶ್ರೀಹರಿಯು ಎಲ್ಲ ಜೀವರಾಶಿಗಳಿಗೆ ಅನಿಮಿತ್ತ ಬಂಧುವಾಗಿದ್ದಾನೆ. ಅವನು ಎಲ್ಲ ದೇಶಕಾಲಗಳಲ್ಲಿಯೂ ತನ್ನ ಭಕ್ತರಿಗೆ ರಕ್ಷಣೆ ನೀಡುತ್ತಾನೆ.

ಶ್ರೀ ಜಗನ್ನಾಥದಾಸರು ತಮ್ಮ ಮೇರುಕೃತಿ ಶ್ರೀಹರಿಕಥಾಮೃತಸಾರದಲ್ಲಿ ಹೀಗೆ ತಿಳಿಸಿದ್ದಾರೆ.

ಕಣ್ಣಿಗೆವೆಯಂದದಲಿ ಕೈಮೈ-
ತಿಣ್ಣಿಗೊದಗುವ ತೆರದಿ ಪಲ್ಗಳು
ಪಣ್ಣುಫಲಗಳ ನಗಿದು ಜಿಹ್ವೆಗೆ ರಸವನೀವಂತೆ ।
ಪುಣ್ಯಫಲವೀವಂದದಲಿ ನುಡಿ
ವೆಣ್ಣೆನಾಣ್ಕಾಂಡದೊಳು ಲಕ್ಷ್ಮಣ
ನಣ್ಣನೊದಗುವ ಭಕ್ತರವಸರಕಮರ ಗಣಸಹಿತ ॥ (೨-೨೭)

ಸ್ವಪ್ರಯೋಜನ ರಹಿತನಾದ ಶ್ರೀಹರಿಯು ಭಕ್ತರನ್ನು ಎಲ್ಲ ಪ್ರಸಂಗಗಳಲ್ಲಿ ರಕ್ಷಿಸುತ್ತಾನೆಂಬ ವಿಷಯದಲ್ಲಿ ಸಂದೇಹವಿಲ್ಲ.

ಈ ಕಾರಣದಿಂದ ಶ್ರೀ ಪ್ರಸನ್ನವೆಂಕಟದಾಸರು ''ಹರಿಯೆನ್ನಬಾರದೆ ಜಿಹ್ವೆ ವಾರಂ ವಾರಂ'' ಎಂದಿರುವುದು ಸಮಂಜಸವಾಗಿದೆ.

''ಹರಿಯೆನ್ನಬಾರದೆ'' ಎಂದಿದ್ದಾರೆ ಶ್ರೀ ದಾಸರು. ''ಶ್ರೀಹರಿ'' ನಾಮದ ವೈಶಿಷ್ಟ್ಯ ಹೀಗಿದೆ –

೪. ಶ್ರೀ ಕೃಷ್ಣಾಮೃತ ಮಹಾರ್ಣವ - ೨೦೨ನೆ ಶ್ಲೋಕ

೧. **ಹರತಿ ಆಹರತಿ ಸ್ವಸ್ಮಿನ್ ಸರ್ವಗುಣಾನ್ ಇತಿ ಹರಿಃ ।**
ಭಗವಂತನು ಸರ್ವಗುಣಗಳಿಂದ ಪರಿಪೂರ್ಣನಾದ್ದರಿಂದ ಅವನು ''ಹರಿ'' ಶಬ್ದವಾಚ್ಯನು.

೨. **ಸ್ವಸ್ಮರಣಾದೇವ ಭಕ್ತಾನಾಂ ಅನೇಕ ಜನ್ಮಾರ್ಜಿತಂ ಪಾಪಸಂಚಯಂ ಅಪಹರತಿ ಇತಿ ಹರಿಃ ।**
ಭಗವಂತನು ತನ್ನ ಸ್ಮರಣೆ ಮಾಡುವ ಭಕ್ತರ ಅನೇಕ ಜನ್ಮಗಳ ಪಾಪರಾಶಿಯನ್ನು ನಾಶಮಾಡುವುದರಿಂದ ಅವನು ''ಹರಿ'' ಶಬ್ದವಾಚ್ಯನು.

೩. **ಅಖಿಲ ದೋಷಹಾನಾತ್ ಭಗವತಃ ''ಹ'' ಶಬ್ದವಾಚ್ಯತ್ವಂ ।**
ರಮಣರೂಪತ್ವಾತ್ ರಿಃ ಹಶ್ಚಾಸೌ ರಿಶ್ಚ ಹರಿಃ ॥
ಭಗವಂತ ದೋಷದೂರ, ಆನಂದಸ್ವರೂಪಿಯಾದ್ದರಿಂದ ಅವನು ''ಹರಿ'' ಶಬ್ದವಾಚ್ಯನು.

೪. **ಚಿತ್ತಸ್ಥಃ ಸನ್ ಕಲಿಕೃತಾನ್ ಸರ್ವಾನ್ ದೋಷಾನ್ ಪರಿಹರತೀತಿ ಹರಿಃ ।**
ಭಗವಂತ ಸಕಲ ಸಜ್ಜನರ ಮನಸ್ಸಿನಲ್ಲಿದ್ದು ಕಲಿಕೃತ ಎಲ್ಲ ದೋಷಗಳನ್ನು ಪರಿಹರಿಸುವುದರಿಂದ ಅವನು ''ಹರಿ'' ಶಬ್ದವಾಚ್ಯನು.

ಅಂತೆಯೇ ''ಕಲಿಸಂತರಣೋಪನಿಷತ್''ನಲ್ಲಿ ಹರಿಸ್ಮರಣೆ ಮಾಡಬೇಕೆಂಬುದಾಗಿ ತಿಳಿಸಿದ್ದಾರೆ.

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥

೫. **ಸರ್ವಯಜ್ಞ ಭಾಗಹಾರಿತ್ವಾತ್ ಹರಿಃ ।**
ಭಗವಂತ ಎಲ್ಲ ಯಜ್ಞಗಳ ಸಾರಭಾಗವನ್ನು ಸ್ವೀಕರಿಸುವುದರಿಂದ ಅವನು ಹರಿಶಬ್ದವಾಚ್ಯನು.

ಭಜ ಸರ್ವಾತ್ಮನಾ ಹರಿಂ ॥[೫] ಉಕ್ತಿಯು ಯಾವಾಗಲೂ ಶ್ರೀಹರಿಯ ನಾಮವನ್ನು ಸೇವಿಸುತ್ತಿರಬೇಕು ಎಂಬುದಾಗಿ ತಿಳಿಸುತ್ತದೆ.

೫. ಶ್ರೀಮದ್ ಭಾಗವತ (೪-೨೯-೭೯)

ಇನ್ನು ''ಹರಿ''ನಾಮವು ಪರಗತಿ ಎಂದರೆ ಮೋಕ್ಷಮಾರ್ಗವು, ಪಾಪವೆಂಬ ವನಕ್ಕೆ ಅಗ್ನಿಯಂತೆ ಇದೆ ಅಷ್ಟೇ ಅಲ್ಲ ಪರಿಪರಿಯಾದ ಸಂಸಾರರೋಗಕ್ಕೆ ಔಷಧವೆನಿಸಿದೆ ಎಂಬುದಾಗಿ ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಶ್ರೀಹರಿಯನಾಮವನ್ನು ಯಾರು ಮತ್ತೆ ಮತ್ತೆ ನೆನೆಸುವರೋ ಅವರು ಮೋಕ್ಷಮಾರ್ಗವನ್ನು ಹೊಂದುತ್ತಾರೆ.

ಯಂ ಧರ್ಮಕಾಮಾರ್ಥ ವಿಮುಕ್ತಿಕಾಮಾ
ಭಜಂತ ಇಷ್ಟಾಂ ಗತಿಮಾಪ್ನುವಂತಿ ॥[೬]

ಯಾರು ಭಗವಂತನನ್ನು ಭಕ್ತಿಭಾವದಿಂದ ನೆನೆಸುವರೋ ಅವರು ತಮಗೆ ಇಷ್ಟವಾದ ಗತಿಯನ್ನು ಅಂದರೆ ಮೋಕ್ಷವನ್ನು ಹೊಂದುತ್ತಾರೆ.

ಶ್ರೀಹರಿಯನಾಮವು ಪಾಪವೆಂಬ ವನಕ್ಕೆ ಅಗ್ನಿಯಂತೆ ಇದೆ -

ಗೋವಿಂದ ಸ್ಮರಣಂ ಪುಂಸಾಂ ಪಾಪರಾಶಿ ಮಹಾಚಲಂ ।
ಅಸಂಶಯಂ ದಹತ್ಯಾಶು ತೂಲರಾಶಿಮಿವಾನಲಃ ॥[೭]

ಗೋವಿಂದನಿಂದ ಅಭಿನ್ನನಾದ ಶ್ರೀಹರಿಯ ಸ್ಮರಣೆಯು ಮಾನವನ ಪಾಪರಾಶಿಯೆಂಬ ಮಹಾಪರ್ವತವನ್ನು ಅಗ್ನಿಯು ಅರಳಿಯ ರಾಶಿಯನ್ನು ಸುಟ್ಟು ಹಾಕುವಂತೆ ನಿಸ್ಸಂಶಯವಾಗಿ ಶೀಘ್ರವಾಗಿ ಸುಟ್ಟು ಹಾಕುತ್ತದೆ.

ಶ್ರೀಮದಾನಂದತೀರ್ಥ ಭಗವತ್ಪಾದರು -
ಸರ್ವಪಾಪಾನಿಯತ್ ಸಂಸ್ಮೃತೇಸ್ಸಂಕ್ಷಯಮ್ ॥[೮]

ಎಂಬುದಾಗಿ (ದ್ವಾದಶಸ್ತೋತ್ರ) ತಿಳಿಸುತ್ತ ಶ್ರೀಹರಿಯ ಸ್ಮರಣೆಯು ಎಲ್ಲ ಪಾಪಗಳನ್ನು ನಾಶ ಪಡಿಸುತ್ತದೆಂಬುದಾಗಿ ತಿಳಿಸಿರುವುದು ಗಮನಾರ್ಹ.

ಶ್ರೀಹರಿನಾಮವು ಸಂಸಾರರೋಗಕ್ಕೆ ಔಷಧವೆನಿಸಿದೆ. ಘಟೋತ್ಕಚನು ಶ್ರೀಹರಿಯನ್ನು ಕುರಿತು ಮಾಡಿದ ಸ್ತೋತ್ರ ಇಲ್ಲಿ ಗಮನಾರ್ಹವಾಗಿದೆ.

ಶ್ರೀಮನ್ನೃಸಿಂಹ ವಿಭವೇ ಗರುಡಧ್ವಜಾಯ
ತಾಪತ್ರಯೋಪಶಮನಾಯ ಭವೌಷಧಾಯ ।

೬. ಶ್ರೀಮದ್ ಭಾಗವತ (೮-೩-೧೭)
೭. ಶ್ರೀ ಕೃಷ್ಣಾಮೃತ ಮಹಾರ್ಣವ - ೪೪ನೆಯ ಶ್ಲೋಕ
೮. ಶ್ರೀ ದ್ವಾದಶಸ್ತೋತ್ರ (೮-೧೦)

ಕೃಷ್ಣಾಯ ವೃಶ್ಚಿಕ ಜಲಾಗ್ನಿಭುಜಂಗ ರೋಗ
ಕ್ಲೇಶವ್ಯಯಾಯ ಹರಯೇ ಗುರವೇ ನಮಸ್ತೇ ॥[೯]

ಶ್ರೀನರಸಿಂಹಾವತಾರವನ್ನು ಮಾಡಿ, ಹಿರಣ್ಯಕಶಿಪುವನ್ನು ಸಂಹಾರ ಮಾಡಿ ಭಕ್ತ ಪ್ರಹ್ಲಾದನನ್ನು ಉದ್ಧಾರಮಾಡಿದ, ಗರುಡಧ್ವಜನಾದ, ಆಧ್ಯಾತ್ಮಿಕ, ಆಧಿದೈವಿಕ, ಆಧಿ ಭೌತಿಕಗಳೆಂಬ ಮೂರು ಬಗೆಯ ತಾಪಗಳನ್ನು ನಿವಾರಣೆ ಮಾಡತಕ್ಕ, ಸಂಸಾರವೆಂಬ ರೋಗಕ್ಕೆ ಔಷಧಿಯಂತೆ ಇರುವ, ವಿಷಸರ್ಪಗಳ ಬಾಧೆ ನಿವಾರಕನಾದ, ಸದ್ಗುರುವಾಗಿ ಜ್ಞಾನವನ್ನು ನೀಡುವ ಶ್ರೀಹರಿಯೇ ನಿನಗೆ ನನ್ನ ನಮಸ್ಕಾರಗಳು.

ಹರಿನಾಮ ಔಷಧಂ ಪೀತ್ವಾ ವ್ಯಾಧಿಃ ತ್ಯಾಜ್ಯಾ ನ ಸಂಶಯಃ ॥[೧೦]

ಉಕ್ತಿಯಂತೆ ಶ್ರೀಹರಿನಾಮವೆಂಬ ಔಷಧವನ್ನು ಕುಡಿದ ಮೇಲೆ ಎಲ್ಲರೋಗಗಳು ನಿವಾರಣೆಯಾಗುವುದರಲ್ಲಿ ಸಂದೇಹವಿಲ್ಲ.

ಉರಿವ ಕಾಳಕೂಟ ಕಂಠದಿ ದಹಿಸಲು
ಹರಿನಾಮ ಹರನ ಕಾಯ್ತು
ಕರಿ ಉರಗ ವಿಷಾಗ್ನಿ ಶಸ್ತ್ರಭಯದಲಿ
ಹರಿನಾಮ ಶಿಶುವ ಕಾಯ್ತು
ಶರಧಿಲಿ ನಕ್ಕರ ಚರಣವಕಚ್ಚಿ ಬರೆ
ಹರಿನಾಮ ಕರಿಯಕಾಯ್ತು
ನಿರಯ ನಿವಾಸರ ಸುರಋಷಿ ಮುಖದಿಂದ
ಹರಿನಾಮ ಎಲ್ಲರ ಕಾಯ್ತು ॥ ೧ ॥

ರುದ್ರದೇವರು ಕಾಲಕೂಟ ವಿಷವನ್ನು ಕುಡಿಯಲು ಅದು ಸುಡುತ್ತ ಅವರ ಕಂಠವನ್ನು ದಹಿಸುತ್ತಿರಲು ಆಗ ಶ್ರೀಹರಿಯ ನಾಮೋಚ್ಚಾರಣೆ ಅವರನ್ನು ರಕ್ಷಿಸಿತು. ಹಿರಣ್ಯಕಶಿಪುವು ಮಗನಾದ ಪ್ರಹ್ಲಾದನಿಗೆ ಅನೆಕಾಲಿಂದ ತುಳಿಸುವದು, ಸರ್ಪಗಳಿಂದ ಕಚ್ಚಿಸುವದು, ವಿಷಪಾನ ಮಾಡಿಸುವುದು, ಅಗ್ನಿಯಲ್ಲಿ ಹಾಕುವದು, ಶಸ್ತ್ರಗಳಿಂದ ಭಯಪಡಿಸುವುದು ಮೊದಲಾದ ಶಿಕ್ಷೆಗಳನ್ನು ನೀಡಿದರೂ, ಪ್ರಹ್ಲಾದನು ಶ್ರೀಹರಿಯನಾಮ ಉಚ್ಚರಿಸುತ್ತ ಎಲ್ಲ ಭಯಗಳಿಂದ ರಕ್ಷಣೆ ಹೊಂದಿದನು. ಸರೋವರದಲ್ಲಿ ನೀರು ಕುಡಿಯಲು ಹೋದ ಗಜೇಂದ್ರನು ಮೊಸಳೆಯ ಬಾಯಿಗೆ ಸಿಕ್ಕಿದಾಗ, ಗಜೇಂದ್ರನು ಭಗವಂತನ ನಾಮವನ್ನು ಸ್ಮರಿಸಲು ಆ ಹರಿನಾಮ

೯. ಶ್ರೀ ಪಾಂಡವಗೀತಾ ೩೯ನೆಯ ಶ್ಲೋಕ
೧೦. ವಿಷ್ಣುಧರ್ಮೋತ್ತರಪುರಾಣ

ಗಜೇಂದ್ರನನ್ನು ರಕ್ಷಿಸಿತು. ನರಕವಾಸಿಗಳಾದ ಎಲ್ಲ ಜನರು ದೇವಋಷಿಗಳಾದ ಶ್ರೀ ನಾರದರ ಹರಿನಾಮ ಉಚ್ಚಾರಣೆಯನ್ನು ಕೇಳುತ್ತಲೇ ಅವರು ನರಕದಿಂದ ಪಾರಾಗಿ ಸದ್ಗತಿ ಭಾಗಿಗಳಾದ ವಿಷಯವನ್ನು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಉರಿವ ಕಾಳಕೂಟ ಕಂಠದಿ ದಹಿಸಲು
ಹರಿನಾಮ ಹರನ ಕಾಯ್ತು ॥

ಹಿಂದೆ ದೇವಾಸುರರು ಅಮೃತಕ್ಕಾಗಿ ಸಮುದ್ರಮಥನವನ್ನು ಮಾಡಿದರು. ಆಗ ಪ್ರಾರಂಭದಲ್ಲಿ ಉರಿಯುವ ಕಾಳಕೂಟ ವಿಷವು ಬಂದಿತು. ಅದನ್ನು ವಾಯುದೇವರು ತಾವು ಕುಡಿದು ಉಳಿದ ಸ್ವಲ್ಪ ವಿಷವನ್ನು ತಿಕ್ಕಿ ಅದನ್ನು ನಿರ್ವೀರ್ಯ ಮಾಡಿ ರುದ್ರದೇವರಿಗೆ ಕೊಟ್ಟರು. ರುದ್ರದೇವರು ಅದನ್ನು ಕುಡಿದು ನೀಲಕಂಠರಾದರು. ಆ ವಿಷದ ಭಾದೆಯನ್ನು ತಾಳಲಾರದೇ ಅವರು ಶ್ರೀಹರಿಯ ನಾಮವನ್ನು ಪಠಿಸಿದರು.

ರುದ್ರದೇವರು ಶ್ರೀಹರಿಯ ''ಅಚ್ಯುತಾನಂತಗೋವಿಂದ'' ಎಂಬ ನಾಮಗಳನ್ನು ಪಠಿಸಿ ಆಪತ್ತಿನಿಂದ ಪಾರಾದ ವಿಷಯವು ಶ್ರೀ ಪದ್ಮಮಹಾಪುರಾಣದಲ್ಲಿ ಉಕ್ತವಾಗಿದೆ.

ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೇಷಜಾತ್ ।
ನಶ್ಯಂತಿ ಸಕಲಾ ರೋಗಾಃ ಸತ್ಯಂ ಸತ್ಯಂ ವದಾಮ್ಯಹಮ್ ॥

ಶ್ರೀಹರಿಯ ನಾಮವೆಂಬ ಔಷಧವನ್ನು ಕುಡಿದ ಮೇಲೆ ಎಲ್ಲ ರೋಗಗಳು ನಾಶವಾಗುತ್ತವೆ. ನಿಶ್ಚಿತ ಇದು ಸತ್ಯ ಸತ್ಯ.

ಕರಿ ಉರಗ ವಿಷಾಗ್ನಿ ಶಸ್ತ್ರಭಯದಲಿ
ಹರಿನಾಮ ಶಿಶುವಕಾಯ್ತು ।

ಹಿಂದೆ ಹಿರಣ್ಯಕಶಿಪುವು ಮಗನಾದ ಪ್ರಹ್ಲಾದನಿಗೆ ಆನೆಕಾಲಿನಿಂದ ತುಳಿಸುವದು, ಸರ್ಪಗಳಿಂದ ಕಚ್ಚಿಸುವುದು, ವಿಷಪಾನ ಮಾಡಿಸುವುದು, ಅಗ್ನಿಯಲ್ಲಿ ಹಾಕುವದು, ಶಸ್ತ್ರಗಳಿಂದ ಭಯಪಡಿಸುವದು, ಮೊದಲಾದ ಶಿಕ್ಷೆಗಳನ್ನು ನೀಡಿದರೂ ಪ್ರಹ್ಲಾದನು ಶ್ರೀಹರಿಯ ನಾಮವನ್ನು ಸ್ಮರಿಸುತ್ತ ಉಚ್ಚರಿಸುತ್ತ ಎಲ್ಲ ಭಯಗಳಿಂದ ರಕ್ಷಣೆ ಹೊಂದಿದನು.

ಈ ಪ್ರಸಂಗವು ಶ್ರೀಮದ್‌ಭಾಗವತ ಸಪ್ತಮಸ್ಕಂಧದಲ್ಲಿ ಉಕ್ತವಾಗಿದೆ.

ಪರೇ ಬ್ರಹ್ಮಣ್ಯನಿರ್ದೇಶ್ಯೇ ಭಗವತ್ಯಖಿಲಾತ್ಮನೀ ।
ಯುಕ್ತಾತ್ಮನ್ಯಫಲಾ ಆಸನ್ನಪುಣ್ಯಸ್ಯೈವ ಸತ್ಕ್ರಿಯಾಃ ॥ (೭-೫-೪೧)

ಮನಸ್ಸಿಗೆ, ಮಾತಿಗೆ ನಿಲುಕದ ಸರ್ವೇಶ್ವರ ಪರಬ್ರಹ್ಮನೆನಿಸಿದ ಭಗವಂತನಲ್ಲಿಯೆ. ಮನಸ್ಸನ್ನು ನೆಟ್ಟಿದ್ದ ಪ್ರಹ್ಲಾದನಲ್ಲಿ ರಾಕ್ಷಸರ ಆಯುಧಗಳು ವ್ಯರ್ಥವಾದವು - ಆ ಶ್ರೀಹರಿನಾಮ ಪ್ರಹ್ಲಾದನನ್ನು ರಕ್ಷಿಸಿತು.

ಶರಧಿಲಿ ನಕ್ಕರ ಚರಣವ ಕಚ್ಚಿಬರೆ
ಹರಿನಾಮ ಕರಿಯ ಕಾಯ್ತು ।

ಬಿಸಿಲಿನ ತಾಪದಿಂದ ಬಳಲಿದ ಗಜೇಂದ್ರನು ನೀರು ಕುಡಿಯಲೆಂದು ಸರೋವರಕ್ಕೆ ಬಂದು ನೀರು ಕುಡಿದು ಮೇಲೆ ಬರುವಷ್ಟರಲ್ಲಿ ಮೊಸಳೆಯೊಂದು ಆನೆಯ ಕಾಲನ್ನು ಹಿಡಿದು ಬಿಡುತ್ತದೆ. ಆಗ ಆನೆಯು ''ನಾರಾಯಣಾಖಿಲಗುರೋ ಭಗವನ್ನಮಸ್ತೇ'' ಎಂಬುದಾಗಿ ಶ್ರೀಹರಿಯನಾಮವನ್ನು ಹೇಳುತ್ತ ಸ್ತುತಿಸಲು ಭಗವಂತ ಬಂದು ಮೊಸಳೆಯ ಬಾಯನ್ನು ಕತ್ತರಿಸಿ ರಕ್ಷಣೆ ನೀಡಿದನು.

ಹಿಂದೆ ತಾಪಸಮನ್ವಂತರದಲ್ಲಿ ಶ್ರೀಹರಿಯು ಗಜೇಂದ್ರನನ್ನು ಮೊಸಳೆಯ ಬಾಯಿಂದ ರಕ್ಷಿಸಿದ ವಿಷಯವು ಶ್ರೀಮದ್ ಭಾಗವತದಲ್ಲಿ ಉಕ್ತವಾಗಿದೆ.

ಸೋಽಂತಃ ಸರಸ್ಯುರುಬಲೇನ ಗೃಹೀತ ಆರ್ತೋ
ದೃಷ್ಟ್ವಾ ಗರುತ್ಮತಿ ಹರಿಂ ಖ ಉಪಾತ್ತಚಕ್ರಮ್ ।
ಉತ್ಕ್ಷಿಪ್ಯ ಸಾಂಬುಜಕರಂ ಗಿರಮಾಹಕೃಚ್ಛ್ರಾತ್
ನಾರಾಯಣಾಖಿಲಗುರೋ ಭಗವನ್ನಮಸ್ತೇ ॥

ತಂ ವೀಕ್ಷ್ಯ ಪೀಡಿತಮಜಃ ಸಹಸಾವತೀರ್ಯ
ಸಗ್ರಾಹಮಾಶು ಸರಸಃ ಕೃಪಯೋಜ್ಜಹಾರ ।
ಗ್ರಾಹಾದ್ವಿಪಾಟಿತಮುಖಾದರಿಣಾ ಗಜೇಂದ್ರಂ
ಸಂಪಶ್ಯತಾಂ ಹರಿರಮೂಮುಚದುಸ್ರಿಯಾಣಾಂ ॥[೧೧]

ಶ್ರೀಹರಿಯು ಗಜೇಂದ್ರನನ್ನು ರಕ್ಷಿಸಿದ ಪ್ರಸಂಗ ಹೀಗಿದೆ -

ಬಿಸಿಲಿನ ತಾಪದಿಂದ ಬಳಲಿದ ಗಜೇಂದ್ರನು ತನ್ನ ಬಾಯಾರಿಕೆಯನ್ನು ಹಿಂಗಿಸಿಕೊಳ್ಳಲು ''ಋತುಮತ್'' ಎಂಬ ಹೆಸರಿನ ಉದ್ಯಾನವನದಲ್ಲಿರುವ ಸರೋವರಕ್ಕೆ ಬರುತ್ತಾನೆ. ಸರೋವರದಲ್ಲಿ ಸ್ನಾನ ಮಾಡಿ ತೃಪ್ತಿಯಾಗುವಷ್ಟು ನೀರನ್ನು ಕುಡಿದು ಮೇಲೆ ಬರುವಷ್ಟರಲ್ಲಿ ಮೊಸಳೆಯೊಂದು ಗಜೇಂದ್ರನ ಕಾಲನ್ನು ಹಿಡಿದುಬಿಡುತ್ತದೆ.

---

೧೧. ಶ್ರೀಮದ್ ಭಾಗವತ ಅಷ್ಟಮಸ್ಕಂಧ (೩-೩೦, (೩-೩೧)

ಗಜೇಂದ್ರನನ್ನು ಮೊಸಳೆಯ ಬಾಯಿಂದ ಬಿಡಿಸಲು ಬಂಧುಗಳೆಲ್ಲರೂ ಮಾಡಿದ ಪ್ರಯತ್ನ ವಿಫಲವಾಗುತ್ತದೆ. ಆಗ ಗಜೇಂದ್ರನು ಮುಕ್ತಾಶ್ರಯನಾದ, ಸರ್ವೋತ್ತಮ ನಾದ ಭಗವಂತನನ್ನು ಶರಣು ಹೋಗುತ್ತಾನೆ. ''ತಂ ಯಾಮಿ ಪರಂ ಪರಾಯಣಮ್'' ಎಂಬಂತೆ.

ಆಗ ಗಜೇಂದ್ರನು ಆಕಾಶದಲ್ಲಿ ಚಕ್ರವನ್ನು ಧರಿಸಿದ, ಗರುಡಾರೂಢನಾದ ಶ್ರೀಹರಿಯನ್ನು ನೋಡಿ ಕಮಲಪುಷ್ಪವನ್ನು ಹಿಡಿದಿದ್ದ ಸೊಂಡಿಲನ್ನು ಮೇಲಕ್ಕೆತ್ತಿ ಗುಣಪೂರ್ಣನಾದ, ಸಮಗ್ರ ಐಶ್ವರ್ಯ ಸಂಪನ್ನನಾದ, ಎಲ್ಲರಿಗೂ ಗುರುವಾದ ಶ್ರೀಹರಿಯೇ ನಿನಗೆ ನಮಸ್ಕಾರವು (ನಾರಾಯಣಾಖಿಲಗುರೋ ಭಗವನ್ನಮಸ್ತೇ) ಎಂಬುದಾಗಿ ಪ್ರಯಾಸದಿಂದ ನುಡಿಯುತ್ತಾನೆ. ಆಗ ಉತ್ಪತ್ತಿರಹಿತನಾದ, ದೋಷರಹಿತನಾದ ಶ್ರೀಹರಿಯು ಸೊಂಡಿಲಿನಲ್ಲಿ ಪುಷ್ಪವನ್ನು ಹಿಡಿದು ನಮಸ್ಕರಿಸಿದ, ತನ್ನ ನಾಮಸ್ಮರಣೆಯನ್ನು ಮಾಡಿದ ಗಜೇಂದ್ರನನ್ನು ನೋಡಿ ಕೂಡಲೇ ಗರುಡ ನಿಂದಿಳಿದು ಕರುಣೆಯಿಂದ ಮೊಸಳೆ ಹಾಗೂ ಆನೆಯನ್ನು ಸರೋವರದಿಂದ ಎತ್ತಿ, ದೇವತೆಗಳು ನೋಡುತ್ತಿರುವಂತೆ ಚಕ್ರದಿಂದ ಮೊಸಳೆಯ ಬಾಯಿಯನ್ನು ಸೀಳಿ ಗಜೇಂದ್ರನನ್ನು ಮುಕ್ತನನ್ನಾಗಿ ಮಾಡಿ ರಕ್ಷಿಸುತ್ತಾನೆ.

ನಿರಯ ನಿವಾಸರ ಸುರಋಷಿ ಮುಖದಿಂದ
ಹರಿನಾಮ ಎಲ್ಲರ ಕಾಯ್ತು ॥

ದೇವರ್ಷಿಗಳಾದ ಶ್ರೀನಾರದ ಮಹರ್ಷಿಗಳು ಆ ಭಗವಂತನ ನಾಮೋಚ್ಚಾರಣೆಯನ್ನು ಮಾಡಲು, ಆ ಶ್ರೀಹರಿಯನಾಮ ನರಕಸ್ಥರಾದ ಜೀವಿಗಳನ್ನು ಉದ್ಧರಿಸಿತು.

ಹಿಂದೆ ನಾರದರು ವೈಕುಂಠಕ್ಕೆ ಹೋಗಿ ಶ್ರೀಮನ್ನಾರಾಯಣನನ್ನು ಕಂಡು ಸ್ತುತಿಸಿ ಅವನಿಂದ ಅನುಜ್ಞೆ ತೆಗೆದುಕೊಂಡು ಯಮಪಟ್ಟಣಕ್ಕೆ ಬಂದರು. ಅಲ್ಲಿರುವ ಅತ್ಯದ್ಭುತವಾದ ನರಕಯಾತನೆಯನ್ನು ಕಂಡು ಕೃಪಾಯುಕ್ತವಾದ ಮನಸ್ಸಿನಿಂದ ಹೀಗೆ ನುಡಿದರು.

''ನಾರಾಯಣ''ವೆಂಬ ಮಂತ್ರವಿದೆ ನಾಲಿಗೆ ವಶದಲ್ಲಿದೆ. ಇಂಥ ನಾರಾಯಣ ನಾಮಮಂತ್ರವಿದ್ದರೂ ಅದನ್ನು ಉಚ್ಚರಿಸದೇ ಘೋರನರಕದಲ್ಲಿ ಜನರು ಯಾತನೆಯನ್ನು ಅನುಭವಿಸುತ್ತಿದ್ದಾರೆ. ಇದು ಆಶ್ಚರ್ಯವೇ ಸರಿ.[೧೨]

೧೨. ನಾರಾಯಣೇತಿ ಮಂತ್ರೋಽಸ್ತಿ ವಾಗಸ್ತಿ ವಶವರ್ತಿನಿ ।
ತಥಾಽಪಿ ನರಕೇ ಘೋರೇ ಪತಂತೀತ್ಯೇತದದ್ಭುತಮ್ ॥
ಶ್ರೀ ಕೃಷ್ಣಾಮೃತ ಮಹಾರ್ಣವ ೬ಳನೆಯ ಶ್ಲೋಕ

ಆಗ ಶ್ರೀನಾರದರು ''ಪಾಪಿಗಳಿಗೆ ಭಗವಂತನ ನಾಮವೇ ಗತಿ ಅದನ್ನು ಬಿಟ್ಟು ಬೇರೆ ಗತಿಯೇ ಇಲ್ಲ'' ಎಂಬುದಾಗಿ ವಿಚಾರಿಸಿ ಅಲ್ಲಿರುವ ಜನರ ಮೇಲೆ ಕನಿಕರದಿಂದ ತಮ್ಮ ಸುಸ್ವರವಾದ ವೀಣೆಯನ್ನು ನುಡಿಸುತ್ತ ''ಗೋವಿಂದ'' ನಾಮ ಸಂಕೀರ್ತನೆ ಮಾಡಿದರು.

ಓಂ ಗೋವಿಂದ ನಾರಾಯಣ ವಾಸುದೇವ ಮುಕುಂದ ಕೃಷ್ಣಾಚ್ಯುತ ಮಾಧವೇತಿ ।
ನೃಸಿಂಹ ದೇವೇಶ ಹರೇ ಮುರಾರೇ ರಮೇಶ ಲೋಕೇಶ ಜಗನ್ನಿವಾಸ ॥

ಅನಂತ ವೈಕುಂಠ ದುರಂತ ಶಕ್ತೇ ಸಮಸ್ತ ಲೋಕಸ್ಯನಿಧಾನ ಮೂರ್ತೇ ।
ನಿರಂಜನಾನಂತ ಗುಣಾಕರೇಶ ಚಿದ್ರೂಪ ನಿರ್ದೋಷ ಜಗದ್ವಿಹಾರ ॥

ನಿರೂಪ ನಿತ್ಯಾವ್ಯಯ ನಿರ್ವಿಕಾರ ನಿರಾಶ್ರಯಾನಂತ ವಿಚಿತ್ರಕರ್ಮನ್ ।
ದಾಶಾರ್ಹಕೃಷ್ಣ ಖಗವಾಹನ ವಾರಿಜಾಕ್ಷ ನಾರಾಯಣಾಖಿಲಗುರೋ ಜಗತಾಮಧೀಶ ॥

ವಿಶ್ವೋದಯಸ್ಥಿತಿಲಯೋನ್ನಿಯತಿ ಪ್ರದೇತಿ
ಗಾಯನ್ಮುಮೋದ ಮುದಮಾಪಿತವಾನ್ ಜನಾನಾಂ ॥

ತಚ್ಛ್ರುತ್ವಾ ನರಕಸ್ಥಾಸ್ತೇ ಹರೇರ್ನಾಮಾಮೃತಂ ಶುಭಂ ।
ಉತ್ತಸ್ಥುರ್ಯಾತನಾ ಸ್ಥಾನಾತ್ ಮುಕ್ತ ಪಾಪಾಶ್ಚ ಸರ್ವಶಃ ॥

ತತ್ಕ್ಷಣಾತ್ ಪುಷ್ಪಕಾರೂಢಾ ದಿವ್ಯರೂಪಾ ಮನೋರಮಾ ।
ದಿವ್ಯಂ ಜಗ್ಮುಃ ಪ್ರಾಂಜಲಯಃ ಸ್ತುವಂತೋ ನಾರದಂ ಮುನಿಮಿತಿ ॥

ಹೀಗೆ ಶ್ರೀಹರಿಯನಾಮವು ನರಕದಲ್ಲಿದ್ದ ಜನರನ್ನು ನರಕದಿಂದ ಪಾರುಮಾಡಿ ಸ್ವರ್ಗಕ್ಕೆ ಕಳಿಸಿಕೊಟ್ಟಿರುವುದನ್ನು ಶ್ರೀದಾಸರು ಇಲ್ಲಿ ಉಲ್ಲೇಖಿಸಿದ್ದಾರೆ.

ಹಿರಿಯರ ನಿಕ್ಕರ ನುಡಿಯಿಂದಡವಿಲಿರೆ
ಹರಿನಾಮ ಧ್ರುವನ ಕಾಯ್ತು ।
ಕುರುಕಂಟಕರು ಅಭಿಮಾನವ ಕೊಳುತಿರೆ
ಹರಿನಾಮ ಸತಿಯ ಕಾಯ್ತು ।
ಮರಳೊಮ್ಮೆ ದುರ್ವಾಸ ದ್ರೌಪದಿಗುಣಬೇಡೆ
ಹರಿನಾಮ ಇರುಳೆ ಕಾಯ್ತು ।
ಗುರುಪುತ್ರನುರಿಬಾಣದುರವಣೆಗಡ್ಡಾಂತು
ಹರಿನಾಮ ಭ್ರೂಣವ ಕಾಯ್ತು ॥ ೨ ॥

ಸುರುಚಿಯ ಬಿರುಮಾತಿನಿಂದ ಧ್ರುವರಾಜನು ನೊಂದು ತಪಸ್ಸಿಗೆ ಅಡವಿಗೆ ಹೋಗಿ ಇರುತ್ತಿರಲು ಅವನನ್ನು ಶ್ರೀಹರಿನಾಮವೇ ರಕ್ಷಿಸಿತು. ಕುರುಕುಲಕ್ಕೆ ಕಂಟಕರೆನಿಸಿದ ದುರ್ಯೋಧನಾದಿಗಳು ತುಂಬಿದ ಸಭೆಯಲ್ಲಿ ದ್ರೌಪದೀ ದೇವಿಯರ ಸೀರೆಸೆಳೆದು ಮಾನಭಂಗ ಮಾಡಲು ಯತ್ನಿಸಿದಾಗ ಶ್ರೀಹರಿನಾಮವೇ ಅವರನ್ನು ರಕ್ಷಿಸಿತು. ಇನ್ನೊಂದು ಪ್ರಸಂಗದಲ್ಲಿ ದುರ್ವಾಸರು ದ್ರೌಪದೀ ದೇವಿಯರ ಹತ್ತಿರ ಬಂದು ಊಟಕ್ಕೆ ಬಡಿಸಬೇಕೆಂದು ಕೇಳಲು ಶ್ರೀಹರಿಯನಾಮ ಮಹಿಮೆ ಅವರನ್ನು ರಕ್ಷಿಸಿತು. ದ್ರೋಣಾಚಾರ್ಯರ ಪುತ್ರರಾದ ಅಶ್ವತ್ಥಾಮಾಚಾರ್ಯರು ಉತ್ತರಾದೇವಿಯರ ಗರ್ಭಕ್ಕೆ ಬ್ರಹ್ಮಾಸ್ತ್ರವನ್ನು ಬಿಡಲು, ಉತ್ತರೆಯು ಶ್ರೀಕೃಷ್ಣನನ್ನು ಪ್ರಾರ್ಥಿಸಿ ಸ್ತೋತ್ರಮಾಡಲು ಶ್ರೀಕೃಷ್ಣನು ಅವಳ ಗರ್ಭವನ್ನು ಅಸ್ತ್ರದಿಂದ ರಕ್ಷಿಸಿದನು.

ಹಿರಿಯರ ನಿಕ್ಕರ ನುಡಿಯಿಂದಡವಿಲಿರೆ
ಹರಿನಾಮ ಧ್ರುವನ ಕಾಯ್ತು ।

ಸುರುಚಿಯ ಬಿರುನುಡಿಗಳಿಂದ ಧ್ರುವರಾಜನು ಮನನೊಂದು ತಪಸ್ಸು ಮಾಡಲು ಅಡವಿಗೆ ಹೋಗಿ ಇರುತ್ತಿರಲು ಅವನನ್ನು ಶ್ರೀಹರಿಯ ನಾಮವೇ ರಕ್ಷಿಸಿತು.

ಈ ಪ್ರಸಂಗವು ಚತುರ್ಥಸ್ಕಂಧ ಭಾಗವತದಲ್ಲಿ ಉಕ್ತವಾಗಿದೆ.

ಉತ್ತಾನಪಾದರಾಜನಿಗೆ ಸುನೀತಿ ಮತ್ತು ಸುರುಚಿ ಎಂಬ ಇಬ್ಬರು ಪತ್ನಿಯರಿದ್ದರು. ಸುನೀತಿಯ ಮಗನು ಧ್ರುವ. ಸುರುಚಿಯ ಮಗ ಉತ್ತಮ. ಒಂದು ದಿನ ಉತ್ತಾನಪಾದರಾಜನು ಸುರುಚಿಯ ಮಗನಾದ ಉತ್ತಮನನ್ನು ತೊಡೆಯ ಮೇಲೆ ಕೂಡಿಸಿಕೊಂಡಾಗ, ಧ್ರುವನು ತಂದೆಯ ತೊಡೆಯನ್ನೇರಲು ಹೋದನು. ಆಗ ರಾಜ ಧ್ರುವನನ್ನು ಕರೆಯದೇ ಸುಮ್ಮನಿದ್ದನು. ಇದನ್ನು ನೋಡಿದ ಸುರುಚಿಯು ರಾಜನೆದುರಿನಲ್ಲೇ ಧ್ರುವನನ್ನು ಕುರಿತು ಹೀಗೆಂದಳು – ''ವತ್ಸ! ರಾಜನ ತೊಡೆಯನ್ನೇರಲು ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿಬಂದರೆ ಮಾತ್ರ ಸಾಧ್ಯವಾಗುವದು. ನಿನಗೆ ಆ ಅರ್ಹತೆ ಇಲ್ಲ. ಒಂದು ವೇಳೆ ನೀನು ಹಾಗೆ ಬಯಸುವಿಯಾದರೆ ಕಾಡಿಗೆ ಹೋಗಿ ಶ್ರೀಹರಿಯನ್ನು ಆರಾಧಿಸಿ ಅವನ ಅನುಗ್ರಹದಿಂದ ನನ್ನ ಹೊಟ್ಟೆಯಲ್ಲಿ ಹುಟ್ಟುವಂತೆ ವರಸಂಪಾದಿಸು'' ಎಂದು ಹೇಳಿ ಅವನನ್ನು ಅಲ್ಲಿಂದ ಕಳಿಸಿಬಿಟ್ಟಳು. ಧ್ರುವನು ಮಲತಾಯಿಯ ಬಿರುನುಡಿಗಳನ್ನು ಕೇಳಿ ಸಂಕಟಪಡುತ್ತ ತಾಯಿ ಸುನೀತಿಯ ಬಳಿಗೆ ಬಂದು ನಡೆದ ವೃತ್ತಾಂತವನ್ನೆಲ್ಲ ತಿಳಿಸಿದ.

ಆಗ ಸುನೀತಿಯು ಮಗನನ್ನು ಕುರಿತು ''ಕಂದ! ದುಃಖಿಸಬೇಡ, ಇನ್ನೊಬ್ಬರಿಗೆ ಕೇಡು ಬಯಸಬೇಡ. ದೌರ್ಭಾಗ್ಯಳಾದ ನನ್ನ ಹೊಟ್ಟೆಯಲ್ಲಿ ಹುಟ್ಟಿರುವಿ. ರಾಜನು

ಇವಳು ನನ್ನ ಹೆಂಡತಿಯೆಂದು ಹೇಳಲು ನಾಚುತ್ತಾನೆ. ಮಗನೇ! ಸುರುಚಿಯ ವಚನದಂತೆ ನೀನು ತಂದೆಯ ಪಾಲನೆ ಪೋಷಣೆ ಹೊಂದಲು ಶ್ರೀಹರಿಯನ್ನು ತಪಸ್ಸಿನಿಂದ ಆರಾಧಿಸು ಶ್ರೀಹರಿಯು ಭಕ್ತವತ್ಸಲನು ಅವನೇ ನಿನಗೆ ರಕ್ಷಕನಾಗಲಿ'' ಎಂದಳು.

ತಾಯಿ ಸುನೀತಿಯ ಮಾತಿನಿಂದ ಸಮಾಧಾನ ಹೊಂದಿದ ಧ್ರುವನು ಧೈರ್ಯತಾಳಿ ಕಾಡಿಗೆ ನಡೆದನು. ಈ ವಿಷಯವನ್ನು ನಾರದರು ತಮ್ಮ ಯೋಗ ಮಹಿಮೆಯಿಂದ ತಿಳಿದು ಧ್ರುವನ ಹತ್ತಿರ ಬಂದು ಅವನಿಗೆ ಉಪದೇಶ ಮಾಡಿದರು. ಜೀವರಿಗೆ ಯಾವ ವಿಧದಲ್ಲೂ ಸ್ವಾತಂತ್ರ್ಯವಿಲ್ಲ. ಅವರಿಗೆ ದೈವವಶವಾಗಿ ಸುಖದುಃಖಗಳು ಬರುವವು. ಜೀವರು ಸುಖದುಃಖ ಕಾರಣರಲ್ಲ ಎಂದು ತಿಳಿದವನಿಗೆ ಶ್ರೀಹರಿಯು ಜ್ಞಾನವಿಷಯನಾಗುವನು. ಯಾರು ಶ್ರೀಹರಿಯು ಕೊಟ್ಟ ಸುಖ ದುಃಖಗಳನ್ನು ಸಂತೋಷದಿಂದ ಸ್ವೀಕರಿಸುವರೋ ಅವರು ಸಾಧನ ಪೂರ್ತಿಯಲ್ಲಿ ಕೊನೆಗೆ ಮುಕ್ತರಾಗುವರು.

ಇದನ್ನು ಕೇಳಿದ ಧ್ರುವನು ''ಉತ್ಕೃಷ್ಟವಾದ ಪದವಿಯನ್ನು ಹೊಂದಲಿಚ್ಛಿಸುವ ನನಗೆ ಅದರ ಮಾರ್ಗವನ್ನು ತಿಳಿಸಿರಿ'' ಎಂದನು. ಆಗ ನಾರದರು ಧ್ರುವನಿಗೆ ''ಓಂ ನಮೋ ಭಗವತೇ ವಾಸುದೇವಾಯ ಓಂ'' ಈ ದ್ವಾದಶಾಕ್ಷರ ಮಂತ್ರವನ್ನು ಜಪಿಸು ಎಂಬುದಾಗಿ ಉಪದೇಶ ಮಾಡಿದರು.

ನಾರದರ ಆದೇಶದಂತೆ ಧ್ರುವನು ಮಧುವನವನ್ನು ಸೇರಿ ಪುಣ್ಯ ಕಾನನದಲ್ಲಿ ತಪಸ್ಸನ್ನು ಪ್ರಾರಂಭಿಸಿದನು. ಮೊದಲ ತಿಂಗಳಲ್ಲಿ ಮೂರು ದಿನಗಳಿಗೊಮ್ಮೆ ಆಹಾರ ಸ್ವೀಕರಿಸಿ, ಎರಡನೆಯ ತಿಂಗಳಲ್ಲಿ ಆರು ದಿನಕ್ಕೊಮ್ಮೆ ಆಹಾರ ಸ್ವೀಕರಿಸಿ, ಮೂರನೆಯ ತಿಂಗಳಲ್ಲಿ ಒಂಬತ್ತು ದಿನಗಳಿಗೊಮ್ಮೆ ನೀರು ಕುಡಿದು, ನಾಲ್ಕನೆಯ ತಿಂಗಳಲ್ಲಿ ಹನ್ನೆರಡು ದಿನಗಳಿಗೊಮ್ಮೆ ವಾಯು ಭಕ್ಷಕನಾಗಿ, ಐದನೆಯ ತಿಂಗಳಲ್ಲಿ ಒಂದು ಪಾದದ ಮೇಲೆ ನಿಂತು ತಪಸ್ಸು ಮಾಡುತ್ತ ಅಚಲನಾಗಿ ಶ್ರೀಹರಿಧ್ಯಾನ ಮಾಡುತ್ತ ಶ್ವಾಸ ನಿರೋಧಿಸಲು, ದೇವತೆಗಳು ಶ್ರೀಹರಿಗೆ ಶರಣಾಗತರಾಗಿ ಧ್ರುವನನ್ನು ತಪಸ್ಸಿನಿಂದ ಬಿಡಿಸಲು ಪ್ರಾರ್ಥಿಸಿದರು.

ಆಗ ವಾಸುದೇವರೂಪೀ ಭಗವಂತನು ಧ್ರುವನಿಗೆ ದರ್ಶನಕೊಟ್ಟನು. ಧ್ರುವನಿಗೆ ಸ್ತೋತ್ರಮಾಡಲು ತೋಚಲೇ ಇಲ್ಲ. ಶ್ರೀಹರಿಯು ತನ್ನ ಶಂಖವನ್ನು ಅವನ ಕೆನ್ನೆಗೆ ಸ್ಪರ್ಶ ಮಾಡಿಸಲು ಕೂಡಲೇ ಕೆಳಗಿನ ಸ್ತೋತ್ರವು ಹೊರಹೊಮ್ಮಿತು.

ಯೋಽಂತಃಪ್ರವಿಶ್ಯ ಮಮವಾಚಮಿಮಾಂ ಪ್ರಸುಪ್ತಾಂ
ಸಂಜೀವತ್ಯಖಿಲಶಕ್ತಿಧರಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಂ ॥

ಹೀಗೆ ಸ್ತೋತ್ರಮಾಡಲು ಪ್ರಸನ್ನನಾದ ವಾಸುದೇವರೂಪೀ ಭಗವಂತನು ಧ್ರುವನಿಗೆ ಅಪರೂಪವಾದ ಧ್ರುವಪದವಿಯನ್ನು ದಯಪಾಲಿಸಿದನು. ಭಗವಂತನ ನಾಮ ಧ್ರುವನನ್ನು ಈ ರೀತಿಯಾಗಿ ರಕ್ಷಿಸಿತು.

ಕುರುಕಂಟಕರು ಅಭಿಮಾನವ ಕೊಳುತಿರೆ
ಹರಿನಾಮ ಸತಿಯ ಕಾಯ್ತು ।

ಹಿಂದೆ ಕೌರವರು ಮತ್ತು ಪಾಂಡವರು ಲೆತ್ತವಾಡುತ್ತಿರಲು ಪಾಂಡವರು ಸೋತು ಹೋದರು. ಆಗ ಕೌರವನ ತುಂಬಿದ ಸಭೆಯಲ್ಲಿ ದುಃಶ್ಯಾಸನನು ದ್ರೌಪದೀ ದೇವಿಯರ ಸೀರೆಯನ್ನು ಸೆಳೆದು ಮಾನಭಂಗ ಮಾಡಲು ಪ್ರಯತ್ನಿಸಿದ. ದ್ರೌಪದೀ ದೇವಿಯರು ಶ್ರೀಹರಿಗೆ ಮೊರೆಯಿಟ್ಟು ರಕ್ಷಿಸಬೇಕೆಂದು ಕೇಳಿಕೊಂಡರು.

ಗೋವಿಂದ ದ್ವಾರಕಾವಾಸಿನ್ ಕೃಷ್ಣ ಗೋಪೀಜನಪ್ರಿಯ
ಕೌರವೈಃ ಪರಿಭೂತಾಂ ಮಾಂ ಕಿಂ ನ ಜಾನಾಸಿ ಕೇಶವ ।
ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ
ಪ್ರಪನ್ನಾಂ ಪಾಹಿ ಗೋವಿಂದ ಕುರುಮಧ್ಯೇಽವಸೀದತೀಮ್ ॥

ಶ್ರೀಮನ್ಮಹಾಭಾರತ

ಓ ಗೋವಿಂದ! ದ್ವಾರಕಾನಾಥ! ನನ್ನ ಮಾನವನ್ನು ಅಪಹರಿಸುವದಕ್ಕಾಗಿ ಈ ದುಷ್ಟ ಕೌರವರು ಪ್ರಯತ್ನಿಸುತ್ತಿದ್ದಾರೆ. ಇದು ನಿನಗೆ ತಿಳಿಯದೇ? ನಿನ್ನನ್ನೇ ಶರಣು ಹೊಂದಿದ ನನ್ನನ್ನು ರಕ್ಷಿಸು. ಹೀಗೆ ದ್ರೌಪದಿದೇವಿಯರು ಅನನ್ಯವಾಗಿ ಶ್ರೀಹರಿಸ್ಮರಣೆ ಮಾಡುತ್ತಿರಲು ಆ ಹರಿನಾಮವು ದ್ರೌಪದಿಯನ್ನು ರಕ್ಷಿಸಿತು.

ಮರಳೊಮ್ಮೆ ದುರ್ವಾಸ ದ್ರೌಪದಿಗುಣಬೇಡೆ
ಹರಿನಾಮ ಇರುಳೆಕಾಯ್ತು ।

ಮತ್ತೊಮ್ಮೆ ದುರ್ವಾಸರು ದ್ರೌಪದಿಯ ಹತ್ತಿರ ಬಂದು ''ನಾನು ಹಸಿದಿದ್ದೇನೆ ಊಣಬಡಿಸು'' ಎಂದು ಕೇಳಿದರು. ಆ ವೇಳೆಯಲ್ಲಿ ಎಲ್ಲರ ಊಟ ಮುಗಿದಿತ್ತು. ಕಾರಣ

ದ್ರೌಪದಿ ಕೂಡಲೇ ಶ್ರೀಕೃಷ್ಣನನ್ನು ಸ್ಮರಿಸಿದಳು. ಶ್ರೀಕೃಷ್ಣ ಕೂಡಲೇ ಬಂದು ದ್ರೌಪದಿಯನ್ನು ರಕ್ಷಿಸಿದ.

ಪಾಂಡವರು ಅರಣ್ಯವಾಸದಲ್ಲಿದ್ದಾಗ ದುರ್ವಾಸರು ಹತ್ತು ಸಾವಿರ ಶಿಷ್ಯಸಹಿತರಾಗಿ ಬರುತ್ತಾರೆ. ಧರ್ಮರಾಜನು ಅವರನ್ನು ಸತ್ಕರಿಸಿ ನಿತ್ಯವಿಧಿಗಳನ್ನು ಪೂರೈಸಿ ಭೋಜನಕ್ಕೆ ಬರಲು ತಿಳಿಸುತ್ತಾನೆ. ಈ ಹೊತ್ತಿಗೆ ದ್ರೌಪದೀ ದೇವಿಯರ ಊಟ ಮುಗಿದಿರುತ್ತದೆ. ದ್ರೌಪದಿ ಇಷ್ಟು ಜನಕ್ಕೆ ಊಟ ಬಡಿಸುವದು ಹೇಗೆ? ಎಂಬ ಚಿಂತೆಯಲ್ಲಿ ಮುಳುಗಿ ಬಿಡುತ್ತಾಳೆ.

ಏತಸ್ಮಿನ್ನಂತರೇ ರಾಜನ್ ದ್ರೌಪದೀ ಯೋಷಿತಾಂ ವರಾ ।
ಚಿಂತಾಮವಾಪ ಪರಮಾಮನ್ನಹೇತೋಃ ಪತಿವ್ರತಾ ॥

ವನಪರ್ವ ೨೬೩ನೆಯ ಅಧ್ಯಾಯ

ಕೂಡಲೇ ಅವಳಿಗೆ ಶ್ರೀಕೃಷ್ಣನ ನೆನಪಾಗುತ್ತದೆ. ಶ್ರೀಕೃಷ್ಣನಿಗೆ ನಮಸ್ಕರಿಸಿ ತನ್ನ ಚಿಂತೆಯನ್ನು ದೂರಮಾಡಲು ಪ್ರಾರ್ಥಿಸುತ್ತಾಳೆ.

ಶ್ರೀಕೃಷ್ಣ ಕೂಡಲೇ ಪ್ರತ್ಯಕ್ಷನಾದ. ಶ್ರೀಕೃಷ್ಣ ದ್ರೌಪದಿಗೆ ಅಕ್ಷಯಪಾತ್ರೆಯನ್ನು ತರಲು ಹೇಳುತ್ತಾನೆ. ಅದನ್ನು ದ್ರೌಪದೀ ತಂದು ತೋರಿಸುತ್ತಾಳೆ. ಆ ಪಾತ್ರೆಯಲ್ಲಿ ಒಂದು (ಶಾಕ) ಹಸಿರು ಪತ್ರವನ್ನು ನೋಡಿ ಅದನ್ನು ತಾನು ಸ್ವೀಕರಿಸಿ ದ್ರೌಪದಿಯೇ! ಇದರಿಂದ ಯಜ್ಞಭೋಕ್ತನಾಗಿ ಶ್ರೀಹರಿಯು ಸಂತುಷ್ಟನಾದನೆಂದು ತಿಳಿಸುತ್ತಾನೆ.

ಇದರಿಂದಾಗಿ ಸ್ನಾನಕ್ಕೆ ಹೋದ ಎಲ್ಲ ಋಷಿಮುನಿಗಳು, ದುರ್ವಾಸರು ತೃಪ್ತರಾಗಿ ಬಿಡುತ್ತಾರೆ. ಅವರಿಗೆ ಊಟಮಾಡಲು ಹೊಟ್ಟೆಯಲ್ಲಿ ಜಾಗವೇ ಇಲ್ಲದಂತಾಯ್ತು.

ಹೀಗೆ ದ್ರೌಪದೀ ದೇವಿಯು ಶ್ರೀಹರಿನಾಮವನ್ನು ಉಚ್ಚರಿಸಿ ತನಗೆ ಬಂದ ಸಂಕಟದಿಂದ ಪಾರಾದ ವಿಷಯವನ್ನು ಶ್ರೀದಾಸರು ಇಲ್ಲಿ ತಿಳಿಸಿದ್ದಾರೆ.

ಗುರುಪುತ್ರನುರಿಬಾಣದುರವಣಿಗಡ್ಡಾಂತು
ಹರಿನಾಮ ಭ್ರೂಣವಕಾಯ್ತು ॥

ಗುರುಪುತ್ರರಾದ ಅಶ್ವತ್ಥಾಮಾಚಾರ್ಯರು, ಪರೀಕ್ಷಿತ್‌ರಾಜರು ತಾಯಿಯ ಹೊಟ್ಟೆಯಲ್ಲಿ ಇರುವಾಗ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು. ಆಗ ಪರೀಕ್ಷಿದ್ರಾಜರ ತಾಯಿಯಾದ ಉತ್ತರಾದೇವಿಯು ಶ್ರೀಕೃಷ್ಣನನ್ನು ಸ್ಮರಿಸಲು ಆ ಗರ್ಭದ ಸುತ್ತಲೂ ಶ್ರೀಹರಿಯು ಸ್ವತಃ ನಿಂತು ರಕ್ಷಿಸಿದನು.

ಕುರುಕ್ಷೇತ್ರ ಯುದ್ಧ ಮುಗಿದ ನಂತರ ಧರ್ಮರಾಜನಿಗೆ ಪಟ್ಟಾಭಿಷೇಕ ಮಾಡಿಸಿ ಪಾಂಡವರಿಂದ ಪ್ರತಿಯೊಬ್ಬರಿಂದಲೂ ಮೂರು ಪಟ್ಟು ದಕ್ಷಿಣೆಗಳಿಂದ ಕೂಡಿದ ವೈಭವದ ಅಶ್ವಮೇಧಯಾಗಗಳನ್ನು ಮಾಡಿಸಿ ಶ್ರೀಕೃಷ್ಣ ದ್ವಾರಕೆಗೆ ಹೊರಟಾಗ ಉತ್ತರಾದೇವಿಯು ಓಡಿ ಬಂದು ''ಶ್ರೀಕೃಷ್ಣ ಕಾಪಾಡು, ಕಾದ ಕಬ್ಬಿಣದ ಬಾಣವೊಂದು ನನ್ನನ್ನು ಅಟ್ಟಿಸಿಕೊಂಡು ಬರುತ್ತಿದೆ. ಇದು ಬೇಕಾದರೆ ನನ್ನನ್ನು ಸುಟ್ಟು ಹಾಕಲಿ ಆದರೆ ನನ್ನ ಗರ್ಭವನ್ನು ನಾಶಪಡಿಸದಿರಲಿ'' ಎಂದಳು.

ಅಭಿದ್ರವತಿ ಮಾಮೀಶ ಶರಸ್ತಪ್ತಾಯಸೋ ವಿಭೋ ।
ಕಾಮಂ ದಹತು ಮಾಂ ನಾಥ ಮಾಮೇ ಗರ್ಭೋ ನಿಪಾತ್ಯತಾಮ್ ॥

ಶ್ರೀಮದ್ ಭಾಗವತ (೧-೮-೧೦)

ಆಗ ಶ್ರೀಕೃಷ್ಣ ಒಂದು ರೂಪದಿಂದ ತಾನೇ ಗರ್ಭವನ್ನು ಪ್ರವೇಶಿಸಿ ಮಗು ಪರೀಕ್ಷಿತನ ರಕ್ಷಣೆಗೆ ನಿಂತು ಬಿಟ್ಟ. ಅಶ್ವತ್ಥಾಮರು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಸುಟ್ಟು ಹೋಗುವುದರಲ್ಲಿದ್ದ ಕೌರವ ಪಾಂಡವ ವಂಶಗಳೆರಡರ ಬೀಜವಾಗಿದ್ದ ದೇಹವನ್ನು ಕಾಪಾಡಿದನು.

ಶ್ರೀ ವಾದಿರಾಜ ಪೂಜ್ಯಚರಣರು ಇದನ್ನೇ ವರ್ಣಿಸುವ ಪರಿ ಹೀಗಿದೆ –

ಉತ್ತರೆಯ ಗರ್ಭದಲ್ಲಿ ಸುತ್ತಿ ಸುಳಿವ ಅಸ್ತ್ರವನ್ನು

ಒತ್ತಿ ಚಕ್ರದಿಂದ ನಿಜ ಭಕ್ತ ಪರೀಕ್ಷಿತನ ಕಾಯ್ದ ॥ ಲೋಕಭರಿತನೋ ರಂಗಾನೇಕ ಚರಿತನೋ ॥

ವರಬಲದಿಂದಲ್ಲಿ ಅಸುರರು ನೋಯಿಸಲು
ಹರಿನಾಮ ಸುರರ ಕಾಯ್ತು
ಚಿರಪಾಪ ಭವಯಾತ್ರೆ ಘಟಿಸಲು ತುದಿಯಲಿ
ಹರಿನಾಮ ಭಟರ ಕಾಯ್ತು
ಶರಣರ ಮಹಿಮೆಯಂತಿರಲಿ ಅಪಮರಣದಿ
ಹರಿನಾಮ ನನ್ನಕಾಯ್ತು
ಗುರುಮಧ್ವವರದ ಪ್ರಸನ್ನವೆಂಕಟೇಶ ಶ್ರೀ
ಹರಿನಾಮ ಗತಿ ಎನ್ನ ಕಾಯ್ತು ॥ ೩ ॥

ಹಿಂದೆ ವರಬಲದಿಂದ ಅಸುರರು ದೇವತೆಗಳನ್ನು ನೋಯಿಸಲು ಶ್ರೀ ಹರಿನಾಮ ಆ ದೇವತೆಗಳನ್ನು ರಕ್ಷಿಸಿತು. ಬಹುಕಾಲದ ಪಾಪದಿಂದ ಸಂಸಾರದಲ್ಲಿ ಬಿದ್ದು

ನರಳುವಂತಾಗಲು ಶ್ರೀಹರಿಯ ನಾಮ ಭಗವಂತನ ಸೇವಕರನ್ನು ರಕ್ಷಿಸಿತು. ಭಗವಂತನ ಭಕ್ತರ ಮಹಿಮೆ ಹೀಗಿದೆ. ಅಷ್ಟೇ ಏಕೆ ಆ ಭಗವಂತನ ನಾಮ ನನ್ನನ್ನು ಅಪಮೃತ್ಯುವಿನಿಂದ ಪಾರು ಮಾಡಿತು. ಗುರುಗಳಾದ ಶ್ರೀಮನ್ ಮಧ್ವಾಚಾರ್ಯರಿಗೆ ಒಲಿದ ಶ್ರೀ ಪ್ರಸನ್ನವೆಂಕಟೇಶನಾದ ಶ್ರೀಹರಿಯನಾಮ ನನ್ನನ್ನು ರಕ್ಷಿಸಿತು. ಅದೇ ನನಗೆ ಗತಿಯಾಯಿತು.

ವಲಬಲದಿಂದಲ್ಲಿ ಅಸುರರು ನೋಯಿಸಲು
ಹರಿನಾಮ ಸುರರ ಕಾಯ್ತು ।

ಹಿಂದೆ ವರಬಲದಿಂದ ಅಸುರರು ದೇವತೆಗಳನ್ನು ಪೀಡಿಸಲು ಶ್ರೀಹರಿನಾಮ ಆ ದೇವತೆಗಳನ್ನು ರಕ್ಷಿಸಿತು.

ಶ್ರೀಮದಾನಂದತೀರ್ಥಭಗವತ್ಪಾದರು ಈ ವಿಷಯವನ್ನು ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ತಿಳಿಸಿಕೊಟ್ಟಿದ್ದಾರೆ.

ತತಃ ಪುಲಸ್ತ್ಯಸ್ಯ ಕುಲೇ ಪ್ರಸೂತೌ
ತಾವಾದಿದೈತ್ಯೌ ಜಗದೇಕಶತ್ರೂ ।
ಪರೈರವಧ್ಯೌ ವರತಃ ಪುರಾ ಹರೇಃ
ಸುರೈರಜೇಯೌ ಚ ವರಾದ್ವಿಧಾತುಃ ॥ (೩-೫೨)

ಸರ್ವೈರಜೇಯಃ ಸ ಚ ಕುಂಭಕರ್ಣಃ
ಪುರಾತನೇ ಜನ್ಮನಿ ಧಾತುರೇವ ।
ವರಾನ್ನರಾದೀನೃತ ಏವ ರಾವಣ
ಸ್ತದಾತನಾತ್ ತೌ ತ್ರಿದಶಾನಬಾಧತಾಮ್ ॥ (೩-೫೩)

ಜಗತ್ತಿನ ಮುಖ್ಯ ಶತ್ರುಗಳಾದ ಆದಿ ದೈತ್ಯರೆನಿಸಿದ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳು ಪುಲಸ್ತ್ಯ ಮುನಿಯ ವಂಶದಲ್ಲಿ ಜನಿಸಿದರು. ಶ್ರೀಹರಿಯು ಹಿಂದೆಯೇ ನೀಡಿದ್ದ ವರದಿಂದ ಅವರು ಇತರರಿಗೆ ಅವಧ್ಯರಾಗಿದ್ದರು. ಬ್ರಹ್ಮದೇವರ ವರದಿಂದಾಗಿ ಸುರರಿಂದ ಅಜೇಯರಾಗಿದ್ದರು. ಹಿಂದಿನ ಹಿರಣ್ಯಾಕ್ಷ ಜನ್ಮದಲ್ಲಿ ಬ್ರಹ್ಮದೇವರು ನೀಡಿದ ವರದಿಂದಾಗಿ ಕುಂಭಕರ್ಣನು ಸಕಲರಿಂದಲೂ ಅಜೇಯನಾಗಿದ್ದನು. ನರ ವಾನರಾದಿಗಳನ್ನು ಹೊರತು ಇತರರಿಂದ ಅವಧ್ಯತ್ವ ಬೇಡ ಎಂಬ ಅದೇ ಜನ್ಮದ ವರದಿಂದಾಗಿ ರಾವಣನೂ ಅಜೇಯನಾಗಿದ್ದನು. ಅಂತಹ ಅವರಿಬ್ಬರೂ ದೇವತೆಗಳನ್ನು ಪೀಡಿಸತೊಡಗಿದರು.

ಹೀಗಿರಲು ದೇವತೆಗಳು ಆ ಭಗವಂತನನ್ನು ಕುರಿತು ಸ್ತೋತ್ರ ಮಾಡಿದರು.

ತದಾಬ್ಜಜಂ ಶೂಲಿನಮೇವ ಚಾಗ್ರತೋ
ನಿಧಾಯ ದೇವಾಃ ಪುರುಹೂತ ಪೂರ್ವಕಾಃ ।
ಪಯೋಽಂಬುಧೌ ಭೋಗಿಪಭೋಗಶಾಯಿನಂ
ಸಮೇತ್ಯ ಯೋಗ್ಯಾಂ ಸ್ತುತಿಮಭ್ಯಯೋಜಯನ್ ॥ (೩-೫೪)

ಬ್ರಹ್ಮದೇವರು ಮತ್ತು ರುದ್ರದೇವರು ಇಬ್ಬರನ್ನು ಮುಂದಿರಿಸಿಕೊಂಡು ಇಂದ್ರಾದಿ ದೇವತೆಗಳು ಕ್ಷೀರಸಾಗರದಲ್ಲಿರುವ ಶೇಷಶಾಯಿಯಾದ ಶ್ರೀಹರಿಯನ್ನು ಸ್ತೋತ್ರ ಮಾಡಿದರು. ಆ ದೇವತೆಗಳು ಸ್ತೋತ್ರಮಾಡಿದ ಶ್ರೀಹರಿನಾಮ ಅವರನ್ನು ರಕ್ಷಿಸಿತು. ಶ್ರೀಹರಿಯು ಶ್ರೀರಾಮನಾಗಿ ಅವತರಿಸಿ ಆ ಅಸುರರನ್ನು ತಾನೇ ಸಂಹರಿಸಿ ದೇವತೆಗಳನ್ನು ರಕ್ಷಿಸಿದನು.

ಚಿರಪಾಪ ಭವಯಾತ್ರೆ ಘಟಿಸಲು ತುದಿಯಲಿ
ಹರಿನಾಮ ಭಟರ ಕಾಯ್ತು ॥

ಬಹಳ ಕಾಲದ ಪಾಪದಿಂದ ಈ ಸಂಸಾರಯಾತ್ರೆಯು ಜೀವರಿಗೆ ಘಟಿಸುತ್ತದೆ ಅಂದರೆ ತಪ್ಪದೇ ಬರುತ್ತದೆ. ಆದರೆ ಕೊನೆಯಲ್ಲಿ ಆ ಭಗವಂತನ, ಶ್ರೀಹರಿಯ ನಾಮಸ್ಮರಣೆ ಭಗವಂತನ ಸೇವಕರನ್ನು ರಕ್ಷಿಸುತ್ತದೆ ಇದರಲ್ಲಿ ಸಂದೇಹವಿಲ್ಲ.

ಜೀವರ ಪಾಪಗಳಿಗೆ ಪ್ರಾಯಶ್ಚಿತ್ತ ಶ್ರೀಹರಿನಾಮವೇ ಬೇರೊಂದಿಲ್ಲ.

ಶ್ರೀಮದಾನಂದತೀರ್ಥಭಗವತ್ಪಾದರು ಶ್ರೀಕೃಷ್ಣಾಮೃತ ಮಹಾರ್ಣವ ಗ್ರಂಥದಲ್ಲಿ ತಿಳಿಸಿಕೊಟ್ಟಿದ್ದಾರೆ –

ಗೋವಿಂದ ಸ್ಮರಣಂ ಪುಂಸಾಂ ಪಾಪರಾಶಿ ಮಹಾಚಲಂ ।
ಅಸಂಶಯಂ ದಹತ್ಯಾಶು ತೂಲರಾಶಿಮಿವಾನಲಃ ॥ ೪೬ನೆ ಶ್ಲೋಕ

ಕೃತೇ ಪಾಪೇऽನುತಾಪೋ ವೈ ಯಸ್ಯ ಪುಂಸಃ ಪ್ರಜಾಯತೇ ।
ಪ್ರಾಯಶ್ಚಿತ್ತಂ ತು ತಸ್ಯೋಕ್ತಂ ಹರಿಸಂಸ್ಮರಣಂ ಪರಂ ॥ ೩೬ನೆ ಶ್ಲೋಕ

ಯಾವ ಪುರುಷನು ಪಾಪಕಾರ್ಯವನ್ನು ಮಾಡಿ ಪಶ್ಚಾತ್ತಾಪ ಪಡುವನೋ, ಅವನಿಗೆ ಶಾಸ್ತ್ರದಲ್ಲಿ ಹೇಳಿದ ಉತ್ತಮ ಪ್ರಾಯಶ್ಚಿತ್ತವೆಂದರೆ ಶ್ರೀಹರಿನಾಮ ಸ್ಮರಣೆಯೇ ಆಗಿದೆ.

ಶರಣರ ಮಹಿಮೆಯಂತಿರಲಿ ಅಪಮರಣದಿ
ಹರಿನಾಮ ನನ್ನ ಕಾಯ್ತು ॥

ಭಗವದ್‌ಭಕ್ತರ ಮಹಿಮೆ ಹಾಗಿರಲಿ. ನನಗೆ ಅಪಮೃತ್ಯು ಬಂದಾಗ ನನ್ನನ್ನು ಶ್ರೀಹರಿನಾಮವೇ ರಕ್ಷಿಸಿತು. ಎಂಬುದಾಗಿ ಶ್ರೀ ಪ್ರಸನ್ನವೆಂಕಟದಾಸರು ಇಲ್ಲಿ ನಮಗೆ ತಿಳಿಸಿದ್ದಾರೆ. ಅಂದರೆ ಶ್ರೀಹರಿನಾಮಸ್ಮರಣೆ ಅಪಮೃತ್ಯುವನ್ನು ಕೂಡ ಕಳೆಯಬಲ್ಲದು. ಪರಿಹರಿಸಬಲ್ಲದು ಎಂಬುದು ಇಲ್ಲಿಯ ಧ್ವನಿ.

ಗುರು ಮಧ್ವವರದ ಪ್ರಸನ್ನವೆಂಕಟೇಶ ಶ್ರೀ
ಹರಿನಾಮ ಗತಿ ಎನ್ನ ಕಾಯ್ತು ॥ ೩ ॥

ಗುರುಗಳಾದ ಶ್ರೀಮನ್ ಮಧ್ವಾಚಾರ್ಯರಿಗೆ ಒಲಿದ ಶ್ರೀ ಪ್ರಸನ್ನವೆಂಕಟೇಶನಾದ ಶ್ರೀಹರಿಯನಾಮ ನನ್ನನ್ನು ರಕ್ಷಿಸಿತು. ಅದೇ ನನಗೆ ಗತಿಯಾಯಿತು. ಆಶ್ರಯವಾಯಿತು.

ಶ್ರೀಪ್ರಸನ್ನವೆಂಕಟೇಶನು ಗುರುಗಳಾದ ಶ್ರೀಮಧ್ವಾಚಾರ್ಯರಿಗೆ ವರಕೊಡುವವನಾಗಿದ್ದಾನೆ.

ಶ್ರೀದ್ವಾದಶ ಸ್ತೋತ್ರದಲ್ಲಿ ಶ್ರೀಮಧ್ವಾಚಾರ್ಯರು ಶ್ರೀಹರಿಯನ್ನು ಹೀಗೆ ಸ್ತೋತ್ರ ಮಾಡಿದ್ದಾರೆ.

ಇಂದಿರಾಪತಿಮಾದ್ಯಾದಿವರದೇಶ ವರಪ್ರದಮ್ ॥ (೧-೧)

ಆನಂದ ಮುಕುಂದ ಅರವಿಂದ ನಯನ ।
ಆನಂದತೀರ್ಥ ಪರಾನಂದವರದ ॥ (೧೨-೧)

ಬ್ರಹ್ಮರುದ್ರ ಮೊದಲಾದ ಎಲ್ಲರಿಗೂ ವರನೀಡುವವನಾಗಿದ್ದಾನೆ ಆ ಶ್ರೀಹರಿ. ಹಾಗೂ ಆನಂದತೀರ್ಥರಿಗೆ ಉತ್ತಮವಾದ ಆನಂದ ನೀಡುವ ದೈವವಾಗಿದ್ದಾನೆ ಶ್ರೀಹರಿ.

ಇಂಥ ಶ್ರೀಹರಿಯ ನಾಮವೇ ನನಗೆ ರಕ್ಷಣೆ ನೀಡಿ ಉದ್ಧರಿಸಿತು ಎಂಬುದಾಗಿ ಶ್ರೀ ಪ್ರಸನ್ನವೆಂಕಟದಾಸರು ಹೇಳಿರುವುದು ಗಮನಾರ್ಹವಾಗಿದೆ.

ಆದ್ದರಿಂದಲೇ ಶ್ರೀದಾಸರು ''ಹರಿಯೆನ್ನಬಾರದೆ ಜಿಹ್ವೆ ವಾರಂ ವಾರಂ'' ಎಂದಾಗಿ ಹೇಳಿರುವುದು ಮತ್ತೆ ಮತ್ತೆ ಮೆಲುಕು ಹಾಕುವಂತಿದೆ.

-: ಶ್ರೀಮದ್ವೇಶಾರ್ಪಣಮಸ್ತು :-

ಗ್ರಂಥಋಣ

೧. ಶ್ರೀಭಗವದ್ಗೀತಾ (ಭಾಷ್ಯ, ತಾತ್ಪರ್ಯ ಸಹಿತ)
ಅ.ಭಾ.ಮಾ.ಮಹಾಮಂಡಳ ಪ್ರಕಟಿತ

೨. ಆದಿತ್ಯ ಪುರಾಣವೆಂಕಟೇಶ ಮಹಾತ್ಮೆ
ಶ್ರೀ ಪಂ।। ಶ್ರೀ ರಾಮವಿಠ್ಠಲಾಚಾರ್ಯ

೩. ಶ್ರೀಮದ್ ಭಾಗವತ ಸಾರೋದ್ಧಾರ (ಕನ್ನಡಾನುವಾದ)
ದಿ।। ಶ್ರೀ ಬಿ. ಭೀಮರಾವ್

೪. ಶ್ರೀ ಹರಿಕಥಾಮೃತಸಾರ
ಡಾ।। ಶ್ರೀ ಪ್ರಭಂಜನಾಚಾರ್ಯ

೫. ದಾಸರ ಕೀರ್ತನೆಗಳ ತತ್ವವಿಚಾರ (ಅಂಕಿತ ಪುಸ್ತಕ ಪ್ರಕಟಿತ)
ಶ್ರೀನಿವಾಸ ಸು. ಮಠದ

೬. ಸಪ್ತಾಹ ಕ್ರಮದಲ್ಲಿ ಶ್ರೀಮದ್ ಭಾಗವತ
ಶ್ರೀನಿವಾಸ ಸು. ಮಠದ

೭. ಸಮಗ್ರ ದಾಸಸಾಹಿತ್ಯ ಕರ್ನಾಟಕ ಸರಕಾರ ಪ್ರಕಟೀತ

೮. ಉಪನಿಷತ್ತುಗಳು
ಅ.ಭಾ.ಮಾ. ಮಹಾಮಂಡಳ ಪ್ರಕಟಿತ

೯. ಶ್ರೀಮನ್ ಮಹಾಭಾರತ ತಾತ್ಪರ್ಯ ನಿರ್ಣಯ
ಅ.ಭಾ.ಮಾ. ಮಹಾಮಂಡಳ ಪ್ರಕಟಿತ

೧೦. ಶ್ರೀ ದ್ವಾದಶ ಸ್ತೋತ್ರ
ಶ್ರೀನಿವಾಸ ಸು. ಮಠದ

ವಿದ್ವಾನ್ ಶ್ರೀನಿವಾಸ ಸು. ಮಠದ (ಬಿಜಾಪುರ) ಅವರ ಹೆಸರು ಆಧ್ಯಾತ್ಮದ, ಶಾಸ್ತ್ರಾಧ್ಯಯನದ ವಲಯದಲ್ಲಿ ಚಿರಪರಿಚಿತವಾದದ್ದು. ಅವರ ಅಪಾರ ಆಸಕ್ತಿ ಇದ್ದದ್ದು, ತಾವು ಓದಿ, ತಿಳಿದು, ಅಧ್ಯಯನ ಮಾಡಿ ಕಂಡುಂಡ ಅಧ್ಯಾತ್ಮದ, ಅಧ್ಯಯನದ ಸಾರವನ್ನು, ತಮ್ಮದೇ ವಿಶಿಷ್ಟವಾದ ಸತ್ವಯುತ ಲೇಖನಗಳಿಂದ ಅದನ್ನು ಸಾಮಾನ್ಯ ಜನಕ್ಕೂ ಕೂಡ ತಲುಪಿಸುವ ಜ್ಞಾನಯಜ್ಞ ಕಾರ್ಯವನ್ನು ಮಾಡಿ, ಅದರ ತೃಪ್ತಿಯನ್ನು ಪಡೆಯುವವರು. ಬಿ.ಎಸ್.ಸಿ., ಎಂ. ಎ., ಪದವೀಧರರಾಗಿ, ಅವರ ಲೌಕಿಕ ಬದುಕಿಗಾಗಿ, ಬ್ಯಾಂಕಿನಲ್ಲಿ ವೃತ್ತಿ ಮಾಡಿದ್ದರೂ, ಅವರು ಅಲೌಕಿಕ, ಆಧ್ಯಾತ್ಮದ, ಶಾಸ್ತ್ರ, ಪುರಾಣ, ಪ್ರವಚನ, ಪಠಣ, ಅಧ್ಯಯನ ಎಂಬ ಪ್ರವೃತ್ತಿ ಬದುಕಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿ ಕೊಂಡವರು. ಇವರು ವ್ಯಾಸ – ದಾಸ ಸಾಹಿತ್ಯದಲ್ಲಿ ಆಳವಾಗಿ ಗುರುಮುಖೇನ ಅಧ್ಯಯನ ಮಾಡಿ ಅಪಾರ ಪಾಂಡಿತ್ಯವನ್ನು ಪಡೆದುಕೊಂಡವರು. ಅಂತ್ಯಯೇ ಅವರ ಸತ್ವಪೂರ್ಣ, ತತ್ವಪೂರ್ಣ, ಸೈದ್ಧಾಂತಿಕ, ತರ್ಕದ ಎಲ್ಲ ಪ್ರಕಾರಗಳಲ್ಲಿ ಆಧ್ಯಾತ್ಮಿಕ ಪ್ರಪಂಚವನ್ನು ವಿವರಣೆಗೊಳ್ಳುವಂತೆ ಸುಮಾರು 107 ಗ್ರಂಥಗಳು ಅವರ ಲೇಖನಿಯಿಂದ ಹೊರಬಂದಿವೆ. ಇದೊಂದು ಅವರ ಮೇಲೆ ಅಪಾರವಾದ ಭಗವಂತನ ಕೃಪೆ. ಇಂಥ ಒಂದು ಕೃಪೆಯ ಸಂಕೇತವಾಗಿ ದಾಸರು ಎಷ್ಟು ಅದ್ಭುತವಾಗಿ ಇಲ್ಲಿ ಆಯ್ದ ಕೀರ್ತನೆಗಳನ್ನು ರಚನೆ ಮಾಡಿದ್ದಾರೋ, ಅಷ್ಟೇ ಅಪೂರ್ವವಾಗಿ ಇದರ ಅರ್ಥ ವಿಶ್ಲೇಷಣೆ, ಪೌರಾಣಿಕ ಹಿನ್ನೆಲೆ ಹಾಗೂ ದಾಸರ ನುಡಿಗಳ ಧರ್ಮ ಮತ್ತು ಮರ್ಮಗಳನ್ನು ಲೇಖಕರಾದ ವಿದ್ವಾನ್ ಶ್ರೀನಿವಾಸ ಸು. ಮಠದ ಅವರು ಈ ಕೃತಿಯಲ್ಲಿ ಮೂಡಿಸಿದ್ದಾರೆ. ಇಂತಹ ಸಮರ್ಥ ಅರ್ಥ ವಿಶ್ಲೇಷಣೆ ಮಾಡುವದರ ಮೂಲಕ ಶ್ರೀನಿವಾಸ ಮಠದವರು ಪ್ರಸನ್ನ ವೆಂಕಟದಾಸರಿಗೆ ಶತಮಾನದ ಸೇವೆಸಲ್ಲಿಸಿದ್ದಾರೆ.

– ಪ್ರಕಾಶಕರು

ಬಾಗಲಕೋಟೆ ಪ್ರಾಂತ್ಯದ ಭಕ್ತಿ ಸಾಹಿತ್ಯ ಉನ್ನತ ಶಿಖರ ಪ್ರಸನ್ನ ವೆಂಕಟದಾಸರು ದೈವಿಕ ಸಿದ್ಧಿ, ಅಪರೋಕ್ಷ ಜ್ಞಾನ, ಹಾಡು ಹೇಳುತ್ತಾ ಮೈಮರೆತು ದೇವ ದರ್ಶನ ಮಾಡುವ, ಮಾಡಿಸುವ ತಾದಾತ್ಮ್ಯ ಇವುಗಳಿಂದಾಗಿ ಪ್ರಸನ್ನ ವೆಂಕಟದಾಸರು ಚಿರಸ್ಮರಣೀಯ ಹರಿದಾಸರೆನಿಸಿದ್ದಾರೆ. ವಿಜಯದಾಸ ಪ್ರಭುಗಳಿಂದಲೇ, ಕಾಕಂಬಿ ಸಾಹಿತ್ಯದ 'ದಾಸ ಶ್ರೇಷ್ಠರ್' ಎಂಬ ಪ್ರಶಸ್ತಿ ಪಡೆದು, ಬೆಳದಿಂಗಳ ಭಾಷೆಯ ಅನುಭಾವ ಸಾಹಿತ್ಯವನ್ನು ನೀಡಿದವರು. ಪ್ರಸನ್ನ ವೆಂಕಟದಾಸರು ಬಾಗಲಕೋಟೆ ಕಾರ್ಯಕ್ಷೇತ್ರವಾದರೆ, ಬಾದಾಮಿ ಅವರ ಉಪಾಸನಾ ಸ್ಥಳವಾಗಿತ್ತು. 'ತಪ್ಪು ನೋಡದೆ ಬಂದೆಯಾ ಎನ್ನಯ ತಂದೆ' ಎಂದು ಭಗವಂತ ತಮ್ಮೊಳಗೆ ಬಂದ ಅನುಭವವನ್ನು ಹಾಡುಮಾಡಿದರು. ಹಾಗೆಯೇ ಜೀವನದ ಕಡೆಯ ಕ್ಷಣಗಳಲ್ಲಿ 'ದಾರೋ ನೀ ಚಿನ್ನದಾರೋ' ಎಂದು ಕೃಷ್ಣನನ್ನು ಸ್ವಾಗತಿಸಿ, ಸಪ್ಪಳಿಲ್ಲದೆ ಅವನನ್ನು ಕೂಡಿಸಿ, ಅವನ ದರ್ಶನದಲ್ಲಿ ಮೈಮರೆತು ತಮ್ಮ ಪ್ರಾಣಕಪ್ಪನನ್ನೇ ಅವನಿಗೆ ಸಮರ್ಪಿಸಿದ ಧನ್ಯಮಾನ್ಯರು, ಮಹಿಪಾತ್ರರು ಪ್ರಸನ್ನವೆಂಕಟರದು. ಅವರು ಸತ್ಯ, ಸದಾಚಾರ, ಸಾಧನ ಮಾರ್ಗ, ಸಾಕ್ಷಾತ್ಕಾರದ ಹೊಳಹುಗಳನ್ನು ತಮ್ಮ ಹಾಡುಗಳಲ್ಲಿ ತುಂಬಿ ತುಳುಕಿಸಿದರು, ಅಗಾಧ ಲೋಕ ಸಂಗ್ರಹ, ಅದ್ಭುತ ತತ್ವಜ್ಞಾನ, ಅಖಂಡ ಭಗವದ್ಭಕ್ತಿ, ಅಜರಾಮರವಾದ ಆಹ್ಲಾದ ಸಾಹಿತ್ಯ ಇವಕ್ಕೆ ಇನ್ನೊಂದು ಹೆಸರೇ ಪ್ರಸನ್ನವೆಂಕಟದಾಸರು.

ಅವರ ಒಂದೊಂದು ಹಾಡೂ ದಿವ್ಯಾಮೃತ. ಅವು ಸ್ವಯಂಸ್ಫುರಿತ ರಸವಾಹಿನಿ. ಇಂತಹ ಅನರ್ಘ್ಯಭಂಡಾರದಿಂದ ಹದಿಮೂರು ಹಾಡುಗಳನ್ನು ಆಯ್ದು ಅವುಗಳ ಆಧ್ಯಾತ್ಮಿಕ ಚಿಂತನ ಮಂಥನಗಳನ್ನು ಸಾರ್ಥಕ ಸಮರ್ಥವೆನ್ನುವಂತೆ ಈ ಕೃತಿಯಲ್ಲಿ ನೀಡಿದ್ದಾರೆ. ವಿದ್ವಾನ್ ಶ್ರೀನಿವಾಸ ಸು. ಮಠದ ಅವರು, ಈಗಾಗಲೇ ಶತಗ್ರಂಥ ರಚನಾಕಾರರೆಂಬ ಖ್ಯಾತಿ ಪಡೆದ ಅವರ ತತ್ವನಿಷ್ಠೆ, ದಾಸ ವ್ಯಾಸಸಾಹಿತ್ಯ ಪಾಂಡಿತ್ಯ, ಹಾಗೂ ಸಾಹಿತ್ಯಾನುಭವದ ರಸಪಾಕವಾಗಿ, ಈ ಕೃತಿ ಪ್ರಕಟವಾಗಿದೆ. ಪ್ರಸನ್ನವೆಂಕಟದಾಸರ ಹದಿಮೂರು ಹಾಡುಗಳ ಅಣಿಮುತ್ತು ಹಾಗೂ ಅವುಗಳ ಅಂತರಂಗದಲ್ಲಿ ಅಡಗಿದ ಹೂರಣವನ್ನು ಶ್ರೀನಿವಾಸ ಸು. ಮಠದರು ಅರ್ಥಪೂರ್ಣವಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇಂದು ಪ್ರಸನ್ನವೆಂಕಟದಾಸರ ಸಾಹಿತ್ಯ ಮರುಹುಟ್ಟು ಪಡೆದಿದ್ದಾರೆ. ವ್ಯಾಪಕವಾಗಿ ಪ್ರಸಾರವಾಗುತ್ತಿದ್ದರೆ, ದಾಸವಾಣಿಗಳಲ್ಲಿ ಹೆಚ್ಚು ಹೆಚ್ಚು ಈ ಹಾಡುಗಳನ್ನು ಕೇಳಿಬರುತ್ತಿದ್ದಾರೆ ಅದಕ್ಕೆ ಮುಖ್ಯ ಕಾರಣ ಶ್ರೀ ಪ್ರಸನ್ನವೆಂಕಟ ಪ್ರಕಾಶನದ ಡಾ॥ ಸುಭಾಷ ಕಾಖಂಡಕಿ ಹಾಗೂ ಪ್ರಖ್ಯಾತ ಸಾಹಿತಿಗಳಾದ ಶ್ರೀಮತಿ ರೇಖಾ ಕಾಖಂಡಕಿ ದಂಪತಿಗಳು. ಒಂದು ಮೌಲಿಕ ಹಾಗೂ ವ್ಯಾಪಕ ಆಯಾಮವನ್ನು ಪ್ರಸನ್ನವೆಂಕಟದಾಸರ ಸಾಹಿತ್ಯಕ್ಕೆ, ಸಂಗ್ರಹ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಈ ದಂಪತಿಗಳು ತಂದು ಕೊಟ್ಟಿದ್ದಾರೆ. ನಿಸ್ಪೃಹವಾಗಿ, ನಿಸ್ವಾರ್ಥವಾಗಿ ಪ್ರಸನ್ನವೆಂಕಟದಾಸರ ಸಾಹಿತ್ಯದ ಎತ್ತರ ಬಿತ್ತರ, ಆಳ, ಹರಹುಗಳು ನಾಡಿನ ಜನತೆಗೆ ನಿರೂಪಿಸುತ್ತಿರುವ ಈ ದಂಪತಿಗಳು ವಿಶೇಷವಾಗಿ ಅಭಿನಂದನೀಯರು. ಹಾಗೆಯೇ ಇಂತಹ ವಿಚಾರಪ್ರದ, ತತ್ವಶೀಲ ಗ್ರಂಥವನ್ನು ವಿಶ್ಲೇಷಣಾತ್ಮಕವಾಗಿ ನಿರೂಪಿಸಿ ನೀಡಿರುವ ವಿದ್ವಾಂಸ ಶ್ರೀನಿವಾಸ. ಸು. ಮಠದರೂ ಅಭಿನಂದನೀಯರಾಗಿದ್ದಾರೆ.

– ವಿದ್ಯಾವಾಚಸ್ಪತಿ ಡಾ॥ ಅರಳುಮಲ್ಲಿಗೆ ಪಾರ್ಥಸಾರಥಿ

ISBN 81-929818-8-6
9 788192 981888